ವಿಶ್ವವಾಣಿ
ವಿಶ್ವಾಸವೇ ವಿಶ್ವ

ಎರಡೂವರೆ ದಿನದಲ್ಲೇ ಗೆದ್ದು ಬೀಗಿದ ಭಾರತ

ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಇನಿಂಗ್ಸ್ ಹಾಗೂ 140 ರನ್ ಅಂತರದ ಭಾರಿ ಜಯ ಸಾಧಿಸಿದೆ.

ಸಂಕ್ಷಿಪ್ತ ಸ್ಕೋರ್

ಮೊದಲ ಇನಿಂಗ್ಸ್

ವೆಸ್ಟ್ ಇಂಡೀಸ್	162 ರನ್‌ಗೆ ಆಲೌಟ್
ಭಾರತ	5 ವಿಕೆಟ್‌ಗೆ 448 ರನ್

2ನೇ ಇನಿಂಗ್ಸ್

ವೆಸ್ಟ್ ಇಂಡೀಸ್	146 ರನ್‌ಗೆ ಆಲೌಟ್

4 ವರ್ಷಗಳ ರೋಹಿತ್ ನಾಯಕತ್ವ ಅಂತ್ಯ, ಟೆಸ್ಟ್, ಏಕದಿನಕ್ಕೆ ಗಿಲ್ ನಾಯಕ, ಟಿ20ಗೆ ಉಪನಾಯಕ
ಚಾಂಪಿಯನ್ಸ್ ಟ್ರೋಫಿ ನಂತರ ತಂಡಕ್ಕೆ ಮರಳಿದ ಕೊಹ್ಲಿ | ಶಮಿಗೆ ಸ್ಥಾನವಿಲ್ಲ, ಜಡೇಜಾಗೆ ವಿಶ್ರಾಂತಿ

ಏಕದಿನಕ್ಕೂ ಗಿಲ್ ನಾಯಕ, ಪಟ್ಟ ಕಳೆದುಕೊಂಡ ರೋಹಿತ್

ಮುಂಬೈ: ಆಸ್ಟ್ರೇಲಿಯಾ ವಿರುದ್ಧದ ಕ್ರಿಕೆಟ್ ಏಕದಿನ ಸರಣಿಗೆ ಭಾರತೀಯ ತಂಡ ಪ್ರಕಟಗೊಂಡಿದ್ದು, ಸದ್ಯಕ್ಕೆ ನಡೆಯುತ್ತಿರುವ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ ನಾಯಕರಾಗಿ ಆಯ್ಕೆಯಾಗಿರುವ ಶುಭಮನ್ ಗಿಲ್ ಅವರನ್ನೇ ಏಕದಿನ ತಂಡಕ್ಕೂ ನಾಯಕನ್ನಾಗಿ ಆರಿಸಲಾಗಿದೆ. ಆ ಮೂಲಕ ರೋಹಿತ್ ನಾಯಕತ್ವಕ್ಕೆ ಕೊಕ್ ನೀಡಲಾಗಿದೆ. ಮುಂಬರುವ ಏಕದಿನ ವಿಶ್ವಕಪ್ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ತಂಡ ರಚಿಸಬೇಕಾದ ಒತ್ತಡ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯ ಮೇಲಿತ್ತು. ಹಾಗಾಗಿ ತೀವ್ರ ಕುತೂಹಲ ಕೆರಳಿಸಿದ್ದ ಏಕದಿನ ತಂಡದ ಆಯ್ಕೆ ವಿಚಾರದಲ್ಲಿ ಸಮಿತಿಯು ಅಳೆದು ತೂಗಿ ತಂಡ ಪ್ರಕಟಿಸಿದೆ.

ಶ್ರೇಯಸ್ ಅಯ್ಯರ್‌ಗೆ ಏಕದಿನ ತಂಡದ ಉಪನಾಯಕ ಸ್ಥಾನ ನೀಡಲಾಗಿದೆ. ಉಳಿದಂತೆ ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ಯುವ ಆಟಗಾರ ನಿತೀಶ್ ಕುಮಾರ್ ರೆಡ್ಡಿ, ವಿಕೆಟ್ ಕೀಪರ್ ಬ್ಯಾಟರ್ ಪಾತ್ರದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್, ಸ್ಪಿನ್ನರ್‌ಗಳ ವಿಭಾಗದಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ಕುಲದೀಪ್ ಯಾದವ್ ಸ್ಥಾನ ಗಳಿಸಿದ್ದಾರೆ.

ವೇಗಿಗಳ ವಿಭಾಗದಲ್ಲಿ ಹರ್ಷಿತ್ ರಾಣಾ, ಮೊಹಮ್ಮದ್ ಸಿರಾಜ್, ಅರ್ಶದೀಪ್ ಸಿಂಗ್, ಕನ್ನಡಿಗ ಪ್ರಸಿದ್ಧ್ ಕೃಷ್ಣ ಸ್ಥಾನ ಪಡೆದಿದ್ದರೆ, ಪರ್ಯಾಯ ವಿಕೆಟ್ ಕೀಪರ್ ಬ್ಯಾಟರ್ ಆಗಿ ಧ್ರುವ ಜುರೆಲ್, ಹೆಚ್ಚುವರಿ ಬ್ಯಾಟರ್ ಆಗಿ ಯಶಸ್ವಿ ಜೈಸ್ವಾಲ್ ಏಕದಿನ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇನ್ನು ತಂಡದ ಪ್ರಮುಖ ಆಲ್‌ರೌಂಡರ್ ರವೀಂದ್ರ ಜಡೇಜಾ ಮತ್ತು ಸ್ಟಾರ್ ವೇಗಿ ಜಸ್‌ಪ್ರೀತ್ ಬುಮ್ರಾ ಅವರಿಗೆ ಏಕದಿನ ಸರಣಿಯಿಂದ ವಿಶ್ರಾಂತಿ ನೀಡಲಾಗಿದೆ.

ವಿಶೇಷವೆಂದರೆ, ಹಿರಿಯ ಕ್ರಿಕೆಟರ್‌ಗಳಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರಿಗೆ

ಅವಕಾಶ ನೀಡಲಾಗಿದೆ. ಇದರಿಂದಾಗಿ, ತುಂಬಾ ದಿನಗಳ ನಂತರ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರ ಆಟ ನೋಡಲು ಸಿಗಲಿದೆ. ಇತ್ತೀಚೆಗೆ ಮುಕ್ತಾಯವಾದ ಏಷ್ಯಾ ಕಪ್ ಟೂರ್ನಿಯಲ್ಲಿ ಗಾಯದ ಸಮಸ್ಯೆಗೆ ಒಳಗಾಗಿರುವ ಹಾರ್ದಿಕ್ ಪಾಂಡ್ಯ ಅವರನ್ನು ಆಸೀಸ್ ಪ್ರವಾಸಕ್ಕೆ ಪರಿಗಣಿಸಲಾಗಿಲ್ಲ.

ಜಡೇಜಾ, ಶಮಿಗೆ ಅವಕಾಶವಿಲ್ಲ: ಚಾಂಪಿಯನ್ಸ್ ಟ್ರೋಫಿಯ ವಿನ್ನಿಂಗ್ ತಂಡದಲ್ಲಿದ್ದ ಭಾರತ ತಂಡದ ಬೌಲರ್‌ಗಳಾದ ರವೀಂದ್ರ ಜಡೇಜಾ ಹಾಗೂ ಮೊಹಮ್ಮದ್ ಶಮಿ ಅವರಿಗೆ ಈ ಬಾರಿಯ ಆಸೀಸ್ ವಿರುದ್ಧದ ತಂಡದಲ್ಲಿ ಅವಕಾಶ ಸಿಕ್ಕಿಲ್ಲ. ಪ್ರಸ್ತುತ ನಡೆಯುತ್ತಿರುವ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗಾಗಿ ಪ್ರಕಟಿಸಲಾಗಿರುವ ಭಾರತ ತಂಡದಲ್ಲಿ ರವೀಂದ್ರ ಜಡೇಜಾ ಅವರು ಉಪನಾಯಕರಾಗಿದ್ದಾರೆ. ಅಲ್ಲದೆ, ಮೊದಲ ಟೆಸ್ಟ್ ಪಂದ್ಯದಲ್ಲಿ ಶತಕ ದಾಖಲಿಸುವುದಲ್ಲದೆ, 4 ವಿಕೆಟ್ ಗಳಿಸುವ ಮೂಲಕ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅಷ್ಟೇ ಅಲ್ಲದೆ, ಪಂದ್ಯ ಶ್ರೇಷ್ಠ ಗೌರವಕ್ಕೂ ಪಾತ್ರರಾಗಿದ್ದಾರೆ. ಜಡೇಜಾಗೆ ವಿಶ್ರಾಂತಿ ನೀಡಲಾಗಿದೆ ಎಂದಿದ್ದರೂ, ಅವರ ಏಕದಿನ ಭವಿಷ್ಯದ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಹುಟ್ಟಿಸಿದೆ.

ಇಂದು ಭಾರತ-ಪಾಕ್ ಮಹಿಳಾ ವಿಶ್ವಕಪ್

ಕೊಲಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರದಂದು ನಡೆಯಲಿರುವ ಲೀಗ್ ಹಂತದ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ಮಹಿಳಾ ಕ್ರಿಕೆಟ್ ತಂಡಗಳು ಮುಖಾಮುಖಿ ಯಾಗಲಿವೆ.

ಟಿ20 ತಂಡವೂ ಪ್ರಕಟ

ಅ.29ರಿಂದ ಆರಂಭವಾಗಲಿರುವ ಐದು ಪಂದ್ಯಗಳ ಟಿ20 ಸರಣಿಗಾಗಿಯೂ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಸೂರ್ಯಕುಮಾರ್ ಯಾದವ್ ಅವರು ಮತ್ತೆ ನಾಯಕರಾಗಿದ್ದಾರೆ. ಶುಭಮನ್ ಗಿಲ್ (ಉಪನಾಯಕ), ತಿಲಕ್ ವರ್ಮಾ, ನಿತೀಶ್, ದುಬೆ, ಅಕ್ಷರ್ ಪಟೇಲ್, ಜಿತೇಶ್, ವರುಣ್ ಚಕ್ರವರ್ತಿ, ಬುಮ್ರಾ, ಅರ್ಶದೀಪ್ ಸಿಂಗ್, ಕುಲದೀಪ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್, ರಿಂಕು ಸಿಂಗ್ ಹಾಗೂ ವಾಷಿಂಗ್ಟನ್ ಸುಂದರ್ ಇದ್ದಾರೆ.

19ರಿಂದ ಸರಣಿ ಶುರು

ಅಕ್ಟೋಬರ್ 19ರಿಂದ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ ಶುರುವಾಗಲಿದೆ. ಮೊದಲ ಹಣಾಹಣಿ ಪರ್ತ್‌ನಲ್ಲಿ ನಡೆಯಲಿದೆ. 2ನೇ ಪಂದ್ಯ ಅ.23ರಂದು ಅಡಿಲೇಡ್‌ನಲ್ಲಿ, ಅ.25 ರಂದು 3ನೇ ಏಕದಿನ ಪಂದ್ಯ ಸಿಡ್ನಿಯಲ್ಲಿ ನಡೆಯಲಿದೆ. ಇದಾದ ಬಳಿಕ ಎರಡು ದೇಶಗಳ ನಡುವೆ ಟಿ20 ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯ ಅ.29ರಂದು ಕ್ಯಾನ್‌ಬೆರ್ರಾದಲ್ಲಿ ನಡೆಯಲಿದೆ. ಅ.31 ರಂದು 2ನೇ ಟಿ20 ಪಂದ್ಯ ಮೆಲ್ಬೋರ್ನ್‌ನಲ್ಲಿ ನಡೆಯಲಿದೆ. 3ನೇ ಟಿ20 ಪಂದ್ಯ ಹೋಬರ್ಟ್‌ನಲ್ಲಿ ನ.2 ರಂದು, 4ನೇ ಟಿ20 ಪಂದ್ಯ ಗೋಲ್ಡ್‌ಕೋಸ್ಟ್‌ನಲ್ಲಿ ನ.6ರಂದು ಹಾಗೂ 5ನೇ ಟಿ20 ಪಂದ್ಯ ಬ್ರಿಸ್ಬೇನ್‌ನಲ್ಲಿ ನಡೆಯಲಿದೆ.

ಸೊಂಪಾದ ಪುಟಗಳು



ಇಸ್ರೇಲ್ ಅಕ್ಷರಶಃ ಆಕಾಶದಲ್ಲಿ ಅಗೋಚರ ಕೋಟೆಯನ್ನು ಕಟ್ಟಿಕೊಂಡಿದೆ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ನಾನು ಭಾರತವನ್ನು ಪ್ರೀತಿಸುತ್ತೇನೆ ಎನ್ನಲು ಮನವಿಲ್ಲ...
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನಿಮ್ಮ ಜೀವನ ಕಥೆಯ ಲೇಖಕರು ನೀವೇ. ಹೀಗಾಗಿ ಕರಡು ಪ್ರತಿಯನ್ನು ಬದಲಿಸಲು, ತಿದ್ದಲು, ಬಿಸಾಡಲು, ಹೊಸತಾಗಿ ಬರೆಯಲು ನೀವು ಸ್ವತಂತ್ರರು. ಎಷ್ಟು ಸಲ ತಿದ್ದುಪಡಿ ಮಾಡಿದರೂ, ನಿಮ್ಮನ್ನು ಯಾರೂ ಪ್ರಶ್ನಿಸುವುದಿಲ್ಲ. ಅಂತಿಮವಾಗಿ, ಪುಸ್ತಕ ಚೆನ್ನಾಗಿರಬೇಕಷ್ಟೆ.

ವಕ್ರತುಂಡೋಕ್ತಿ

ಅಪ್ರಿಯವಾದ ಸತ್ಯವನ್ನು ಹೇಳೋದು ಕನ್ನಡಿ ಮಾತ್ರ ಅಲ್ಲ, ನಮ್ಮ ದೇಹದ ತೂಕವನ್ನು ಹೇಳುವ ಮಾಪಕವೂ.

ಜೈಲಲ್ಲಿ ಬರ್ತ್ ಡೇ

ಬೆಂಗಳೂರು: ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನಾ ಪರಪ್ಪನ ಅಗ್ರಹಾರ ಜೈಲಿನಲ್ಲೇ ಕೇಕ್ ಕಟ್ ಮಾಡಿ ಹುಟ್ಟುಹಬ್ಬ ಆಚರಣೆ ಮಾಡಿಕೊಂಡಿದ್ದಾನೆ. ಮೊಬೈಲ್‌ನಲ್ಲಿ ಹುಟ್ಟುಹಬ್ಬ ಆಚರಣೆಯ ವಿಡಿಯೋ, ಫೋಟೋ ತೆಗೆದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾನೆ.

ಫನ್‌ತರಂಗ
- ರಘುಪತಿ ಶೃಂಗೇರಿ -



ಅಂತಿಮ ಹಂತ ತಲುಪಿದ ಎರಡು ವರ್ಷಗಳ ಇಸ್ರೇಲ್-ಹಮಾಸ್ ಯುದ್ಧ
ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆ ಒಪ್ಪಂದಕ್ಕೆ ಷರತ್ತಿನ ಒಪ್ಪಿಗೆ

ಶಾಂತಿಗೆ ಹಮಾಸ್ ಒಪ್ಪಿಗೆ

ಟೆಲ್ ಅವಿವ್: ಗಾಜಾದಲ್ಲಿ ಯುದ್ಧ ಶಮನಗೊಳಿಸುವ ಮತ್ತು ಉಳಿದ ಒತ್ತೆಯಾಳುಗಳ ಬಿಡುಗಡೆ ಕುರಿತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಸ್ತಾಪಿಸಿರುವ ಶಾಂತಿ ಯೋಜನೆಯ ಕೆಲವು ಅಂಶಗಳನ್ನು ಒಪ್ಪಿಕೊಳ್ಳುತ್ತೇವೆ ಎಂದು ಹಮಾಸ್ ಶನಿವಾರ ತಿಳಿಸಿದೆ. ಆದರೆ, ಇತರ ವಿಷಯಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಮಾತುಕತೆ ನಡೆಸಬೇಕಿದೆ ಎಂದೂ ಹೇಳಿದೆ. ತನ್ನ ಯೋಜನೆಯ ಕೆಲ ಅಂಶಗಳನ್ನು ಒಪ್ಪಿಕೊಂಡಿರುವುದಾಗಿ ಹಮಾಸ್ ಹೇಳಿದ ಬಳಿಕ, ಟ್ರಂಪ್ ಅವರು ಗಾಜಾ ಮೇಲಿನ ಬಾಂಬ್ ದಾಳಿಯನ್ನು ನಿಲ್ಲಿಸುವಂತೆ ಇಸ್ರೇಲ್‌ಗೆ ಸೂಚಿಸಿದ್ದಾರೆ.

ಹಮಾಸ್ ಹೇಳಿಕೆ ಹೊರಬಿದ್ದ ಬೆನ್ನಲ್ಲೇ, ಟ್ರಂಪ್ ಅವರ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದಾಗಿ ಇಸ್ರೇಲ್ ಸೇನೆ ಶನಿವಾರ ಮಾಹಿತಿ ನೀಡಿದೆ. ಇಸ್ರೇಲ್‌ನ ನಾಯಕರು ಯೋಜನೆ ಅನುಷ್ಠಾನಕ್ಕೆ ಸಿದ್ಧತಾ ಕಾರ್ಯವನ್ನು ಮುಂದುವರಿಸಲು ಸೂಚಿಸಿದ್ದಾರೆ ಎಂದು ಸೇನೆಯ ಹಿರಿಯ ಅಧಿಕಾರಿಯೊಬ್ಬರು ವಿವರಿಸಿದ್ದಾರೆ. ಇಸ್ರೇಲ್ ಗಾಜಾ ಮೇಲೆ ಸದ್ಯಕ್ಕೆ ಯಾವುದೇ ದಾಳಿ ಮಾಡುತ್ತಿಲ್ಲ. ಆದರೆ ಗಾಜಾ ಪಟ್ಟಿಯಿಂದ ಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಟ್ರಂಪ್ ಆದೇಶದ ನಂತರ ಗಾಜಾದ ಹಲವಾರು ಭಾಗಗಳಲ್ಲಿ ಬಾಂಬ್ ದಾಳಿ ಸಾಕಷ್ಟು ಕಡಿಮೆಯಾಗಿದೆ ಎಂದು ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. → 4

ಯೋಜನೆಯ ಕೆಲ ಅಂಶಗಳನ್ನು ಒಪ್ಪಿಕೊಳ್ಳುವುದಾಗಿ ಹಮಾಸ್ ನೀಡಿರುವ ಹೇಳಿಕೆಯನ್ನು ಸ್ವಾಗತಿಸುತ್ತೇನೆ. ಅವರು ಸಹ ಶಾಶ್ವತ ಶಾಂತಿಗೆ ಸಿದ್ಧರಾಗಿದ್ದಾರೆ ಎಂಬುದಾಗಿ ನಾನು ನಂಬುತ್ತೇನೆ.
-ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಟ್ರಂಪ್ ಅವರ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಸಿದ್ಧ. ಇಸ್ರೇಲ್ ಈ ಹಿಂದೆ ನಿಗದಿಪಡಿಸಿದ ತತ್ವಗಳ ಆಧಾರದ ಮೇಲೆ ಯುದ್ಧ ಕೊನೆಗಾಣಿಸಲು ಇಸ್ರೇಲ್ ಬದ್ಧವಾಗಿದೆ.ಡಿ
-ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

66,000ಕ್ಕೂ ಹೆಚ್ಚು ಪ್ಯಾಲೆಸ್ತೀನಿಯರು ಬಲಿ

2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಹಮಾಸ್ ಒಟ್ಟು 1200 ಜನರನ್ನು ಕೊಂದಿತ್ತು. ಅಲ್ಲದೆ 251 ಜನರನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿತ್ತು. ಈ ಸಂಬಂಧ ಗಾಜಾ ಪಟ್ಟಿಯಲ್ಲಿ ನಡೆದ ಯುದ್ಧದಲ್ಲಿ 66,000ಕ್ಕೂ ಹೆಚ್ಚು ಪ್ಯಾಲೆಸ್ತೀನ್ ಜನರು ಮೃತಪಟ್ಟಿದ್ದಾರೆ. ಅವರಲ್ಲಿ ಅರ್ಧದಷ್ಟು ಮಹಿಳೆಯರು ಮತ್ತು ಮಕ್ಕಳು. ಇಸ್ರೇಲ್ ಗಾಜಾಗೆ ಸಹಾಯವನ್ನು ನಿರಂತರವಾಗಿ ನಿರ್ಬಂಧಿಸುವುದರಿಂದ ಉಂಟಾಗುವ ಹಸಿವಿನಿಂದ ಕನಿಷ್ಠ 440 ಪ್ಯಾಲೆಸ್ತೀನಿಯನ್ನರು ಮೃತಪಟ್ಟಿದ್ದಾರೆ. 200ಕ್ಕೂ ಹೆಚ್ಚು ಪತ್ರಕರ್ತರು ಮತ್ತು ಕನಿಷ್ಠ 1000 ಆರೋಗ್ಯ ಕಾರ್ಯಕರ್ತರು ಸಹ ಮೃತಪಟ್ಟಿದ್ದಾರೆ.

- ಟ್ರಂಪ್ ಶಾಂತಿ ಯೋಜನೆಯ ಕೆಲ ಅಂಶಗಳನ್ನು ಒಪ್ಪಿದ ಹಮಾಸ್
- ಟ್ರಂಪ್ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಇಸ್ರೇಲ್ ಸಿದ್ಧತೆ
- ಹಮಾಸ್‌ನ ಸಕಾರಾತ್ಮಕ ಪ್ರತಿಕ್ರಿಯೆಗೆ ವಿಶ್ವ ನಾಯಕರ ಸ್ವಾಗತ
- 2 ವರ್ಷಗಳ ಕಾಲದ ದಾಳಿ ಬಹುತೇಕ ಅಂತ್ಯ

ಪ್ರಧಾನಿ ಮೋದಿ ಸ್ವಾಗತ

ಇಸ್ರೇಲ್-ಹಮಾಸ್ ಯುದ್ಧ ಕೊನೆಗೊಳಿಸುವಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡೆಯನ್ನು ಪ್ರಧಾನಿ ನರೇಂದ್ರ ಮೋದಿ ಸ್ವಾಗತಿಸಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಗಾಜಾದಲ್ಲಿ ಶಾಂತಿ ಪ್ರಯತ್ನಗಳು ನಿರ್ಣಾಯಕ ಪ್ರಗತಿ ಸಾಧಿಸುತ್ತಿದ್ದು, ಈ ನಿಟ್ಟಿನಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಮುಂದಾಳತ್ವವನ್ನು ನಾವು ಸ್ವಾಗತಿಸುತ್ತೇವೆ. ಒತ್ತೆಯಾಳುಗಳ ಬಿಡುಗಡೆಯ ಹಮಾಸ್ ಒಪ್ಪಿಗೆ ನೀಡುವುದು ಒಂದು ಮಹತ್ವದ ಹೆಜ್ಜೆಯಾಗಿದೆ. ಶಾಶ್ವತ ಮತ್ತು ನ್ಯಾಯಯುತ ಶಾಂತಿಗಾಗಿ ನಡೆಸುವ ಎಲ್ಲ ಪ್ರಯತ್ನಗಳನ್ನು ಭಾರತವು ಬಲವಾಗಿ ಬೆಂಬಲಿಸುತ್ತದೆ ಮತ್ತು ಈ ಬೆಂಬಲವನ್ನು ಮುಂದುವರಿಸುತ್ತದೆ ಎಂದು ಹೇಳಿದ್ದಾರೆ.



ಬೆಳಗಾವಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಹಾಗೂ ವೈದ್ಯರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಯ ಶಿಲಾನ್ಯಾಸ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳಿಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಬೆಳಗಾವಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡಕ್ಕೆ ಸಿಎಂ ಚಾಲನೆ

ಜಿಲ್ಲೆಗೊಂದು ವೈದ್ಯ ಕಾಲೇಜು, ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಗುರಿ

ಬೆಳಗಾವಿ: ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಒದಗಿಸುವುದು ಸರಕಾರದ ಯೋಜನೆಯಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ 22 ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲಾಗಿದೆ. ಉಳಿದ ಕಡೆ ಗಳಲ್ಲೂ ಶೀಘ್ರ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಳಗಾವಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ, ಗೃಹವೈದ್ಯರ ವಸತಿ ನಿಲಯ ನಿರ್ಮಾಣಕ್ಕೆ ಶಿಲಾನ್ಯಾಸ, ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಿಸಲಾಗಿರುವ ನಗರ ಬಸ್ ನಿಲ್ದಾಣ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಪಿಎಂ-ಉಷಾ(ಮೇರು) ಕಟ್ಟಡ ಕಾಮಗಾರಿಗಳು ಮತ್ತು ಹೆದ್ದಾರಿಯಿಂದ ವಿಶ್ವವಿದ್ಯಾಲಯದ ರಸ್ತೆ ನಿರ್ಮಾಣ ಕಾಮಗಾರಿಗೆ ಬಿಮ್ಸ್ ಆವರಣದಲ್ಲಿ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ಕಾರಣಾಂತರಗಳಿಂದ ಕುಂಟುತ್ತ ಸಾಗಿದ್ದ ಬಿಮ್ಸ್ ಆಸ್ಪತ್ರೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಇದೀಗ ಆರಂಭಿಸಲಾಗಿದೆ. ಹಂತ ಹಂತವಾಗಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಎಂದರು. ಕೆಎಲ್‌ಇ ಸಂಸ್ಥೆಯಿಂದ ವೈದ್ಯರನ್ನು ನಿಯೋಜಿಸಿ ಉಚಿತ ಸೇವೆ ಒದಗಿಸಿರುವುದಕ್ಕೆ ಸರಕಾರದ ವತಿಯಿಂದ ಧನ್ಯವಾದಗಳನ್ನು ತಿಳಿಸಿದರು. ಬಡವರು, ತಳ ಸಮುದಾಯದ ಜನರಿಗೆ ಹಾಗೂ ಅಸಮಾನತೆ ನಿರ್ಮೂಲನೆ ಮಾಡಲು ಅವಕಾಶ ವಂಚಿತರಿಗೆ ಉತ್ತಮ ಸೌಲಭ್ಯ ಒದಗಿಸುವುದು ಸರಕಾರದ ಆದ್ಯತೆಯಾಗಿದೆ. → 4

ರಾಜ್ಯದ ಎಂಟು ಜಿಲ್ಲೆಗಳಲ್ಲಿ ಶೇ.95ರಷ್ಟು ಅಧಿಕ ಮಳೆಯಾಗಿ ರಾಜ್ಯದಲ್ಲಿ 10 ಲಕ್ಷ ಹೆಕ್ಟೇರ್ ಬೆಳೆ ನಾಶ ಆಗಿರುವ ಅಂದಾಜಿದೆ. ಈ ಬೆಳೆ ಹಾನಿಗೆ ದಾಖಲೆ ಮೊತ್ತದ ಪರಿಹಾರ ಹಣ ನೀಡಿ ರೈತರು, ಬೆಳೆಗಾರರು, ಕೃಷಿಕರ ನೆರವಿಗೆ ಧಾವಿಸಿದ್ದೇವೆ. ಬೆಳೆ ಹಾನಿ ಸಮೀಕ್ಷೆ ಪೂರ್ಣಗೊಂಡ ನಂತರ ಒಣ ಬೆಳೆಗಳಿಗೆ ಹೆಕ್ಟೇರ್‌ಗೆ 17,000 ರು. ಮತ್ತು ನೀರಾವರಿ ಬೆಳೆಗಳಿಗೆ ಹೆಕ್ಟೇರ್‌ಗೆ 21,500 ರು. ಪರಿಹಾರ ವಿತರಿಸಲಾಗುವುದು.
- ಸಿದ್ದರಾಮಯ್ಯ, ಸಿಎಂ

ಇನ್ನು ಎರಡು ವಾರ ಮುಂಗಾರು ಅಬ್ಬರ

ಬೆಂಗಳೂರು: ರಾಜ್ಯದಲ್ಲಿ ಇನ್ನೂ ಎರಡು ವಾರಗಳ ಮುಂಗಾರು ಮುಂದುವರಿಯುವ ಸಾಧ್ಯತೆಯಿದೆ ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಉಂಟಾಗಿರುವ 'ಶಕ್ತಿ' ಚಂಡಮಾರುತದಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಾರಪೂರ್ತಿ ಗುಡುಗು ಸಹಿತ ಮಳೆಯಾಗಲಿದೆ. ಅ.15ರಂದು ನೈಋತ್ಯ ಮಾನ್ಸೂನ್ ಕೊನೆಗೊಳ್ಳುವ ಸಾಧ್ಯತೆ ಇದೆ. ನಂತರ, ಈಶಾನ್ಯ ಮಾನ್ಸೂನ್ ಶುರುವಾಗಲಿದೆ ಎಂದು ತಿಳಿಸಿದೆ.

ಹಳದಿ ಮಾರ್ಗಕ್ಕೆ ಮತ್ತೊಂದು ರೈಲು

ಬೆಂಗಳೂರು: ಇತ್ತೀಚೆಗೆ ಬಿಡುಗಡೆಯಾದ ಹಳದಿ ಮೆಟ್ರೋ ಮಾರ್ಗದಲ್ಲಿ ನಾಲ್ಕನೇ ರೈಲಿಗೆ ಚಾಲನೆ ನೀಡಲಾಗಿದ್ದು, ನಮ್ಮ ಮೆಟ್ರೋವು ಈಗ ಐದನೇ ರೈಲಿನ ಸಂಚಾರಕ್ಕೆ ಮುನ್ನುಡಿ ಬರೆದಿದೆ.

ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರ ಹಳದಿ ಮಾರ್ಗಕ್ಕೆ ಕೊಲ್ಕತ್ತಾದ ಟಿಟಾಗರ್‌ನಿಂದ ಐದನೇ ರೈಲು ಆಗಮಿಸಿದ್ದು, ಈ ರೈಲಿನ ಪ್ರಾಯೋಗಿಕ ಪರೀಕ್ಷೆಯು ಆರಂಭವಾಗಿದೆ. ಶೀಘ್ರದಲ್ಲೇ ಈ ರೈಲು ವಾಣಿಜ್ಯ ಸಂಚಾರವನ್ನೂ ಆರಂಭಿಸಲಿದೆ ಎಂದು ಮೂಲಗಳು ತಿಳಿಸಿವೆ.

ಪಿಇಎಸ್ ಹಳೇ ವಿದ್ಯಾರ್ಥಿ ಸಿಟಿಒ

ಬೆಂಗಳೂರು: ಅಮೆರಿಕ ಮೂಲದ ಆಂಥ್ರೊಪಿಕ್ ಎನ್ನುವ ಕೃತಕ ಬುದ್ಧಿಮತ್ತೆ ಸುರಕ್ಷತೆ ಮತ್ತು ಸಂಶೋಧನಾ ಕಂಪನಿಯ ಹೊಸ ಮುಖ್ಯ ತಂತ್ರಜ್ಞಾನ ಅಧಿಕಾರಿ (ಸಿಟಿಒ) ಆಗಿ ಬೆಂಗಳೂರು ಮೂಲದ ರಾಹುಲ್ ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ.

ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿ ರಾಹುಲ್ ಪಾಟೀಲ್ ಫಿನ್‌ಟೆಕ್ ಸಂಸ್ಥೆ ಸ್ಟ್ರೈಪ್‌ನಲ್ಲಿ ಸಿಟಿಒ ಆಗಿ ಕೆಲಸ ಮಾಡಿದ್ದರು. ಇದೀಗ ಆಂಥ್ರೊಪಿಕ್‌ನಲ್ಲಿ ಹೊಸ ಪಾತ್ರವನ್ನು ವಹಿಸಿಕೊಳ್ಳಲಿದ್ದಾರೆ.

ವಿದ್ಯುತ್ ಸ್ಪರ್ಶ: ಆನೆ ಬಲಿ

ರಾಮನಗರ: ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವನ್ನಪ್ಪಿರುವ ಘಟನೆ ಚನ್ನಪಟ್ಟಣ ತಾಲೂಕಿನ ಚಿಕ್ಕವಿಠಲೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಶುಕ್ರವಾರ ರಾತ್ರಿ ಜಮೀನೊಂದರಲ್ಲಿ ತೆಂಗಿನಮರದ ಸುಳಿ ಯನ್ನು ಕಿತ್ತು ತಿನ್ನಲು ಯತ್ನಿಸಿದಾಗ ತೆಂಗಿನ ಮರದ ಗರಿ 11ಕೆವಿ ವಿದ್ಯುತ್ ತಂತಿಗೆ ತಗುಲಿ ದ್ದರಿಂದ ಸ್ಥಳದಲ್ಲೇ ಕಾಡಾನೆ ಸಾವಿಗೀಡಾಗಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ, ಪಶು ವೈದ್ಯರನ್ನು ಸ್ಥಳಕ್ಕೆ ಕರೆಸಿ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಸುಮಾರು 40 ವರ್ಷದ ಹೆಣ್ಣು ಆನೆಯಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ಸಾಗರ್ ತಿಳಿಸಿದ್ದಾರೆ.

ಜಪಾನ್ ಮೊದಲ ಮಹಿಳಾ ಪ್ರಧಾನಿಯಾಗಿ ಸನೇ ತಕೈಚಿ?

ಟೋಕಿಯೊ: ಜಪಾನ್‌ನ ಆಡಳಿತಾರೂಢ ಪಕ್ಷವಾದ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ(ಎಲ್‌ಡಿಪಿ)ಗೆ ನೂತನ ಅಧ್ಯಕ್ಷರಾಗಿ ಮಾಜಿ ಆರ್ಥಿಕ ಭದ್ರತೆ ಸಚಿವೆ ಸನೇ ತಕೈಚಿ ಆಯ್ಕೆಯಾಗಿದ್ದು, ಮುಂದಿನ ದಿನಗಳಲ್ಲಿ ಅವರನ್ನು ಪ್ರಧಾನಿಯಾಗಿ ಆಯ್ಕೆ ಮಾಡುವ ಸಾಧ್ಯತೆಗಳಿವೆ. ಒಂದು ವೇಳೆ ಈ ರೀತಿ ಆದರೆ ಜಪಾನ್‌ಗೆ ಮೊದಲ ಮಹಿಳಾ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. ಇತ್ತೀಚೆಗೆ ನಡೆದ ಪಕ್ಷದ ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತಿನ ಮತದಾನದಲ್ಲಿ ಯಾರಿಗೂ ಸ್ಪಷ್ಟ ಬಹುಮತ ಬಾರದ ಕಾರಣ ಶನಿವಾರ ಎರಡನೇ ಸುತ್ತಿನ ಮತದಾನವಾಗಿತ್ತು. ಸನೇ ತಕೈಚಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪ್ರಧಾನಿ ಶಿಗೆರು ಇಶಿಬಾ ಅವರನ್ನು ಇಳಿಸುವ ನಿರೀಕ್ಷೆಯಿದ್ದು, ತಕೈಚಿ ಪ್ರಧಾನಿಯಾಗುವ ಸಾಧ್ಯತೆಯಿದೆ.

ರಷ್ಯಾ, ಉಕ್ರೇನ್, ಟ್ರಂಪ್ ಸುಂಕ ಸಮರದ ಎಫೆಕ್ಟ್: ವಜ್ರ ಈಗ ಮೃದು, ಚಿನ್ನದ ಬೆಲೆ ಕಠಿಣ

ವಜ್ರಕ್ಕೆ ಯುದ್ಧಾಘಾತ, ಬೆಲೆ ಶೇ.50ರಷ್ಟು ಕುಸಿತ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ನೀವು ಅಂದುಕೊಂಡಂತೆ ವಜ್ರ ಈಗ ಅಷ್ಟೇನೂ ಕಠಿಣವಲ್ಲ. ಬದಲಾಗಿ ತುಂಬಾ ಮೃದುವಾಗಿದೆ. ಆದರೆ ಭಾರತೀಯ ಮಹಿಳೆಯರ ಇಷ್ಟದ ಹಳದಿ ಲೋಹವು ಗಗನಕುಸುಮವಾಗುತ್ತಿದೆ. ಈ ಎರಡೂ ಅಮೂಲ್ಯ ಆಭರಣಗಳ ದರದಲ್ಲಿ ಈಗ ಗಣನೀಯ ಪ್ರಮಾಣದ ಏರಿಳಿತಗಳು ಕಂಡುಬಂದಿದ್ದು, ಇದರಿಂದ ವಜ್ರ ಮತ್ತು ಚಿನ್ನದ ಮಾರುಕಟ್ಟೆಯಲ್ಲಿ ಕಳೆದ ಎರಡು

ತಿಂಗಳಿಂದ ಭಾರೀ ಏರುಪೇರು ಕಂಡು ಬಂದಿದೆ.

ಕೆಲವು ತಿಂಗಳ ಹಿಂದೆ 0-3 ಸೆನ್ಸ್ ವಜ್ರದ ಬೆಲೆ 80 ಸಾವಿರ ರೂ.ವರೆಗೂ ಇತ್ತು. ಈಗ ಅದರ ಬೆಲೆ ಕೇವಲ 40 ಸಾವಿರ ರೂ.ಗೆ ಇಳಿದಿದೆ. ಅದರಲ್ಲೂ 50 ಸೆನ್ಸ್ ಅಳತೆಯ ವಜ್ರದ ಬೆಲೆ ಗಣನೀಯವಾಗಿ ಕಡಿಮೆಯಾಗಿದೆ. ಆದರೆ ವಜ್ರಕ್ಕೆ ಸವಾಲು ಎಸೆಯುವಂತೆ ಚಿನ್ನದ ಧಾರಣೆ ಏರುತ್ತಲೇ ಇದೆ. ಕೆಲವೇ ತಿಂಗಳ ಹಿಂದೆ 10 ಗ್ರಾಮಿಗೆ 70 ಸಾವಿರ ರೂ.ಗೆ ಸಿಗುತ್ತಿದ್ದ ಚಿನ್ನ ಈಗ 1.25 ಲಕ್ಷ ರು. ದಾಟಿದೆ. ವಿಶ್ವ ಸಮುದಾಯದಲ್ಲಿ ನಡೆಯುತ್ತಿರುವ ನಿರಂತರ ಯುದ್ಧಗಳು ಹಾಗೂ ಜಾಗತಿಕ ಆರ್ಥಿಕ ಕುಸಿತ ಮತ್ತು ಅಮೆರಿಕದ ವಿದೇಶಿ ಆರ್ಥಿಕ ನೀತಿಗಳು ಇದಕ್ಕೆ ಕಾರಣ ಎನ್ನುತ್ತಾರೆ ಆಭರಣಗಳ ಮಾರುಕಟ್ಟೆ ವಿಶ್ಲೇಷಕರು.

ರಷ್ಯಾ ಮತ್ತು ಉಕ್ರೇನ್ ಯುದ್ಧ ಸದ್ಯಕ್ಕೆ ಕೊನೆಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಶಾಂತಿ ಒಪ್ಪಂದದ ಮಾತು ಕೇಳಿ ಬರುತ್ತಿದ್ದರೂ ಇಸ್ರೇಲ್-ಹಮಾಸ್ ಸಮರ ಈಗಲೂ ಮುಂದುವರಿದಿದೆ. → 4

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಜಿಲ್ಲೆಗೆ ಗರಿ ಇದ್ದಂತೆ

ಬಿಮ್ಸ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೇವೆ ಬಡವರಿಗೆ ತಲುಪಲಿ | ಅತ್ಯಾಧುನಿಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟಿಸಿ ಸಿದ್ದರಾಮಯ್ಯ ಅಭಿಮತ

ಬೆಳಗಾವಿ: ಕರ್ನಾಟಕಕ್ಕೆ ಎರಡನೇ ರಾಜಧಾನಿ ಎಂದು ಗುರುತಿಸಿಕೊಂಡಿರುವ ಬೆಳಗಾವಿ ನಗರ ವೇಗವಾಗಿ ಬೆಳೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾಳಜಿಯಿಂದ ಕರ್ನಾಟಕದ ಜತೆಗೆ ಬೆಳಗಾವಿ ಕೂಡ ಅಭಿವೃದ್ಧಿ ಹೊಂದುತ್ತಿದ್ದು, ಇಲ್ಲಿನ ಜನರ ಬಹು ವರ್ಷಗಳ ಬೇಡಿಕೆಯಾಗಿದ್ದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇಂದು ಲೋಕಾರ್ಪಣೆಗೊಂಡಿದ್ದು ಈ ಭಾಗದ ಜನರಿಗೆ ಖುಷಿ ತಂದಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬಿಮ್ಸ್) ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆ, ಬೆಳಗಾವಿ ಸ್ಮಾರ್ಟ್ ಸಿಟಿ ಅನುದಾನದಲ್ಲಿ ನಿರ್ಮಾಣಗೊಂಡ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ಬಸ್ ನಿಲ್ದಾಣದ ಉದ್ಘಾಟನೆ ಹಾಗೂ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಕಟ್ಟಡಗಳ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಸಚಿವರು ಮಾತನಾಡಿದರು.

ಈ ರಾಜ್ಯಕ್ಕೆ, ಬಡವರಿಗೆ, ರೈತರಿಗೆ, ಹಿಂದುಳಿದವರಿಗೆ ಅತೀ ಹೆಚ್ಚು ಜನಪರ ಯೋಜನೆಗಳನ್ನು ಜಾರಿಗೆ ತಂದವರೆಂದರೆ ಅದು ಸಿದ್ದರಾಮಯ್ಯನವರು. ಈ ಹಿಂದೆ 2013ರಿಂದ 2018ರ ವರೆಗೆ ಅವರ ಆಡಳಿತ ವೈಖರಿಯನ್ನು ನಾವು– ನೀವೆಲ್ಲ ಕಂಡಿದ್ದೇವೆ. ಅವರು ಮಾಡಿದ ಅಭಿವೃದ್ಧಿ ಕಾರ್ಯಗಳು ನಮ್ಮ ಕಣ್ಮುಂದಿದೆ. ಈ ಅವಧಿಯಲ್ಲಿ ಘೋಷಣೆ ಮಾಡಲಾಗಿದ್ದ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದರು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಲೋಕಾರ್ಪಣೆ ಮಾಡಿದರು.

ಸಚಿವ ಶರಣಪ್ರಕಾಶ್ ಪಾಟೀಲ್ ಅವರ ಕಾಳಜಿಯಿಂದಾಗಿ ಇಂದು ಜಿಲ್ಲಾ ಕೇಂದ್ರಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ನಿರ್ಮಾಣವಾಗುತ್ತಿವೆ. ಜಿಲ್ಲಾಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಬಡವರಿಗೆ ಅನುಕೂಲ ಆಗಬೇಕು. ಸರಕಾರಿ ಆಸ್ಪತ್ರೆಗಳಲ್ಲೂ ಉತ್ತಮ ಚಿಕಿತ್ಸೆ ಸಿಗಲಿದೆ ಎಂಬುದನ್ನು ಬಿಮ್ಸ್ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸಾಬೀತು ಮಾಡಿ ತೋರಿಸಬೇಕು ಎಂದು ಸಚಿವರು ಕರೆ ನೀಡಿದರು. ಕಳೆದ ಡಿಸೆಂಬರ್ ತಿಂಗಳಲ್ಲಿ ಬಿಮ್ಸ್ ಆಸ್ಪತ್ರೆಯಲ್ಲಿ ಅತಿಹೆಚ್ಚು ಬಾಣಂತಿಯರ ಸಾವು ಎಂದು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು. ಇದಕ್ಕೂ ಮೊದಲು ಬಿಮ್ಸ್‌ನಲ್ಲಿ ಹೆಚ್ಚು ಬಾಣಂತಿಯರ ಸಾವು ಸಂಭವಿಸಿದ್ದವು. ಇತ್ತೀಚೆಗೆ ಬಿಮ್ಸ್ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವು ಕೂಡ ಕಡಿಮೆ ಆಗುತ್ತಿವೆ ಎಂದರು.

ವಿಶ್ವವಿದ್ಯಾಲಯಕ್ಕೆ ಆಗಬೇಕಾದ ಎಲ್ಲ ಕೆಲಸಗಳನ್ನೂ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆದಷ್ಟು ಬೇಗ ವಿಶ್ವವಿದ್ಯಾಲಯ ಉದ್ಘಾಟನೆಯಾಗುವ ದಿಸೆಯಲ್ಲಿ ಪ್ರಯತ್ನಿಸಲಾಗುವುದು. ಮುಖ್ಯಮಂತ್ರಿಗಳಿಂದಲೇ ನೂತನ ವಿಶ್ವವಿದ್ಯಾಲಯ ಕ್ಯಾಂಪಸ್ ಉದ್ಘಾಟಿಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಸಮಾರಂಭದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಸಚಿವರಾದ ಡಾ.ಶರಣ್‌ಪ್ರಕಾಶ್ ಪಾಟೀಲ್, ರಾಮಲಿಂಗಾರೆಡ್ಡಿ, ಡಾ.ಎಂ.ಸಿ.ಸುಧಾಕರ್, ಶಾಸಕರಾದ ಆಸೀಫ್ ಸೇಠ್, ಅಶೋಕ್ ಪಟ್ಟಣ್, ಭರಮಗೌಡ ಕಾಗೆ, ಮಹಾಂತೇಶ್ ಕೌಜಲಗಿ, ಬಾಬಾ ಸಾಹೇಬ್ ಪಾಟೀಲ್ , ವಿಧಾನಪರಿಷತ್ ಸದಸ್ಯರಾದ ಚನ್ನರಾಜ್ ಹಟ್ಟಿಹೊಳಿ, ನಾಗರಾಜ್ ಯಾದವ್, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿನಯ್ ನಾವಲಗಟ್ಟಿ, ಕೆಎಲ್ಇ ಸಂಸ್ಥೆಯ ಅಧ್ಯಕ್ಷರಾದ ಡಾ.ಪ್ರಭಾಕರ್ ಕೋರೆ, ಬಿಮ್ಸ್ ಸಿಬ್ಬಂದಿ ವರ್ಗ, ಚನ್ನಮ್ಮ ವಿವಿ ಸಿಬ್ಬಂದಿ, ಕೆಎಸ್ಆರ್‌ಟಿಸಿ ಸಿಬ್ಬಂದಿ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಸರಕಾರಿ ಆಸ್ಪತ್ರೆ ಎಂಬ ಕೀಳರಿಮೆ ಬೇಡ

ಬೆಳಗಾವಿಯಲ್ಲಿ ನಿರ್ಮಾಣವಾಗಿರುವ ಈ ಅತ್ಯಾಧುನಿಕ ಆಸ್ಪತ್ರೆಗೆ ನಮ್ಮ ಸರಕಾರ ತಜ್ಞ ವೈದ್ಯರ ನೇಮಕ ಸೇರಿದಂತೆ ಎಲ್ಲ ವ್ಯವಸ್ಥೆಗಳನ್ನು ಮಾಡಿದೆ. ಸಾರ್ವಜನಿಕರು ಇದರ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಸರಕಾರಿ ಆಸ್ಪತ್ರೆ ಎಂಬ ಕೀಳರಿಮೆಯಿಂದ ಎಲ್ಲರೂ ಹೊರಬರಬೇಕು. ಈ ಆಸ್ಪತ್ರೆಯು ಆರೋಗ್ಯ ಕ್ಷೇತ್ರದಲ್ಲಿ ನಾವು ಮಾಡುತ್ತಿರುವ ಪ್ರಗತಿಗೆ ಸಾಕ್ಷಿಯಾಗಿದೆ. ಇದು ನಿಸ್ಸಂದೇಹವಾಗಿ ಈ ಪ್ರದೇಶದಲ್ಲಿ ಗುಣಮಟ್ಟದ ವೈದ್ಯಕೀಯ ಆರೈಕೆಯ ಕೇಂದ್ರವಾಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು. ಜನರ ತೆರಿಗೆ ಹಣದಿಂದ ನಿರ್ಮಾಣಗೊಂಡಿರುವ ನಗರ ಬಸ್ ನಿಲ್ದಾಣ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣವನ್ನು ಸ್ವಚ್ಛತೆಯನ್ನು ಎಲ್ಲರೂ ಕಾಪಾಡಿಕೊಳ್ಳಬೇಕು ಎಂದರು.

ನೀರಾವರಿ ಯೋಜನೆ ಮಾಡುವ ಕನಸು ಇತ್ತು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ನಮ್ಮ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ನಿರ್ಮಾಣವಾಗುತ್ತಿದೆ. ರಾಜಕೀಯ ಕಾರಣಕ್ಕಾಗಿ ಆ ಕ್ಯಾಂಪಸ್ ಆಯ್ಕೆ ಮಾಡಿದ್ದಾರಾದರೂ, ವಿಶ್ವವಿದ್ಯಾಲಯವನ್ನು ಒಂದು ಮಾದರಿಯಾಗಿ ಅಭಿವೃದ್ಧಿಪಡಿಸಲು ನಾನು ಪ್ರಯತ್ನಿಸುತ್ತೇನೆ. ಅಲ್ಲಿ ನನಗೆ ನೀರಾವರಿ ಯೋಜನೆ ತರುವ ಕನಸಿತ್ತು. ಆದರೆ, ಅಭಿವೃದ್ಧಿಯಲ್ಲಿ ರಾಜಕೀಯ ಮಾಡಲು ನನಗೆ ಬರುವುದಿಲ್ಲ. ಅದರಲ್ಲೂ ಶಿಕ್ಷಣ ಸಂಸ್ಥೆಗಳಲ್ಲಿ ರಾಜಕೀಯ ತರುವುದಕ್ಕೆ ನಾನು ಅವಕಾಶ ನೀಡುವುದಿಲ್ಲ ಎಂದರು.

3-4 ದಿನಗಳಲ್ಲಿ ಅಭ್ಯರ್ಥಿಗಳು ಅಂತಿಮ: ಬಾಲಚಂದ್ರ

ಗೋಕಾಕ: ಅ.19 ರಂದು ನಡೆಯುವ ಬೆಳಗಾವಿ ಬಿಡಿಸಿಸಿ ಬ್ಯಾಂಕ್ ಚುನಾವಣೆಗೆ ಮೂಡಲಗಿ ಮತ್ತು ಗೋಕಾಕ ತಾಲೂಕು ಕ್ಷೇತ್ರದಿಂದ ಮೂರ್ನಾಲ್ಕು ದಿನಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮ ಮಾಡಲಾಗುವುದು. ನಾವು ಒಮ್ಮತದಿಂದ ಆಯ್ಕೆ ಮಾಡುವ ಅಭ್ಯರ್ಥಿಗಳಿಗೆ ತಮ್ಮೆಲ್ಲರ ಸಹಕಾರ ಅವಶ್ಯವಾಗಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಇಲ್ಲಿನ ಎನ್‌ಎಸ್‌ಎಫ್ ಕಾರ್ಯಾಲಯದಲ್ಲಿ ಮೂಡಲಗಿ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿಯ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, ರೈತರು ಮತ್ತು ಸಂಘಗಳಿಗೆ ಬೇಕಾದ ಅಭ್ಯರ್ಥಿಯನ್ನು ಮೂಡಲಗಿ ಕ್ಷೇತ್ರದಿಂದ ಕಣಕ್ಕಿಳಿಸಲಾಗುವುದು ಎಂದು ತಿಳಿಸಿದರು.

ಮೂಡಲಗಿ– ಗೋಕಾಕ ಕ್ಷೇತ್ರಗಳಿಂದ ತಲಾ 4 ರಿಂದ 5 ಜನ ಆಕಾಂಕ್ಷಿಗಳಿದ್ದು, ಇದರಲ್ಲಿ ಒಬ್ಬರನ್ನು ಮಾತ್ರ ಸ್ಪರ್ಧೆಗೆ ಪರಿಗಣಿಸಲಾಗುವುದು. ಹಿರಿಯರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದ್ದೇವೆ. ಸರ್ವಾನುಮತದಿಂದ ಯೋಗ್ಯವಿರುವ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಈಗಾಗಲೇ ಕೆಲ ಸಮಾಜಗಳ ಮುಖಂಡರು ನನ್ನನ್ನು ಭೇಟಿ ಮಾಡಿ ತಮ್ಮ– ತಮ್ಮ ಸಮಾಜಗಳಿಗೆ ಪ್ರಾಶಸ್ತ್ಯ ನೀಡುವಂತೆ ಕೋರಿಕೊಂಡಿದ್ದಾರೆ. ನಾನು ಸಹ ಆಯಾ ಸಮಾಜಗಳ ಮನವಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರೊಂದಿಗೆ ಚರ್ಚಿಸಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ವೇದಿಕೆಯಲ್ಲಿ ಬೆಳಗಾವಿ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಸುಭಾಸ ಢವಳೇಶ್ವರ, ನಿರ್ದೇಶಕ ನೀಲಕಂಠ ಕಪ್ಪಲಗುದ್ದಿ, ಸಂತೋಷ ತಮ್ಮಣ್ಣ ಪಾರ್ಶಿಯವರು ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಸಹಕಾರಿ ಮುಖಂಡರು, ತಾಲ್ಲೂಕು ಪಿಕೆಪಿಎಸ್ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡು ಅಭ್ಯರ್ಥಿಗಳ ಆಯ್ಕೆ ಕುರಿತಂತೆ ತಮ್ಮ ತಮ್ಮ ಸಲಹೆ– ಸೂಚನೆಗಳನ್ನು ನೀಡಿದರು.

ಎನ್‌ಎಸ್‌ಎಫ್ ಕಾರ್ಯಾಲಯದಲ್ಲಿ ಮೂಡಲಗಿ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿಯ ಸದಸ್ಯರನ್ನು ಉದ್ದೇಶಿಸಿ ಬಾಲಚಂದ್ರ ಜಾರಕಿಹೊಳಿ ಮಾತನಾಡಿದರು.

ಹಾಲು ಒಕ್ಕೂಟದಲ್ಲಿ 2 ನಿರ್ದೇಶಕರ ಹುದ್ದೆಗೆ ನಾಮ ನಿರ್ದೇಶನ

ಇದೇ ತಿಂಗಳಲ್ಲಿ ನಡೆಯುವ ಬಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನಮ್ಮ ಪೆನೆಲ್ ಸಂಪೂರ್ಣ ಬಹುಮತವನ್ನು ಪಡೆದುಕೊಂಡು ಆಡಳಿತ ಚುಕ್ಕಾಣಿ ಹಿಡಿಯಲಿದೆ. ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟದಲ್ಲಿ ಎರಡು ನಿರ್ದೇಶಕರ ಹುದ್ದೆಗೆ ನಾಮ ನಿರ್ದೇಶನ ಮಾಡಿಕೊಳ್ಳಲಾಗುತ್ತಿದ್ದು, ಇದರಲ್ಲಿ ಒಂದು ಮೂಡಲಗಿ ತಾಲೂಕು ಮತ್ತು ಇನ್ನೊಂದು ಯರಗಟ್ಟಿ ತಾಲೂಕಿಗೆ ನೀಡಲು ನಿರ್ಣಯ ತೆಗೆದುಕೊಂಡಿದ್ದೇವೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಕರೆಮ್ಮಾದೇವಿ ನೂತನ ಪಲ್ಲಕ್ಕಿ

ಬೈಲಹೊಂಗಲ: ಆಧ್ಯಾತ್ಮಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಮನಸ್ಸು ಹಗುರಾಗುತ್ತದೆಂದು ನೇಗಿಲ ಯೋಗಿ ರಾಜ್ಯ ರೈತ ಸೇವಾ ಸಂಘದ ಜಿಲ್ಲಾಧ್ಯಕ್ಷ ಶಂಕರ ಬೋಳಣ್ಣವರ ಹೇಳಿದರು. ಪಟ್ಟಣದ ಕಲ್ಲಗುಡಿಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಶ್ರೀ ಕರೆಮ್ಮಾದೇವಿಯ ದೇವಸ್ಥಾನದ ನೂತನ ಪಲ್ಲಕ್ಕಿ ಹಾಗೂ ಶ್ರೀ ಕರೆಮ್ಮಾದೇವಿಯ ಉತ್ಸವ ಮೂರ್ತಿ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು. ದೇವರು ನಮಗೆ ಸಾಕಷ್ಟು ಸಂಪತ್ತು ಕೊಟ್ಟಾಗ, ಇಂತಹ ಧಾರ್ಮಿಕ ಕಾರ್ಯಗಳಿಗೆ ದೇಣಿಗೆ ನೀಡಿದರೆ, ಜೀವನ ಸಾರ್ಥಕ ಪಡೆಯುತ್ತದೆ ಎಂದರು. ಶ್ರೀ ಕರೆಮ್ಮಾದೇವಿ ಸೇವಾ ಅಭಿವೃದ್ಧಿ ಸಂಘದ ಮುಖಂಡರು ಭಕ್ತಿ, ಭಾವದಿಂದ ಪ್ರತಿವರ್ಷ ಜಾತ್ರೆ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಮೂರುಸಾವಿರ ಮಠದ ಪ್ರಭುನೀಲಕಂಠ ಮಹಾಸ್ವಾಮೀಜಿ ಸಾನಿಧ್ಯವಹಿಸಿದ್ದರು. ಶ್ರೀ ಕರೆಮ್ಮಾದೇವಿ ಸೇವಾ ಅಭಿವೃದ್ಧಿ ಸಂಘದ ಅಧ್ಯಕ್ಷ ಶಿವಾನಂದ ಮಡಿವಾಳರ ಅಧ್ಯಕ್ಷತೆವಹಿಸಿದ್ದರು. ಈ ಸಂದರ್ಭದಲ್ಲಿ ಚನ್ನಯ್ಯ ಹಿರೇಮಠ, ವಿ.ಬಿ.ಮಠದ, ಬಿ.ಎಸ್.ಬೂದಿಹಾಳ, ವೀರಣ್ಣಾ ಬೆಳಗಾವಿ, ವೀರಭದ್ರ ಕಾಪ್ಸಿ, ಬಸವರಾಜ ಹರಕುಣಿ, ಸೋಮೇಶ ಮಡಿವಾಳರ, ಸಿದ್ಧೇಶ್ವರ ಹೊನ್ನಾವರ, ಶಿದರಾಯಪ್ಪ ಬಾಗಿ, ಈರಣ್ಣಾ ಬೆಳಗಾವಿ, ಮಹೇಶ ಬಂಡಿವಡ್ಡರ, ಪತ್ರಕರ್ತ ಪ್ರಕಾಶ ಬೆಳಗಾವಿ, ಚಂದ್ರಶೇಖರ ಹೊಸೂರ, ಮಲ್ಲಪ್ಪಾ ಬೆಳಗಾವಿ, ನಂದು ಹನುಮಶೇಟ, ಮಲ್ಲು ಬೆಳಗಾವಿ ಹಾಗೂ ಪ್ರತಿಬಸವ ನಗರ ಮತ್ತು ವಿನಾಯಕ ನಗರ ನಾಗರಿಕರು, ಸದ್ಭಕ್ತರು ಉಪಸ್ಥಿತರಿದ್ದರು.

ಸಹಕಾರಿ ಸಂಘಗಳಿಂದ ದೇಶದ ಆರ್ಥಿಕತೆ ವೃದ್ಧಿ

ಮೂಡಲಗಿ: ದೇಶದ ಆರ್ಥಿಕತೆಯನ್ನು ಸದೃಢಗೊಳಿಸುವ ಸಂಕಲ್ಪವನ್ನು ಸಹಕಾರಿ ಸಂಘಗಳು ಮಾಡಿವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ತಾಲೂಕಿನ ಕಲ್ಲೋಳಿಯ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಶ್ರೀ ಮಹಾಲಕ್ಷ್ಮಿ ಸೌಹಾರ್ದ ಸಹಕಾರಿ ಸಂಘದ ನೂತನ ಪ್ರಧಾನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿ, ಸ್ವಾಸ್ಥಿಕ ಹಣಕಾಸು ವ್ಯವಹಾರ ಮಾಡುವ ಮೂರನೇಯ ಶಕ್ತಿಯಾಗಿ ಭಾರತ ಕಾರ್ಯನಿರ್ಹಿಸಲಿದೆ. ನಮ್ಮ ದೇಶ ಬೆಳವಣಿಗೆಯಲ್ಲಿ ಅತಿ ಕಡು ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದರು.

ಹಿಂದೆ ದೇಶದ ಆರ್ಥಿಕ ಪರಿಸ್ಥಿತಿ ಸರಿಯಾಗಿರಲಿಲ್ಲ. ಆ ಸಮಯದಲ್ಲ ಮಾಜಿ ಪ್ರಧಾನಿ ರಾಜೀವ ಗಾಂಧಿಯವರು ಹೇಳಿದಂತೆ ಅವರು ಒಂದು ರುಪಾಯಿಯನ್ನು ಫಲಾನುಭವಿಗೆ ಹಾಕಿದರೆ. ಅದು ಕೇವಲ 15 ಪೈಸೆ ಮುಟ್ಟುತ್ತಿತ್ತು ಸದ್ಯ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಹಾಕುವ ಪ್ರತಿ ರುಪಾಯಿಯು ನೇರವಾಗಿ ಫಲಾನುಭವಿಯ ಖಾತೆಗೆ ಜಮೆಯಾಗುತ್ತಿದೆ. ಇದು ದೇಶದ ಪ್ರಗತಿಯ ದ್ಯೋತಕ ಎಂದರು.

ಮಹಾಲಕ್ಷ್ಮೀ ಸಹಕಾರಿ ಸಂಸ್ಥಾಪಕ ಅಧ್ಯಕ್ಷ ಮತ್ತು ಸಂಸದ ಈರಣ್ಣ ಕಡಾಡಿ ಮಾತನಾಡಿ, 23 ವಸಂತಗಳನ್ನು ಪೂರೈಸಿರುವ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯು ವಾಹನ ಖರೀದಿ, ಕೃಷಿ, ಹೈನುಗಾರಿಕೆ, ಗೃಹ ನಿರ್ಮಾಣ, ವ್ಯಾಪಾರ, ಗುಡಿ ಕೈಗಾರಿಕೆಗಳಿಗೆ ಮತ್ತು ಮಹಿಳಾ ಸ್ವ-ಸಹಾಯ ಸಂಘಗಳಿಗೆ ಸಾಲ ನೀಡಿ ಜನರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿದೆ ಎಂದರು. ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಬೆಂಗಳೂರಿನ.ಕ.ರಾ.ಸೌ. ಸ. ಸಹಕಾರಿ ಸಂಘದ ಅಧ್ಯಕ್ಷ ಜಿ ನಂಜನಗೌಡ ಮಾತನಾಡಿದರು. ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಮಹಾಸ್ವಾಮಿಜಿಗಳು ಹಾಗೂ ಭಗೀರಥ ಪೀಠದ ಪುರುಷೋತ್ತಮಾನಂದ ಪುರಿ ಮಹಾಸ್ವಾಮಿಜಿ, ಕಾಡಸಿದ್ದೇಶ್ವರ ಮಠ ಕನ್ನೇರಿ ಪೂಜ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಶಾಸಕರಾದ ಅಭಯ ಪಾಟೀಲ, ದುರ್ಯೋಧನ ಐಹೊಳೆ, ವಿಠ್ಠಲ ಹಲಗೇಕರ, ನಿಖಿಲ್ ಕತ್ತಿ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಮಾಜಿ ಶಾಸಕರಾದ ಸಂಜಯ ಪಾಟೀಲ, ಪಿ. ರಾಜೀವ, ಡಾ. ವಿಶ್ವನಾಥ ಪಾಟೀಲ, ಹುಬ್ಬಳಿ ಮಹಾಪೌರ ಜ್ಯೋತಿ ಪಾಟೀಲ. ಮಲ್ಲಣ್ಣ ಯಾದವಾಡ, ರವಿ ಪಾಟೀಲ್. ವಿಜಯ ಮೆಟಗುಡ್, ಎಮ್ ಎಮ್ ಜೀರಲಿ, ಮಾಜಿ ಜಿಪಂ ಬಸಗೌಡ ಪಾಟೀಲ್, ಸಹಕಾರಿ ಅಧ್ಯಕ್ಷ ಬಾಳಪ್ಪ ಬೆಳಕೂಡ ಸೇರಿ ಹಲವರಿದ್ದರು.

ಶ್ರೀ ಮಹಾಲಕ್ಷ್ಮಿ ಸೌಹಾರ್ದ ಸಹಕಾರಿ ಸಂಘದ ನೂತನ ಪ್ರಧಾನ ಕಚೇರಿ ಕಟ್ಟಡವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಉದ್ಘಾಟಿಸಿದರು.

ಬೆಳಗಾವಿ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಮೊದಲು ಸತ್ತ ಹಾವಾಗಿತ್ತು. ನನ್ನ ಕೈಯಲ್ಲಿ ನೀಡಿದಾಗ 544 ಕೋಟಿ ಇದ್ದ ದುಡಿ ಯುವ ಬಂಡವಾಳದಿಂದ 6800 ಕೋಟಿ ದುಡಿಯುವ ಬಂಡವಾಳ ಮಾಡಲಾಗಿದೆ. 50 ಲಕ್ಷ ಕುಟುಂಬಗಳು ಆ ಬ್ಯಾಂಕನ್ನು ಆಶ್ರಯಿಸಿವೆ. ಚುನಾವಣೆಗಾಗಿ ಸೊಸಾಯಟಿಗಳಿಗೆ ಹಣ ನೀಡಿದ್ದಾರೆ. ಆದರೆ 15 ತಾಲೂಕಿನ ಸೊಸಾಯಿಟಿಗಳ ಸದಸ್ಯರು ನಿಸ್ವಾರ್ಥ ಸೇವೆಯ ಅಭ್ಯರ್ಥಿಯನ್ನು ಗೆಲ್ಲಿಸಿದ್ದಾರೆ.
-ರಮೇಶ ಕತ್ತಿ, ಮಾಜಿ ಸಂಸದ

ಬೆಳೆ ಹಾನಿ ಪ್ರದೇಶಕ್ಕೆ ಅಶೋಕ ಭೇಟಿ

ಕಾಗವಾಡ: ಸದ್ಯಕ್ಕೆ ಕಣ್ಣು, ಕಿವಿ ಹಾಗೂ ಬಾಯಿ ಇಲ್ಲದಂತಾಗಿರುವ ರಾಜ್ಯದ ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ಸುತ್ತು ಹೋಗಿದ್ದು, ಅತಿವೃಷ್ಟಿ ಯಿಂದ ಕಂಗಾಲಾಗಿರುವ ರೈತರ ಗೋಳು ಕೇಳುವವರೆ ಇಲ್ಲದಂತಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ರಾಜ್ಯ ಸರಕಾರದ ವಿರುದ್ಧ ಗುಡುಗಿದ್ದಾರೆ.

ತಾಲೂಕಿನ ಜುಗೂಳ ಮತ್ತು ಮಂಗಾವತಿ ಗ್ರಾಮಗಳಲ್ಲಿ ಅತಿವೃಷ್ಟಿಯಿಂದ ಹಾಳಾಗಿರುವ ಬೆಳೆಗಳನ್ನು ವಿಕ್ಷಣೆ ಮಾಡಿ, ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಅತೀವೃಷ್ಠಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ನೂರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸರಕಾರ ಮೌನ ವಹಿಸಿದೆ ಎಂದು ಆರೋಪಿಸಿದ ಅವರು, ರೈತರ ಅಳಲು ಸರಕಾರ ಕಿವುಡಾಗಿದೆ. ರಾಜ್ಯದಲ್ಲಿ ಜನಸಾಮಾನ್ಯರು ತೊಂದರೆಗಿಡಾಗಿದ್ದರೂ ಕೂಡ ಸರಕಾರ ಕಣ್ಣು ಮುಚ್ಚಿ ಕುಳಿತುಕೊಂಡಿದೆ. ಹೀಗಾಗಿ, ಸರಕಾರ ಸತ್ತು ಹೋಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸಂಸದ ರಮೇಶ ಜಿಗಜಿಣಗಿ, ಶಾಸಕರಾದ ಶಶಿಕಲಾ ಜೊಲ್ಲೆ, ದುರ್ಯೋದನ ಐಹೊಳೆ, ನಿಖಿಲ ಕತ್ತಿ, ಎನ್. ರವಿಕುಮಾರ, ಮಾಜಿ ಸಚಿವ ಶ್ರೀಮಂತ ಪಾಟೀಲ, ಬಿಜೆಪಿ ಮುಖಂಡ ಶೀತಲಗೌಡ ಪಾಟೀಲ, ಕಾಗವಾಡ ಮಂಡಲ ಬಿಜೆಪಿ ಅಧ್ಯಕ್ಷ ಅರುಣಕುಮಾರ ಗಣೇಶವಾಡಿ, ಸೇರಿದಂತೆ ಅಧಿಕಾರಿಗಳು, ರೈತ ಮುಖಂಡರು ಉಪಸ್ಥಿತರಿದ್ದರು.

ತಾಲೂಕಿನ ಜುಗೂಳ ಹಾಗೂ ಮಂಗಾವತಿ ಗ್ರಾಮಗಳಲ್ಲಿ ಪ್ರವಾಹದ ಹಿನ್ನಿರಿನಿಂದ ಸುಮಾರು 3 ಸಾವಿರಕ್ಕೂ ಅಧಿಕ ಪ್ರಮಾಣದ ಭೂಮಿಯಲ್ಲಿ ನೀರು ನಿಂತಿದ್ದು, ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಕುರಿತು ಸರಕಾರದ ಗಮನ ಸೆಳೆದು, ನಿಂತಿರುವ ನೀರನ್ನು ಹೋಗಲಾಡಿಸಲು ಯೋಜನೆ ರೂಪಿಸುವಂತೆ ಒತ್ತಾಯಿಸಿ, ಮಹಾರಾಷ್ಟ್ರದಲ್ಲಿ ಅತೀ ಹೆಚ್ಚು ಮಳೆಯಾಗಿ ಕೃಷ್ಣಾ ನದಿಯ ನದಿಯ ನೀರು ಹೆಚ್ಚಾಗಿ ಈ ಭಾಗದ ರೈತರ ಜಮೀನುಗಳಿಗೆ ಅಪಾರ ಪ್ರಮಾಣದ ನೀರು ನುಗ್ಗಿ ಬೆಳೆಹಾನಿಯಾಗಿದೆ. ಇದರಿಂದ ರೈತರು ಆರ್ಥಿಕ ಸಂಕಷ್ಟ ಎದುರಿಸಿತ್ತಿದ್ದು, ಸರಕಾರ ಎಚ್ಚೆತ್ತುಕೊಂಡು ಪರಿಹಾರ ನೀಡಿ.
-ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ



ಜುಗೂಳ– ಮಂಗಾವತಿ ಗ್ರಾಮಗಳಲ್ಲಿ ಅತೀವೃಷ್ಠಿಯಿಂದ ಹಾನಿಗಿಡಾಗುವ ಬೆಳೆಗಳನ್ನು ಅಶೋಕ ವೀಕ್ಷಣೆ ಮಾಡಿದರು.

ಕ್ರಿಕೆಟ್‌ಗಿಂತ ಕಬಡ್ಡಿ ಹೆಚ್ಚು ಜನಪ್ರಿಯ: ಸುಧಾಕರ್ ಹರ್ಷ

ರಾಮದುರ್ಗ: ವಿದೇಶದಲ್ಲಿ ಹುಟ್ಟಿದ ಕ್ರಿಕೆಟ್ ಆಟಕ್ಕಿಂತ ಭಾರತದಲ್ಲಿ ಹುಟ್ಟಿದ ಕಬಡ್ಡಿ ಕ್ರೀಡೆ ಈಗೀಗ ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀಮತಿ ಐ.ಎಸ್. ಯಾದವಾಡ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ದಕ್ಷಿಣ ಭಾರತದ ಅಂತರ ವಿವಿ ಗಳ ಪುರುಷರ ಕಬಡ್ಡಿ ಪಂದ್ಯಾವಳಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕು ಮಟ್ಟದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಬಡ್ಡಿ ಪಂದ್ಯಾಟಗಳನ್ನು ಆಯೋಜಿಸಿರುವುದು ಸಂಘಟಕರ ಆಸಕ್ತಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಕ್ರೀಡೆಯಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ನಿರ್ಣಾಯಕರ ನಿರ್ಣಯವನ್ನು ಗೌರವಿಸಿ, ಕ್ರೀಡಾ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ಪಂದ್ಯಾಟದಲ್ಲಿ ಜಯಗಳಿಸಿದ ತಂಡಗಳು ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗುತ್ತಾರೆ ಎಂದು ಹೇಳಿದರು.

ತಾಲೂಕಿನಲ್ಲಿ ಖಾಸಗಿ ಕಾಲೇಜುಗಳಿಗಿಂತ ಸರಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಲಿಕೆಗೆ ಆಸಕ್ತಿ ತೋರಿಸುತ್ತಿರುವುದರಿಂದ ಮುಂಬರುವ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಲಿದೆ. ಈ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಮತ್ತೊಂದು ಸರಕಾರಿ ಕಾಲೇಜು ಮಂಜೂರು ಮಾಡಿಸುವಂತೆ ಸಭೆ ಅಧ್ಯಕ್ಷತೆ ವಹಿಸಿದ್ದ ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಶಿಕ್ಷಣ ಸಚಿವರನ್ನು ಒತ್ತಾಯಿಸಿದರು. ಈಗಾಗಲೇ ಪಕ್ಕದ ಸವದತ್ತಿ ಹಾಗೂ ಗೋಕಾಕ ತಾಲೂಕಿನಲ್ಲಿ ಎಂಜನೀಯರ್ ಕಾಲೇಜು ಆರಂಭವಾಗಿದ್ದು, ರಾಮದುರ್ಗ ತಾಲೂಕಿಗೂ ಸರಕಾರಿ ಎಂಜನೀಯರ್ ಕಾಲೇಜು ಮಂಜೂರಾತಿಗೆ ಶಿಕ್ಷಣ ಸಚಿವ ಡಾ. ಸುಧಾಕರ ಶ್ರಮಿಸಲಿ ಎಂದು ಒತ್ತಾಯಿಸಿ, ಮನವಿ ಸಲ್ಲಿಸಿದರು. ರಾಮದುರ್ಗ ತಾಲೂಕಿನಲ್ಲಿ ಆಯೋಜಿಸಿದ ಕಬಡ್ಡಿ ಕ್ರೀಡಾಕೂಟದಲ್ಲಿ ಕರ್ನಾಟಕ ಸೇರಿದಂತೆ ಆಂದ್ರಪ್ರದೇಶ, ಕೇರಳ, ತಮಿಳನಾಡು, ತೆಲಂಗಾಣ ಹಾಗೂ ಪಾಂಡಿಚೇರಿ ರಾಜ್ಯಗಳ 131 ವಿಶ್ವ ವಿದ್ಯಾಲಯಗಳಿಂದ ಸುಮಾರು 2000 ಕ್ಕೂ ಅಧಿಕ ಕ್ರೀಡಾ ಪಟುಗಳು ಭಾಗವಹಿದ್ದಾರೆ ಎಂದರು.

ಕಬಡ್ಡಿ ಪಂದ್ಯಾಟಗಳು ಅ.4 ರಿಂದ ಅ. 7ರ ವರೆಗೆ ಹಗಲು ರಾತ್ರಿ ನಡೆಯಲಿದ್ದು, ಸುಸಜ್ಜಿತ 4 ಮ್ಯಾಟ್ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲಾಗಿದೆ. ಸುಮಾರು 8000 ಸಾವಿರ ಕ್ರೀಡಾ ಪ್ರೇಯರಿಗೆ ಕುಳಿತುಕೊಳ್ಳಲು ಗ್ಯಾಲರಿ ವ್ಯವಸ್ಥೆಯನ್ನು ಆಯೋಜಕರು ಕಲ್ಪಿಸಿದ್ದಾರೆ. ಈ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಅಥ್ಲೆಟಿಕ್‌ನ ಮಾಜಿ ಆಟಗಾರ ಹಾಗೂ ಏಕಲವ್ಯ ಪ್ರಶಸ್ತಿ ಪುರಸ್ಕೃತ ಈ.ಎ. ಶಿವಾನಂದ, ಕರಿಮುನ್ನಿಸಾ ಸೈಯದ್, ಡಾ. ಜಗದೀಶ ಗಸ್ತಿ, ಶ್ರೀಮತಿ ಐ.ಎಸ್. ಎಂ.ಡಿ. ಕಮತಗಿ, ಮಹಾವಿದ್ಯಾಲಯದ ಜಂಟಿ ಸಂಘಟನಾ ಕಾರ್ಯದರ್ಶಿ ಡಾ. ಕೆ.ಎಂ. ಸಾರವಾನ್, ಕಾಲೇಜು ಸಿ.ಡಿ.ಸಿ ಸಮಿತಿಯ ಪದಾಧಿಕಾರಿಗಳು, ವಿವಿಧೆಡೆಯಿಂದ ಆಗಮಿಸಿದ ಕ್ರೀಡಾಕೂಟ ನಿರ್ಣಾಯಕರು ಸೇರಿದಂತೆ ಇತರರಿದ್ದರು.

ಪಟ್ಟಣದ ಐ.ಎಸ್. ಯಾದವಾಡ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ವಿವಿಗಳ ಪುರುಷರ ಕಬಡ್ಡಿ ಪಂದ್ಯಾವಳಿಗೆ ಡಾ. ಎಂ.ಸಿ. ಸುಧಾಕರ್ ಚಾಲನೆ ನೀಡಿದರು.

ಬೆಳಗಾವಿ ರಾಣಿ ಚೆನ್ನಮ್ಮ ವಿವಿ ಆರಂಭವಾಗಿ 15 ವರ್ಷಗಳ ನಂತರ ಪ್ರಥಮ ಬಾರಿಗೆ ದಕ್ಷಿಣ ಭಾರತದ ಅಂತರ್ ಕಾಲೇಜುಗಳ ಕಬಡ್ಡಿ ಪಂದ್ಯಾಟಗಳನ್ನು ಆಯೋಜನೆ ಮಾಡಲಾಗಿದೆ. ಕಬಡ್ಡಿ ಆಟದಿಂದ ದೈಹಿಕವಾಗಿ ಹಾಗೂ ಉಸಿ ರಾಟ ಕ್ರಿಯೆಯಿಂದ ಮಾನಸಿಕ ಸಾಮರ್ಥ್ಯ ವನ್ನು ಹೆಚ್ಚಿಸುವ ದೇಶಿ ಕ್ರೀಡೆಯಾಗಿದ್ದು, ವಿದ್ಯಾರ್ಥಿಗಳು ಕಬಡ್ಡಿ ಆಟಕ್ಕೆ ಹೆಚ್ಚು ಒಲವು ತೋರಬೇಕು.
-ಪ್ರೋ.ಸಿ.ಎಂ ತ್ಯಾಗರಾಜ್. ರಾಣಿ ಚೆನ್ನಮ್ಮ ವಿವಿ ವೈಸ್ ಚಾನ್ಸಲರ್

ನರೇಗಾ ಕೂಲಿಕಾರರು ಇ-ಕೆವೈಸಿ ಮಾಡಿಸಿ

ಬೆಳಗಾವಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಯಡಿ ನೋಂದಣಿ ಮಾಡಿಕೊಂಡಿರುವ ಎಲ್ಲ ಸಕ್ರಿಯ ಕೂಲಿಕಾರರು ಇ-ಕೆವೈಸಿಯನ್ನು ಎನ್.ಎಮ್.ಎಮ್.ಎಸ್. ಆಪ್ ಮೂಲಕ ಅಪಡೇಟ್ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ಶಿಂಧೆ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ. ಮನರೇಗಾ ಯೋಜನೆಯಲ್ಲಿ ಕೂಲಿಕಾರರ ಹಾಜರಾತಿಗೆ ಸಂಬಂಧಿಸಿದಂತೆ ಪಾರದರ್ಶಕ ತರುವ ನಿಟ್ಟಿನಲ್ಲಿ ಇ-ಕೆವೈಸಿ (ಉದ್ಯೋಗ ಚೀಟಿಯೊಂದಿಗೆ ಆಧಾರ ಲಿಂಕ್) ಮೂಲಕ ಕೂಲಿಕಾರರ ಮಾಹಿತಿಯನ್ನು ಅಪಡೇಟ್ ಮಾಡಲಾಗುತ್ತಿದೆ. ಜಿಲ್ಲೆಯ 500 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 6,03,627 ಜನ ಸಕ್ರಿಯ ಕೂಲಿಕಾರರ ಇ-ಕೆವೈಸಿ ಮಾಡಲಾಗುತ್ತಿದೆ. ಇದಕ್ಕೆ ಅಗತ್ಯ ಮಾಹಿತಿಗಳಾದ ಉದ್ಯೋಗ ಚೀಟಿ ಮತ್ತು ಆಧಾರ ಕಾರ್ಡಗಳನ್ನು ಕೂಲಿಕಾರರು ಗ್ರಾಪಂ ಸಿಬ್ಬಂದಿಗೆ ಒದಗಿಸಬೇಕು. ಈಗಾಗಲೇ ಜಿಲ್ಲೆಯಲ್ಲಿ ಇಲ್ಲಿಯವರೆಗೆ 8780 ಜನ ಕೂಲಿಕಾರರ ಇ-ಕೆವೈಸಿ ಮೂಲಕ ಮಾಹಿತಿಯನ್ನು ಅಪಡೇಟ್ ಮಾಡಿಕೊಂಡಿದ್ದಾರೆ. ಎಲ್ಲ ನೊಂದಾಯಿತ ಸಕ್ರಿಯ ಕೂಲಿಕಾರರು ಅಕ್ಟೋಬರ್ -31ರೊಳಗಾಗಿ ಇ-ಕೆವೈಸಿ ಮಾಡಿಸುವುದು ಹಾಗೂ ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಯಲ್ಲಪ್ಪ ಡೇಕೋಳ್ಕರ್ ನಿಧನ: ಸಚಿವೆ ಸಂತಾಪ

ಬೆಳಗಾವಿ: ಉಚಗಾಂವ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಯಲ್ಲಪ್ಪ ಡೇಕೋಳ್ಕರ್ ಅವರ ನಿಧನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಪಕ್ಷದ ಬಲವರ್ಧನೆಗೆ ಹಾಗೂ ಬೆಳ ಗಾವಿ ಗ್ರಾಮೀಣ ಕ್ಷೇತ್ರದ ಬೆಳವಣಿಗೆಗೆ ಅವರು ನೀಡಿ ದ ಕೊಡುಗೆ ಸದಾ ಸ್ಮರಣೀ ಯ. ಕಾರ್ಯ ಕರ್ತರನ್ನು ಪ್ರೇರೇಪಿಸಿ, ಪಕ್ಷದ ಸಂಘಟನೆಯಲ್ಲಿ ಅವರು ವಹಿಸಿದ ಪಾತ್ರ ಪ್ರಮುಖವಾಗಿತ್ತು. ದುಃಖದ ಈ ಸಂದರ್ಭದಲ್ಲಿ ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಕುಟುಂಬಸ್ಥರಿಗೆ ಅಗಲಿಕೆಯ ನೋವು ಸಹಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸು ತ್ತೇನೆ ಎಂದು ಸಚಿವರು ತಿಳಿಸಿದ್ದಾ

ಯಶಸ್ವಿ ಸಮೀಕ್ಷೆಗೈದ ಶಿಕ್ಷಕರಿಗೆ ಸನ್ಮಾನ

ಯರಗಟ್ಟಿ: ತಾಲೂಕಿನಾದ್ಯಂತ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ಚುರುಕಾಗಿ ನಡೆಸಿ ಕಡಿಮೆ ಅವಧಿಯಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿದ ಯರಗಟ್ಟಿ ತಾಲೂಕಿನ ನಾಲ್ಕು ಜನ ಶಿಕ್ಷಕರನ್ನು ತಹಸೀಲ್ದಾರ ಎಮ್ ವ್ಹಿ ಗುಂಡಪ್ಪಗೋಳ ಸನ್ಮಾನಿಸಿದರು. ತಹಸೀಲ್ದಾರ ಕಚೇರಿ ಸಭಾಭವನದಲ್ಲಿ ಜರುಗಿದ ಸಾಮಾಜಿಕ ಮತ್ತು ಶೈಕ್ಷಣಿ ಸಮೀಕ್ಷೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮೀಕ್ಷೆಯಲ್ಲಿ ಪಾಲ್ಗೊಂಡ ತಾಲೂಕು ಅಧಿಕಾರಿಗಳಿಂದ ಸಮೀಕ್ಷೆಯಲ್ಲಿ ಕಂಡುಬರುವ ಸಮಸ್ಯೆಗಳನ್ನು ಆಲಿಸಿದರು. ನಂತರ ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಮಸ್ಯೆ ಹಾಗೂ ಪರಿಹಾರಗಳ ಕುರಿತು ಚರ್ಚೆ ನಡೆಸಿದರು. ಕಡಿಮೆ ಅವಧಿಯಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿದ ತಾಲ್ಲೂಕಿನ ನಾಲ್ಕು ಜನ ಸಮೀಕ್ಷೆದಾರರಿಗೆ ಸನ್ಮಾನಿಸಲಾಯಿತು. ತಹಸೀಲ್ದಾರ ಗುಂಡಪ್ಪಗೋಳ ಮಾತನಾಡಿ, ತಾಲೂಕಿನಲ್ಲಿ ಒಟ್ಟು 23015 ಕುಟುಂಬಗಳಿದ್ದು, ಸಮೀಕ್ಷೆ ಕೈಗೊಳ್ಳಲು 216 ಸಮೀಕ್ಷೆದಾರರನ್ನು ನೇಮಕ ಮಾಡಲಾಗಿದೆ. ಇಲ್ಲಿಯವರೆಗೆ 17934 ಕುಟುಂಬಗಳ ಸಮೀಕ್ಷೆ ಮಾಡಿ ಶೇ.78% ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು. ಈ ವೇಳೆ ಉಪ ತಹಸೀಲ್ದಾರ ಸಂತೋಷ ಜಾದವ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಮೇಶ ಅವರಾದಿ, ಎಸ್. ಎಸ್. ಜಮಾದಾರ, ಬಿ. ಎಸ್. ಸಿದ್ದಬಸನವರ, ಎಸ್.ಜಿ. ಸುಣಗಾರ, ಅರ್ಜುನ ಕಾಮಣ್ಣವರ ಸೇರಿದಂತೆ ಅನೇಕರು ಇದ್ದರು.

ಬುದ್ಧ ಸಾರಿದ ಶಾಂತಿ ಸಂದೇಶ ಪಾಲನೆ ಮಾಡಿ

ಅಥಣಿ: ಗೌತಮ ಬುದ್ಧರು ಸಾರಿದ ಶಾಂತಿ ಸಂದೇಶವನ್ನು ಎಲ್ಲರೂ ಪಾಲನೆ ಮಾಡಬೇಕು ಎಂದು ಬೆಳಗಾವಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಪೊಲೀಸ್ ವರಿಷ್ಠಾಧಿಕಾರಿ ರವೀಂದ್ರ ಗಡಾದೆ ಹೇಳಿದರು. ಅವರು ಸಮೀಪದ ಗೂಗವಾಡ ಗ್ರಾಮದಲ್ಲಿ ದಮ್ಮಭೂಮಿ, ಬುದ್ಧ ವಿಹಾರ ದಲ್ಲಿ ದಮ್ಮ ಚಕ್ರ ಪರಿವರ್ತನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಭಗವಾನ್ ಗೌತಮ ಬುದ್ಧರು ಹೇಳಿದಂತೆ ಕರುಣೆ, ಅಹಿಂಸೆ, ಸಮತೆ ಮತ್ತು ಶಾಂತಿಯಂತಹ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ದುಃಖವನ್ನು ನಿವಾರಿಸಿ ಹಾಗೂ ನಿರ್ವಾಣವನ್ನು ತಲುಪಲು ಅಷ್ಟಾಂಗ ಮಾರ್ಗದ ಅನುಸರಣೆಯನ್ನು ಬುದ್ಧರು ಒತ್ತಿ ಹೇಳಿದರು ಕಠಿಣ ಪರಿಶ್ರಮದಿಂದ ಜ್ಞಾನವನ್ನು ಪಡೆಯುವ ಮೂಲಕ ಜೀವನದಲ್ಲಿ ಸಂತೋಷವನ್ನು ಕಂಡುಕೊಳ್ಳಬೇಕು ಹಾಗೂ ಎಲ್ಲರೂ ಶಾಂತವಾಗಿದ್ದರೆ ಯಾವುದೇ ಗಲಾಟೆಗಳು ಆಗುವುದಿಲ್ಲ ಎಂದರು. ಈ ವೇಳೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಥಣಿ ತಾಲೂಕಾ ಸಂಚಾಲಕರಾದ ರವಿ ಕಾಂಬಳೆ, ಮಹಾಂತೇಶ ಕಾಂಬಳೆ, ಸಂತೋಷ ಹಿಪ್ಪರಗಿ ಸೇರಿದಂತೆ ಮುಂತಾದವರು ಇದ್ದರು.

ಅಗಲಿದ ಜೀವ

ಕುಮಾರ ಸೋಗಿಮನಿ

ಬೈಲಹೊಂಗಲ: ತಾಲೂಕಿನ ಅಮಟೂರ ಗ್ರಾಮದ ನಿವಾಸಿ, ಮಹಾಲಕ್ಷ್ಮಿ ಬ್ಯಾಂಕಿನ ನೌಕರ ಕುಮಾರ ಶಿವಾಜಿ ಸೋಗಿಮನಿ(41) ಶುಕ್ರವಾರ ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.

ಬಸಪ್ಪ ದುಪ್ಪಟ್ಟಿ

ಮೂಡಲಗಿ: ಪಟ್ಟಣದ ನಿವಾಸಿ ಬಸಪ್ಪ ಭೀಮಪ್ಪ ದುಪ್ಪಟ್ಟಿ (88) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

{ಯತೀಂದ್ರ } ಎಂಎಲ್‌ಸಿ

ಮುಖ್ಯಮಂತ್ರಿ ಸ್ಥಾನ ಯಾವುದೇ ಚರ್ಚೆ ಆಗಿಲ್ಲ ಅಂತ ಸುರ್ಜೇವಾಲ ಅವರು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಸಿದ್ದರಾಮಯ್ಯ ಸಿಎಂ ಇದ್ದಾರೆ ಅವರೇ ಮುಂದುವರೆಯುತ್ತಾರೆ. ಈ ಬಗ್ಗೆ ಸಿಎಂ ಅವರೇ ಹೇಳಿದ್ದಾರೆ. ಮುಂದಿನ 5 ವರ್ಷ ನಾನೇ ಇರುತ್ತೇನೆ. ದಸರಾ ಉದ್ಘಾಟನೆ ಮಾಡುತ್ತೇನೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ರಗತಿ ಪರಿಶೀಲನಾ ಸಭೆ ಅ.9ರಂದು

ಧಾರವಾಡ: ಸರಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯ ವಿಧಾನಗಳು ಹಾಗೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಅ.9 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಎಲ್ಲ ಗ್ಯಾರಂಟಿ ಯೋಜನೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಗೆ ತಮ್ಮ ಇಲಾಖೆಯ ಪ್ರಗತಿ ವರದಿ ಮತ್ತು ಅನುಪಾಲನಾ ವರದಿಯೊಂದಿಗೆ ಹಾಜರಾಗಲು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಹವಾಲು ಸ್ವೀಕಾರ ಸಭೆ ಅ.8 ರಂದು

ಹಾವೇರಿ: ಲೋಕಾಯುಕ್ತ ಅಧಿಕಾರಿಗಳಿಂದ ಅ.8 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಸವಣೂರ ತಹಸೀಲ್ದಾರ ಕಾರ್ಯಾಲಯದಲ್ಲಿ ಸಾರ್ವಜನಿಕ ಕುಂದುಕೊರತೆಗಳ ಸಭೆ ಹಾಗೂ ಸಾರ್ವಜನಿಕರ ಅಹವಾಲು ಸ್ವೀಕಾರ ಜರುಗಲಿದೆ. ಸರಕಾರಿ ಕಚೇರಿಗಳಲ್ಲಿ ದುರಾಡಳಿತ, ಸಾರ್ವಜನಿಕ ಕೆಲಸ ಕಾರ್ಯಗಳ ವಿಳಂಬ, ಕಳಪೆಕಾಮಗಾರಿ, ಸರಕಾರಿ ನೌಕರರ ಅಕ್ರಮ ಆಸ್ತಿಗಳಿಕೆ, ಸರಕಾರಿ ಹಣ ದುರುಪಯೋಗ, ಸಾರ್ವಜನಿಕ ಕೆಲಸಗಳಿಗೆ ಅಧಿಕಾರಿ, ನೌಕರರಿಂದ ಲಂಚ ಕೇಳುವ ದೂರುಗಳಿದ್ದರೆ ಲೋಕಾಯುಕ್ತ ನಡೆಸುವ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಭಾಗವಹಿಸಿ ದೂರುಗಳನ್ನು ಸಲ್ಲಿಸಬಹುದಾಗಿದೆ. ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ. ಸಭೆಯ ನಂತರ ವಿವಿಧ ಇಲಾಖೆಯ ಕಚೇರಿಗಳಿಗೆ ಅಧಿಕಾರಿಗಳು ಭೇಟಿ ನೀಡಲಿದ್ದಾರೆ. ಕರ್ನಾಟಕ ಲೋಕಾಯುಕ್ತ ಡಿಎಸ್‌ಪಿ ಮಧುಸೂದನ್, ಪೊಲೀಸ್ ನಿರೀಕ್ಷಕರಾದ ದಾದಾವಲಿ ಕೆ.ಎಚ್., ಮಂಜುನಾಥ್ ಪಂಡಿತ ಹಾಗೂ ವಿಶ್ವನಾಥ ಕಬ್ಬೂರಿ ಅವರು ಅಹವಾಲು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಲೋಕಾಯುಕ್ತ ಕಚೇರಿ ಪ್ರಕಟಣೆ ತಿಳಿಸಿದೆ.

ಕ್ಷೇತ್ರದ ಮತದಾರರ ಪಟ್ಟಿ ತಯಾರಿಕೆ

ಹಾವೇರಿ: ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಮತದಾರರ ಪಟ್ಟಿ ತಯಾರಿಕೆ ಕುರಿತಂತೆ ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದಂತೆ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ, ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ ಹಾಗೂ ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತ ಕೆ.ಎಂ ಜಾನಕಿ ಅವರು ಸೂಚನೆ ನೀಡಿದ್ದಾರೆ.ಬೆಂಗಳೂರಿನ ಮುಖ್ಯ ಚುನಾವಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳ, ಸಹಾಯಕ ಮತದಾರರ ನೋಂದಾಣಾಧಿಕಾರಿಗಳ ವಿಡಿಯೋ ಸಂವಾದ ಮೂಲಕ ಸಭೆ ನಡೆಸಲಾಗಿದ್ದು, ಈಗಾಗಲೇ ನೇಮಕಾತಿ ಹೊಂದಿದ ಸಹಾಯಕ ಮತದಾರರ ನೋಂದಣಾಕಾರಿಗಳು, ನಿಯೋಜಿತ ಅಧಿಕಾರಿಗಳ ಕಚೇರಿಗಳಲ್ಲಿ ಸಾಕಾಷ್ಟು ಸಂಖ್ಯೆಯಲ್ಲಿ ನಮೂನೆ-18 ರ ಅರ್ಜಿ ಫಾರ್ಮಗಳು ಲಭ್ಯವಿದ್ದು, ಈ ಅರ್ಜಿಗಳನ್ನು ಅರ್ಹ ಎಲ್ಲ ಪದವೀಧರರು ಪಡೆದು ಅದರೊಂದಿಗೆ ಸರಿಯಾದ ಅಗತ್ಯ ದಾಖಲೆಗಳನ್ನು ಲಗತ್ತಿಸಿ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಗುರುವಂದನಾ, ಸ್ನೇಹ ಸಮ್ಮಿಲನ ಇಂದು

ಹಾವೇರಿ: ತಾಲೂಕಿನ ಹೊಸರಿತ್ತಿಯ ಜಿ.ವಿ ಹಳ್ಳಿಕೇರಿ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಅ.5ರಂದು ಬೆಳಗ್ಗೆ 9ಕ್ಕೆ 1991-92 ರಿಂದ 1993-94ನೇ ಸಾಲಿನ ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಸಮಾರಂಭ ನಡೆಯಲಿದೆ. ಹೊಸರಿತ್ತಿ ಗುದ್ದಲೀಶ್ವರ ಮಠದ ಗುದ್ದಲೀಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದು, ಹೂವಿನ ಶಿಗ್ಲಿ ವಿರಕ್ತಮಠದ ಹಾಗೂ ಹಳೆಯ ವಿದ್ಯಾರ್ಥಿ ಚನ್ನವೀರ ಮಹಾಸ್ವಾಮಿಗಳು ಗೌರವ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಶಿಕ್ಷಣ ಸಮಿತಿ ಕಾರ್ಯದರ್ಶಿ ರಮೇಶ ಏಕಬೋಟೆ ಭಾಗವಹಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ಎಂ.ಎಫ್ ಶಿಗ್ಲಿ, ನಿವೃತ್ತ ಶಿಕ್ಷಕರಾದ ಎಸ್.ಬಿ ಸಬಾವಡಿಯವರಮಠ, ಎಂ.ಎಂ ವಗ್ಗಣ್ಣನವರ, ಬಿ.ಎನ್ ಕಿತ್ತೂರ, ಎ.ಬಿ ಬೂದಿಹಾಳ, ಗುರುಸಿದ್ದಪ್ಪ ಪವಾಡಶೆಟ್ರ, ಪ್ರಭಾವತಿ ವಡವಿ, ವಸುಧಾ ಅಂಗಡಿ ಅವರಿಗೆ ಗುರುವಂದನೆ ನಡೆಯಲಿದೆ.

{ಕೆ.ಎನ್. ರಾಜಣ್ಣ } ಮಾಜಿ ಸಚಿವ

ಕುಣಿಗಲ್ ತಾಲೂಕನ್ನು ಬೆಂಗಳೂರು ದಕ್ಷಿಣ ಅಲ್ಲ, ಸೌತ್ ಆಫ್ರಿಕಾಗೆ ಬೇಕಾದರೆ ಸೇರಿಸಿಕೊಳ್ಳಲಿ. ಕುಣಿಗಲ್ ತಾಲೂಕು ನಮ್ಮ ಜಿಲ್ಲೆಯಲ್ಲಿ ಇರಬೇಕು ಎಂದು ಅಪೇಕ್ಷೆ ಪಡುವವನು ನಾನು. ಇವರು ಬೆಂಗಳೂರು, ರಾಮನಗರಕ್ಕೆ ಕನಕಪುರಕ್ಕೆ ಸೇರಿಸಿಕೊಳ್ಳುತ್ತೇನೆ ಎನ್ನುವ ಚಿಂತನೆ ಸರಿಯಲ್ಲ.



ಎಸ್‌ಡಿಎಂ ದಂತ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ

ಶಿಕ್ಷಣ ಸಂಸ್ಥೆಗಳು ಶ್ರೇಷ್ಠತೆ ಮೆರೆಯಲಿ

ಧಾರವಾಡ: ಎಸ್‌ಡಿಎಂ ದಂತ ಮಹಾವಿದ್ಯಾಲಯದಲ್ಲಿ ದಿನಾಂಕ, ಅ.3 ಮತ್ತು 4 ರಂದು 'ಸ್ಪಂದನ'- ಹಳೆಯ ವಿದ್ಯಾರ್ಥಿಗಳ ಸಮ್ಮಿಲನವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಉದ್ಘಾಟಕರಾಗಿ, ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ, ಎಸ್‌ಡಿಎಂ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ನಿರಂಜನಕುಮಾರ ಮತ್ತು ನಾರಾಯಣ ನರರೋಗ ಸಂಸ್ಥೆ ನಿರ್ದೇಶಕ ಹಾಗೂ ಹಿರಿಯ ತಜ್ಞ ಡಾ.ತಿಮ್ಮಪ್ಪ ಹೆಗ್ಡೆ ಆಗಮಿಸಿದ್ದರು.

> **ಹಳೆಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಸಂಸ್ಥೆಗಳನ್ನು ಶ್ರೇಷ್ಠವನ್ನಾಗಿ ಮಾಡಬೇಕು. ಹಳೆಯ ವಿದ್ಯಾರ್ಥಿಗಳ ಸಮಾಜ ಸೇವೆಯು ಅವರ ವಿದ್ಯಾಭ್ಯಾಸದ ಸಂಸ್ಥೆಯ ಮೌಲ್ಯವನ್ನು ಹೆಚ್ಚಿಸುತ್ತದೆ. ಕೈಗೆಟುಕುವ ಬೆಲೆಯಲ್ಲಿ ಉತ್ತಮ ಚಿಕಿತ್ಸೆ ಮತ್ತು ಅತ್ಯುತ್ತಮ ತರಬೇತಿಯನ್ನು ಒದಗಿಸುವುದು ನಮ್ಮ ಕುಲಪತಿಗಳ ಗುರಿಯಾಗಿದೆ.**
> **-ಡಾ.ನಿರಂಜನ್ ಕುಮಾರ**

ಡಾ.ಬಲರಾಮ ನಾಯ್ಕ, ಪ್ರಾಂಶುಪಾಲರು ಮತ್ತು ಗೌರವ ಅಧ್ಯಕ್ಷರು, ಸ್ಪಂದನ ಹಳೆ ವಿದ್ಯಾರ್ಥಿಗಳ ಸಂಘ, ವಿ. ಜೀವಂಧರ ಕುಮಾರ, ಕಾರ್ಯದರ್ಶಿಗಳು, ಎಸ್‌ಡಿಎಂ ಶಿಕ್ಷಣ ಸಂಸ್ಥೆ, ಧಾರವಾಡ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಎಸ್‌ಡಿಎಂ ಸಂಸ್ಥೆಗಳು ನಮ್ಮ ಎಲ್ಲ ಹಳೆಯ ವಿದ್ಯಾರ್ಥಿಗಳನ್ನು 'ಎಸ್.ಡಿ.ಎಂ. ಕುಟುಂಬ' ಎಂದು ಪರಿಗಣಿಸುತ್ತವೆ. ಉತ್ತಮ ಶಿಕ್ಷಣದ ಉದ್ದೇಶವು ಯಾವುದೇ ವೃತ್ತಿಪರರ ವೈಯಕ್ತಿಕ ಗುರಿಗಿಂತ ಹೆಚ್ಚಾಗಿರಬೇಕು. ಪ್ರತಿಯೊಬ್ಬ ಹಳೆಯ ವಿದ್ಯಾರ್ಥಿಯೂ ತಮ್ಮ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿರಬೇಕು ಎಂದರು. ಶಾಸಕರ ಅರವಿಂದ್ ಬೆಲ್ಲದ್ ಅವರು ತಮ್ಮ ಸ್ಫೂರ್ತಿದಾಯಕ ಮತ್ತು ಪ್ರೇರಿತ ಮಾತುಗಳೊಂದಿಗೆ ಹಳೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಡಾ.ತಿಮ್ಮಪ್ಪ ಹೆಗ್ಡೆ ದಿಕ್ಸೂಚಿ ಭಾಷಣ ಮಾಡಿದರು.

ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ 200ಕ್ಕೂ ಅಧಿಕ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಾ.ರೋಶನ ಶೆಟ್ಟಿ, ಅಧ್ಯಕ್ಷರು, ಹಳೆಯ ವಿದ್ಯಾರ್ಥಿಗಳ ಸಂಘ, ಅತಿಥಿಗಳನ್ನು ಸ್ವಾಗತಿಸಿದರು. ಡಾ.ಅಪೂರ್ವಾ ಮತ್ತು ಡಾ. ಮೇಘನಾ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ.ರವಿ ಶಿರಹಟ್ಟಿ ಮತ್ತು ಡಾ.ಕಿರಣ ರೆಡ್ಡೆರ ಅವರು ಅರವಿಂದ ಬೆಲ್ಲದ ಮತ್ತು ಡಾ. ತಿಮ್ಮಪ್ಪ ಹೆಗ್ಡೆ ಅವರನ್ನು ಪರಿಚಯಿಸಿದರು. ಡಾ.ಮಹಿಮಾ ದಂಡ, ಕಾರ್ಯದರ್ಶಿ, ಸ್ಪಂದನ ಹಳೆಯ ವಿದ್ಯಾರ್ಥಿಗಳ ಸಂಘ, ವಂದಿಸಿದರು.

'ಸ್ಪಂದನ' – ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಹಮ್ಮಿಕೊಳ್ಳಲಾಯಿತು.

ಜಂಪ್‌ರೋಪ್‌ನಲ್ಲಿ ರಾಜ್ಯ ಮಟ್ಟಕ್ಕೆ

VINAY BADEPPANAVAR

Prithviraj J. Balanagoudar

Karthik A. Kurwatti

ಧಾರವಾಡ: ಎಕ್ಸಲೆಂಟ್ ನೀಟ್ ಅಕ್ಯಾಡಮಿ ಸಹಯೋಗದ ಓಂ ಪಿಯು ಕಾಲೇಜಿನ ವಿದ್ಯಾರ್ಥಿಗಳು, ಜಂಪ್ ರೋಪ್ ಕ್ರೀಡೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪೃಥ್ವಿರಾಜ್ ಜೆ.ಬಾಳನಗೌಡರ 3 ಮಿನಿಟ್ ಎಂಡ್ಯುರನ್ಸ್ ರೋಪ್‌ನಲ್ಲಿ ಪ್ರಥಮ, ಕಾರ್ತಿಕ ಎ.ಕುರವತ್ತಿ 30 ಸೆಕೆಂಡ್ ಡಬಲ್ ಅಂಡರ್ ವಿನಯ್ ಬಿ.ಬಿ.ಗುಂಪು ಆಟ ಸ್ಪಿಡ್ ಸ್ಪ್ರಿಂಟ್, ಈ ಎಲ್ಲ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಜಂಪ್ ರೋಪ್‌ನಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕಾರ್ತಿಕ ಎ.ಕುರವತ್ತಿ ಕರಾಟೆ ವಿಭಾಗದಲ್ಲಿ ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾನೆ. ವಿಜೇತರಿಗೆ ಎಕ್ಸ್‌ಲೆಂಟ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಬಸವರಾಜ ಕವಲಗಿ, ನಿರ್ದೇಶಕ ಸಚಿನ್ ಗಿರಿಯಪ್ಪನವರ, ಪ್ರಾಚಾರ್ಯ ಉಮೇಶ ಪುರೋಹಿತ, ಆಡಳಿತಾಧಿಕಾರಿ ಜಗದೀಶ ಚಿತ್ತರಗಿ, ಸಂಯೋಜಕ ಟಿ.ಆರ್ .ಪ್ರತಾಪ್ ಅಭಿನಂದನೆ ಸಲ್ಲಿಸಿದ್ದಾರೆ.

ವೆಂಕಟೇಶ್ವರ ನವರಾತ್ರಿ ಉತ್ಸವಕ್ಕೆ ತೆರೆ

ನರಗುಂದ: ಸಂಸ್ಥಾನದ ಅರಸ ಬಾಬಾಸಾಹೇಬ ಭಾವೆ ಅವರ ಪೂರ್ವಜರು 17ನೇ ಶತಮಾನದಲ್ಲಿ ಗುಡ್ಡದ ಓರೆಯಲ್ಲಿ ತಿರುಪತಿ ತಿರುಮಲ ಮಾದರಿಯಲ್ಲಿ ನಿರ್ಮಿಸಿದ ಐತಿಹಾಸಿಕ ವೆಂಕಟೇಶ್ವರ ದೇವಸ್ಥಾನದಲ್ಲಿ ಕಳೆದ 13 ದಿನಗಳಿಂದ ನಡೆದ ನವರಾತ್ರಿ ಉತ್ಸವಕ್ಕೆ ಇಂದು ತೆರೆ ಬಿದ್ದಿತು.

ಸೆ.22ರಿಂದ ಘಟ ಸ್ಥಾಪನೆಯೊಂದಿಗೆ ನವರಾತ್ರಿಗೆ ಚಾಲನೆ ನೀಡಲಾಗಿತ್ತು. ಪ್ರತಿ ದಿನ ರಾತ್ರಿ ದೇವಸ್ಥಾನದ ಸುತ್ತ ವಾಹನೋತ್ಸವ ನಡೆಯುತ್ತಿದ್ದು ಶನಿವಾರದಂದು ದೇವಸ್ಥಾನದಿಂದ ಕೆಳಗಿಳಿದು ನಗರದ

ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳದೊಂದಿಗೆ ಅದ್ದೂರಿಯಿಂದ ನಡೆದ ಸೂರ್ಯ ವಾಹನೋತ್ಸವದೊಂದಿಗೆ ನವರಾತ್ರಿ ಉತ್ಸವಕ್ಕೆ ತೆರೆಬಿದ್ದಿತು. ಶುಕ್ರವಾರ ಅಪಾರ ಭಕ್ತ ಜನರ ಸಮ್ಮುಖದಲ್ಲಿ ರಥೋತ್ಸವ ಜರುಗಿತು.

ಮಹಾಸಂಗ್ರಾಮ ಮೇಲ್ಮನವಿ ಅಭಿಯಾನ

ಶಿರಸಿ: ಜಿಲ್ಲಾದ್ಯಂತ ಆಗಮಿಸಿದ ಅರಣ್ಯವಾಸಿಗಳಿಂದ ಬೃಹತ್ ಅರಣ್ಯವಾಸಿಗಳ ಐತಿಹಾಸಿಕ ಮಹಾಸಂಗ್ರಾಮ ಮೇಲ್ಮನವಿ ಅಭಿಯಾನ ಶಿರಸಿ ನಗರದ ಪ್ರಮುಖ ಬೀದಿಯಲ್ಲಿ ಸಂಚರಿಸಿ ಇಪ್ಪತ್ತು ಸಾವಿರಕ್ಕೂ ಮಿಕ್ಕಿ ಆಕ್ಷೇಪಣಾ ಮೇಲ್ಮನವಿ ಸಲ್ಲಿಸುವ ಅಭೂತ ಪೂರ್ವ ಕಾರ್ಯಕ್ರಮ ಜರುಗಿದವು.

> **ಹರಿದು ಬಂದ ಜನಸಾಗರ**
> **ಜಿಲ್ಲಾದ್ಯಂತ ಅರಣ್ಯವಾಸಿಗಳು ಅರಣ್ಯ ಭೂಮಿ ಹಕ್ಕಿನ ವಂಚಿತವಾಗುವ ಭೀತಿಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನಿಂದಲೂ, ಅರಣ್ಯವಾಸಿಗಳು ಮಹಾಸಂಗ್ರಾಮಕ್ಕೆ ಜನಸಾಗರದಂತೆ ಹರಿದು ಬಂದಿರುವುದು ವಿಶೇಷವಾಗಿತ್ತು. ಬುಡಕಟ್ಟು ಜನಾಂಗ, ಆದಿವಾಸಿಗಳು, ಕರಾವಳಿಯ ಭಾಗದ ತಗ್ಗು ಗುಡ್ಡಗಳಿಂದ, ಮಹಿಳೆಯರು, ವೃದ್ದರೂ, ಹೆಜ್ಜೆಯ ಮೇಲೆ ಹೆಜ್ಜೆ ಹಾಕಿ ಅಭಿಯಾನದಲ್ಲಿ ಭಾಗವಹಿಸಿರುವುದು ಐತಿಹಾಸಿಕ ಕಾರ್ಯಕ್ರಮವಾದವು.**

ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿದವು.

ಸರಕಾರ ಪುನರ್ ಪರಿಶೀಲಿಸದೇ, ಅರ್ಜಿ ಕೇಂದ್ರಕ್ಕೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅರಣ್ಯವಾಸಿಗಳು ತೀವ್ರ ಆಕ್ರೋಶ ಅಭಿಯಾನದಲ್ಲಿ ವ್ಯಕ್ತವಾದವು. ತಿರಸ್ಕರಿಸಿದ ಆದೇಶವನ್ನು ಪ್ರದರ್ಶಿಸುತ್ತಾ, ತಿರಸ್ಕರಿಸಿದ ಆದೇಶದ ಮೇಲ್ಮನವಿಯನ್ನು ಎತ್ತಿ ಹಿಡಿದು, ಗಟ್ಟಿ ಹೋರಾಟದ ಧ್ವನಿ ಅರಣ್ಯವಾಸಿಗಳಿಂದ ಅಭಿಯಾನದಲ್ಲಿ ಕೇಳಿಬಂದವು.

ಕಾನೂನು ಬಾಹಿರವಾಗಿ ಸುಪ್ರಿಂ ಕೋರ್ಟ ಮತ್ತು ಕೇಂದ್ರ ಸರಕಾರದ ನಿಯಮ ಉಲ್ಲಂಘಿಸಿರುವುದು ಪ್ರಸಕ್ತ ವರ್ಷದ ಫೆಭ್ರವರಿ 28 ರಂದು ಕೇಂದ್ರ ಸರಕಾರದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರಿಗೆ ಲೋಕಸಭೆಯಲ್ಲಿ ಕೇಂದ್ರ

ಶಿರಸಿ ನಗರದ ಪ್ರಮುಖ ಬೀದಿಯಲ್ಲಿ ಸಂಚರಿಸಿ ಇಪ್ಪತ್ತು ಸಾವಿರಕ್ಕೂ ಮಿಕ್ಕಿ ಆಕ್ಷೇಪಣಾ ಮೇಲ್ಮನವಿ ಸಲ್ಲಿಸುವ ಅಭೂತ ಪೂರ್ವ ಕಾರ್ಯಕ್ರಮ ಜರುಗಿದವು.

ಸಚಿವರು ಉತ್ತರ ನೀಡಿದ್ದು ಇರುತ್ತದೆ. ಲೋಕಸಭೆಯಲ್ಲಿ ನೀಡಿದ ಉತ್ತರದಲ್ಲಿ ಕರ್ನಾಟಕದಲ್ಲಿ 2,94,489 ಒಟ್ಟು ಅರ್ಜಿಗಳು ದಾಖಲಾಗಿದ್ದು, ಅವುಗಳಲ್ಲಿ 16,326 ಸಾಗುವಳಿ ಹಕ್ಕು ನೀಡಲಾಗಿದೆ. ಬಂದಿರುವಂತ ಅರ್ಜಿಗಳಲ್ಲಿ 2,53,269 (ಶೆ.87.77)ಅರಣ್ಯವಾಸಿಗಳ ಅರ್ಜಿಗಳು ತಿರಸ್ಕರಿಸಲ್ಪಟ್ಟಿದೆ ಎಂಬ ಅಂಶ ಮೇಲ್ಮನವಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಅದರಂತೆ ರಾಜ್ಯ ಬುಡಕಟ್ಟು ಇಲಾಖೆಯ ವರದಿಯಲ್ಲಿ ಉತ್ತರಕನ್ನಡ ಜಿಲ್ಲೆಯ ಅರಣ್ಯಹಕ್ಕು ಕಾಯಿದೆ ಮಂಜೂರಿಗೆ ಸಂಭಂದಪಟ್ಟಂತೆ 88,453 ಅರ್ಜಿ ಸ್ವೀಕರಿಸಲ್ಪಟ್ಟಿದ್ದು, ಅವುಗಳಲ್ಲಿ 2,867 (ಶೇ.3.2) ಅರ್ಜಿ ಸಾಗುವಳಿ ಹಕ್ಕು ದೊರಕಿದ್ದು ಇರುತ್ತದೆ. ಬಂದಿರುವಂತಹ ಒಟ್ಟು ಅರ್ಜಿಗಳಲ್ಲಿ 73,859 (ಶೆ.82.76) ಅರ್ಜಿ ತಿರಸ್ಕರಿಸಿರುವ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸದೇ ಅರ್ಜಿ ತಿರಸ್ಕರಿಸದ ವರದಿಗೆ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಆಕ್ಷೇಪಣಾ ಪತ್ರದ ಮೇಲ್ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ.

ಕಾಮಗಾರಿಗಳಿಗೆ 4 ಕೋಟಿ ಅನುದಾನ

ಅಣ್ಣಿಗೇರಿ: ಶಾಸಕನಾಗಿ 2 ವರ್ಷದಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರಕ್ಕೆ ಕುರುಬ ಸಮಾಜದ ಕನಕ ಭವನ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿಗಳಿಗೆ ಅಂದಾಜು 4 ಕೋಟಿ ಅನುದಾನ ಬಿಡುಗಡೆ ಮಾಡಿದ್ದೇನೆ ಎಂದು ನವಲಗುಂದ ವಿಧಾನಸಭಾಕ್ಷೇತ್ರದ ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು.

ಅಣ್ಣಿಗೇರಿ ನಗರದ ಹುಡೇದಬೈಲ ಓಣಿಯಲ್ಲಿರುವ ಭರಮಲಿಂಗೇಶ್ವರ ಹಾಗೂ ನಂದಿಶ್ವರ ಭಜನಾ ಸಂಘದ ವತಿಯಿಂದ ಲಕ್ಮೀದೇವಿ ಮೂರ್ತಿ, ನಂದೀಶ್ವರ ಹಾಗೂ ಟಗರಿನ ಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಅಣ್ಣಿಗೇರಿ ದಾಸೋಹಮಠದ ಶ್ರೋ. ಬ್ರ.ಡಾ.ಶಿವಕುಮಾರ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಅಣ್ಣಿಗೇರಿ ಪುರಸಭೆ ಅಧ್ಯಕ್ಷ ಶಿವಾನಂದ ಬೆಳಹಾರ, ತಹಸೀಲ್ದಾರ ಮಂಜುನಾಥ ದಾಸಪ್ಪನವರ, ಪುರಸಭೆ ಮುಖ್ಯಾಧಿಕಾರಿ ವಾಯ್.ಜಿ.ಗದ್ದಿಗೌಡರ, ಉಪಾಧ್ಯಕ್ಷ ನಾಗರಾಜ ದಳವಾಯಿ, ಸ್ಥಾಯಿ ಸಮಿತಿ

ಲಕ್ಮೀದೇವಿ ಮೂರ್ತಿ, ನಂದೀಶ್ವರ ಹಾಗೂ ಟಗರಿನ ಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿದರು.

> **ಅಣ್ಣಿಗೇರಿ ನಗರಕ್ಕೆ ಕನಕ ಭವನ ನಿರ್ಮಾಣ ಮಾಡಲು 50 ಲಕ್ಷ ಬಿಡುಗಡೆ ಮಾಡಿದ್ದು, ಕೂಡಲೇ ಹಿರಿಯರು ಸಭೆ ಮಾಡಿ ಜಾಗೆ ಗುರುತು ಮಾಡಿದರೆ ಭೂಮಿ ಪೂಜೆ ಮಾಡಿ ಕಾಮಗಾರಿ ಪ್ರಾರಂಭಿಸುತ್ತೇನೆ.**
> **- ಎನ್.ಎಚ್.ಕೋನರಡ್ಡಿ,** ಶಾಸಕ

ಚೇರಮನ್ನರುಗಳಾದ ಮುದಕಣ್ಣ ಕೊರವರ, ಅಮೀನಾಬೇಗಂ ಬಾರಿಗಿಡದ, ಸದಸ್ಯರಾದ ಗಂಗಾ ರಮೇಶ ಕರೆಟ್ಟನವರ, ದ್ಯಾಮಣ್ಣ ಕೊಗ್ಗಿ, ಷಣ್ಮುಖ ಗುರಿಕಾರ, ಚಂದ್ರು ಕರಡಿ, ವಿನಾಯಕ ನಲವಡಿ, ನಿಂಗಪ್ಪ ಬಡೆಪ್ಪನವರ, ಯಲಪ್ಪ ಚಳ್ಳಣ್ಣವರ, ದ್ಯಾಮಣ್ಣ ಅಜ್ಜಣ್ಣವರ, ಹನಮಂತಪ್ಪ ಕಂಬಳಿ, ಶಿವಣ್ಣ ಹುಬ್ಬಳ್ಳಿ, ಮುತ್ತಣ್ಣ ಕಪ್ಪತ್ತನ ವರ, ರಾಮಣ್ಣ ಮಾಯಣ್ಣವರ, ಶಿವಾನಂದ ಕರೆಟ್ಟನವರ, ಅಣ್ಣಿಗೇರಿ ತಾಲೂಕ ಗ್ಯಾರಂಟಿ ಸಮೀತಿ ಅಧ್ಯಕ್ಷ ಮಂಜುನಾಥ ಮಾಯಣ್ಣ ವರ, ಭಗವಂತಪ್ಪ ಪುಟ್ಟಣ್ಣವರ, ದಾವಲಸಾಬ ದರವಾನಿ, ದೇವರಾಜ ಜಂತ್ಲಿ, ದೇವಪ್ಪ ಮೊರಬಸಿ, ಹಸನಸಾಬ ಗಡ್ಡದ, ಮುತ್ತು ದ್ಯಾವನೂರ, ರವಿವರಾಜ ಬೆಳಹಾರ, ಮುತ್ತು ಕೊಗ್ಗಿ, ಉಮೇಶ ಬಳ್ಳಾರಿ, ಚನ್ನಬಸಪ್ಪ ಬೆಳದಡಿ, ಶೇಖಪ್ಪ ಮರಡ್ಡಿ, ಹಟೇಲಸಾಬ ಗಾಡಗೋಳಿ, ವಿರುಪಾಕ್ಷಪ್ಪ ಬಣಗಾರ ಇದ್ದರು.

ಮಹಿಳೆಯರ ಸಬಲೀಕರಣಕ್ಕೆ ಅಕ್ಕ ಕೆಫೆ ಸಹಕಾರಿ

ಧಾರವಾಡ: ರಾಜ್ಯದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ರಾಷ್ಟ್ರಿಯ ಜೀವನೋಪಾಯ ಅಭಿಯಾನವನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಅಭಿಯಾನದ ಉದ್ದೇಶ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡುವುದಾಗಿದೆ. ಈ ನಿಟ್ಟಿನಲ್ಲಿ ಅಭಿಯಾನದಡಿ ಸ್ವಸಹಾಯ ಗುಂಪುಗಳ ಮಹಿಳೆಯರೆ ನಿರ್ವಹಿಸಲು ಅವಕಾಶವಾಗುವಂತೆ ಅಕ್ಕ-ಕೆಫೆ ರೂಪಿಸಲಾಗಿದ್ದು, ಮಹಿಳೆಯರ ಆರ್ಥಿಕ ಸಬಲಿಕರಣಕ್ಕೆ ಇದು ದೊಡ್ಡ ಕೊಡುಗೆ ನೀಡಲಿದೆ ಎಂದು ಕಾರ್ಮಿಕ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್.ಲಾಡ್ ಅವರು ಹೇಳಿದರು.

ಜಿಲ್ಲಾ ಪಂಚಾಯತ ಸಮೀಪದ ಕಟ್ಟಡದಲ್ಲಿ ಕಬ್ಬೆನೂರು ಗ್ರಾಮದ ಕಾಮಧೇನು ಮಹಿಳಾ ಸ್ವಸಹಾಯ ಸಂಘ ಆರಂಭಿಸಿರುವ ಅಕ್ಕ-ಕೆಫೆ ಉದ್ಘಾಟಿಸಿದರು.

ಪ್ರಮುಖವಾಗಿ ಮಹಿಳೆಯರು ತಮ್ಮ ಜ್ಞಾನ ಮತ್ತು ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಂಡು ಜೀವನೋಪಾಯದೊಂದಿಗೆ ಸಬಲೀಕರಣದ ಬದುಕನ್ನು ರೂಪಿಸಿಕೊಳ್ಳುವಲ್ಲಿ ಅವಶ್ಯಕ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಏರ್ಪಡಿಸಿ, ಪ್ರತಿಯೊಬ್ಬ ಮಹಿಳೆಯನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸೂಕ್ತ ಅವಕಾಶಗಳನ್ನು ಕಲ್ಪಿಸಿ ನಿರಂತರವಾಗಿ ಸರ್ಕಾರ ಶ್ರಮಿಸುತ್ತಿದೆ ಎಂದು ಸಚಿವರು ತಿಳಿಸಿದರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಕಾರ್ಯಕ್ರಮದ ಮುಖ್ಯ ಉದ್ದೇಶವು ಮಹಿಳಾ ಸ್ವ-ಸಹಾಯ ಸಂಘಗಳಿಗೆ ಆಹಾರ ಪೂರೈಕೆ ಕ್ಷೇತ್ರದಲ್ಲಿ ಸುಸ್ಥಿರ ಜೀವನೋಪಾಯ ಚಟುವಟಿಕೆಯನ್ನು ಒದಗಿಸುವುದಾಗಿದೆ. ಪ್ರಮುಖವಾಗಿ ಈ ಅಕ್ಕ ಕೆಫೆ ಚಟುವಟಿಕೆಯಡಿ ಉತ್ತಮ ಗುಣಮಟ್ಟದ ಶುಚಿ-ರುಚಿ ಪೌಷ್ಟಿಕ ಆಹಾರವನ್ನು

ಜಿಲ್ಲಾ ಪಂಚಾಯತ ಸಮೀಪದ ಕಟ್ಟಡದಲ್ಲಿ ಕಬ್ಬೆನೂರು ಗ್ರಾಮದ ಕಾಮಧೇನು ಮಹಿಳಾ ಸ್ವಸಹಾಯ ಸಂಘ ಆರಂಭಿಸಿರುವ ಅಕ್ಕ-ಕೆಫೆಯನ್ನು ಸಚಿವ ಸಂತೋಷ ಎಸ್.ಲಾಡ್‌ಉದ್ಘಾಟಿಸಿದರು.

> **ಮಹಿಳೆಯರನ್ನು ಸ್ವಸಹಾಯ ಗುಂಪುಗಳಡಿ ಸಂಘಟಿಸಿ, ಅವರಿಗೆ ಕೃಷಿ ಮತ್ತು ಕೃಷಿಯೇತರ ವಿಭಾಗಗಳಡಿ ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಒದಗಿಸುವುದರ ಜತೆಗೆ ಅವರು, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಪಥದೊಂದಿಗೆ ಸ್ವಾವಲಂಬನೆಯ ಜೀವನವನ್ನು ನಿರ್ವಹಿಸುವಲ್ಲಿ ನಿರಂತರ ಬೆಂಬಲ ನೀಡಲಾಗುತ್ತಿದೆ.**
> **- ಸಂತೋಷ ಎಸ್.ಲಾಡ್,** ಸಚಿವ

ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಪೂರೈಸುವ ದೂರದೃಷ್ಠಿಯೊಂದಿಗೆ ರಾಜ್ಯದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಗೆ ಎರಡು ಅಕ್ಕ ಕೆಫೆಗಳ ಸ್ಥಾಪನೆಗಾಗಿ ಸ್ಥಳ ಗುರುತಿಸಿ ಸರಕಾರಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. ಅದು ಅನುಮೋದನೆಗೊಂಡು ಅನುದಾನ ಬೀಡುಗಡೆಯಾಗಿದೆ. ಸದರಿ ಕೆಫೆ ಅನುಷ್ಠಾನಕ್ಕಾಗಿ ಜಿಲ್ಲಾ ಹಂತದಲ್ಲಿ ಜಂಟಿ ನಿರ್ದೇಶಕರು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆರವರ ಅಧ್ಯಕ್ಷತೆಯಲ್ಲಿ, 7 ಜನರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಸದರಿ ಸಮಿತಿ ನಿರ್ಣಯದಂತೆ ಆಸಕ್ತ ಸ್ವ-ಸಹಾಯ ಸಂಘಗಳ ಆಯ್ಕೆಗಾಗಿ ಪ್ರಕಟಣೆ ಹೊರಡಿಸಿ, ಸರ್ಕಾರದ ನಿಯಮಾನುಸಾರ ಆಯ್ಕೆ ಮಾಡಲಾಗುತ್ತದೆ. ನಂತರ ಆಯ್ಕೆ ಗೊಂಡ ಸ್ವ-ಸಹಾಯ ಸಂಘಗಳಿಗೆ ಪಾಕ ಪ್ರಾವಿಣ್ಯತೆ, ಶುಚಿತ್ವ, ನೈರ್ಮಲ್ಯ, ನಾಯಕತ್ವ, ನಿರ್ವಹಣೆ ಕುರಿತು ತರಬೇತಿ ನೀಡಲಾಗುತ್ತದೆ.

ಈ ಸಂದರ್ಭದಲ್ಲಿ ನವಲಗುಂದ ಶಾಸಕ ಎನ್.ಎಚ್.ಕೋನರಡ್ಡಿ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ಪಾಟೀಲ್ ಹಾಗೂ ಪ್ರಭಾರ ಜಿಲ್ಲಾಧಿಕಾರಿ ಜಿಪಂ ಸಿಇಒ ಭುವನೇಶ ದೇವಿದಾಸ ಪಾಟೀಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ ಆರ್ಯ, ಪ್ರೊಬೆಷನರಿ ಐಎಎಸ್ ಅಧಿಕಾರಿ ರೀತಿಕಾ ವರ್ಮಾ, ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಹಾಗೂ ಕಾಮದೇನು ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ರಾಜಶ್ರೀ ಮಂಜುನಾಥ ಪವಾಡಿ ಉಪಸ್ಥಿತರಿದ್ದರು.

ಅಮ್ಮಿನಬಾವಿ ಬಸ್ ನಿಲ್ದಾಣದ ಲೋಕಾರ್ಪಣೆ

ಧಾರವಾಡ: ಬೇರೆ ವಿಭಾಗಗಳಿಂದ ದೂರದ ಊರುಗಳಿಗೆ ಧಾರವಾಡ-ಸವದತ್ತಿ ರಸ್ತೆಯಲ್ಲಿ ಸಂಚರಿಸುವ ವೇಗದೂತ ಬಸ್‌ಗಳೂ ಸೇರಿದಂತೆ ಅಮ್ಮಿನಬಾವಿಯಲ್ಲಿ ಎಲ್ಲ ಬಸ್‌ಗಳ ನಿಲುಗಡೆಗೆ ಆದೇಶ ಮಾಡಿಸಲು ಶ್ರಮಿಸುವುದಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಧಾರವಾಡ ಗ್ರಾಮಾಂತರ ವಿಭಾಗೀಯ ನಿಂತ್ರಣಾಧಿಕಾರಿ ಕಿರಣಕುಮಾರ ಬಸಾಪೂರ ಭರವಸೆ ನೀಡಿದರು. ತಾಲೂಕಿನ ಅಮ್ಮಿನಬಾವಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳ ಸೇವೆಯಲ್ಲಿ ನವೀಕೃತಗೊಂಡ ಬಸ್ ನಿಲ್ದಾಣ ಕಟ್ಟಡವನ್ನು ಲೋಕಾರ್ಪಣೆಗೊಳಿಸಿ ಮಾತನಾಡುತ್ತಿದ್ದರು. ಪ್ರಸ್ತುತ ಅಮ್ಮಿನಬಾವಿ ಬಸ್ ನಿಲ್ದಾಣಕ್ಕೆ ನಿಯಂತ್ರಕರನ್ನು ನೀಡಲಾಗಿದ್ದು, ಧಾರವಾಡ ಗ್ರಾಮಾಂತರ ವಿಭಾಗ ವ್ಯಾಪ್ತಿಯ ಬಸ್‌ಗಳ ನಿಲುಗಡೆಗೆ ಕ್ರಮವಹಿಸಲಾಗಿದೆ ಎಂದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ತಮ್ಮ ಸ್ವಂತದ ದೇಣಿಗೆ ಹಣದಿಂದ ಮಾಡಿರುವ ಅಮ್ಮಿನಬಾವಿ ಬಸ್ ನಿಲ್ದಾಣದ ನವೀಕರಣ ಕಾರ್ಯ ಮೆಚ್ಚುವಂತಹದ್ದು. ಪ್ರಸ್ತುತ ಮರೇವಾಡ ಗ್ರಾಮದ ಬಳಿಯ ಟೋಲ್ ಸುಂಕದ ವಸೂಲಾತಿ ನಿಲುಗಡೆಯಾದ ತಕ್ಷಣ ಧಾರವಾಡ- ಅಮ್ಮಿನಬಾವಿ ಬಸ್ ಪ್ರಯಾಣದರ ಇಳಿಕೆಯಾಗಲಿದೆ ಎಂದು ತಿಳಿಸಿದರು. ಧಾರವಾಡ ವಿಭಾಗದ ಡಿಟಿಒ ಸಂತೋಷ ಕಾಮತ, ಸಹಾಯಕ ಸಂಚಾರಿ ಅಧೀಕ್ಷಕ ಗಣೇಶ ಜವಳಿ, ಸಹಾಯಕ ಸಂಚಾರಿ ನಿರೀಕ್ಷಕ ದೇವರಾಜ ಭಜಂತ್ರಿ ಹಾಗೂ ಕನ್ನಡದ ಹಿರಿಯ ನಿಯತಕಾಲಿಕೆ ಜೀವನ ಶಿಕ್ಷಣ ಮಾಸಪತ್ರಿಕೆಯ ವಿಶ್ರಾಂತ ಸಂಪಾದಕ ಗುರುಮೂರ್ತಿ ಯರಗಂಬಳಿಮಠ ಮಾತನಾಡಿದರು.

ಸಿನಿಮಾ ಟಿಕೆಟ್ 200 ರು. ದರಕ್ಕೆ ತಡೆ

ಹಾವೇರಿ: ರಾಜ್ಯದ ಎಲ್ಲ ಮಲ್ಟಿಪ್ಲೆಕ್ಸಗಳಲ್ಲಿ ಸಿನಿಮಾ ಟಿಕೆಟ್‌ಗಳ ಮೇಲೆ ವಿಧಿಸಿದ್ದ 200 ರು.ಗಳ ದರ ಮಿತಿಗೆ ಕರ್ನಾಟಕ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ಮುಂದುವರಿಸಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಪೀಠದಲ್ಲಿ ದಾಖಲಾಗಿದ್ದ, ರಿಟ್ ಅಪೀಲು ಸಂ .1623/2025ರ (ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ವಿರುದ್ಧ, ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಇಂಡಿಯಾ) ಪ್ರಕರಣದಲ್ಲಿ ನ್ಯಾಯಾಲಯವು ಸಿನಿಮಾ ಟಿಕೆಟ್‌ಗಳ ಮೇಲೆ ವಿಧಿಸಿದ್ದ 200 ರು. ಗಳ ಮಿತಿಗೆ ಸೆ.23ರಂದು ನೀಡಿದ ತಡೆಯಾಜ್ಞೆಯನ್ನು ಮುಂದುವರೆಸುವ ಜೊತೆಗೆ, ಈ ಕೆಳಕಂಡಂತೆ ಆದೇಶಿಸಿರುತ್ತದೆ. ದಾಖಲೆಗಳ ನಿರ್ವಹಣೆ: ಪ್ರತಿವಾದಿ ಸಂ.1 ಮತ್ತು ಅದರ ಅಡಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಮಲ್ಟಿಪ್ಲೆಕ್ಸ್ ಗಳು, ಮಾರಾಟವಾದ ಪ್ರತಿಯೊಂದು ಟಿಕೆಟ್‌ಗೆ ಸಮಗ್ರ ಮತ್ತು ಲೆಕ್ಕಪರಿಶೋಧಿಸಬಹುದಾದ ದಾಖಲೆಗಳನ್ನು ನಿರ್ವಹಿಸಲು ನಿರ್ದೇಶಿಸಲಾಗಿದೆ. ದಾಖಲೆಗಳು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು: ಮಾರಾಟದ ದಿನಾಂಕ ಮತ್ತು ಸಮಯ, ಆನ್‌ಲೈನ್ ಅಥವಾ ಭೌತಿಕ ಕೌಂಟರ್‌ಗಳಲ್ಲಿ ಬುಕಿಂಗ್ ಮಾಡಿರುವ ವಿವರ, ಕ್ರೆಡಿಟ್/ಡೆಬಿಟ್ ಕಾರ್ಡ್, ಯುಪಿಐ ನೆಟ್ ಬ್ಯಾಂಕಿಂಗ್ . ಎಲೆಕ್ಟ್ರಾನಿಕ್ ವಹಿವಾಟುಗಳು: ಅರ್ಜಿದಾರರು ಈ ಮೇಲ್ಮನವಿ /ಅರ್ಜಿಯ ಅಂತಿಮ ತೀರ್ಪಿನಲ್ಲಿ ಸಿಲುಕಿದರೆ, ಈ ನಿಬರ್ಂಧದ ಬಾಕಿ ಇರುವ ಸಮಯದಲ್ಲಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಸಂಗ್ರಹಿಸಿದ ಎಲ್ಲ ಮೊತ್ತವನ್ನು ಟಿಕೆಟ್‌ಗಳನ್ನು ಬುಕ್ ಮಾಡಿದ ವೈಯಕ್ತಿಕ ಗ್ರಾಹಕರಿಗೆ ಬುಕಿಂಗ್‌ಗೆ ಬಳಸುವ ಅದೇ ಪಾವತಿ ವಿಧಾನದ ಮೂಲಕ ಮರುಪಾವತಿಸಬೇಕು.

ಧಾರ್ಮಿಕ ಸಂಘಟನೆಯೇ ಸಮಾಜದ ಉದ್ದೇಶ

ಶಿರಸಿ: ಆರ್ಯ ಈಡಿಗ, ನಾಮಧಾರಿ, ಬಿಲ್ಲವ ಸಮುದಾಯದ ಗುರುಮಠ ಶ್ರೀರಾಮ ಕ್ಷೇತ್ರದ ಶಿರಸಿ ವಿಭಾಗಾಧ್ಯಕ್ಷರಾಗಿ ಡಾ. ವೆಂಕಟೇಶ ಎಲ್ .ನಾಯ್ಕ ಅವರನ್ನು ನೇಮಕ ಮಾಡಲಾಗಿದೆ.

ಇಲ್ಲಿನ ಸುಪ್ರಿಯಾ ಇಂಟರ್ ನ್ಯಾಷನಲ್ ಹೋಟೇಲ್‌ನ ಸಭಾಭವನದಲ್ಲಿ ನಡೆದ 1008 ಮಹಾ ಮಂಡಲೇಶ್ವರರಾಗಿ ಪಟ್ಟಾಭಿಶಿಕ್ತರಾದ ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತೀ ಮಹಾಸ್ವಾಮಿಗಳು ವಿಶೇಷ ಅಭಿನಂದನಾ ಪಾದಪೂಜಾ ಸೇವಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ, ವಿವಿಧ ತಾಲೂಕುಗಳ ಸಮಾಜದ ಹಾಗೂ ಶ್ರೀರಾಮ ಕ್ಷೇತ್ರದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಹಿರಿಯ ಮುಖಂಡರ ಸಮ್ಮುಖದಲ್ಲಿ ಡಾ.ನಾಯ್ಕರವರ ನೇಮಕಾತಿಯನ್ನು ಪ್ರಕಟಿಸಿದ್ದಾರೆ. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿದ, ಡಾ.ವೆಂಕಟೇಶ ನಾಯ್ಕ ಹಲವಾರು ಸಂಘ-ಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು ಮುಂದಿನ ದಿನಗಳಲ್ಲಿ ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ದಾಂಡೇಲಿ ವ್ಯಾಪ್ತಿಯಲ್ಲಿ ಸಮಾಜ ಮತ್ತು ಶ್ರೀರಾಮ ಕ್ಷೇತ್ರದ ಧಾರ್ಮಿಕ ಸಂಘಟನೆ ಹಾಗೂ ಇತರ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯದ ಜವಾಬ್ದಾರಿಯನ್ನು ಹೊಂದಿರುತ್ತಾರೆ ಎಂದು ಶ್ರೀಗಳು ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ಶಿರಸಿ ತಾಲೂಕು ಆರ್ಯಈಡಿಗ, ನಾಮಧಾರಿ, ಬಿಲ್ಲವ ಅಭಿವೃದ್ಧಿ ಸಂಘದ ಅಧ್ಯಕ್ಷ ಹಾಗೂ ಶಿರಸಿ-ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ, ಸಿದ್ದಾಪುರದ ಕೆ.ಜಿ. ನಾಯ್ಕ, ವಿ.ಎನ್. ನಾಯ್ಕ, ಶಿರಸಿಯ ಗಣಪತಿ ನಾಯ್ಕ ದೇವಿಕೆರೆ, ಶ್ರೀನಿವಾಸ ನಾಯ್ಕ, ಆನಂದ ನಾಯ್ಕ, ಡಾ.ನಾಗೇಶ ನಾಯ್ಕ, ಭಟ್ಕಳದ ಶ್ರೀಧರ ನಾಯ್ಕ, ಕೃಷ್ಣ ನಾಯ್ಕ, ಮೋಹನ್ ನಾಯ್ಕ, ಹೊನ್ನಾವರದ ಟಿ.ಟಿ.ನಾಯ್ಕ, ವಾಮನ ನಾಯ್ಕ, ಕುಮಟಾದ ಮಂಜುನಾಥ ನಾಯ್ಕ, ಎಚ್.ಆರ್. ನಾಯ್ಕ, ಅಂಕೋಲಾದ ನಾಗೇಶ ನಾಯ್ಕ, ಯಲ್ಲಾಪುರದ ನರಸಿಂಹ ನಾಯ್ಕ ಸೇರಿದಂತೆ ಸಮಾಜದ ನೂರಾರು ಪ್ರಮುಖರು ಉಪಸ್ಥಿತರಿದ್ದರು.

ಆರೋಗ್ಯ ಸಂಜೀವಿನಿ ಲಾಭ ಪಡೆದುಕೊಳ್ಳಿ

ಹಾವೇರಿ: ರಾಜ್ಯ ಸರಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆಗಳನ್ನು ಒದಗಿಸಲು ರಾಜ್ಯ ಸರಕಾರ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಿದ್ದು, ಜಿಲ್ಲೆಯಲ್ಲಿರುವ ಸರಕಾರಿ ನೌಕರರು ಹಾಗೂ ಅವರ ಕುಟುಂಬದವರು ಸದುಪಯೋಗ ಪಡಿಸಿಕೊಳ್ಳಬೇಕೆಂದು ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ ತಿಳಿಸಿದ್ದಾರೆ. ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಅ.1ರಿಂದಲೇ ಜಾರಿಗೊಳಿಸಲಾಗಿದೆ. ಪತಿ-ಪತ್ನಿ ಸರಕಾರಿ ನೌಕರರಾಗಿದ್ದಲ್ಲಿ ಒಬ್ಬರು ಮಾತ್ರ ವೇತನದಲ್ಲಿ ವಂತಿಕೆಯನ್ನು ನೀಡಬೇಕು. ರಾಜ್ಯ ಸರಕಾರದ ಅಕಾರಿ ಅಥವಾ ನೌಕರರ ತಂದೆ-ತಾಯಿ ಪಿಂಚಣಿದಾರರಾಗಿದ್ದಲ್ಲಿ ಅವರ ಮಾಸಿಕ ಆದಾಯದ ಮಿತಿಯನ್ನು 17 ಸಾವಿರ ರು.ಗಳಿಂದ 27 ಸಾವಿರ ರು.ಗಳಿಗೆ ಹೆಚ್ಚಳ ಮಾಡಿದೆ. ವಿವಾಹಿತ ಮಹಿಳಾ ನೌಕರರ ತಂದೆ-ತಾಯಿಯೂ ಸಹ ಈ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದಾರೆ. ಮಾಸಿಕ ವಂತಿಕೆಯನ್ನು ನೀಡಲು ಇಚ್ಛಿಸದೇ ಇರುವ ನೌಕರರು ಲಿಖಿತವಾಗಿ ಅ.18ರೊಳಗೆ ಸಂಬಂದಿಸಿದ ಡಿಡಿಒಗಳಿಗೆ ನೀಡಬೇಕು. ರಾಜ್ಯ ಸರಕಾರದ ಎಲ್ಲ ಅಕಾರಿ/ನೌಕರರು ಎಚ್‌ಆರ್‌ಎಂಎಸ್-1ರಲ್ಲಿ ನೊಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯ ಲಾಭವನ್ನು ಜಿಲ್ಲೆಯ ಎಲ್ಲ ಸರಕಾರಿ ನೌಕರರು ಪಡೆದುಕೊಳ್ಳಬೇಕು. ಯೋಜನೆ ಜಾರಿಗೊಳಿಸಿದ ರಾಜ್ಯ ಸರಕಾರಕ್ಕೆ ಹಾಗೂ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಅವರಿಗೆ ಕೃತಜ್ಞತೆ ತಿಳಿಸುತ್ತೇವೆ ಎಂದು ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ ಹೇಳಿದರು.

ಸಮಾಚಾರ ಸಣ್ಣದಲ್ಲ

ಸೈಫುದ್ದೀನ್ ಕೊಲೆ ಪ್ರಕರಣ: ಮಹಿಳೆ ಸೆರೆ

ಉಡುಪಿ: ಖಾಸಗಿ ಬಸ್ ಮಾಲೀಕ ಸೈಫುದ್ದೀನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಮೂವರು ಆರೋಪಿಗಳನ್ನು ಬಂಧಿಸಿದ್ದು ಇದೀಗ

ಕೊಲೆಗೆ ಒಳಸಂಚು ರೂಪಿಸಿ ಕೃತ್ಯದಲ್ಲಿ ಭಾಗಿಯಾದ ನಾಲ್ಕನೇ ಆರೋಪಿಯನ್ನು ಪೊಲೀಸರು ಬಂಧಿಸಿ ದ್ದಾರೆ. ಬಂಧಿತ ಮಹಿಳೆಯನ್ನು ಉಡುಪಿ ಮಿಷನ್ ಕಂಪೌಂಡ್ ನಿವಾಸಿ ರಿಧಾ ಶಭನಾ(27) ಎನ್ನಲಾ ಗಿದೆ. ಸೈಫುದ್ದೀನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಉಡುಪಿ ಮಿಷನ್ ಕಂಪೌಂಡ್ ನಿವಾಸಿ ಮಹಮದ್ ಫೈಸಲ್ ಖಾನ್ (27 ವ), ಕರಂಬಳ್ಳಿ ನಿವಾಸಿ ಮೊಹಮ್ಮದ್ ಶರೀಫ್ (37 ವ) ಮತ್ತು ಮಂಗಳೂರು ಕಾಟಿಪಳ್ಳ ನಿವಾಸಿ ಅಬ್ದುಲ್ ಶುಕುರ್ (43) ಎಂಬವರನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು .ಇದೀಗ ಮಹಿಳಾ ಆರೋಪಿಯನ್ನು ಬಂಧಿಸಿದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ನಾಪತ್ತೆಯಾಗಿದ್ದ ಬಾಲಕಿಯರ ಶವ ಪತ್ತೆ

ಕೋಲಾರ: ಮನೆ ಮುಂದೆ ಆಟವಾಡುತ್ತಿದ್ದಾಗ ಏಕಾಏಕಿ ನಾಪತ್ತೆಯಾಗಿದ್ದ ಇಬ್ಬರು ಬಾಲಕಿಯರು ಬಾವಿಯಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಕೋಲಾರ ಜಿಲ್ಲೆಯ ಮುಳಬಾಗಿಲು ಯಳಚೇಪಲ್ಲಿ

ಗ್ರಾಮದಲ್ಲಿ ನಡೆ ದಿದೆ. ಪತ್ತೆಯಾದ ಮೃತ ದೇಹ ಗಳನ್ನು ಧನ್ಯ ಬಾಯಿ (13), ಚೈತ್ರಾ ಬಾಯಿ (13) ಎಂದು ಗುರುತಿಸಲಾಗಿದೆ. ಗುರುವಾರ (ಅ.2) ಮನೆ ಮುಂದೆ ಆಟವಾಡುತ್ತಿದ್ದ ಇಬ್ಬರು ಬಾಲಕಿ ಯರು ಏಕಾಏಕಿ ನಾಪತ್ತೆಯಾಗಿದ್ದರು. ಈ ಕುರಿತು ಬಾಲಕಿಯರ ಕುಟುಂಬಸ್ಥರು ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಸದ್ಯ ನಾಪತ್ತೆಯಾಗಿದ್ದ ಬಾಲಕಿಯರು ಮುಳಬಾಗಿಲು ತಾಲೂಕಿನ ಕುಪ್ಪಂಪಾಳ್ಯ ಬಳಿಯಿರುವ ಬಾವಿಯೊಂದರಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ದುಷ್ಕರ್ಮಿಗಳು ಕೊಲೆ ಮಾಡಿ ಬಿಸಾಡಿರಬಹುದು ಅಥವಾ ಬಾಲಕಿಯರು ಆತ್ಮಹತ್ಯೆಗೆ ಶರಣಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಹಿಂದೂಗಳ ಮೇಲೆ ಕಲ್ಲು ತೂರಾಟ | 50 ಜನರ ವಿರುದ್ಧ ಪ್ರಕರಣ ದಾಖಲು

ಬೆಳಗಾವಿಗೂ ಕಾಲಿಟ್ಟ ಐ ಲವ್ ವಿವಾದ

ಬೆಳಗಾವಿ: ದೇಶದ ಹಲವೆಡೆ ಕಿಚ್ಚು ಹಚ್ಚಿದ್ದ ಐ ಲವ್ ಮೊಹಮ್ಮದ್ ವಿವಾದ ಸದ್ಯ ಬೆಳಗಾವಿಗೂ ಕಾಲಿಟ್ಟಿದೆ. ಉರುಸ್ ಮೆರವಣಿಗೆ ವೇಳೆ ವಿವಾದಾತ್ಮಕ ಘೋಷಣೆ ಕೂಗಿದ್ದನ್ನು ಪ್ರಶ್ನಿಸಿದ್ದಕ್ಕೆ ಮುಸ್ಲಿಂ ಯುವಕರು ಹಿಂದೂಗಳ ಮೇಲೆ ಕಲ್ಲು ತೂರಾಟ ನಡೆಸಿರುವ ಘಟನೆ ಶುಕ್ರವಾರ ತಡರಾತ್ರಿ ಖಡಕ್ ಗಲ್ಲಿಯಲ್ಲಿ ನಡೆದಿದೆ. ಇತ್ತ ತಡರಾತ್ರಿ, ಕಲ್ಲು ತೂರಾಟ ಆಗುತ್ತಿದ್ದಂತೆ ಖಡಕ್ ಗಲ್ಲಿ ನಿವಾಸಿಗಳು ಕೂಡಲೇ ಬೆಳಗಾವಿ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸದ್ಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 50 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಘಟನೆಯಲ್ಲಿ ಮಾರಣಾಂತ್ಯ ತೋರಿಸಿದ್ದು ಅಲ್ಲದೆ ಐ ಲವ್ ಮೊಹಮ್ಮದ್ ಘೋಷಣೆ ಕೂಗಿದ್ದ 11 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಹಿಂದೂಗಳ ಮೇಲೆ ಕಲ್ಲು ತೂರಾಟ: ಮಾಬುಸುಬಾನಿ ದರ್ಗಾದ ಉರುಸ್ ವೇಳೆ ಐ ಲವ್ ಮೊಹಮ್ಮದ್' ಘೋಷಣೆ ಕೂಗಿದ ಹಿನ್ನೆಲೆ ಆಕ್ರೋಶ ವ್ಯಕ್ತವಾಗಿದೆ. ಪ್ರಶ್ನೆ ಮಾಡಿದ ಸ್ಥಳೀಯ ಹಿಂದೂ ನಿವಾಸಿಗಳ ಮೇಲೆ ಅನ್ಯಕೋಮಿನ ಯುವಕರು ಕಲ್ಲು ತೂರಾಟ ನಡೆಸಿದ್ದಾರೆ. ಪ್ರತಿ ವರ್ಷ ಶನಿವಾರ ಕೊಟ, ಜಾಲ್ಗಾರ ಗಲ್ಲಿ ಮಾರ್ಗದ ಮೂಲಕ ದರ್ಗಾಗೆ ಮೆರವಣಿಗೆ ಹೋಗುತ್ತಿತ್ತು. ಈ ವರ್ಷ ಅನುಮತಿ ಇಲ್ಲದಿಯೂ ಸಹ ಖಡಕ್ ಗಲ್ಲಿಗೆ ಮೆರವಣಿಗೆ ಎಂಟ್ರಿಯಾಗಿದೆ ಎನ್ನಲಾಗಿದೆ. ಮೆರವಣಿಗೆ ವೇಳೆ 'ಐ ಲವ್ ಮೊಹಮ್ಮದ್' ಎಂಬ ಘೋಷಣೆ ಕೂಗಿದ್ದಲ್ಲದೇ ಯಾವಾಗಲೂ ಬಾರದ ಮೆರವಣಿಗೆ ಈಗ ಯಾಕೆ ಬಂದಿದೆ? ತಮ್ಮ ಏರಿಯಾಗೆ ಬಂದು ಘೋಷಣೆ ಕೂಗಿದ್ದು ಯಾಕೆ ಎಂದು ಸ್ಥಳೀಯರು ಪ್ರಶ್ನೆ ಮಾಡಿದ್ದಾರೆ.

ಸ್ಥಳಕ್ಕೆ ಡಿಸಿಪಿ ನಾರಾಯಣ ಭರಮನಿ, ಇಬ್ಬರು ಡಿಸಿಪಿ ಹಾಗೂ ಪೊಲೀಸರು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದಾರೆ. ಸ್ಥಳದಲ್ಲಿ ಬಿಗುವಿನ ವಾತಾವರಣ ಪರಿಸ್ಥಿತಿ ತಿಳಿಗೊಳಿಸಲು ಪೊಲೀಸರು ಪ್ರಯತ್ನಿಸಿದ್ದಾರೆ.

ಐ ಲವ್ ಮೊಹಮ್ಮದ್ ಬ್ಯಾನರ್ ಹೊಸದೇನಲ್ಲ, ಮೊದಲು ಉರ್ದು ನಲ್ಲಿ ಹಾಕುತ್ತಿದ್ದರು, ಉರ್ದು ಓದಲು ಆಗದೇ ಗಲಾಟೆ ಆಗುತ್ತಿರಲಿಲ್ಲ, ಇವಲ್ಲವೂ ಅನಗತ್ಯ ವಿವಾದಗಳು. ಈಗ ಇಂಗ್ಲಿಷ್‌ನಲ್ಲಿ ಹಾಕಿದ್ದಕ್ಕೆ ವಿವಾದ ಮಾಡ್ತಿ ದ್ದಾರೆ. ಪ್ರತಿಯೊಂದು ಧರ್ಮದವರು ತಮ್ಮ ಮಹನೀಯರು, ದೇವರ ಮೆಚ್ಚುಗೆಯ ಬ್ಯಾನರ್ ಹಾಕುವುದರಲ್ಲಿ ತಪ್ಪಿಲ್ಲ

ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ

ಬೆಳಗಾವಿಯ ಖಡಕ್‌ಗಲ್ಲಿಯ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಲ್ವಾರ್ ಪ್ರದರ್ಶನ

ಮೆರವಣಿಗೆಯಲ್ಲಿ ಸಾಗುತ್ತಿದ್ದ ಅನ್ಯಕೋಮಿನ ಯುವಕರಿಂದ ಕಲ್ಲು ತೂರಾಟ ನಡೆದಿದೆ. ಬಳಿಕ ತಲ್ವಾರ್ ಕೂಡ ಪ್ರದರ್ಶನ ಮಾಡಿ ಗೂಂಡಾವರ್ತನೆ ತೋರಲಾಗಿದೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ಮೆರವಣಿಗೆಯನ್ನು ಸ್ಥಳದಿಂದ ಕಳುಹಿಸಿದ್ದಾರೆ. ಏಕಾಏಕಿ ಮೆರವಣಿಗೆ ಬಂದವರು ಮತ್ತು ಕಲ್ಲು ತೂರಿದವರ ವಿರುದ್ಧ ಕ್ರಮಕ್ಕೆ ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ರಾಮನ ಫ್ಲೆಕ್ಸ್ ಹರಿದು ವಿಕೃತಿ



ದಾವಣಗೆರೆ: ನಗರದ ಜೇತೂರು ರಸ್ತೆಯ ವೆಂಕಟೇ ಶ್ವರ ಸರ್ಕಲ್‌ನಲ್ಲಿ ಅಳವಡಿಸಿದ್ದ ರಾಮ, ಆಂಜನೇಯ ಹಾಗೂ ದುರ್ಗಾ ದೇವಿಯ ಫ್ಲೆಕ್ಸ್ ಗಳನ್ನು ಕಿಡಿಗೇಡಿಗಳು ಹರಿದುಹಾಕಿದ್ದಾರೆ. ಸಾರ್ವಜನಿಕ ದಸರಾ ಮಹೋತ್ಸವದ ಶೋಭಾ ಯಾತ್ರೆ ಹಿನ್ನೆಲೆ ಫ್ಲೆಕ್ಸ್ ಗಳನ್ನು ಅಳವಡಿಸಲಾಗಿತ್ತು. ಈ ಫ್ಲೆಕ್ಸ್‌ಗೆ ಬ್ಲೇಡ್‌ನಿಂದ ಕತ್ತರಿಸಿ ಕಿಡಿಗೇಡಿಗಳು ವಿಕೃತಿ ಮೆರೆದಿದ್ದಾರೆ. ಈ ಹಿಂದೆ ಇದೇ ಜಾಗದಲ್ಲಿ 'ಐ ಲವ್ ಮೊಹಮ್ಮದ್' ಬ್ಯಾನರ್ ವಿಚಾರಕ್ಕೆ ಗಲಾಟೆಯಾಗಿತ್ತು. ದುಷ್ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಹಿಂದೂ ಕಾರ್ಯ ಕರ್ತರು ಆಗ್ರಹಿಸಿದ್ದಾರೆ. ಈ ಸಂಬಂಧ ಆಜಾದ್ ನಗರ ಠಾಣೆಯಲ್ಲಿ ಸುಮೋ ಟೋ ಕೇಸ್ ದಾಖಲಾಗಿದೆ. ಕಿಡಿಗೇಡಿಗಳನ್ನು ಬಂಧಿ ಸಲು ಆ ಸ್ಥಳದ ಸುತ್ತಮುತ್ತಲಿನ ಸಿಸಿ ಕ್ಯಾಮರಾಗಳನ್ನು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಕಲಬುರಗಿಯಲ್ಲಿ ವಿವಾದಿತ ಬ್ಯಾನರ್ ತೆರವು

ಕಲಬುರಗಿ ಜಿಲ್ಲೆಯಲ್ಲಿ ತೀವ್ರ ಗೊಂಡಿದೆ. ಸೇಡಂ ಪಟ್ಟಣದ ನಂತರ ಇದೀಗ ಜಿಲ್ಲೆಯ ಸೂಕ್ಷ್ಮ ಪ್ರದೇಶವಾದ ಆಳಂದ ಪಟ್ಟಣದಲ್ಲೂ ಈ ವಿವಾದಿತ ಬ್ಯಾನರ್ ಪ್ರತ್ಯಕ್ಷವಾಗಿದೆ. ಕಳೆದ ಎರಡು ದಿನಗಳ ಹಿಂದೆ ಆಳಂದದ ಲಾಡ್ಲೆ ಮಶಾಕ್ ದರ್ಗಾ ಉರುಸ್ ನಿಮಿತ್ತ

ದರ್ಗಾದ ಬಳಿಯೇ ಈ ಬ್ಯಾನರ್ ಅಳವಡಿಸಲಾಗಿತ್ತು. ವಿಷಯ ತಿಳಿಯುತ್ತಿದ್ದಂತೆ ಎಚ್ಚೆತ್ತ ಪೊಲೀಸರು, ಯಾವುದೇ ಅಹಿತಕರ ಘಟನೆ ನಡೆಯದಂತೆ ತಕ್ಷಣ ಸ್ಥಳಕ್ಕೆ ದೌಡಾಯಿಸಿದರು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಪೊಲೀಸರು ವಿವಾದಿತ 'ಐ ಲವ್ ಮೊಹಮ್ಮದ್' ಬ್ಯಾನರ್ ಅನ್ನು ಕೂಡಲೇ ತೆರವುಗೊಳಿಸಿದರು. ಈ ಮೂಲಕ ಜಿಲ್ಲೆಯಲ್ಲಿ ಉದ್ಭವಿಸುತ್ತಿದ್ದ ಕೋಮುವಾದಿ ವಿವಾದಕ್ಕೆ ಬ್ರೇಕ್ ಹಾಕಲು ಪೊಲೀಸರು ಯಶಸ್ವಿಯಾಗಿದ್ದಾರೆ. ಯುಪಿಯ ಬಳಿಕ ಕಲಬುರಗಿಯಲ್ಲಿ ಈ ಬ್ಯಾನರ್ ವಿವಾದ ಸದ್ದು ಮಾಡುತ್ತಿರುವುದು ಜಿಲ್ಲೆಯಲ್ಲಿ ಬಿಗುವಿನ ವಾತಾವರಣ ನಿರ್ಮಿಸಿದೆ.

ವಜ್ರಕ್ಕೆ ಯುದ್ಧಾಘಾತ, ಬೆಲೆ ಶೇ.50ರಷ್ಟು ಕುಸಿತ

ಮೊದಲಪುಟದಿಂದ ಈ ಎರಡೂ ಯುದ್ಧಗಳು ಭಾರತದ ಆರ್ಥಿಕತೆ ಮೇಲೆ ಸಾಕಷ್ಟು ಪರಿಣಾಮಗಳನ್ನು ಉಂಟು ಮಾಡಿದೆ. ವಿಶೇಷವಾಗಿ ವಜ್ರದ ಮಾರುಕಟ್ಟೆ ಹಾಗೂ ಚಿನ್ನದ ವ್ಯಾಪಾರದ ಮೇಲೆ ವಿಭಿನ್ನ ರೀತಿಯ ಪರಿಣಾಮಗಳನ್ನು ಉಂಟು ಮಾಡಿದೆ. ಈ ನಡುವೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಮೇಲೆ ಹೇರಿರುವ ಶೇ. 100ರ ಸುಂಕದ ಪರಿಣಾಮ ಭಾರತದಲ್ಲಿ ಸಿದ್ಧವಾಗುವ ವಜ್ರ, ಉತ್ಪನ್ನಗಳ ಅಮೆರಿಕ ರಫ್ತು ಸ್ಥಗಿತಗೊಂಡಿದೆ. ಹೀಗಾಗಿ ದೇಶೀಯ ಮಾರುಕಟ್ಟೆಯಲ್ಲಿ ವಜ್ರದ ಬೆಲೆ ಕುಸಿತ ಕಂಡಿದೆ ಎನ್ನುತ್ತಾರೆ ವರ್ತಕರು.

ಯುದ್ಧಕ್ಕೂ ವಜ್ರಕ್ಕೂ ಏನು ಸಂಬಂಧ ?

ವಜ್ರದ ಮೂಲ ಕಚ್ಚಾ ಪದಾರ್ಥಗಳನ್ನು ಇಡೀ ವಿಶ್ವಕ್ಕೆ ಪೂರೈಸುವುದರಲ್ಲಿ ರಷ್ಯಾ, ದಕ್ಷಿಣ ಆಫ್ರಿಕಾ, ಇಸ್ರೇಲ್ ಹಾಗೂ ಇವುಗಳಿಗೆ ಹೊಂದಿಕೊಂಡ ಕೆಲವು ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಈ ಪೈಕಿ ದಕ್ಷಿಣ ಆಫ್ರಿಕಾದಿಂದ ಪೂರೈಕೆ ಆಗುವ ಕಚ್ಚಾ ಪದಾರ್ಥ ಗುಣಮಟ್ಟದಲ್ಲಿ ಸ್ವಲ್ಪ ಕಡಿಮೆ ಇರುತ್ತದೆ. ಆದರೆ ಫ್ರಾನ್ಸ್‌ನಿಂದ ಬರುವ ಪದಾರ್ಥಗಳು ಉತ್ತಮ ಗುಣಮಟ್ಟದ್ದಾಗಿವೆ. ಇದನ್ನು ಹೆಚ್ಚು ಆಮದು ಮಾಡಿಕೊಂಡು ಅಂತಿಮ ಉತ್ಪನ್ನವಾಗಿ ಸಿದ್ಧಪಡಿಸುವಲ್ಲಿ ಭಾರತ ಅಗ್ರಗಣ್ಯ.

ಕಚ್ಚಾ ವಜ್ರವನ್ನು ಆಭರಣ ರೂಪಕ್ಕೆ ತರುವ ಕೆಲಸ ಮುಂಬೈ, ಅಹಮದಾಬಾದ್ ಮತ್ತು ಸೂರತ್ ಮಹಾನಗರಗಳಲ್ಲಿ ಹೆಚ್ಚಾಗಿ ನಡೆಯುತ್ತದೆ. ಹೀಗೆ ಸಿದ್ಧವಾಗುವ ಹೆಚ್ಚಿನ ವಜ್ರದ ಉತ್ಪನ್ನಗಳು ಅಮೆರಿಕದಲ್ಲಿ ಮಾರಾಟವಾಗುತ್ತವೆ. ಅಮೆರಿಕದ ಮಾರುಕಟ್ಟೆಗೆ ಶೇ. 30ರಷ್ಟು ವಜ್ರದ ಉತ್ಪನ್ನಗಳನ್ನು ಭಾರತವೇ ಪೂರೈಸುತ್ತದೆ. ಆದರೆ ಟ್ರಂಪ್ ಸುಂಕದ ಕಾರಣ ಅಮೆರಿಕನ್ನರಿಗೆ ಭಾರತದ ವಜ್ರ ದುಬಾರಿಯಾಗಿದೆ. ವಜ್ರದ ಉತ್ಪನ್ನಗಳ ಮರುಮಾರಾಟ ಮೌಲ್ಯ ಕುಸಿದ ಹಿನ್ನೆಲೆಯಲ್ಲಿ ಜನರು ಈಗ ವಜ್ರದ ಬದಲು ಚಿನ್ನ ಖರೀದಿಗೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಚಿನ್ನದ ಬೆಲೆ ಈಗ 10 ಗ್ರಾಮ್‌ಗೆ 1.30 ಲಕ್ಷ ರೂ. ವರೆಗೂ ಇದೆ. ಮುಂದಿನ ದಿನಗಳಲ್ಲಿ 2 ಲಕ್ಷ ಮುಟ್ಟಿದರೂ ಆಶ್ಚರ್ಯವಿಲ್ಲ ಎನ್ನುತ್ತಾರೆ ಆಭರಣ ವ್ಯಾಪಾರಿಗಳ ಸಂಘದ ರಾಷ್ಟ್ರೀಯ ಮುಖಂಡರಾದ ಚೇತನ್ ಕುಮಾರ್ ಮೆಹ್ತಾ.

ನಕಲಿ ವಜ್ರಗಳ ಹಾವಳಿ

ಇತ್ತೀಚೆಗೆ ಲ್ಯಾಬ್ ಗ್ರೋನ್ ಡೈಮಂಡ್, ಅಂದರೆ ವಜ್ರ ಸಂಬಂಧಿ ಉತ್ಪನ್ನಗಳಿಂದ ಕೃತಕ ವಜ್ರದ ಆಭರಣಗಳನ್ನು ತಯಾರಿಸುವ ಪರಿಪಾಠ ಹೆಚ್ಚಾಗಿದೆ. ಇವು ಉತ್ತಮ ಗುಣಮಟ್ಟದ ವಜ್ರದ ಬೆಲೆಯ ಕೇವಲ ಶೇ. 10ರಷ್ಟು ಕಡಿಮೆ ಬೆಲೆಗೆ ಸಿಗುತ್ತದೆ. ಇದನ್ನು ಅಸಲಿ ವಜ್ರ ಎಂದೂ ಕರೆಯುವುದುಂಟು. ಇದಕ್ಕೆ ಲ್ಯಾಬ್ ಗಳು ನಕಲಿ ಪ್ರಮಾಣ ಪತ್ರಗಳನ್ನು ನೀಡುತ್ತಿರುವುದರಿಂದ ಈ ವಜ್ರದ ಉತ್ಪನ್ನಗಳು ಹೆಚ್ಚಾಗುತ್ತಿವೆ. ಅನೇಕ ಗ್ರಾಹಕರು ಇದನ್ನೇ ಅಸಲಿ ವಜ್ರ ಎಂದು ಮೋಸ ಹೋಗುತ್ತಿದ್ದಾರೆ. ಹೀಗಾಗಿ ಚಿನ್ನ ದುಬಾರಿ ಅಥವಾ ವಜ್ರದ ಬೆಲೆ ಕಡಿಮೆ ಎಂದು ವಜ್ರದ ಉತ್ಪನ್ನಗಳನ್ನು ಕೊಳ್ಳಲು ಹೋಗಿ ವಂಚನೆಗೆ ಒಳಗಾಗುತ್ತಿರುವ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ವಜ್ರದ ವ್ಯಾಪಾರಿಗಳು ಹೇಳುತ್ತಿದ್ದಾರೆ.

ಜಿಲ್ಲೆಗೊಂದು ವೈದ್ಯ ಕಾಲೇಜು, ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಗುರಿ

ಮೊದಲಪುಟದಿಂದ ಸಮ ಸಮಾಜ ನಿರ್ಮಾಣಕ್ಕಾಗಿ ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಗಾಂಧೀಜಿಯವರು ಸಮಾಜದ ಕಟ್ಟಕಡೆಯ ಜನರನ್ನು ಸ್ವಾವಲಂಬಿಯಾಗಿಸಬೇಕು ಎಂಬುದಕ್ಕೆ ಶ್ರಮಿಸಿದವರು. ಅವರ ಮಾತಿನಂತೆ ತೊಡೆದು ಹಾಕಲು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಬಡವರಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಒದಗಿಸುವುದು ಸರಕಾರದ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಲಕ್ಷಾಂತರ ಜನರಿಗೆ ನೆರವು ನೀಡಲಾಗುತ್ತಿದ್ದು, ಇಂತಹ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸ್ಥಾಪನೆಯಿಂದ ಉಚಿತವಾಗಿ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಹೇಳಿದರು.

ಶಾಂತಿಗೆ ಹಮಾಸ್ ಒಪ್ಪಿಗೆ

ಮೊದಲಪುಟದಿಂದ ಹಮಾಸ್ ಬಳಿ ಇರುವ ಒತ್ತೆಯಾಳುಗಳ ಬಿಡುಗಡೆಗೆ ಮತ್ತು ಇಸ್ರೇಲ್ ಬಂಧನದಲ್ಲಿ ಇರುವ ನೂರಾರು ಪ್ಯಾಲೆಸ್ಟೀನಿಯನ್ ಕೈದಿಗಳ ಬಿಡುಗಡೆ ಕುರಿತು ಮಾತುಕತೆ ನಡೆಯುತ್ತಿದೆ ಎಂದು ಈಜಿಪ್ಟ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒತ್ತೆಯಾಳುಗಳ ಬಿಡುಗಡೆಗೆ ಸಿದ್ಧ: ಹಮಾಸ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಶಾಂತಿ ಯೋಜನೆ ಅನ್ವಯ ತನ್ನ ಬಳಿ ಇರುವ ಇಸ್ರೇಲ್‌ನ ಎಲ್ಲ ಜೀವಂತ ಒತ್ತೆಯಾಳುಗಳನ್ನು ಮತ್ತು ಕೆಲ ಒತ್ತೆಯಾಳುಗಳ ಮೃತದೇಹಗಳನ್ನು ಹಿಂದಿರುಗಿಸಲು ಸಿದ್ಧ ಇರುವುದಾಗಿ ಹಮಾಸ್ ತಿಳಿಸಿದೆ. ಯೋಜನೆ ಪ್ರಕಾರ ಹಮಾಸ್ ತನ್ನ ಬಳಿ ಇರುವ 48 ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕಿದೆ. ಈ ಪೈಕಿ 20 ಜನರು ಜೀವಂತ ಇದ್ದಾರೆ ಎಂದು ನಂಬಲಾಗಿದೆ. ಈ ಪ್ರಕ್ರಿಯೆ ಮೂರು ದಿನಗಳಲ್ಲಿ ನೆರವೇರಬೇಕು ಎಂದು ಹೇಳಲಾಗಿದೆ. ಇದಲ್ಲದೆ ಹಮಾಸ್ ಅಧಿಕಾರವನ್ನು ಬಿಡಬೇಕು ಮತ್ತು ನಿಶ್ಶಸ್ತ್ರಗೊಳ್ಳಬೇಕು ಎಂದೂ ಪ್ರಸ್ತಾವಿತ ಯೋಜನೆಯಲ್ಲಿ ಉಲ್ಲೇಖಿಸಲಾಗಿದೆ. ಅಧಿಕಾರ ಬಿಡಲು ಸಿದ್ಧವಿರುವುದಾಗಿ ಹೇಳಿರುವ ಹಮಾಸ್ ನಿಶ್ಶಸ್ತ್ರೀಕರಣದ ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ. ಗಾಜಾ ಭವಿಷ್ಯ ಮತ್ತು ಪ್ಯಾಲೆಸ್ಟೀನಿಯರ ಹಕ್ಕು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮತ್ತಷ್ಟು ಮಾತುಕತೆ ಬಾಕಿ ಇದೆ ಎಂಬುದಾಗಿ ಅದು ತಿಳಿಸಿದೆ.

ಕಾರು-ಬಸ್ ಅಪಘಾತ: ಮೂವರು ದುರ್ಮರಣ

ತುಮಕೂರು: ಕಾರು ಹಾಗೂ ಬಸ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಮೃತಪಟ್ಟಿರುವ ಘಟನೆ ನಗರ ಸಮೀಪ ಶನಿವಾರ ರಾತ್ರಿ ನಡೆದಿದೆ. ಕೊರಟಗೆರೆ ಕಡೆಯಿಂದ ತುಮಕೂರು ಕಡೆಗೆ ಐವರು ಕಾರಿನಲ್ಲಿ ತೆರಳುತ್ತಿದ್ದಾಗ ವಿರುದ್ಧ ದಿಕ್ಕಿನಿಂದ ಬಂದ ಖಾಸಗಿ ಬಸ್ ಮುಖಾಮುಖಿ ಡಿಕ್ಕಿಯಾಗಿ ತಾಲೂಕಿನ ಬೆಳಧರ ಬಳಿ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದ ಐವರ ಪೈಕಿ ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ, ಓರ್ವ ಆಸ್ಪತ್ರೆ ಸಾಗಿಸುವ ಮಧ್ಯೆ ಮೃತಪಟ್ಟಿದ್ದಾನೆ. ಇನ್ನುಳಿದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಕತ್ತಿನಾಗೇನಹಳ್ಳಿಯ ಶಿವಕುಮಾರ್ (28), ಗೋವಿಂದಪ್ಪ (60), ಬೈಚಾಪುರದ ಶಿವಶಂಕರ್ (28) ಮೃತರು. ಕೊರಟಗೆರೆ ಮೂಲದ ಐವರು ಕಾರಿನಲ್ಲಿ ತೆರಳುವಾಗ ಅಪಘಾತ ಸಂಭವಿಸಿದೆ. ಬೈಚಾಪುರದ ಶಿವಶಂಕರ್, ಕತ್ತಿನಾಗೇನಹಳ್ಳಿ ಶಿವಕುಮಾರ್ ಕತ್ತಿನಾಗೇನಹಳ್ಳಿಯ ಗೋವಿಂದಪ್ಪ ಮೃತ ದುರ್ದೈವಿಗಳು. ರಿಡ್ಡಿಹಳ್ಳಿ ಶಂಕರ್, ಕತ್ತಿನಾಗೇನಹಳ್ಳಿ ವೇಣು ಗೋಪಾಲ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಘಟನಾ ಸ್ಥಳಕ್ಕೆ ತುಮಕೂರು ಗ್ರಾಮಾಂತರ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಈರುಳ್ಳಿ ತುಂಬಿದ್ದ ಲಾರಿ ಬೆಂಕಿಗಾಹುತಿ

ನೆಲಮಂಗಲ: ಲಾರಿಯ ಎಂಜಿನ್‌ನಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಮಾರುಕಟ್ಟೆಗೆ ಹೊರಟಿದ್ದ ಈರುಳ್ಳಿ ತುಂಬಿದ್ದ ಲಾರಿ ಬೆಂಕಿಗಾಹುತಿಯಾಗಿರುವ ಘಟನೆ ಬೆಂಗಳೂರು ಹೊರವಲಯದ ನೆಲಮಂಗಲ ತಾಲೂಕಿನ ಬೂದಿಹಾಳ್ ಗೇಟ್ ಬಳಿ ನಡೆದಿದೆ. ಶನಿವಾರ ಬೆಳಗ್ಗೆ ಈರುಳ್ಳಿ ತುಂಬಿದ್ದ ಲಾರಿ ಚಿತ್ರದುರ್ಗದಿಂದ ನೆಲಮಂಗಲದ ದಾಸನಪುರ ಎಪಿಎಂಸಿಗೆ ಬರುತ್ತಿತ್ತು. ಈ ವೇಳೆ ಮಾರ್ಗಮಧ್ಯೆ ಲಾರಿಯ ಎಂಜಿನ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡಿದೆ. ಪರಿಣಾಮ ಲಕ್ಷಾಂತರ ಮೌಲ್ಯದ ಈರುಳ್ಳಿ ಬೆಂಕಿಗಾಹುತಿಯಾಗಿದೆ. ಈರುಳ್ಳಿ ನಾಶದಿಂದ ರೈತ ಕಂಗಾ ಲಾಗಿದ್ದು, ಲಾರಿಯ ಚಾಲಕ ಹಾಗೂ ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ನೆಲಮಂಗಲ ಟ್ರಾಫಿಕ್ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಸದ್ಯ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichura@yahoo.com Website:-www.raichurcity.gov.in

Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/ಮ.ನಿ/14,15,35,36,44,51,63,333,341/2025-26 ದಿನಾಂಕ:28-09-2025.

ಅಲ್ಪಾವಧಿ ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ / ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸಿಕಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	15ನೇ ಹಣಕಾಸು ಅನುದಾನದಲ್ಲಿ	Purchasing of 6000 Ltrs Water Tankers in Raichur City **Estimate Cost Rs. 15.00 Lakhs**	DMA/2025-26/IND5284
2	ಅಮೃತ್ 2.0 ಅನುದಾನ	Development of Mavina kere lake garden in Raichur City **Estimate Cost Rs. 65.00 Lakhs**	DMA/2025-26/OW/WORK_INDENT49837
3	2021–22 15ನೇ ಹಣಕಾಸು (ಉಳಿತಾಯವಾದ) ಅನುದಾನದಲ್ಲಿ	Construction of Community Toilet Near New Amrutha Hospital At Ward No-30 In Raichur City (Continuation Work) **Estimate Cost Rs. 9,00,000/-**	DMA/2025-26/BD/WORK_INDENT41714/CALL-4
4		Construction of Public Toilet at Ward No 21 Behind Melrose School Devi Nagar in Raichur City (Continuation Work) **Estimate Cost Rs. 6,23,000/-**	DMA/2025-26/BD/WORK_INDENT41686/CALL-3
5	ಮಹಾನಗರ ಪಾಲಿಕೆ ಅನುದಾನದಲ್ಲಿ	Improvement of Culverts 1)Dr. Saleem RMP Clinic 2) Near Nishad house 3) Near Shalam Kirana Shop 4) Near Dawood sab House at Parkota Area of W.No. 12 in Raichur City **Estimate Cost Rs. 1,99,000/-**	DMA/2025-26/OW/WORK_INDENT43618/Call-3
6	2023–24 15ನೇ ಹಣಕಾಸು ಅನುದಾನದಲ್ಲಿ	Construction of CC Road Drain and UGD From Salaman House to Baslinga House and Subhash House at Ward No 19 in Raichur City **Estimate Cost Rs. 11,00,000/-**	DMA/2025-26/WS/WORK_INDENT40564/Call-3
7		Construction of CC Road, Drain and UGD From Anjeneya House to Mahendra House at Ward no 19 In Raichur City **Estimate Cost Rs. 8,00,000/-**	DMA/2025-26/OW/WORK_INDENT40578/Call-3
8		Developement of Garden in MS Gate, Cement Concrete Bench and Interlock Paver Block Foot Patha and Plantation at Backside of District Prisons and Infront of Asar Masjid Garden in Ward No 07 in Raichur City **Estimate Cost Rs. 12,00,000/-**	DMA/2025-26/OW/WORK_INDENT50048
9	ಮಹಾನಗರ ಪಾಲಿಕೆ ಅನುದಾನದಲ್ಲಿ	Construction of Culvert From Bhagavan Shop To Rajacaluve and Bhagavan Shop To Hansu Shop at W.No 26 Raichur City. **Estimate Cost Rs. 3,02,000/-**	DMA/2025-26/BR/WORK_INDENT41339/Call-4
10		Construction of Drain From Kandagadde Maremma Temple Opposite Via Mahaveer Circle to Vikas Jain Shop Backside Market Road at W NO 26 In Raichur City. **Estimate Cost Rs. 7,65,000/-**	DMA/2025-26/BR/WORK_INDENT42033/Call-4
11	2025–26 15ನೇ ಹಣಕಾಸು ಅನುದಾನದಲ್ಲಿ	Providing and Fixing of Children playing Equipments at Ward no 02 Buddi Baba Darga, Vijayanagara Colony, Shivangudi, Water Tank janatha Colony, V.M. Reddy, Mallikarjun layout in Raichur City. **Estimate Cost Rs.7,00,000/- (Reserved-General)**	DMA/2025-26/OW/WORK_INDENT46740/Call-2

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ರಾಯಚೂರು.

DIP/RCR/450/KSMCA/451/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಇಂ(ವಿ)/ಪ್ರ(ಕಾ)ವಲಯ/ಇಂ(ಕ)/ಸ.ಕಾ.ಇಂ–4/ಟೆಂಡರ್/ಕೆ–356(2)/2025–26/6081 ದಿನಾಂಕ: 04.10.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮು.ಇಂ(ವಿ)/ಪ್ರ(ಕಾ)ವ/ಬೆಂವ/ಟಿಎಲ್‌ಎಮ್ ಎಸ್‌ಪಿ–21/2025–26 ರಲ್ಲಿ ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವಲಯದ ಅಡಿಯಲ್ಲಿ ಬರುವ ಕೋಲಾರದ ಟಿ.ಎಲ್.ಎಂ ಉಪವಿಭಾಗದ ಪ್ರಸರಣ ಮಾರ್ಗಗಳ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ (15 ಸಂಖ್ಯೆ ಜನಗಳ) ಸೇವೆಗಳನ್ನು ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು ದಿನಾಂಕ: 06.10.2025 ರಂದು ಅಥವಾ ನಂತರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು–09

ನಗರಸಭೆ ಚಿಂತಾಮಣಿ

ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/98/2025–26 ದಿನಾಂಕ: 22.09.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ: **DMA/2025-26/OW/WORK_INDENT49450**, ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಸೂಚನೆಗಳು ಕ್ರಮ ಸಂಖ್ಯೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.10.2025 ರಂದು ಸಮಯ ಸಂಜೆ 17:30 ಗಂಟೆವರೆಗೆ.** ತಾಂತ್ರಿಕ ಬಿಡ್ **ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ: 09.10.2025 ರಂದು ಸಮಯ ಬೆಳಗ್ಗೆ 11:00 ಗಂಟೆಗೆ ತೆರೆಯಲಾಗುವುದು.**

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:223/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಮುಂಡರಗಿ–582118

ದೂರವಾಣಿ: 08371–262232 ಫ್ಯಾಕ್ಸ್ ನಂ: 08371–262638

Email Id:ka.mundargi.tmc@gmail.com Websit:www.mundargitown.gov.in

ಸಂಖ್ಯೆ: ಪುಕಾಮುಂ/15ನೇಹಣಕಾಸು –ಡಿಟಿ/2025–26 ದಿನಾಂಕ: 03/10/2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಪಾರದರ್ಶಕ ಅಧಿನಿಯಮ 1999 & 2000 ಕೆ.ಪಿ.ಪಿ. ಪೋರ್ಟಲ್‌ದಲ್ಲಿ 15ನೇ ಹಣಕಾಸು ಯೋಜನೆ, ಅನುದಾನದಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ–2 ದಸ್ತಾವೇಜಿನಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಂಡೆಂಟ್ ನಂ. DMA/2025-26/OW/WORK_INDENT48637 ನೇದ್ದರ ಟೆಂಡರ್ **ಮೊತ್ತ: 57.20 ಲಕ್ಷಗಳಿಗೆ** http://kppp.karnataka.gov.in ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ. ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗದಿ ಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

1	ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:	17–10–2025 ಸಾಯಂಕಾಲ 4:30ರ ವರೆಗೆ
2	ಟೆಂಡರ್ ತೆರೆಯುವ ದಿನಾಂಕ:	21–10–2025 ಸಾಯಂಕಾಲ 4:30ರ ವರೆಗೆ

ಸಹಿ/– (ಶ್ರೀ ಶಂಕರ. ಎಸ್. ಹುಲ್ಲಮ್ಮನವರ) ಮುಖ್ಯಾಧಿಕಾರಿ ಪುರಸಭೆ ಮುಂಡರಗಿ

ಸಹಿ/– (ಶ್ರೀಮತಿ ನಿರ್ಮಲಾ. ನಾ. ಕೋರ್ಲಹಳ್ಳಿ) ಅಧ್ಯಕ್ಷರು ಪುರಸಭೆ ಮುಂಡರಗಿ

ವಾ.ಸಾ.ಇ/ಗದಗ/316/ಡೇಕಪಾಂಡೆಪಬ್ಲಿಸಿಟಿ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–228/2514/2025–26 ದಿನಾಂಕ: 04.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎ.ಸಿ. ಶ್ರೀನಿವಾಸ	ಯಲಹಂಕ	ಯಲಹಂಕ	ಚೊಕ್ಕನಹಳ್ಳಿ	22/4	0–20	ವಸತಿ	ವಾಣಿಜ್ಯ
					22/5	0–35		
					23/2	2–00		
					23/3	0–06		
					23/4	0–06		
					23/5	0–06		
					23/6	0–28		
					23/8	0–10		
					23/9	0–07		
					28/1	0–17		
					28/2	0–11		
					28/3	0–05		
					ಒಟ್ಟು	5–31		

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಿಸ್ತಾರದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿ ಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯೋಗ ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವಸತಿ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸಮಾಚಾರ ಸಣ್ಣದಲ್ಲ

ಜಾತ್ರೆಯಲ್ಲಿ ಏರ್ ಫೈರ್: 14 ಮಂದಿ ಬಂಧನ

ವಿಜಯಪುರ: ಅಂಕಲಗಿ ದುರ್ಗಾದೇವಿ ಜಾತ್ರೆಯಲ್ಲಿ ನಡೆದ ಗಲಾಟೆ ವೇಳೆ ಏರ್‌ಫೈರ್ ಮಾಡಿದ್ದಕ್ಕೆ ಎರಡು ಗುಂಪುಗಳ 14 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಅಂಕಲಗಿ ದುರ್ಗಾದೇವಿ ಜಾತ್ರೆ ವೇಳೆ ವಡ್ಡರ್ ಹಾಗೂ ಪೂಜಾರಿ ಗುಂಪುಗಳ ನಡುವೆ ಗಲಾಟೆ ನಡೆದಿತ್ತು. ಈ ವೇಳೆ ರಾಮ ಅಂಕಲಗಿ ಎಂಬಾತ ಗಾಳಿಯಲ್ಲಿ ಗುಂಡು ಹಾರಿಸಿದ್ದ. ಇದರಿಂದ ಬಾಲಕಿಯ ಕಾಲಿಗೆ ಗುಂಡು ತಗುಲಿತ್ತು. ಈ ಘಟನೆಯನ್ನು ಜಿಲ್ಲಾ ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದರು. ಈ ಸಂಬಂಧ ವಿಜಯಪುರ ಗ್ರಾಮೀಣ ಠಾಣೆಯಲ್ಲಿ 14 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಈಗಾಗಲೇ ಎರಡು ಗುಂಪುಗಳ 14 ಜನರನ್ನು ಬಂಧಿಸಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಮಾಹಿತಿ ನೀಡಿದ್ದಾರೆ.

ಜಾತಿಗಣತಿ ಹೆಸರಲ್ಲಿ ದರೋಡೆಗೆ ಯತ್ನ

ಶಿವಮೊಗ್ಗ: ಜಾತಿಗಣತಿ ಹೆಸರಲ್ಲಿ ಬಂದ ದಂಪತಿ ಸಂಬಂಧಿಕರ ಮನೆಯಲ್ಲೇ ದರೋಡೆಗೆ ಯತ್ನಿಸಿದ ಘಟನೆ ಶಿವಮೊಗ್ಗದ ಆರ್ಯೂದ್ ನಗರದಲ್ಲಿ

ನಡೆದಿದೆ. ಮುಖ ಮುಚ್ಚಿಕೊಂಡು ಬಂದ ದಂಪತಿ, ಮನೆಯಲ್ಲಿದ್ದ ಮಹಿಳೆ ದಿಲ್ ಶಾದ್ ಅವರಿಗೆ, ನಾವು ಜಾತಿಗಣತಿ ಮಾಡಲು ಬಂದಿದ್ದೇವೆ. ಆಧಾರ್ ಕಾರ್ಡ್ ತನ್ನಿ ಎಂದಿದ್ದಾರೆ. ಬಳಿಕ ಆಧಾರ್ ಕಾರ್ಡ್ ತರಲೆಂದು ಮನೆಯೊಳಗೆ ಹೋದಾಗ ದಂಪತಿ ಏಕಾಏಕಿ ನುಗ್ಗಿ, ಮಹಿಳೆ ಮೇಲೆ ಹಲ್ಲೆ ಮಾಡಿ ದರೋಡೆಗೆ ಯತ್ನಿಸಿದ್ದಾರೆ. ಕೂಡಲೇ ದಿಲ್ ಶಾದ್ ಹೊರಗೆ ಓಡಿ ಬಂದು, ಅಕ್ಕಪಕ್ಕದವರನ್ನು ಸೇರಿಸಿದ್ದಾರೆ. ಬಳಿಕ ಇಬ್ಬರನ್ನು ಮನೆಯಲ್ಲೇ ಕೂಡಿ ಹಾಕಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಪೊಲೀಸರು ದರೋಡೆಗೆ ಯತ್ನಿಸಿದ ತಸ್ಲಿಮಾ ಮತ್ತು ಅಸ್ಲಂ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಸಿಲಿಂಡರ್ ಸ್ಫೋಟ: ಮೃತರ ಸಂಖ್ಯೆ 4ಕ್ಕೆ ಏರಿಕೆ

ಹೊಸಪೇಟೆ: ತಾಲೂಕಿನ ಗಾದಿಗನೂರಿನಲ್ಲಿ ಸೆ.27ರಂದು ಗ್ಯಾಸ್ ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡಿದ್ದ 11 ಮಂದಿಯ ಪೈಕಿ ಮತ್ತಿಬ್ಬರು

ಶುಕ್ರವಾರ ರಾತ್ರಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ಮೂಲಕ ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿದಂತಾಗಿದೆ. ಕವಿತಾ (30) ಮತ್ತು ಮೈಲಾರಪ್ಪ (45) ಮೃತರು. ಶುಕ್ರವಾರ ಬೆಳಗ್ಗೆಯಷ್ಟೇ ವಕೀಲ ಹಾಲಪ್ಪ ಮತ್ತು ಅವರ ತಾಯಿ ಗಂಗಮ್ಮ ಮೃತಪಟ್ಟಿದ್ದರು. ಹಾಲಪ್ಪ ಮತ್ತು ಗಂಗಮ್ಮ ಅವರ ಮೃತದೇಹ ಶುಕ್ರವಾರ ಸಂಜೆ ಗಾದಿಗನೂರಿಗೆ ತಲುಪಿತ್ತು. ರಾತ್ರಿಯೇ ಅಂತ್ಯ ಸಂಸ್ಕಾರ ನಡೆಸಲಾಗಿತ್ತು. ಈ ಶೋಕದಲ್ಲಿ ಊರ ಮಂದಿ ಇದ್ದಾಗಲೇ ಹಾಲಪ್ಪ ಅವರ ಪತ್ನಿ ಕವಿತಾ ಮತ್ತು ಮೈಲಾರಪ್ಪ ಅವರ ನಿಧನದ ಸುದ್ದಿ ಬಂದಿತ್ತು. ಈ ಇಬ್ಬರ ಮೃತದೇಹಗಳು ಶನಿವಾರ ಸಂಜೆ ವೇಳೆಗೆ ಇಲ್ಲಿಗೆ ತಲುಪುವ ನಿರೀಕ್ಷೆ ಇದೆ. ಸೆ.27ರ ಬೆಳಗ್ಗೆ 5.15ರ ವೇಳೆಗೆ ಕವಿತಾ ಅವರು ಸ್ಟವ್ ಹಚ್ಚುವಾಗ ಗ್ಯಾಸ್ ಸೋರಿಕೆಯಾಗಿ ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ 11 ಮಂದಿ ಗಾಯಗೊಂಡಿದ್ದರು.

ಸಾವಿನಲ್ಲೂ ಒಂದಾದ ಸಹೋದರರು

ಬೆಳಗಾವಿ: ತಮ್ಮನ ಸಾವಿನ ಸುದ್ದಿ ಕೇಳಿ ಅಣ್ಣನೂ ಹೃದಯಾಘಾತದಿಂದ ಮೃತಪಟ್ಟಿರುವ ಮನಕಲಕುವ ಘಟನೆ ಗೋಕಾಕ್ ತಾಲೂಕಿನ ಕಪರಟ್ಟಿ

ಗ್ರಾಮದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. 10ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ ಸತೀಶ ಬಾಗನ್ನವರ್ (16) ಅವರು ಮುಂಜಾನೆ 4 ಗಂಟೆಗೆ ಅನಾರೋಗ್ಯದಿಂದಾಗಿ ಮೃತಪಟ್ಟಿದ್ದರು. ಈ ಸುದ್ದಿ ಕೇಳಿ ಮೃತ ಸತೀಶ್ ಅವರ ಅಣ್ಣ ಬಸವರಾಜ ಬಾಗನ್ನವರ್ (24) ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ಸತೀಶ್ ಅವರ ಆರೋಗ್ಯದಲ್ಲಿ ಏರುಪೇರಾಗಿ ಆತ ಬದುಕುಳಿಯಲ್ಲ ಎಂಬುದು ಗೊತ್ತಾಗುತ್ತಿದ್ದಂತೆ ಬಸವರಾಜ ಅವರು ಕುಸಿದು ಬಿದ್ದಿದ್ದಾರೆ. ಆಗ ಬಸವರಾಜ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲೆ ಸತೀಶ್ ಅವರ ಸಾವಿನ ಸುದ್ದಿ ಬಂದಿದೆ. ಈ ಸುದ್ದಿ ಕೇಳಿದ ತಕ್ಷಣವೇ ಬಸವರಾಜ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಅದಾದ ಬಳಿಕ ಮೈದುನ ಮತ್ತು ಗಂಡನ ಸಾವಿನ ಸುದ್ದಿ ಕೇಳಿದ ಬಸವರಾಜ ಪತ್ನಿ ತುಂಬು ಗರ್ಭಿಣಿಯಾಗಿದ್ದ ಪವಿತ್ರಾ, ಬಸವರಾಜ ಬಾಗನ್ನವರ್ (20) ಕೂಡ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಗೋಕಾಕ್ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ಅದೃಷ್ಟವಶಾತ್ ಪವಿತ್ರಾ, ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಗ್ಯಾರಂಟಿಗೆ ಎನ್‌ಡಿಆರ್‌ಎಫ್ ಹಣ ಬಳಸಿಲ್ಲ: ಮುಖ್ಯಮಂತ್ರಿ

ಬಿಜೆಪಿಯವರಿಗೆ ಕಾಮಾಲೆ ರೋಗ ಅಂಟಿದೆ: ಸಿದ್ದರಾಮಯ್ಯ ವಾಗ್ದಾಳಿ

ಸುದ್ದಿಗಾರರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

- ಬಿಜೆಪಿಯಿಂದ ನಮ್ಮ ಗ್ಯಾರಂಟಿ ಯೋಜನೆಗಳು ಅನುಕರಣೆ
- ಕರ್ನಾಟಕದಲ್ಲಿ ಗ್ಯಾರಂಟಿ ಯಶಸ್ವಿ ಆಗಿದ್ದರಿಂದ ಬಿಜೆಪಿಯಲ್ಲಿ ತಳಮಳ ಶುರು
- ಬಿಜೆಪಿ ನಾಯಕರ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

ಬೆಳಗಾವಿ: ಎನ್‌ಡಿಆರ್‌ಎಫ್ ಅನುದಾನವನ್ನು ನಾವು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿಲ್ಲ, ಬಿಜೆಪಿಯವರಿಗೆ ಕಾಮಾಲೆ ರೋಗ ಅಂಟಿಕೊಂಡಿದೆ. ಗ್ಯಾರಂಟಿ ಯೋಜನೆಗಳು ಕರ್ನಾಟಕದಲ್ಲಿ ಯಶಸ್ವಿ ಆಗಿದ್ದರಿಂದ ಬಿಜೆಪಿಯವರಿಗೆ ತಳಮಳ ಶುರುವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆರೋಪಕ್ಕೆ ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸಿಎಂ ಪ್ರತಿಕ್ರಿಯಿಸಿ, ಹರಿಯಾಣ, ದೆಹಲಿ, ರಾಜಸ್ಥಾನ, ಮಹಾರಾಷ್ಟ್ರ ರಾಜ್ಯಗಳಲ್ಲಿ ಬಿಜೆಪಿಯವರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಅನುಕರಣೆ ಮಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ಅನುಷ್ಠಾನಕ್ಕೆ ತರಲು ಆಗುವುದಿಲ್ಲ ಎಂದಿದ್ದರು. ಆದರೆ, ನಾವು ಅನುಷ್ಠಾನಕ್ಕೆ ತಂದಿದ್ದೇವೆ. ಹಾಗಾಗಿ, ನಾವು ಏನು ಹೇಳಿದ್ದೇವೆಯೋ ಅದನ್ನು ಮಾಡಿಯೇ ತೀರುತ್ತೇವೆ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ಕೊಟ್ಟರು.

ಬೆಳಗಾವಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಾನೇ ಮಂಜೂರು ಮಾಡಿದ್ದೆ. ಮುಂದೆ ಅಧಿಕಾರಕ್ಕೆ ಬಂದ ಬಿಜೆಪಿಯವರು ಏನೂ ಮಾಡಲಿಲ್ಲ ಎಂದು ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ರಾಮಲಿಂಗಾರೆಡ್ಡಿ, ಶಾಸಕ ಆಸೀಫ್ ಸೇಠ್, ರಾಜು ಕಾಗೆ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಯವರು ನಮ್ಮ ಹೈಕಮಾಂಡಾ?

ಪದೇ ಪದೇ ನಾನೇ ಸಿಎಂ ಎನ್ನುವ ಮೂಲಕ ಸಿದ್ದರಾಮಯ್ಯ ಹೈಕಮಾಂಡ್‌ಗೆ ಸೆಡ್ಡು ಹೊಡೆದಿದ್ದಾರೆ ಎಂಬ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಅವರು ಯಾರು? ಅವರೇನು ನಮ್ಮ ಹೈಕಮಾಂಡಾ? ಅವರ ಕೆಲಸ ಅವರು ಮಾಡಬೇಕು. ಬಿಜೆಪಿಯವರ ಇಂತಹ ಹೇಳಿಕೆಗಳಿಗೆ ನಾನು ಪ್ರತಿಕ್ರಿಯಿಸುವುದಿಲ್ಲ ಎಂದರು.

ಖಾಸಗಿಯವರಿಗೆ ಆಸ್ಪತ್ರೆ ಕೊಟ್ಟಿಲ್ಲ

ಬೆಳಗಾವಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ವಹಣೆ ಖಾಸಗಿಯವರಿಗೆ ಕೊಟ್ಟಿದ್ದಾರೆ ಎಂಬ ಆರೋಪಕ್ಕೆ, ಪ್ರತಿಕ್ರಿಯಿಸಿದ ವೈದ್ಯಕೀಯ ಶಿಕ್ಷಣ

ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಖಾಸಗಿಯವರಿಗೆ ಕೊಟ್ಟಿಲ್ಲ. ಕೆಎಲ್‌ಇ ಸಂಸ್ಥೆಯ ವೈದ್ಯರು ಉಚಿತವಾಗಿ ಸೇವೆ ನೀಡಲಿದ್ದಾರೆ. ವೈದ್ಯರ ನೇಮಕಾತಿಗೆ ಅರ್ಜಿ ಆಹ್ವಾನಿಸಿದ್ದೆವು. ಈ ವೇಳೆ, 11 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇನ್ನುಳಿದ ಖಾಲಿ ಇರುವ ಹುದ್ದೆಗಳು ತುಂಬುವವರೆಗೆ ಕೆಎಲ್‌ಇ ಅವರು ತಾತ್ಕಾಲಿಕವಾಗಿ ಸಹಾಯ ಮಾಡುತ್ತಿದ್ದಾರೆ. ಅದೇ ರೀತಿ ಎಲ್ಲ ರೀತಿಯ ವೈದ್ಯಕೀಯ ಉಪಕರಣಗಳನ್ನು ಅಳವಡಿಸಲಾಗಿದೆ ಎಂದು ಸಮರ್ಥಿಸಿಕೊಂಡರು.

ರೈತರ ಅಹವಾಲು ಆಲಿಸಿದ ಬಿಜೆಪಿ ತಂಡ
ಕಾಂಗ್ರೆಸ್ ವಿರುದ್ಧ ಬಿಜೆಪಿ ನಾಯಕರು ಕಿಡಿ

ಬೆಳೆ ಹಾನಿ ವೀಕ್ಷಿಸಿದ ಬಿಜೆಪಿಯ ನಿಯೋಗ

ವಿಜಯಪುರ: ಜಿಲ್ಲೆಯಲ್ಲಿ ಮಳೆ ಹಾಗೂ ಭೀಮಾ ನದಿ ಪ್ರವಾಹದಿಂದ ಹಾನಿಗೀಡಾದ ಪ್ರದೇಶಗಳು ಹಾಗೂ ಗ್ರಾಮಗಳಿಗೆ ರಾಜ್ಯ ಬಿಜೆಪಿ ತಂಡ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ವಿಪಕ್ಷ ನಾಯಕ ಆರ್.ಅಶೋಕ, ವಿಧಾನ ಪರಿಷತ್ ಸದಸ್ಯರಾದ ಎನ್.ರವಿಕುಮಾರ, ಸಿ.ಟಿ.ರವಿ ಹಾಗೂ ಸಂಸದ ರಮೇಶ ಜಿಗಜಿಗಣಿ ಸೇರಿದಂತೆ ಅನೇಕ ನಾಯಕರು ತೊಗರಿ, ಸೂರ್ಯಕಾಂತಿ, ಕಬ್ಬು ಸೇರಿ ವಿವಿಧ ಬೆಳೆಗಳ ಹಾನಿ ವೀಕ್ಷಣೆ ಮಾಡಿ, ರೈತರ ಅಹವಾಲು ಆಲಿಸಿದರು. ಅಲ್ಲದೇ, ಮಳೆಯಿಂದ ಹಾನಿಯಾದ ಮನೆಗಳನ್ನು ಪರಿಶೀಲಿಸಿದರು.

ಅಗರಖೇಡ ಗ್ರಾಮದಲ್ಲಿ ವಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ರೈತರು ಪ್ರತಿ ಬೆಳೆಗೂ 25-30 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ, ಈಗ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಆದರೆ, ಸರಕಾರ ಮಾತ್ರ ಸರಿಯಾಗಿ ಸ್ಪಂದಿಸುತ್ತಿಲ್ಲ. ಹೀಗಾಗಿ ಸಂಕಷ್ಟದಲ್ಲಿರುವ ಜನರು ಹಾಗೂ ರೈತರು ಸರಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಅಲ್ಲದೇ, ಕಾಂಗ್ರೆಸ್‌ನಲ್ಲಿ ಲಂಚ ಬೆಳೆ ಮಾತ್ರ ಯಥೇಚ್ಛವಾಗಿ ಬೆಳೆಯುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ, ಮಾಜಿ ಶಾಸಕ ರಮೇಶ ಭೂಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮುಖಂಡರಾದ ಉಮೇಶ ಕಾರಜೋಳ, ವಿಜುಗೌಡ ಪಾಟೀಲ, ಕಾಸುಗೌಡ ಬಿರಾದಾರ, ಸಾಬು ಮಾಶ್ಯಾಳ, ಮಲ್ಲಿಕಾರ್ಜುನ ಜೋಗೂರ, ವಿಜಯ ಜೋಶಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ವಿಜಯಪುರ ಜಿಲ್ಲೆಯಲ್ಲಿ ಮಳೆ ಹಾಗೂ ಭೀಮಾ ನದಿ ಪ್ರವಾಹದಿಂದ ಹಾನಿಗೀಡಾದ ಪ್ರದೇಶಗಳು ಹಾಗೂ ಗ್ರಾಮಗಳಿಗೆ ರಾಜ್ಯ ಬಿಜೆಪಿ ತಂಡ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ರೈತರ ಜಮೀನುಗಳಿಗೆ ಬಂದು ಕಷ್ಟ ಕೇಳಿ

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಬೆಳೆ ಹಾನಿ ಬಗ್ಗೆ ಸಿಎಂ ವೈಮಾನಿಕ ಸಮೀಕ್ಷೆ ಮಾಡಿದರೆ, ಕೆಳಗಡೆಯಿರುವ ರೈತರ ಸಂಕಷ್ಟ ಹೇಗೆ ಗೊತ್ತಾಗುತ್ತದೆ? ರೈತರ ಕಷ್ಟ ಗೊತ್ತಾಗ ಬೇಕಾದರೆ ರೈತರಿಗೆ ಜಮೀನುಗಳಿಗೆ ಬಂದು ನೋಡಬೇಕು. ಆಕ್ರೋಶಿತ ರೈತರು ಮುತ್ತಿಗೆ ಹಾಕುವ ಭಯವೇನಾದರೂ ಸರಕಾರದವರಿಗೆ ಇದೆಯೇ? ಆದರೆ, ನಮ್ಮ ರೈತರು ಒಳ್ಳೆಯವರಿದ್ದು, ಹಳ್ಳಿ-ಹಳ್ಳಿಗೆ ಬಂದು ಜನರ ಕಷ್ಟ ಕೇಳಬೇಕು ಎಂದು ಒತ್ತಾಯಿಸಿದರು.

ಪ್ರವಾಹದಿಂದ ಹಾನಿಯಾದ ಪ್ರದೇಶಗಳ ವೀಕ್ಷಣೆ ಮಾಡಿದ್ದೇವೆ. ಈ ವಿಷಯದಲ್ಲಿ ನಾವು ರಾಜಕಾರಣ ಮಾಡುತ್ತಿಲ್ಲ. ರಾಜಕಾರಣ ಮಾಡುವ ವಿಷಯ ಕೂಡ ಇದಲ್ಲ. ಆದರೆ, ಈ ಹಿಂದೆ ಬಿಜೆಪಿ ಸರಕಾರದಲ್ಲಿ ಒಂದೇ ತಿಂಗಳ ಅವಧಿಯಲ್ಲಿ ಸಂಪೂರ್ಣ ಪರಿಹಾರ ಕಲ್ಪಿಸಲಾಗಿತ್ತು. ಕಾಂಗ್ರೆಸ್ ಸರಕಾರ ಸಮೀಕ್ಷೆಯ ಹೆಸರಲ್ಲಿ ಪರಿಹಾರ ನೀಡಲು ವಿಳಂಬ ಮಾಡುತ್ತಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಕೂಡ ಪರಿಹಾರ ಕೊಡಲು ಹಿಂದೇಟು ಹಾಕುತ್ತಿದೆ.

– ಆರ್.ಅಶೋಕ್ ಪ್ರತಿಪಕ್ಷ ನಾಯಕ

ಕಲ್ಲು ತೂರಾಟಕ್ಕೆ ಪೊಲೀಸರ ವೈಫಲ್ಯ ಕಾರಣ

ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಆರೋಪ

ಹಾವೇರಿ: ಬೆಳಗಾವಿಯಲ್ಲಿ ಕಲ್ಲು ತೂರಾಟ ಘಟನೆಗೆ ರಾಜ್ಯ ಪೊಲೀಸ್ ಇಲಾಖೆಯ ವೈಫಲ್ಯ ಕಾರಣ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಅರಾಜಕತೆ, ಹಿಂಸೆ ಮಾಡಬೇಕು ಅನ್ನೋದು ಒಂದು ವರ್ಗದ ಹುನ್ನಾರ. ಅದಕ್ಕೆ ಕೆಲವು ಶಕ್ತಿಗಳು ಬೆಂಬಲ ನೀಡುತ್ತಿದ್ದಾರೆ ಎಂದು ದೂರಿದರು.

ಉತ್ತರಪ್ರದೇಶ ರಾಜ್ಯದಲ್ಲಿ ಈ ರೀತಿ ಇತ್ತು. ದಾವಣಗೆರೆ ಘಟನೆ ನಡೆದ ನಂತರ ಕರ್ನಾಟಕದಲ್ಲಿ ನಿಯಂತ್ರಣ ಮಾಡಬೇಕು ಅನ್ನೋ ಆಗ್ರಹವನ್ನು ನಾವು ಮಾಡಿದ್ದೆವು. ನಿಯಂತ್ರಣ ಮಾಡುತ್ತೇವೆ ಅಂದಿದ್ದರು.

ಕಳೆದ ಬಾರಿ ಮಳೆಹಾನಿ ಪರಿಹಾರ ಕೊಡೋದಕ್ಕೆ ಕೇಂದ್ರ ಸರಕಾರ ಹಣ ಬಿಡುಗಡೆ ಮಾಡಿದ ನಂತರ ಹಣ ನೀಡಿದ್ದಾರೆ. ಈ ಬಾರಿ ಬೆಳೆಹಾನಿ ಘೋಷಣೆ ಮಾಡಿದ್ದಾರೆ. ಇನ್ನೂ ನೀಡಿಲ್ಲ. ನಾನು ಸಿಎಂ ಇದ್ದಾಗ ಕೇಂದ್ರ ಸರಕಾರ ಹಣ ಬಿಡುಗಡೆ ಮಾಡುವ ಮುನ್ನವೇ ಎರಡು ಪಟ್ಟು ಹೆಚ್ಚು ಬೆಳೆಹಾನಿ ನೀಡಿದ್ದೆ. ಕೇಂದ್ರದ ಹಣವನ್ನು ಕಾಯಲಿಲ್ಲ. ಕೂಡಲೇ ಬೆಳೆ ಹಾನಿ, ಮನೆ ಹಾನಿಯ ಪರಿಹಾರ ಬಿಡುಗಡೆ ಮಾಡಬೇಕು.

– ಬಸವರಾಜ ಬೊಮ್ಮಾಯಿ ಸಂಸದ

ಹೆಚ್ಚಿನ ಜಾಗ್ರತಿ ತೆಗೆದುಕೊಳ್ಳುವಲ್ಲಿ ಪೊಲೀಸರು ವಿಫಲವಾಗಿದ್ದಾರೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಮಂಡ್ಯ, ಮದ್ದೂರು ಘಟನೆ ನೋಡಿದಾಗ ರಾಜ್ಯದಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಕುಸಿದಿದೆ. ಕಾನೂನು ಭಯ, ಪೊಲೀಸರ ಭಯ ಜನರಲ್ಲಿ ಇಲ್ಲದಂತಾಗಿದೆ. ಸರಕಾರ ಹಲವು ಪ್ರಕರಣಗಳನ್ನು ನಿಭಾಯಿಸುವಲ್ಲಿ ವಿಫಲವಾಗಿದೆ. ಗೃಹ ಸಚಿವರು ಈ ಘಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಜಾತಿ, ಧರ್ಮ, ಮತ, ಪಂಥದ ಹೆಸರಿನಲ್ಲಿ ದೇಶ ಒಡೆಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಐದು ವರ್ಷ ಕೈ ಸರಕಾರ ಇರುತ್ತೆ

ತುಮಕೂರು: ರಾಜ್ಯ ಮತ್ತು ರಾಷ್ಟ್ರದಲ್ಲಿ ಬಿಜೆಪಿಯವರು ಸುಳ್ಳಿನ ಮೇಲೆ ಇಲ್ಲಿಯವರೆಗೂ ಬಂದಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ನವೆಂಬರ್‌ನಲ್ಲಿ ಕ್ರಾಂತಿ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿ, ನವೆಂಬರ್ ನಲ್ಲಿ ಬದಲಾವಣೆ ಆಗುತ್ತದೆ ಎಂದು ಎಲ್ಲರೂ ಊಹೆ ಮಾಡುತ್ತಾ



ನವೆಂಬರ್‌ನಲ್ಲಿ ಯಾವ ಕ್ರಾಂತಿ ಆಗುವುದಿಲ್ಲ: ಕೆ.ಎನ್.ರಾಜಣ್ಣ

ಇದ್ದಾರೆ. ನನ್ನ ಪ್ರಕಾರ ಯಾವುದೇ ಬದಲಾವಣೆ ಊಹೆಗೆ ಅವಕಾಶ ಇಲ್ಲ. 5 ವರ್ಷ ಕಾಂಗ್ರೆಸ್ ಸರಕಾರ ನಿರಂತರವಾಗಿ ಇರುತ್ತೆ. ಸಿದ್ದರಾಮಯ್ಯ ಸಿಎಂ ಹಾಗೆ ಇರುತ್ತಾರೆ. ಬಿಜೆಪಿಯವರು ಯಾವಾಗಲೂ ಸುಳ್ಳು ಹೇಳುತ್ತಾರೆ ಎಂದರು.

ತಾಪಂ, ಜಿಪಂ ಚುನಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿ, ನಮ್ಮ ಕಾಂಗ್ರೆಸ್ ಪಕ್ಷ ಲೋಕಲ್ ಬಾಡಿ ಎಲೆಕ್ಷನ್ ಮಾಡುತ್ತೆ. ಎಲೆಕ್ಷನ್ ಆದಷ್ಟು ಜಾಗೃತವಾಗಿ ಮಾಡಬೇಕು ಎಂಬ ಉದ್ದೇಶ ನಮ್ಮೆಲ್ಲರ ಉದ್ದೇಶ. ಜಿಪಂ ಹಾಗೂ ತಾಪಂ ಎಲೆಕ್ಷನ್ ಮಾಡಬೇಕು ಅಂತ ಕೋರ್ಟ್ ಹೇಳಿದೆ. ಕಾರ್ಪೊರೇಷನ್ ಎಲೆಕ್ಷನ್ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಅಂಡರ್ ಟೇಕ್ ಕೊಟ್ಟಿದ್ದಾರೆ. ಆ ಅಂಡರ್ ಟೇಕಿಂಗ್ ಪ್ರಕಾರ ಚುನಾವಣೆ ಮಾಡುತ್ತಾರೆ ಎಂದರು. ಶಿಸ್ತು ಪಾಲನಾ ಸಮಿತಿಯಿಂದ ಶಾಸಕ ಡಾ.ರಂಗನಾಥ್‌ಗೆ ನೋಟಿಸ್ ವಿಚಾರಕ್ಕೆ ಉತ್ತರಿಸಿ, ಈಗ ಅದರ ಬಗ್ಗೆ ಏನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲ ಕಾಂಗ್ರೆಸ್ಸಿಗರು ಹೈಕಮಾಂಡ್ ನಿರ್ಧಾರಕ್ಕೆ ಬದ್ಧ ಎಂದರು.

5 ವರ್ಷ ಸಿದ್ದರಾಮಯ್ಯ ಸಿಎಂ

ಮಂಡ್ಯ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕೆಂದು ಬಯಸುತ್ತೇನೆ. ಅವರು ಸಿಎಂ ಆಗಬೇಕೆಂಬ ಆಸೆ ನನಗೂ ಇದ್ದು, ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕುರ್ಚಿ ಖಾಲಿ ಇಲ್ಲ. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರೇ ಈ ಅವಧಿ ಪೂರೈಸಲಿದ್ದು ನವೆಂಬರ್‌ನಲ್ಲಿ ಸಚಿವ ಸಂಪುಟ

ಸದ್ಯದ ಪರಿಸ್ಥಿತಿಯಲ್ಲಿ ಕುರ್ಚಿ ಖಾಲಿ ಇಲ್ಲ: ಸಚಿವ ಜಮೀರ್

ಪುನರ್ ರಚನೆ ಆಗಲಿದೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಯಾಗಬೇಕೆಂದು ಎಲ್ಲರಿಗೂ ಆಸೆ ಇದೆ. ನಮಗೂ ಅವಕಾಶ ಸಿಗಬೇಕು ಅನ್ನೋದು ತಪ್ಪಲ್ಲ. ಇದರ ತೀರ್ಮಾನ ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದ್ದು, ನವೆಂಬರ್‌ನಲ್ಲಿ ಕೆಲವರು ಹೇಳಿದಂತೆ ಯಾವ ಕ್ರಾಂತಿ ಸಹ ಆಗುವುದಿಲ್ಲ. ಈ ಅವಧಿಯಲ್ಲಿ ಸಿದ್ದರಾಮಯ್ಯ 5 ವರ್ಷ ಪೂರೈಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನವೆಂಬರ್‌ಗೆ ಯಾವ ಕ್ರಾಂತಿ ಇಲ್ಲ, ಮುಖ್ಯಮಂತ್ರಿ ಕುರ್ಚಿಯಲ್ಲಿ ಸಿದ್ದರಾಮಯ್ಯ ಕೂರಲಿದ್ದಾರೆಂದು ಸ್ವತಃ ಡಿ.ಕೆ.ಶಿವಕುಮಾರ್ ಕೂಡ ಹೇಳಿದ್ದಾರೆ. ಸಿದ್ದರಾಮಯ್ಯ ಸಹ ಮೊನ್ನೆ ಮೈಸೂರಿನಲ್ಲಿ ಐದು ವರ್ಷ ನಾನೇ ಸಿಎಂ ಎಂದಿದ್ದಾರೆ. ನಮ್ಮದು ಹೈಕಮಾಂಡ್ ಪಕ್ಷ. ತೀರ್ಮಾನ ಎಲ್ಲ ಹೈಕಮಾಂಡ್ ಮಾಡುತ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧ ಎಂದರು.

ಮುಖ್ಯಮಂತ್ರಿ ಬದಲಾವಣೆ ಇಲ್ಲ

ಗದಗ: ಸಿಎಂ ಬದಲಾವಣೆ ಬಗ್ಗೆ ಪ್ರತಿವರ್ಷ ಹೇಳುತ್ತಲೇ ಇರುತ್ತಾರೆ. ಆದರೆ ಮುಖ್ಯಮಂತ್ರಿಗಳು ಮುಂದುವರಿಯುತ್ತಾರೆ. ಸುರ್ಜೇವಾಲ ಅವರು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಸ್ಥಾನ ಯಾವುದೇ ಚರ್ಚೆ ಆಗಿಲ್ಲ ಎಂದಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರೇ ಮುಂದುವರಿಯುತ್ತಾರೆ ಎಂದು ವಿಧಾನ

ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ

ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಐದು ವರ್ಷ ನಾನೇ ಇರುತ್ತೇನೆ. ಮುಂದಿನ ದಸರಾ ಉದ್ಘಾಟನೆ ಮಾಡುತ್ತೇನೆ ಎಂದಿದ್ದಾರೆ. ಅವರು ಹೇಳಿದ ಮೇಲೆ ಅವರೇ ಮುಂದುವರಿಯುತ್ತಾರೆ ಎಂದರು.

ಬೆಳಗಾವಿ ಗಲಾಟೆ, ಐ.ಎಲ್.ಯು ಮೊಹ್ಮದ್ ಘೋಷಣೆ ಪ್ರಕರಣ ಕುರಿತು ಮಾತನಾಡಿದ ಅವರು, ಐ ಲವ್ ಯು ಮೊಹಮ್ಮದ್ ಎಂಬ ಘೋಷಣೆ ಹೊಸದೇ ನಲ್ಲ. ಬ್ಯಾನರ್ ಮೊದಲೆಲ್ಲಾ ಹಾಕುತ್ತಿದ್ದರು. ಅದನ್ನು ಈಗ ವಿವಾದವಾಗಿ ಸೃಷ್ಟಿ ಮಾಡಿದ್ದಾರೆ. ಮೊದಲು ಉರ್ದುನಲ್ಲಿ ಹಾಕುತ್ತಿದ್ದರು. ಉರ್ದು ಓದಲು ಬರಲಾಗದ ಕಾರಣ ವಿವಾದ ಆಗಿರಲಿಲ್ಲ. ಈಗ ಇಂಗ್ಲಿಷ್ ನಲ್ಲಿ ಹಾಕಿದ್ದಕ್ಕೆ ವಿವಾದ ಮಾಡುತ್ತಿದ್ದಾರೆ. ಇವೆಲ್ಲವೂ ಅನಗತ್ಯ ವಿವಾದಗಳು. ಪ್ರತಿಯೊಂದು ಧರ್ಮದವರು ತಮ್ಮ ಮಹನೀಯರು, ದೇವರು ಮೆಚ್ಚುಗೆ ಬ್ಯಾನರ್ ಹಾಕಲು ಏನು ತಪ್ಪಿಲ್ಲ ಎಂದರು.

ರಾಜ್ಯದಲ್ಲಿ ಎರಡು ವಾರ ಮುಂಗಾರು ವಿಸ್ತರಣೆ

ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ | ಅ.5ರಿಂದ ಅ.11ರವರೆಗೆ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದಲ್ಲಿ ಇನ್ನೂ ಎರಡು ವಾರಗಳ ಮುಂಗಾರು ಮುಂದುವರಿಯುವ ಸಾಧ್ಯತೆಯಿದೆ ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹಿರಿಯ ಹವಾಮಾನ ತಜ್ಞ ಡಾ.ಶ್ರೀನಿವಾಸರೆಡ್ಡಿ ಮಾತನಾಡಿ, ಭಾರತೀಯ ಹವಾಮಾನ ಇಲಾಖೆ ಪ್ರಕಾರ ಜೂ.1ರಿಂದ ಸೆ.30ವರೆಗಿನ ಅವಧಿಯನ್ನು ಮುಂಗಾರು ಎಂದು ಪರಿಗಣಿಸಲಾಗುತ್ತಿದೆ. ಇಂತಹ ದಿನದಲ್ಲೇ ಮುಂಗಾರು ಕೊನೆಯಾಗಲಿದೆ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಮುಂಗಾರು ಸಂಬಂಧಿಸಿದ ಮಾರುತಗಳು ಮಧ್ಯಪ್ರದೇಶದಲ್ಲಿ ಸಕ್ರಿಯವಾಗಿದೆ. ಈ ಹಿನ್ನೆಲೆ ಅಲ್ಲಿನ ಸ್ಥಳಗಳಲ್ಲಿ ಉತ್ತಮವಾಗಿ ಮಳೆಯಾಗುತ್ತಿದೆ. ಶುರುವಾದ ಸ್ಥಳದಲ್ಲಿಯೇ ವಾಪಸ್ ಮಾರುತಗಳು ಆಗಮಿಸಿದರೆ ಅದನ್ನು ಮುಂಗಾರು ಮುಕ್ತಾಯ ಎಂದು ಘೋಷಿಸಲಾಗುತ್ತದೆ. ಪ್ರಸ್ತುತ ಗುಜರಾತ್, ಒರಿಸ್ಸಾ ಕರಾವಳಿಯ ಸಮುದ್ರ ತೀರದಲ್ಲಿ ವಾಯುಭಾರ ಕುಸಿತದಿಂದ ರಾಜ್ಯದಲ್ಲಿ ಮುಂದಿನ 2 ವಾರ ಮಳೆಯಾಗಲಿದೆ. ಮುಂಗಾರು ಮುಗಿದ ಬಳಿಕ ಈಶಾನ್ಯ ಮಾನ್ಸೂನ್ ಸಕ್ರಿಯಗೊಳ್ಳಲಿದೆ ಎಂದು ಹೇಳಿದರು.

ಅಕ್ಟೋಬರ್‌ನ ಮಧ್ಯದ ಮಳೆ ಮುಂದುವರಿಕೆ

ಅಕ್ಟೋಬರ್ ಮೊದಲ ವಾರದಲ್ಲಿ ಇದ್ದಂತಹ ಹವಾಮಾನವೇ ಅಕ್ಟೋಬರ್ ಮಧ್ಯದ ವೇಳೆಗೂ ಕಂಡು ಬರಲಿದ್ದು, ಒಂದು ದಿನ ಮಳೆ, ಮತ್ತೊಂದು ದಿನ ಬಿಸಲಿನ ವಾತಾವರಣ ಉಂಟಾಗಲಿದೆ. ಅಕ್ಟೋಬರ್ ತಿಂಗಳಾದ್ಯಂತ ವಾರದ ಮಧ್ಯದ ದಿನಗಳಲ್ಲಿ ಮಳೆ ಬರುವ ಸಾಧ್ಯತೆಗಳು ದಟ್ಟವಾಗಿದ್ದು, ಉಳಿದ ದಿನಗಳಲ್ಲಿ ತುಂತುರು ಮಳೆಯಾಗುವ ಸಾಧ್ಯತೆಗಳಿವೆ. ಈ ಮಳೆ ಬಿಸಿಲಿನ ವಾತಾವರಣ ಅ.15ರ ವರೆಗೆ ಕಂಡು ಬರಲಿದೆ ಎಂದು ತಜ್ಞರು ತಿಳಿಸಿದ್ದಾರೆ.

ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಉಂಟಾಗಿರುವ 'ಶಕ್ತಿ' ಚಂಡಮಾರುತದಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಾರಪೂರ್ತಿ ಗುಡುಗು ಸಹಿತ ಮಳೆಯಾಗಲಿದೆ.

ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ಸೈಕ್ಲೋನ್‌ನಿಂದ ರಾಜ್ಯಕ್ಕೆ ಹೆಚ್ಚು ಪರಿಣಾಮ ಬೀರುವುದಿಲ್ಲ. ಬೆಂಗಳೂರು ನಗರ ಸೇರಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗಲಿದೆ. ಅ.15ರಂದು ನೈಋತ್ಯ ಮಾನ್ಸೂನ್ ಕೊನೆಗೊಳ್ಳುವ ಸಾಧ್ಯತೆ ಇದೆ. ನಂತರ, ಈಶಾನ್ಯ ಮಾನ್ಸೂನ್ ಶುರುವಾಗಲಿದೆ.

–ಸಿ.ಎಸ್.ಪಾಟೀಲ್ ರಾಜ್ಯ ಹವಾಮಾನ ಇಲಾಖೆ ನಿರ್ದೇಶಕ

ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಾಸನ, ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು, ಬೆಂಗಳೂರು ನಗರ, ಬೆಂ.ಗ್ರಾಮಾಂತರ, ಬೆಂ.ದಕ್ಷಿಣ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಬೆಳಗಾವಿ ಮತ್ತು ವಿಜಯಪುರ ಸೇರಿ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಅ.5ರಿಂದ ಅ.11ರವರೆಗೆ ಗುಡುಗು ಸಹಿತ ಮಳೆಯಾಗಲಿದೆ. ಈ ಅವಧಿಯಲ್ಲಿ ಕೆಲವೆಡೆ ಮಳೆಗಿಂತ ಬಿರುಗಾಳಿ ಜಾಸ್ತಿ ಇರಲಿದೆ.

ಮುಖ್ಯಮಂತ್ರಿಯಾಗಿ ಸಿದ್ದು ಮುಂದುವರಿಕೆ

ಮೈಸೂರು: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇದ್ದಾರೆ,

ಹೈಕಮಾಂಡ್ ಬಿಟ್ಟು ಯಾರೇ ಮಾತನಾಡಿದರೂ ಅರ್ಥವಿಲ್ಲ

ಅವರೇ ಮುಂದುವರಿಯುತ್ತಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯಾ ಕಾಲಕ್ಕೆ ರಾಜಕೀಯ ನಿರ್ಧಾರಗಳನ್ನು ನಮ್ಮ ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ. ಹೈಕಮಾಂಡ್ ಬಿಟ್ಟು ಉಳಿದವರು ಏನೇ ಮಾತನಾಡಿದರೂ ಅದರಲ್ಲಿ ಪ್ರಯೋಜನವೂ ಇಲ್ಲ, ಅರ್ಥವೂ ಇಲ್ಲ' ಎಂದರು. ರಾಜಸ್ತಾನ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೆಮ್ಮಿನ ಸಿರಪ್ ಕುಡಿದು ಮಕ್ಕಳ ಸಾವು ಪ್ರಕರಣದ ಬಗ್ಗೆ ಮಾತನಾಡಿ, 11 ಮಕ್ಕಳು ಮೃತಪಟ್ಟಿರುವ ಸಂಗತಿ ವಿಷಾದಕರವಾಗಿದ್ದು, ಕೇಂದ್ರ ಸರಕಾರ ಮಕ್ಕಳ ಸಾವಿಗೂ ಮೊದಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿತ್ತು. ಮಾರು ಕಟ್ಟೆಗೆ ಔಷಧಿಯ ಬಿಡುಗಡೆ ಮಾಡುವ ಮುನ್ನವೇ ಪರೀಕ್ಷೆ ಮಾಡಬೇಕಿತ್ತು. ಈಗ ಅದನ್ನು ಬಳಸಬೇಡಿ ಎಂದು ಕೇಂದ್ರ ಹೇಳಿರುವುದು ಸರಿಯಾದ ಕ್ರಮವಲ್ಲ ಎಂದರು.

ಶಿಷ್ಟಾಚಾರ ಉಲ್ಲಂಘನೆಯಾಗಿಲ್ಲ

ದಸರಾ ಜಂಬೂಸವಾರಿಗೆ ಅರಮನೆ ಆವರಣದಲ್ಲಿ ಆಗಮಿಸುವಾಗ ತೆರೆದ ಜೀಪ್‌ನಲ್ಲಿ ಮೊಮ್ಮನಗನ್ನೂ ಕರೆದುಕೊಂಡು ಬಂದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಚರ್ಚೆಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅಲ್ಲಿ ಯಾವುದೇ ಶಿಷ್ಟಾಚಾರ ಉಲ್ಲಂಘನೆಯಾಗಿಲ್ಲ. ಅದು ಶಿಷ್ಟಾಚಾರದ ವ್ಯಾಪ್ತಿಗೆ ಬರುವುದೇ ಇಲ್ಲ. ಅದು ಕವಾಯತು ಅಥವಾ ಧ್ವಜವಂದನೆ ಅಲ್ಲ. ಜನರಿಗೆ ವಂದನೆ ಸಲ್ಲಿಸಲು ಎಲ್ಲರೂ ಒಟ್ಟಾಗಿ ಹೋದೆವಷ್ಟೆ. ದಸರಾ ಅಚರಣೆ ಬಗ್ಗೆ ಗೊತ್ತಿಲ್ಲದವರು ಸುಮ್ಮನೆ ವಿವಾದ ಮಾಡುತ್ತಾರಷ್ಟೆ' ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಹುಲಿ ಸಾವು ಪ್ರಕರಣ: ಪರಿಶೀಲನೆ

ಚಾಮರಾಜನಗರ: ಮಲೆ ಮಹದೇಶ್ವರ ವನಜೀವಿ ವಿಭಾಗದ ಪಚ್ಚೆದೊಡ್ಡಿ ಗ್ರಾಮದ ಬಳಿ ಹುಲಿ ಸಾವಾಗಿದ್ದ ಸ್ಥಳಕ್ಕೆ ಪಿಸಿಸಿಎಫ್ ಸ್ಮಿತಾ ಬಿಜೂರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿಧಾಮ ವ್ಯಾಪ್ತಿಯ ಪಚ್ಚೆದೊಡ್ಡಿ ಅರಣ್ಯದಲ್ಲಿ ನಡೆದ ಗಂಡು ಹುಲಿ ಹತ್ಯೆ ಪ್ರಕರಣವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಆದೇಶದಂತೆ ಶನಿವಾರದಿಂದ ಅಧಿಕೃತ ತನಿಖೆ ಆರಂಭಗೊಂಡಿದೆ. ಪಿಸಿಸಿಎಫ್ ಸ್ಮಿತಾ ಬಿಜ್ಜೂರು ಅವರ ನೇತೃತ್ವದಲ್ಲಿ ಎಪಿಸಿಸಿಎಫ್ ಮನೋಜ್ ರಂಜನ್ ಸೇರಿದಂತೆ ಇನ್ನಿತರರ ಅಧಿಕಾರಿಗಳ ನೇತೃತ್ವದ ತನಿಖಾ ತಂಡವು ಹನೂರು ಸಮೀಪದ ಪಚ್ಚೆದೊಡ್ಡಿ ಅರಣ್ಯ ಪ್ರದೇಶಕ್ಕೆ ಆಗಮಿಸಿ, ಅರಣ್ಯಾಧಿಕಾರಿಗಳಿಂದ ಪ್ರಾಥಮಿಕ ಮಾಹಿತಿ ಪಡೆದು, ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಹುಲಿ ಸಾವಾಗಿದ್ದ ಸ್ಥಳಕ್ಕೆ ಪಿಸಿಸಿಎಫ್ ಸ್ಮಿತಾ ಬಿಜೂರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಬ್ಬರು ಶಂಕಿತರು ವಶಕ್ಕೆ

ಮಲೆ ಮಹದೇಶ್ವರ(ಎಂಎಂ) ಬೆಟ್ಟದಲ್ಲಿ ಹುಲಿಗೆ ವಿಷಪ್ರಾಶನ ಮಾಡಿ ಹತ್ಯೆ ಮಾಡಿದ ಆರೋಪದ ಮೇಲೆ ಶಂಕಿತರನ್ನು ಶನಿವಾರ ವಶಕ್ಕೆ ಪಡೆಯಲಾಗಿದೆ. ಪಚ್ಚೆದೊಡ್ಡಿತಾಂಡಾ ನಿವಾಸಿಗಳಾದ ಪಚ್ಚೆಮಲ್ಲು ಮತ್ತು ಮಂಜುನಾಥ ಎಂಬುವವರನ್ನು ಜಿಲ್ಲೆಯ ಹನೂರು ವಲಯ ಅರಣ್ಯಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ ಹುಲಿಗೆ ವಿಷಪ್ರಾಶನ ಮಾಡಿ ಕೊಂದಿರುವುದಾಗಿ ತಿಳಿದುಬಂದಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಈ ಪ್ರದೇಶವನ್ನು ಹುಲಿ ಮೀಸಲು ಪ್ರದೇಶವೆಂದು ಘೋಷಿಸುವ ಬಗ್ಗೆ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿರುವುದಾಗಿ ತಿಳಿಸಿದ್ದಾರೆ. ಅ.2 ರಂದು 12 ವರ್ಷದ ಹುಲಿಯ ಮೃತದೇಹ ಪತ್ತೆಯಾಗಿದ್ದು, ಪ್ರಾಥಮಿಕ ತನಿಖೆಯ ಪ್ರಕಾರ, ಆ ಪ್ರಾಣಿಗೆ ವಿಷಪ್ರಾಶನ ಮಾಡಿರುವುದು ಕಂಡುಬಂದಿದೆ. ಈಗಾಗಲೇ ಹನೂರು ವಲಯ ಅರಣ್ಯಾಧಿಕಾರಿಗಳು ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಮತ್ತು ಪ್ರಾಥಮಿಕ ಮಾಹಿತಿ ಪ್ರಕಾರ ಹುಲಿಗೆ ವಿಷಪ್ರಾಶನ ಮಾಡಿ ಕೊಂದಿರುವುದಾಗಿ ತಿಳಿದುಬಂದಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಇಸ್ರೇಲ್ ಅಕ್ಷರಶಃ ಆಕಾಶದಲ್ಲಿ ಅಗೋಚರ ಕೋಟೆಯನ್ನು ಕಟ್ಟಿಕೊಂಡಿದೆ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ವಿಶ್ವ ಭೂಪಟದಲ್ಲಿ ಇಸ್ರೇಲ್ ಎಲ್ಲಿದೆ ಎಂದು ಹುಡುಕುವುದು ಕಷ್ಟ. ಗೂಗಲ್ ಮ್ಯಾಪ್‌ನಲ್ಲಿ ಮಧ್ಯಪ್ರಾಚ್ಯ ರಾಷ್ಟ್ರಗಳತ್ತ ದೃಷ್ಟಿ ಹಾಯಿಸಿ, ಪಿಂಚ್ ಮಾಡಿದರೆ ಮಾತ್ರ ಇಸ್ರೇಲ್ ಕಾಣಿಸಬಹುದು. ಅಷ್ಟು ಸಣ್ಣ ದೇಶವನ್ನು ವೈರಿ ರಾಷ್ಟ್ರಗಳು ಸುತ್ತುವರಿದಿವೆ. ಅಷ್ಟೇ ಅಲ್ಲ, ಬಹುತೇಕ ಎಲ್ಲ ದೇಶಗಳೂ ಒಂದಿಲ್ಲೊಂದು ನೆಪ ಹೇಳಿ ಇಸ್ರೇಲ್ ಜತೆ ಕಾದಾಟಕ್ಕೆ ನಿಂತಿವೆ. ಜೋರ್ಡಾನ್ ಮತ್ತು ಇರಾಕ್ ಆಚೆ ಇರುವ ಇರಾನ್, ಇಸ್ರೇಲ್ ಮೇಲೆ ನಿರಂತರ ದಾಳಿಯಲ್ಲಿ ನಿರತವಾಗಿದೆ. ಇಸ್ರೇಲಿನಿಂದ ಸುಮಾರು 2,227 ಕಿ.ಮೀ. ದೂರದಲ್ಲಿರುವ ಕತಾರ್ ಮತ್ತು ಇಷ್ಟೇ ದೂರದಲ್ಲಿರುವ ಯೆಮೆನ್ ಕೂಡ ಇರಾನಿನ ಆಣತಿಯ ಮೇರೆಗೆ, ಇಸ್ರೇಲ್ ಮೇಲೆ ದಾಳಿ ನಡೆಸುತ್ತಿವೆ. ಲೆಬನಾನ್ ಮತ್ತು ಗಾಜಾದಲ್ಲಿರುವ ಹಮಾಸ್ ಉಗ್ರರು ಸಹ ಮಗ್ಗುಲ ಮುಳ್ಳುಗಳಂತೆ ಕಾಡುತ್ತಿದ್ದಾರೆ. ಈ ಎಲ್ಲ ದೇಶಗಳು ಏಕಕಾಲಕ್ಕೆ ಟೆಕೆಟ್ ಅಥವಾ ಕ್ಷಿಪಣಿ ದಾಳಿ ಮಾಡಿದ್ದೇ ಆದರೆ, ಇಸ್ರೇಲ್ ಏಕಾಂಗಿಯಾಗಿ ಹೋರಾಡುವುದು ಕಷ್ಟ ಮತ್ತು ಈ ಕದನದಲ್ಲಿ ಗೆದ್ದು ಬಚಾವ್ ಆಗುವುದೂ ಕಷ್ಟ.

ಆದರೆ ಇಸ್ರೇಲ್ ಏಕಾಂಗಿಯಾಗಿ ಹೋರಾಡುತ್ತಿದೆ ಮತ್ತು ನಿರಂತರವಾಗಿ ಬಚಾವ್ ಆಗುತ್ತಿದೆ. ವೈರಿ ದೇಶಗಳು ಇಸ್ರೇಲ್ ಮೇಲೆ ವೈಮಾನಿಕ ದಾಳಿಯನ್ನೇ ಮಾಡಬೇಕು. ಅವು ಮಾಡುತ್ತಿರುವುದು ಅದನ್ನೇ. ಕಳೆದ 6 ತಿಂಗಳುಗಳಿಂದ, ಯೆಮೆನ್‌ನಲ್ಲಿರುವ ಹೌತಿ ಉಗ್ರರು ಇಸ್ರೇಲ್‌ನ ಆಯಕಟ್ಟಿನ ಪ್ರದೇಶಗಳನ್ನು ಗುರಿಯಾಗಿರಿಸಿಕೊಂಡು, 2,000 ಕಿ.ಮೀ. ದೂರದಿಂದ ನಿರಂತರ ಕ್ಷಿಪಣಿ ದಾಳಿಗಳನ್ನು ಮಾಡುತ್ತಿದ್ದಾರೆ. ಆದರೆ ವೈರಿರಾಷ್ಟ್ರಗಳ ಈ ದಾಳಿಯನ್ನು ಇಸ್ರೇಲ್ ವಿಫಲಗೊಳಿಸುತ್ತಿದೆ. 6 ತಿಂಗಳ ಹಿಂದೆ, ಒಂದು ಸಂದರ್ಭದಲ್ಲಿ ವೈರಿದೇಶಗಳು ಇಸ್ರೇಲಿನ ವಾಣಿಜ್ಯ ರಾಜಧಾನಿ ಟೆಲ್ ಅವಿವ್ ಅನ್ನು ಗುರಿಯಾಗಿಸಿಕೊಂಡು ಎಲ್ಲ ಕಡೆಗಳಿಂದ ಏಕಕಾಲಕ್ಕೆ ದಾಳಿಯನ್ನು ಆರಂಭಿಸಿದವು. ಇಸ್ರೇಲ್ ಬಚಾವ್ ಆಗುವುದು ಸುಲಭವಲ್ಲ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಆಗಲೂ ಇಸ್ರೇಲ್ ವೈರಿರಾಷ್ಟ್ರಗಳ ದುಸ್ಸಾಹಸವನ್ನು ಸದೆಬಡಿಯಿತು.

ಎಲ್ಲ ದೇಶಗಳೂ ತನ್ನ ಸುತ್ತಮುತ್ತ ಕೋಟೆ ಕಟ್ಟಿಕೊಂಡರೆ, ಇಸ್ರೇಲ್ ಆಕಾಶಕ್ಕೇ ಅಂಥ ವ್ಯವಸ್ಥೆಯನ್ನು ಮಾಡಿಕೊಂಡಿದೆ. ಇಸ್ರೇಲ್‌ನಲ್ಲಿ ಸುರಕ್ಷಿತ ಪ್ರದೇಶ ಅಂದ್ರೆ ಆಕಾಶ ಎಂಬ ಮಾತಿದೆ. ವಾಯುಮಾರ್ಗದಲ್ಲಿ ಬಂದು ಇಸ್ರೇಲ್ ಮೇಲೆ ದಾಳಿಮಾಡಿ ಜಯಿಸಲು ಸಾಧ್ಯವೇ ಇಲ್ಲ. ಇಸ್ರೇಲ್ ಅಕ್ಷರಶಃ ಆಕಾಶದಲ್ಲಿ ಅಗೋಚರ ಕೋಟೆಯನ್ನು ಕಟ್ಟಿಕೊಂಡಿದೆ! ಈ ಕಾರಣದಿಂದ ಇಷ್ಟೆಲ್ಲ ಕ್ಷಿಪಣಿ, ರಾಕೆಟ್ ದಾಳಿಗಳಾಗುತ್ತಿದ್ದರೂ, ಇಸ್ರೇಲ್ ಸುರಕ್ಷಿತವಾಗಿದೆ. ಇಸ್ರೇಲಿನಲ್ಲಿ ಒಂದು ಮಾತಿದೆ- ಆಕಾಶದಲ್ಲಿ ಹಾರುವ ಹದ್ದನ್ನು ಸಹ ಶಂಕಿಸದೇ ಇರಬೇಡ. ಅದು ಸಹ ಗೂಢಚಾರ (ಸ್ಪೈ) ಆಗಿರಬಹುದು. ಪಕ್ಷಿಗಳನ್ನು ಸಾಯಿಸಲೆಂದೇ ಇಸ್ರೇಲ್ ಸೇನೆಯಲ್ಲಿ ಒಂದು ಘಟಕವಿದೆ. ಅಷ್ಟರಮಟ್ಟಿಗೆ ಅಲ್ಲಿನ ಆಕಾಶವನ್ನು ಸ್ಯಾನಿಟೈಸ್ ಮಾಡಲಾಗುತ್ತದೆ. ಹೀಗಿರುವಾಗ ವೈಮಾನಿಕ ದಾಳಿಗೆ ಇಸ್ರೇಲ್ ಹೇಗೆ ಸಜ್ಜಾಗಿರಬಹುದು ಎಂಬುದನ್ನು ಊಹಿಸಬಹುದು. ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆಯು ಇಷ್ಟೊಂದು ಅದ್ಭುತವಾಗಿರಬಹುದು ಮತ್ತು ತಾಂತ್ರಿಕವಾಗಿ ಅಷ್ಟೊಂದು ನಿಖರವಾಗಿರಬಹುದು ಎಂಬ ಕಲ್ಪನೆಯೇ ಇರಲಿಲ್ಲ. ಅದು ವಿಶ್ವದ ಅತ್ಯಾಧುನಿಕ ಮತ್ತು ಪರಿಣಾಮಕಾರಿ ರಕ್ಷಣಾತ್ಮಕ ವ್ಯವಸ್ಥೆಗಳಲ್ಲಿ ಒಂದು. ಇಸ್ರೇಲ್ ತನ್ನ ಭೌಗೋಳಿಕ ಪರಿಸ್ಥಿತಿ ಮತ್ತು ಸುತ್ತಮುತ್ತಲಿನ ಬೆದರಿಕೆಗಳನ್ನು ಗಮನದಲ್ಲಿಟ್ಟುಕೊಂಡು ಮೂರು-ಪದರದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯ ಪ್ರತಿಯೊಂದು ಪದರವೂ ನಿರ್ದಿಷ್ಟ ರೀತಿಯ ಬೆದರಿಕೆಗಳನ್ನು ತಟಸ್ಥಗೊಳಿಸಲು ವಿನ್ಯಾಸಗೊಂಡಿದೆ. ಇವೆಲ್ಲವೂ ಒಟ್ಟಾಗಿ ಇಸ್ರೇಲ್‌ನ ವಾಯುಕ್ಷೇತ್ರಕ್ಕೆ ಸಮಗ್ರ ರಕ್ಷಣೆ ನೀಡುತ್ತವೆ. ಈ ವ್ಯವಸ್ಥೆಗಳು ಕೇವಲ ಕ್ಷಿಪಣಿಗಳನ್ನು ನಾಶಪಡಿಸುವುದಲ್ಲದೇ, ಪ್ರತಿಯೊಂದು ಕ್ಷಿಪಣಿಯೂ ಎಲ್ಲಿ ಬೀಳುತ್ತದೆ ಎಂಬುದನ್ನು ಲೆಕ್ಕ ಹಾಕಿ, ಹೆಚ್ಚು ಜನನಿಬಿಡ ಪ್ರದೇಶಗಳಿಗೆ ಬರುವ ಕ್ಷಿಪಣಿಗಳನ್ನು ಮಾತ್ರ ಹೊಡೆದುರುಳಿಸಿ ಸಂಪನ್ಮೂಲಗಳನ್ನು ಉಳಿಸುವ ಗುರಿ ಹೊಂದಿವೆ.

ಐರನ್ ಡೋಮ್ ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆಯ ಮೊದಲ ಮತ್ತು ಪ್ರಮುಖ ಪದರವಾಗಿದೆ. 2011ರಲ್ಲಿ ಕಾರ್ಯಾಚರಣೆಗೆ ಬಂದ ಈ ವ್ಯವಸ್ಥೆಯನ್ನು, ಮುಖ್ಯವಾಗಿ ಶಾರ್ಟ್-ರೇಂಜ್ ರಾಕೆಟ್‌ಗಳು ಮತ್ತು ಫಿರಂಗಿ ದಾಳಿಗಳನ್ನು ತಡೆಯಲು ವಿನ್ಯಾಸಗೊಳಿಸಲಾಗಿದೆ. ಇದರ ವ್ಯಾಪ್ತಿ 4ರಿಂದ 70 ಕಿಲೋಮೀಟರ್‌ವರೆಗೆ ಇದೆ. ಐರನ್ ಡೋಮ್‌ನ ಕಾರ್ಯವಿಧಾನವು 3 ಪ್ರಮುಖ ಹಂತಗಳಲ್ಲಿ ನಡೆಯುತ್ತದೆ. 1. ಶತ್ರುಗಳ ರಾಕೆಟ್ ಅಥವಾ ಶೆಲ್ ಅನ್ನು ರಾಡಾರ್ ವ್ಯವಸ್ಥೆಯು ಪತ್ತೆ ಮಾಡುತ್ತದೆ. 2. ಈ ರಾಡಾರ್‌ಗಳು ಹಾರುತ್ತಿರುವ ರಾಕೆಟ್‌ನ ಪಥ ಮತ್ತು ವೇಗವನ್ನು ನಿಖರವಾಗಿ ಲೆಕ್ಕಾಚಾರ ಮಾಡಿ, ಅದು ಯಾವ ಪ್ರದೇಶದಲ್ಲಿ ಬೀಳುತ್ತದೆ ಎಂಬುದನ್ನು ನಿರ್ಧರಿಸುತ್ತವೆ. ಇಲ್ಲಿ ಒಂದು ಪ್ರಮುಖ ಅಂಶವೆಂದರೆ, ಈ ವ್ಯವಸ್ಥೆಯು ರಾಕೆಟ್ ಜನನಿಬಿಡ ಪ್ರದೇಶದ ಮೇಲೆ ಬೀಳುವ ಸಾಧ್ಯತೆ ಇದ್ದರೆ ಮಾತ್ರ ಅದನ್ನು ತಡೆಹಿಡಿಯಲು ಕ್ರಮ ಕೈಗೊಳ್ಳುತ್ತದೆ. ಅದು ಖಾಲಿ ಪ್ರದೇಶಕ್ಕೆ ಬೀಳುತ್ತಿದ್ದರೆ ಅದನ್ನು ತಡೆಯದೇ, ಸಂಪನ್ಮೂಲಗಳನ್ನು ಉಳಿಸುತ್ತದೆ. 3. ರಾಕೆಟ್ ಜನನಿಬಿಡ ಪ್ರದೇಶಕ್ಕೆ ಬೀಳುತ್ತದೆ ಎಂದು ತಿಳಿದ ತಕ್ಷಣ, ಐರನ್ ಡೋಮ್ ತನ್ನ ತಮೀರ್ (Tamir) ಎಂಬ ಇಂಟರ್‌ಸೆಪ್ಟರ್ ಕ್ಷಿಪಣಿಯನ್ನು ಉಡಾಯಿಸುತ್ತದೆ. ಈ ಕ್ಷಿಪಣಿಯು ಶತ್ರು ರಾಕೆಟ್ ಅನ್ನು ಆಕಾಶದಲ್ಲಿಯೇ ಸ್ಫೋಟಿಸಿ ನಾಶಪಡಿಸುತ್ತದೆ. ಐರನ್ ಡೋಮ್‌ನ ಯಶಸ್ಸಿನ ಪ್ರಮಾಣ ಶೇ. 90ಕ್ಕೂ ಹೆಚ್ಚು. ಇದು ಪ್ಯಾಲೆಸ್ತೀನ್‌ನ ಗಾಜಾ ಮತ್ತು ಲೆಬನಾನ್‌ನ ಹಿಜ್ಬೊಲ್ಲಾ ಗುಂಪುಗಳಿಂದ ಉಡಾಯಿಸಲ್ಪಟ್ಟ ಸಾವಿರಾರು ರಾಕೆಟ್‌ಗಳಿಂದ ಇಸ್ರೇಲನ್ನು ರಕ್ಷಿಸಿದೆ.

ಎರಡನೆಯದು ಮಧ್ಯಮ ವ್ಯಾಪ್ತಿಯ ರಕ್ಷಣೆ. ಇದನ್ನು ಡೇವಿಡ್ಸ್ ಸ್ಲಿಂಗ್ (David's Sling) ಅಂತಾರೆ. 2017ರಿಂದ ಕಾರ್ಯಾಚರಣೆಯಲ್ಲಿರುವ ಈ ವ್ಯವಸ್ಥೆಯು, ಐರನ್ ಡೋಮ್‌ನ ವ್ಯಾಪ್ತಿಗಿಂತ ಹೆಚ್ಚಿನ ದೂರದಲ್ಲಿರುವ ಬೆದರಿಕೆಗಳನ್ನು ನಿಭಾಯಿಸಲು ವಿನ್ಯಾಸಗೊಂಡಿದೆ. ಇದರ ಪರಿಣಾಮಕಾರಿ ವ್ಯಾಪ್ತಿ 70ರಿಂದ 300 ಕಿ.ಮೀ. ಡೇವಿಡ್ಸ್ ಸ್ಲಿಂಗ್ ವ್ಯವಸ್ಥೆಯನ್ನು ದೊಡ್ಡ ಕ್ಯಾಲಿಬರ್ ರಾಕೆಟ್‌ಗಳು, ಶಾರ್ಟ್-ರೇಂಜ್ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಕ್ರೂಸ್ ಕ್ಷಿಪಣಿಗಳನ್ನು ತಡೆಯಲು ನಿರ್ಮಿಸಲಾಗಿದೆ. ಇದು ಐರನ್ ಡೋಮ್‌ಗಿಂತ ಹೆಚ್ಚು ಶಕ್ತಿಶಾಲಿ ಮತ್ತು ಹೆಚ್ಚಿನ ಎತ್ತರದಲ್ಲಿ ತಡೆಹಿಡಿಯುವ ಸಾಮರ್ಥ್ಯ ಹೊಂದಿದೆ. ಇದರ ಇಂಟರ್‌ಸೆಪ್ಟರ್ ಕ್ಷಿಪಣಿಗಳು ಹೆಚ್ಚು ವೇಗ ಮತ್ತು ನಿಖರತೆಯನ್ನು ಹೊಂದಿವೆ. ಈ ವ್ಯವಸ್ಥೆಯು ಶತ್ರು ಕ್ಷಿಪಣಿಗಳನ್ನು ಪತ್ತೆಹಚ್ಚಿ, ಅವುಗಳನ್ನು ತಡೆಯಲು ತನ್ನ ಇಂಟರ್‌ಸೆಪ್ಟರ್‌ಗಳನ್ನು ಉಡಾಯಿಸುತ್ತದೆ. ಇದನ್ನು ಅಮೆರಿಕದ ರಕ್ಷಣಾ ಸಂಸ್ಥೆ ರೇಥಿಯಾನ್ (Raytheon) ಜತೆ ಸೇರಿ ಇಸ್ರೇಲ್ ಅಭಿವೃದ್ಧಿಪಡಿಸಿದೆ.

ಇನ್ನೊಂದು ದೀರ್ಘ-ವ್ಯಾಪ್ತಿಯ ರಕ್ಷಣೆಯ ಆರೋ (Arrow) ವ್ಯವಸ್ಥೆ. ಇದು ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆಯ 3ನೇ ಮತ್ತು ಅಂತಿಮ ಪದರವಾಗಿದೆ. ಇದು ದೂರದ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಮತ್ತು ಖಂಡಾಂತರ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಯಲು ವಿನ್ಯಾಸಗೊಂಡಿದೆ. ಈ ವ್ಯವಸ್ಥೆಯು 2 ಭಾಗಗಳನ್ನು ಹೊಂದಿದೆ: ಆರೋ-2 ಮತ್ತು ಆರೋ-3.

2017ರಿಂದ ಕಾರ್ಯನಿರ್ವಹಿಸುತ್ತಿರುವ ಆರೋ-2, 300ರಿಂದ 500 ಕಿ.ಮೀ. ವ್ಯಾಪ್ತಿಯಲ್ಲಿ ಹಾರುವ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಯುತ್ತದೆ. ಈ ಕ್ಷಿಪಣಿಗಳು ವಾತಾವರಣದೊಳಗೆ (within the atmosphere) ಇರುವಾಗಲೇ ಅವನ್ನು ನಾಶಪಡಿಸಲು ಇದು ವಿನ್ಯಾಸಗೊಂಡಿದೆ. ಈ ವ್ಯವಸ್ಥೆಯು ಶತ್ರು ಕ್ಷಿಪಣಿಯ ಉಡಾವಣೆಯನ್ನು ಪತ್ತೆ ಹಚ್ಚಲು ಮತ್ತು ಅದರ ಪಥವನ್ನು ಲೆಕ್ಕಾಚಾರ ಮಾಡಲು ಬೃಹತ್ ರಾಡಾರ್‌ಗಳನ್ನು ಬಳಸುತ್ತದೆ. ಆರೋ-3 ವ್ಯವಸ್ಥೆಯು ಎಲ್ಲ ವಾಯುರಕ್ಷಣಾ ವ್ಯವಸ್ಥೆಗಳಲ್ಲಿ ಅತ್ಯಂತ ಮುಂದುವರಿದ ತಂತ್ರಜ್ಞಾನವನ್ನು ಹೊಂದಿದೆ.

ಇದನ್ನು ಸಹ ಖಂಡಾಂತರ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು (ICBMs) ತಡೆಯಲು ವಿನ್ಯಾಸಗೊಳಿಸಲಾಗಿದೆ. ಈ ಕ್ಷಿಪಣಿಗಳು ವಾತಾವರಣದ ಹೊರಗೆ ಹಾರುತ್ತವೆ. ಆರೋ-3ರ ಇಂಟರ್‌ಸೆಪ್ಟರ್ ಕ್ಷಿಪಣಿಯು ವಾತಾವರಣದ ಹೊರಗಡೆ ಹಾರುವ ಶತ್ರು ಕ್ಷಿಪಣಿಯನ್ನು ಗುರಿಯಾಗಿಸಿಕೊಂಡು, ಅದನ್ನು ನೇರವಾಗಿ ಡಿಕ್ಕಿ ಹೊಡೆದು ನಾಶಪಡಿಸುತ್ತದೆ (hit-to-kill technology). ಇದು ಸ್ಫೋಟಗೊಳ್ಳುವ ಬದಲು ನೇರವಾಗಿ ಘರ್ಷಣೆಗೊಂಡು ನಾಶಪಡಿಸುವುದರಿಂದ ಶತ್ರು ಕ್ಷಿಪಣಿಯ ಸ್ಫೋಟಕಗಳು ಇಸ್ರೇಲ್‌ನ ಭೂಭಾಗದ ಮೇಲೆ ಬೀಳದಂತೆ ತಡೆಯುತ್ತದೆ.

ಈ 3 ಪದರಗಳೂ ಪರಸ್ಪರ ಸಂಪರ್ಕದಲ್ಲಿರುತ್ತವೆ ಮತ್ತು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಉದಾಹರಣೆಗೆ, ದೀರ್ಘ ವ್ಯಾಪ್ತಿಯ ಕ್ಷಿಪಣಿಯು ಆರೋ ವ್ಯವಸ್ಥೆಯಿಂದ ತಪ್ಪಿಸಿಕೊಂಡರೆ ಅಥವಾ ಅದರ ವ್ಯಾಪ್ತಿಯನ್ನು ಪ್ರವೇಶಿಸಿದರೆ, ಡೇವಿಡ್ಸ್ ಸ್ಲಿಂಗ್ ಅಥವಾ ಐರನ್ ಡೋಮ್ ಅದನ್ನು ತಡೆಹಿಡಿಯಲು ಪ್ರಯತ್ನಿಸುತ್ತವೆ. ಈ ಬಹುಪದರ ವ್ಯವಸ್ಥೆಯು ಇಸ್ರೇಲ್‌ನ ರಕ್ಷಣಾ ಭದ್ರತೆಗೆ ಭದ್ರ ಬುನಾದಿಯನ್ನು ಒದಗಿಸಿದೆ.

ಭವಿಷ್ಯದಲ್ಲಿ, ಇಸ್ರೇಲ್ ಈ ತಂತ್ರಜ್ಞಾನವನ್ನು ಇನ್ನಷ್ಟು ಸುಧಾರಿಸುತ್ತಿದೆ, ವಿಶೇಷವಾಗಿ ಲೇಸರ್ ಆಧಾರಿತ ವಾಯುರಕ್ಷಣಾ ವ್ಯವಸ್ಥೆಗಳ (Laser-based air defense systems) ಮೇಲೆ ಗಮನ ಹರಿಸಿದೆ. ಇವು ಕ್ಷಿಪಣಿಗಳನ್ನು ನಾಶಪಡಿಸಲು ಹೆಚ್ಚಿನ ದಕ್ಷತೆ ಮತ್ತು ಕಡಿಮೆ ವೆಚ್ಚದ ವಿಧಾನಗಳನ್ನು ಒದಗಿಸುತ್ತವೆ. ಒಟ್ಟಾರೆಯಾಗಿ, ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆಯು ತಾಂತ್ರಿಕ ನಾವೀನ್ಯ ಮತ್ತು ನಿರಂತರ ರಕ್ಷಣಾ ಅವಶ್ಯಕತೆಗಳ ನಡುವಿನ ಸಮತೋಲನವನ್ನು ಪ್ರತಿಬಿಂಬಿಸುತ್ತದೆ.

ಇದರ ಜತೆಗೆ, ಸ್ಕಾರ್ಪಿಯಸ್ ಇಲೆಕ್ಟ್ರಾನಿಕ್ ವಾರ್‌ಫೇರ್ (EW) ವ್ಯವಸ್ಥೆ ಸಹ ಜಾಗೃತವಾಗಿದೆ. ಸ್ಕಾರ್ಪಿಯಸ್ ಎನ್ನುವುದು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ (Elbit Systems) ಕಂಪನಿಯು ಅಭಿವೃದ್ಧಿಪಡಿಸಿದ ಮುಂದಿನ ತಲೆಮಾರಿನ ಒಂದು ಇಲೆಕ್ಟ್ರಾನಿಕ್ ವಾರ್‌ಫೇರ್ ವ್ಯವಸ್ಥೆ. ಇದರ ಮುಖ್ಯ ಉದ್ದೇಶವೆಂದರೆ, ಇಲೆಕ್ಟ್ರೋಮ್ಯಾಗ್ನೆಟಿಕ್ ಸ್ಪೆಕ್ಟ್ರಮ್ (ವಿದ್ಯುತ್ಕಾಂತೀಯ ವರ್ಣಪಟಲ)ನ್ನು ಬಳಸಿಕೊಂಡು ಶತ್ರುಗಳ ಬೆದರಿಕೆಗಳನ್ನು ನಿಷ್ಕ್ರಿಯಗೊಳಿಸುವುದು. ಇದು ಸಾಂಪ್ರದಾಯಿಕ ಕ್ಷಿಪಣಿಗಳು ಅಥವಾ ಬಾಂಬ್‌ಗಳ ಬದಲು ವಿದ್ಯುತ್ಕಾಂತೀಯ ತರಂಗಗಳನ್ನು ಬಳಸುತ್ತದೆ. ಇದು ಒಂದು ರೀತಿಯಲ್ಲಿ 'ಸಾಫ್ಟ್-ಕಿಲ್' ತಂತ್ರಜ್ಞಾನ. ಇದು ಒಂದೇ ಸಮಯದಲ್ಲಿ ಸಾವಿರಾರು ಗುರಿಗಳನ್ನು ಟ್ರ್ಯಾಕ್ ಮಾಡುತ್ತದೆ ಮತ್ತು ಅವುಗಳಿಗೆ ತಕ್ಕ ಪ್ರತಿಕ್ರಿಯೆಯನ್ನು ನೀಡುತ್ತದೆ. ಈ ವ್ಯವಸ್ಥೆಯನ್ನು ರೇಡಾರ್ ವ್ಯವಸ್ಥೆಗಳು, ಸಂವಹನ ಜಾಲಗಳು ಮತ್ತು ಇತರ ಇಲೆಕ್ಟ್ರಾನಿಕ್ ಉಪಕರಣಗಳ ಮೇಲೆ ದಾಳಿಮಾಡಲು ವಿನ್ಯಾಸಗೊಳಿಸಲಾಗಿದೆ. ಇದು ಶತ್ರುಗಳ ಉಪಕರಣಗಳಿಗೆ ತಪ್ಪು ಸಂಕೇತಗಳನ್ನು ಕಳುಹಿಸುತ್ತದೆ, ಗೊಂದಲ ಸೃಷ್ಟಿಸುತ್ತದೆ ಅಥವಾ ಅವುಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುತ್ತದೆ. ಸಾಂಪ್ರದಾಯಿಕ ಯುದ್ಧದಲ್ಲಿ, ಶತ್ರುಗಳ ಉಪಕರಣಗಳನ್ನು ನಾಶಮಾಡಲು ಕ್ಷಿಪಣಿಗಳನ್ನು ಬಳಸಲಾಗುತ್ತದೆ. ಆದರೆ ಈ ವಿಧಾನವು ಗಂಭೀರವಾದ ನಾಶಕ್ಕೆ ಕಾರಣವಾಗುತ್ತದೆ. 'ಸಾಫ್ಟ್-ಕಿಲ್' ಎಂಬುದು ಯಾವುದೇ ಭೌತಿಕ ಹಾನಿಯಾಗದಂತೆ ಶತ್ರುಗಳ ಇಲೆಕ್ಟ್ರಾನಿಕ್ ಉಪಕರಣಗಳನ್ನು ನಿಷ್ಕ್ರಿಯಗೊಳಿಸಿ ಯುದ್ಧದ ನಿಯಮಗಳನ್ನು ಬದಲಾಯಿಸಬಹುದಾದ ಒಂದು ಪ್ರಮುಖ ತಂತ್ರಜ್ಞಾನವಾಗಿದೆ.

ಇಷ್ಟಾಗಿಯೂ 2024ರ ಅಕ್ಟೋಬರ್ 1ರಂದು ಇರಾನ್‌ನಿಂದ ಉಡಾಯಿಸಲಾದ ಕೆಲವು ಕ್ಷಿಪಣಿಗಳು ಜೆರುಸಲೆಮ್ ಮೇಲೆ ಕಾಣಿಸಿಕೊಂಡವು. ಈ ಘಟನೆಯು ಇಸ್ರೇಲ್‌ನ ರಕ್ಷಣಾ ವ್ಯವಸ್ಥೆಯಲ್ಲಿನ ಲೋಪವನ್ನು ಬಹಿರಂಗಗೊಳಿಸಿತು. ರಕ್ಷಣಾ ವ್ಯವಸ್ಥೆಯು ಯಶಸ್ವಿಯಾಗಿ ಕೆಲಸ ಮಾಡಿದರೂ, ಕೆಲವು ಕ್ಷಿಪಣಿಗಳು ಗುರಿಯನ್ನು ತಲುಪಿದವು. ಇದಕ್ಕೆ ಕಾರಣ, ದೊಡ್ಡ ಸಂಖ್ಯೆಯ ದಾಳಿ ಅಥವಾ ದಾಳಿಯ ವೇಗ ಮತ್ತು ಸಂಕೀರ್ಣತೆ. ಶತ್ರುಗಳು ರಕ್ಷಣಾ ವ್ಯವಸ್ಥೆಯನ್ನು ನಿಭಾಯಿಸಲು ಹೊಸ ತಂತ್ರಗಳನ್ನು ಬಳಸುವುದನ್ನು ಮನಗಂಡ ಇಸ್ರೇಲ್, ಶೀಘ್ರವಾಗಿ ತನ್ನ ಲೋಪವನ್ನು ಸರಿಪಡಿಸಿಕೊಂಡಿತು.

ಜೇನುನೊಣಗಳಿಲ್ಲದೇ ಜೇನುತುಪ್ಪ

ಮೊನ್ನೆ ಇಸ್ರೇಲ್‌ಗೆ ಹೋದಾಗ ನಮ್ಮ ಗೈಡ್ ಒಂದು ಆಸಕ್ತಿಕರವಾದ ವಿಷಯವನ್ನು ಹೇಳಿದ. ಜೇನುತುಪ್ಪವನ್ನು ಜೇನುಹುಳುಗಳೇ ತಯಾರಿಸಬೇಕು ತಾನೇ? ಆದರೆ ಅಲ್ಲಿನ ವಿಜ್ಞಾನಿಗಳ ತಂಡವೊಂದು ಜೇನುಹುಳುಗಳನ್ನು ಬಳಸದೇ ಜೇನುತುಪ್ಪವನ್ನು ಉತ್ಪಾದಿಸಿದೆಯಂತೆ. ಇದಕ್ಕಾಗಿ ಅವರು ಅಂತಾರಾಷ್ಟ್ರೀಯ ಪ್ರಶಸ್ತಿಯನ್ನೂ ಗೆದ್ದಿದ್ದಾರಂತೆ. ಇದನ್ನು ಕೇಳಿದಾಗ ನನ್ನ ಕಿವಿಗಳು ಆಂಟೇನಾಗಳಾದವು. ಆಗ ನಮ್ಮ ಗೈಡ್ ಈ ಕುರಿತು ತನ್ನ ಮೊಬೈಲಿನಲ್ಲಿರುವ ಒಂದು ಪುಟ್ಟ ವಿಡಿಯೋ ತೋರಿಸಿದ.

ಹಾಗಾದರೆ, ಜೇನುನೊಣಗಳಿಲ್ಲದೇ ಜೇನುತುಪ್ಪ ತಯಾರಿಸುವುದು ಹೇಗೆ? ಈ ತಂಡದ ಪ್ರಮುಖ ಆವಿಷ್ಕಾರವೆಂದರೆ ಬ್ಯಾಸಿಲಸ್ ಸಬ್ಟಿಲಿಸ್ (Bacillus subtilis) ಎಂಬ ಬ್ಯಾಕ್ಟೀರಿಯಾವನ್ನು ಪರಿಣಾಮಕಾರಿಯಾಗಿ ಬಳಸಿರುವುದು. ಜೇನುನೊಣಗಳು ಹೂವಿನ ಮಕರಂದವನ್ನು ಜೇನುತುಪ್ಪವಾಗಿ ಪರಿವರ್ತಿಸಲು ಕೆಲವು ನಿರ್ದಿಷ್ಟ ಕಿಣ್ವಗಳನ್ನು (enzymes) ಬಳಸುತ್ತವೆ. ಈ ವಿಜ್ಞಾನಿಗಳು ಆ ಕಿಣ್ವಗಳನ್ನು ಉತ್ಪಾದಿಸುವ ಜೀನ್‌ಗಳನ್ನು ಗುರುತಿಸಿ, ಅವುಗಳನ್ನು ಬ್ಯಾಸಿಲಸ್ ಸಬ್ಟಿಲಿಸ್ ಬ್ಯಾಕ್ಟೀರಿಯಾದ ಡಿಎನ್‌ಎಗೆ ಸೇರಿಸಿದರು. ಹೀಗೆ, ಬ್ಯಾಕ್ಟೀರಿಯಾಗಳು ಜೇನುನೊಣಗಳ ಹೊಟ್ಟೆಯಲ್ಲಿ ನಡೆಯುವ ಪ್ರಕ್ರಿಯೆಯನ್ನು ಅನುಕರಿಸುವುದನ್ನು ಕಲಿತುಕೊಳ್ಳುತ್ತವೆ. ಅವುಗಳು ಅದೇ ಕಿಣ್ವಗಳನ್ನು ಉತ್ಪಾದಿಸಿ ಸಕ್ಕರೆ ಮಿಶ್ರಣವನ್ನು ಜೇನುತುಪ್ಪವಾಗಿ ಪರಿವರ್ತಿಸುತ್ತವೆ. ಈ ಪ್ರಕ್ರಿಯೆಯಿಂದ ತಯಾರಿಸಿದ ಜೇನುತುಪ್ಪವು ನಿಜವಾದ ಜೇನುತುಪ್ಪದಂತೆಯೇ ಸಕ್ಕರೆ ಅಂಶ ಮತ್ತು ಗುಣಲಕ್ಷಣಗಳನ್ನು ಹೊಂದಿದೆ.

ಈ ಸಂಶೋಧನೆಯು ಹಲವಾರು ಕಾರಣಗಳಿಗಾಗಿ ಮಹತ್ವಪೂರ್ಣವಾಗಿದೆ. ಜಗತ್ತಿನಾದ್ಯಂತ ಜೇನುನೊಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಇದು ಪರಿಸರ ಮತ್ತು ಆಹಾರ ಸರಪಳಿಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಜೇನುತುಪ್ಪವನ್ನು ತಯಾರಿಸಲು ನೊಣಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡುವುದು ಈ ಸಮಸ್ಯೆಗೆ ಒಂದು ಪರಿಹಾರ ನೀಡುತ್ತದೆ. ಜೇನುತುಪ್ಪವು ಪ್ರಾಣಿ ಮೂಲದ ಉತ್ಪನ್ನವಾಗಿರುವುದರಿಂದ, ವೇಗನ್‌ಗಳು ಅದನ್ನು ಬಳಸುವುದಿಲ್ಲ. ಆದರೆ ಈ ಬ್ಯಾಕ್ಟೀರಿಯಾದಿಂದ ತಯಾರಿಸಿದ ಜೇನುತುಪ್ಪ ಸಂಪೂರ್ಣವಾಗಿ ಪ್ರಾಣಿರಹಿತವಾಗಿದ್ದು, ವೇಗನ್‌ಗಳು ಅದನ್ನು ಬಳಸಬಹುದು. ಈ ತಂತ್ರಜ್ಞಾನದ ಮೂಲಕ, ತಯಾರಕರು ಜೇನುತುಪ್ಪದ ರುಚಿ, ಬಣ್ಣ ಮತ್ತು ಆರೋಗ್ಯ ಗುಣಗಳನ್ನು ನಿಯಂತ್ರಿಸಬಹುದು, ಆ ಮೂಲಕ ವಿಶಿಷ್ಟ ಉತ್ಪನ್ನಗಳನ್ನು ಸೃಷ್ಟಿಸಬಹುದು. ಇದು ನೈಸರ್ಗಿಕ ಜೇನುತುಪ್ಪ ಉತ್ಪಾದನೆಯಾಗಿರುವುದರಿಂದ ಪರಿಸರಕ್ಕೆ ಹಾನಿ ಉಂಟುಮಾಡುವುದಿಲ್ಲ. ಈ ಆವಿಷ್ಕಾರವು ಕೇವಲ ಒಂದು ವೈಜ್ಞಾನಿಕ ಸಾಧನೆಯಷ್ಟೇ ಅಲ್ಲ, ಬದಲಾಗಿ ಭವಿಷ್ಯದ ಆಹಾರ ತಂತ್ರಜ್ಞಾನದಲ್ಲಿ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಇದು ಜೇನುನೊಣಗಳ ಸಂರಕ್ಷಣೆಗೆ ಸಹಕಾರಿಯಾಗಿದೆ ಮತ್ತು ಜನರಿಗೆ ಪರಿಸರಸ್ನೇಹಿ ಪರ್ಯಾಯವನ್ನು ಒದಗಿಸಿದಂತಾಗಿದೆ.

ಚೆಕ್ ಮತ್ತು ಹೀಬ್ರೂ ಕ್ಯಾಲೆಂಡರ್

ಇಸ್ರೇಲಿಗಳು ತಮ್ಮ ಭಾಷೆಯನ್ನು ಅತಿಯಾಗಿ ಪ್ರೀತಿಸುವವರು. ಅವರಿಗೆ ಹೀಬ್ರೂ ಅಂದ್ರೆ ಪ್ರಾಣ. ಭಾಷೆಯ ವಿಷಯದಲ್ಲಿ ಯಾವ ಕಾರಣಕ್ಕೂ ಅವರು ರಾಜಿ ಆಗುವುದಿಲ್ಲ. ಇಸ್ರೇಲ್‌ನಲ್ಲಿ ಅಧಿಕೃತ ದಾಖಲೆಗಳು ಮತ್ತು ಚೆಕ್‌ಗಳ ಮೇಲೆ ಗ್ರೆಗೋರಿಯನ್ ದಿನಾಂಕದ ಜತೆಗೆ (ಅಥವಾ ಅದಕ್ಕೆ ಬದಲಾಗಿ) ಯಹೂದಿ (ಹೀಬ್ರೂ) ಕ್ಯಾಲೆಂಡರ್ ದಿನಾಂಕವನ್ನು ಬರೆಯುವುದು ಕಾನೂನುಬದ್ಧವಾಗಿದೆ. ಈ ಪದ್ಧತಿಯು ಆ ದೇಶದ ಸಾಂಸ್ಕೃತಿಕ ಮತ್ತು ಧಾರ್ಮಿಕ ಅನನ್ಯತೆಯ ಪ್ರತೀಕವೇ ಸರಿ.

ಇಸ್ರೇಲ್ ಒಂದು ಆಧುನಿಕ ರಾಷ್ಟ್ರವಾಗಿದ್ದರೂ, ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತದೆ. ಅಧಿಕೃತವಾಗಿ, ಇಸ್ರೇಲ್‌ನಲ್ಲಿ ಎರಡು ಕ್ಯಾಲೆಂಡರ್‌ಗಳನ್ನು ಬಳಸಲಾಗುತ್ತದೆ. ಮೊದಲನೆಯದು, ಗ್ರೆಗೋರಿಯನ್ ಕ್ಯಾಲೆಂಡರ್. ಇದು ವಿಶ್ವದಾದ್ಯಂತ ವ್ಯಾಪಕವಾಗಿ ಬಳಸುವ ಸೌರ ಕ್ಯಾಲೆಂಡರ್. ವ್ಯಾಪಾರ, ಹಣಕಾಸು ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಿಗೆ ಇದನ್ನು ಬಳಸಲಾಗುತ್ತದೆ. ಎರಡನೆಯದು, ಯಹೂದಿ (ಹೀಬ್ರೂ) ಕ್ಯಾಲೆಂಡರ್. ಇದು ಯಹೂದಿ ಸಮುದಾಯದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ಆಧಾರ. ಹಬ್ಬಗಳು, ಧಾರ್ಮಿಕ ಆಚರಣೆಗಳು ಮತ್ತು ಪ್ರಮುಖ ಘಟನೆಗಳ ದಿನಾಂಕಗಳನ್ನು ಈ ಕ್ಯಾಲೆಂಡರ್ ನಿರ್ಧರಿಸುತ್ತದೆ. ಇದು ಚಂದ್ರನ ಹಂತಗಳನ್ನು ಮತ್ತು ಸೂರ್ಯನ ಚಲನೆಯನ್ನು ಆಧರಿಸಿದ ಒಂದು ಚಂದ್ರ-ಸೌರ ಕ್ಯಾಲೆಂಡರ್.

ಇಸ್ರೇಲ್‌ನ ಕಾನೂನು ಪ್ರಕಾರ, ಸರಕಾರಿ ಕಚೇರಿಗಳು, ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಹೀಬ್ರೂ ದಿನಾಂಕವನ್ನು ಸ್ವೀಕರಿಸಬೇಕು. ಆದ್ದರಿಂದ, ಒಬ್ಬ ವ್ಯಕ್ತಿ ಚೆಕ್ ಬರೆಯುವಾಗ, ಕೇವಲ ಹೀಬ್ರೂ ದಿನಾಂಕವನ್ನು ಬಳಸಿದರೆ ಅದು ಮಾನ್ಯವಾಗುತ್ತದೆ. ಇದು ಯಹೂದಿ ಸಂಸ್ಕೃತಿಯ ಭಾಗವಾಗಿದ್ದು, ದೇಶದ ಅಧಿಕೃತ ವ್ಯವಸ್ಥೆಗಳಲ್ಲಿ ಅದರ ಪ್ರಾಮುಖ್ಯವನ್ನು ತೋರಿಸುತ್ತದೆ.

ಉದಾಹರಣೆಗೆ, ಒಬ್ಬ ವ್ಯಕ್ತಿ ಜನವರಿ 1, 2025ರಂದು ಚೆಕ್ ಬರೆದರೆ, ಅದರ ಮೇಲೆ ಯಹೂದಿ ಕ್ಯಾಲೆಂಡರ್ ಪ್ರಕಾರ '2 Tevet 5785' ಎಂದು ಬರೆಯಬಹುದು. ಎರಡೂ ದಿನಾಂಕಗಳು ಮಾನ್ಯವಾಗಿರುತ್ತವೆ ಮತ್ತು ಬ್ಯಾಂಕುಗಳು ಅದನ್ನು ಅಂಗೀಕರಿಸುತ್ತವೆ. ಈ ನಿಯಮವು ಇಸ್ರೇಲ್‌ನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಅಲ್ಲಿ ಆಧುನಿಕತೆಯು ಸಾಂಪ್ರದಾಯಿಕ ಮೌಲ್ಯಗಳೊಂದಿಗೆ ಸಹಬಾಳ್ವೆ ನಡೆಸುತ್ತದೆ. ಯಹೂದಿ ಪರಂಪರೆಯನ್ನು ಗೌರವಿಸುವುದು ಮತ್ತು ಅದನ್ನು ದೈನಂದಿನ ಜೀವನದಲ್ಲಿ ಸಕ್ರಿಯವಾಗಿ ಉಳಿಸಿಕೊಳ್ಳುವುದನ್ನು ಅಲ್ಲಿನ ಸರಕಾರ ಪ್ರೋತ್ಸಾಹಿಸುತ್ತಾ ಬಂದಿದೆ.

ಐನ್‌ಸ್ಟೈನ್ ಹಾಗೇಕೆ ಮಾಡಿದರು?

ನಿಮಗೆ ಗೊತ್ತಿರಬಹುದು, ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಪಕ್ಕಾ ಯಹೂದಿ ಎಂದು. ಆದರೆ ಅವರಿಗೆ ಇಸ್ರೇಲ್‌ನ ಅಧ್ಯಕ್ಷರಾಗುವಂತೆ ಆಹ್ವಾನವನ್ನು ನೀಡಲಾಗಿತ್ತು ಎಂಬ ಸಂಗತಿ ಗೊತ್ತಾ? 1952ರ ನವೆಂಬರ್‌ನಲ್ಲಿ, ಇಸ್ರೇಲ್‌ನ ಮೊದಲ ಅಧ್ಯಕ್ಷ ಚೈಮ್ ವೈಜ್ಮನ್ ನಿಧನರಾದ ನಂತರ, ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕಾಗಿತ್ತು. ಈ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎಂಬ ಪ್ರಶ್ನೆ ಎದುರಾಯಿತು. ಹತ್ತಾರು ಹೆಸರುಗಳು ಪ್ರಸ್ತಾಪವಾದವು. ಇಸ್ರೇಲ್‌ನ ಪ್ರಧಾನ ಮಂತ್ರಿಯಾಗಿದ್ದ ಡೇವಿಡ್ ಬೆನ್-ಗುರಿಯನ್ ಅವರು ಆಲ್ಬರ್ಟ್ ಐನ್‌ಸ್ಟೈನ್ ಅವರಿಗೆ ಈ ಹುದ್ದೆಯನ್ನು ನೀಡಲು ನಿರ್ಧರಿಸಿದರು. ಈ ಪ್ರಸ್ತಾಪವನ್ನು ನ್ಯೂಯಾರ್ಕ್‌ನಲ್ಲಿರುವ ಇಸ್ರೇಲ್ ರಾಯಭಾರಿ ಮೂಲಕ ಐನ್‌ಸ್ಟೈನ್ ಅವರಿಗೆ ತಲುಪಿಸಲಾಯಿತು.

ಐನ್‌ಸ್ಟೈನ್ ಅವರ ಹೆಸರನ್ನು ಸೂಚಿಸುವುದರ ಹಿಂದೆ ಹಲವಾರು ಕಾರಣಗಳಿದ್ದವು. ಐನ್‌ಸ್ಟೈನ್ ಆಗಲೇ ವಿಶ್ವದ ಅತ್ಯಂತ ಪ್ರಸಿದ್ಧ ಮತ್ತು ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ನೀಡುವ ಗೌರವವು ಇಸ್ರೇಲ್‌ಗೂ ಗೌರವ ತರುತ್ತದೆ ಎಂದು ಬೆನ್-ಗುರಿಯನ್ ನಂಬಿದ್ದರು. ಮೂಲತಃ ಯಹೂದಿ ಜನಾಂಗಕ್ಕೆ ಸೇರಿದ್ದ ಐನ್‌ಸ್ಟೈನ್ ಜಿಯೋನಿಸಂ ಆಂದೋಲನಕ್ಕೆ ಬೆಂಬಲ ನೀಡಿದ್ದರು. ಹೊಸದಾಗಿ ಸ್ಥಾಪಿತವಾದ ಇಸ್ರೇಲ್ ದೇಶಕ್ಕೆ ಅವರಂಥ ಜಾಗತಿಕ ವ್ಯಕ್ತಿತ್ವದ ನಾಯಕನ ಅಗತ್ಯವಿದೆ ಎಂದು ಬೆನ್ ಗುರಿಯನ್ ಭಾವಿಸಿದ್ದರು. ಐನ್‌ಸ್ಟೈನ್ ಈ ಪ್ರಸ್ತಾಪವನ್ನು ನಿರೀಕ್ಷಿಸಿರಲಿಲ್ಲ. ತಕ್ಷಣ ಅವರಿಗೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ತಿಳಿಯಲಿಲ್ಲ. ತಮ್ಮ ನಿಲುವೇನು ಎಂಬುದನ್ನು ಪತ್ರದ ಮುಖೇನ ತಿಳಿಸುವುದಾಗಿ ಹೇಳಿದರು. ಯೋಚಿಸಲು ತುಸು ಕಾಲಾವಕಾಶ ತೆಗೆದುಕೊಳ್ಳುವುದು ಅವರ ಉದ್ದೇಶವಾಗಿತ್ತು.

ಇಸ್ರೇಲ್ ಪ್ರಧಾನಿ ಅವರ ಪ್ರಸ್ತಾಪಕ್ಕೆ ಐನ್‌ಸ್ಟೈನ್ ಗೌರವದಿಂದ ಪ್ರತಿಕ್ರಿಯಿಸುತ್ತಾ ಈ ಹುದ್ದೆಯನ್ನು ನಯವಾಗಿ ನಿರಾಕರಿಸಿದರು. ಆ ಪತ್ರದಲ್ಲಿ ಅವರು ತಮ್ಮ ನಿರಾಕರಣೆಗೆ ಕೆಲವು ಕಾರಣಗಳನ್ನು ನೀಡಿದ್ದರು. ಜನರೊಂದಿಗೆ ಸರಿಯಾಗಿ ವ್ಯವಹರಿಸಲು ಮತ್ತು ಅಧಿಕೃತ ಕಾರ್ಯಗಳನ್ನು ನಿರ್ವಹಿಸಲು ತಮಗೆ ಸಾಕಷ್ಟು ಅನುಭವವಿಲ್ಲ ಮತ್ತು ರಾಜಕೀಯಕ್ಕಿಂತ ವೈಜ್ಞಾನಿಕ ವಿಷಯಗಳಿಗೆ ತಮಗೆ ಹೆಚ್ಚು ಆಸಕ್ತಿ ಇರುವುದರಿಂದ ತಾವು ಈ ಕೋರಿಕೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಐನ್‌ಸ್ಟೈನ್ ಸ್ಪಷ್ಟಪಡಿಸಿದ್ದರು.

ತಮ್ಮ ಜೀವನವನ್ನು ವಿಜ್ಞಾನ ಮತ್ತು ಭೌತಶಾಸ್ತ್ರಕ್ಕೆ ಮೀಸಲಿಟ್ಟಿರುವುದರಿಂದ, ರಾಜಕೀಯ ಹುದ್ದೆ ತನ್ನ ವೈಜ್ಞಾನಿಕ ಕಾರ್ಯಗಳಿಗೆ ಅಡ್ಡಿಯಾಗಬಹುದು ಮತ್ತು ತಮಗೆ ಈಗ 73 ವರ್ಷ ವಯಸ್ಸಾಗಿರುವುದರಿಂದ ಆರೋಗ್ಯವೂ ಅಷ್ಟೇನೂ ಉತ್ತಮವಾಗಿಲ್ಲ, ಇಸ್ರೇಲ್‌ನ ಅಧ್ಯಕ್ಷರಂಥ ಒತ್ತಡದ ಹುದ್ದೆಯನ್ನು ನಿಭಾಯಿಸಲು ತಮಗೆ ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದರು. ಅಂತಿಮವಾಗಿ, ಈ ಪತ್ರವು ಬೆನ್-ಗುರಿಯನ್ ಅವರಿಗೆ ತಲುಪಿತು ಮತ್ತು ಅವರು ಐನ್‌ಸ್ಟೈನ್‌ರ ನಿರ್ಧಾರವನ್ನು ಒಪ್ಪಿಕೊಂಡರು. ನಂತರ, ಯಿಟ್ಜಾಕ್ ಬೆನ್-ಜ್ವಿ ಇಸ್ರೇಲ್‌ನ ಎರಡನೇ ಅಧ್ಯಕ್ಷರಾಗಿ ಆಯ್ಕೆಯಾದರು.

ಐನ್‌ಸ್ಟೈನ್ ಜಾಗದಲ್ಲಿ ಬೇರೆ ಯಾರೇ ಆಗಿದ್ದರೂ ಸ್ವತಃ ಪ್ರಧಾನಿಯವರ ಆಹ್ವಾನವನ್ನು ಒಪ್ಪಿಕೊಳ್ಳುತ್ತಿದ್ದರು. ಆದರೆ ಐನ್‌ಸ್ಟೈನ್ ಅಧಿಕಾರ ಅಥವಾ ಪ್ರತಿಷ್ಠೆಯ ಹಿಂದೆ ಹೋಗದೇ, ತಮ್ಮ ಆಸಕ್ತಿಯ ವಿಷಯವಾದ ವಿಜ್ಞಾನಕ್ಕೆ ಬದ್ಧರಾಗಿ ಉಳಿದು, ತಮ್ಮ ಮಿತಿಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಇದು ಇಂದಿಗೂ ಅವರ ನೈತಿಕತೆ ಮತ್ತು ಸರಳ ಜೀವನಶೈಲಿಗೆ ನಿದರ್ಶನವಾಗಿದೆ.

ಕಪ್ಪೆಯಂತೆ ಕುಪ್ಪಳಿಸುವ ಚಪ್ಪಟೆಕಲ್ಲನ್ನು ಅಪ್ಪಿಕೊಂಡು...

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಪ್ಪಿಕೊಳ್ಳುವುದೇನು ಬಂತು!? ಚಪ್ಪಟೆಕಲ್ಲು ಕೈಯಲ್ಲಿದ್ದರೆ ಮತ್ತು ಹತ್ತಿರದಲ್ಲೊಂದು ಕೆರೆಯೋ ನದಿಯೋ ಸರೋವರವೋ ಒಟ್ಟಿನಲ್ಲಿ ನೀರಿನ ಆಶ್ರಯ ಸಿಕ್ಕಿದರೆ 'ಕಪ್ಪೆಕಲ್ಲು' ಆಡೋದೇ! ಕಪ್ಪೆಕಲ್ಲು? ಹಾಗೆಂದರೇನು? ಆಡುವುದು ಹೇಗೆ? ಪಟ್ಟಣಪ್ರದೇಶದಲ್ಲಿ ಹುಟ್ಟಿ ಬೆಳೆದವರಿಗೆ ಕಪ್ಪೆಕಲ್ಲು ಆಡಿ-ನೋಡಿ ಬಿಡಿ ಏನೆಂದು ಕೇಳಿಯೂ ಗೊತ್ತಿರಲಿಕ್ಕಿಲ್ಲ. ಆದರೆ ಹಳ್ಳಿಗಾಡಿನಲ್ಲಿ ಪ್ರಕೃತಿಯ ಮಡಿಲಲ್ಲಿ ಹುಟ್ಟಿ ಬೆಳೆದು ಹಾಯಾಗಿರುವವರನ್ನು ಒಮ್ಮೆ ಕೇಳಿ ನೋಡಿ. ಕಪ್ಪೆಕಲ್ಲು ಎಂದೊಡನೆ ಅವರ ಕಣ್ಣುಗಳು ಖುಷಿಯಿಂದ ಕೊಳದಷ್ಟು ಅಗಲವಾಗಬಹುದು. ಚಿಕ್ಕಂದಿನಲ್ಲಿ ಕಪ್ಪೆಕಲ್ಲು ಆಡಿದ ಕೊಳ, ನದಿ, ಕೆರೆ, ಸರೋವರ ಅವರಿಗೆ ನೆನಪಾಗಿ ಅವರೇ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಆಟಕ್ಕೆ ಶುರು ಹಚ್ಚಬಹುದು. ನಿಮ್ಮ ಕೈಗೂ ಒಂದು ಕಲ್ಲು ಕೊಟ್ಟು ಆಟದ ಹುಚ್ಚು ಹತ್ತಿಸಬಹುದು.

ಸಿಂಪಲ್ಲಾಗಿ ಹೇಳುವುದಾದರೆ ನೀರಿಗೆ ಕಲ್ಲೆಸೆಯುವ ಒಂದು ಮೋಜಿನ ಆಟವೇ ಕಪ್ಪೆಕಲ್ಲು. ಮತ್ತೆ, ನೀರಿನಲ್ಲಿ ಕಲ್ಲೆಸೆದರೆ ಅದು ಮುಳುಗಿಹೋಗುತ್ತದಲ್ಲಾ ಅದೆಂಥ ಆಟ ಎನ್ನುವಿರಾ? ಹಾಗಲ್ಲ. ಎಸೆದ ಕಲ್ಲು ನೀರಿನಲ್ಲಿ ಒಮ್ಮೆಗೇ ಮುಳುಗಿ ಹೋಗದೆ ಅಲ್ಲಿಂದಲೇ ಪುಟಿಯುವಂತೆ, ಕಪ್ಪೆಯ ಹಾಗೆ ಕುಪ್ಪಳಿಸುವಂತೆ ಎಸೆಯಬೇಕು. ಐದಾರು ಬಾರಿಯಾದರೂ ಥಂಗನೆ ಜಿಗಿದ ಮೇಲಷ್ಟೇ ಅದು ಮುಳುಗಬೇಕು. ಹೆಚ್ಚು ಸಲ ಪುಟಿದಷ್ಟೂ ಆಟದಲ್ಲಿ ಹೆಚ್ಚು ಮೋಜು. ಎಸೆದ ಕಲ್ಲುಗಳನ್ನೇನೂ ನೀರಲ್ಲಿ ಮುಳುಗಿ ಎತ್ತಿಕೊಂಡು ಬರಬೇಕೆಂದಿಲ್ಲ. ಅವು ಕರ್ಣನ ಬಾಣಗಳಂತೆ ಒಮ್ಮೆ ಪ್ರಯೋಗಿಸಿದ ಮೇಲೆ ಮುಗೀತು. ಅಲ್ಲದೇ ನದೀತೀರದಲ್ಲಾದರೆ ಅಂಥ ಕಲ್ಲುಗಳಿಗೇನು ಕೊರತೆಯೇ? ಹಾಂ, ಕಪ್ಪೆಕಲ್ಲು ಅಷ್ಟು ಸಲ ಪುಟಿದು ಅಷ್ಟು ದೂರ ಸಾಗಬೇಕಾದರೆ ಚಿಕ್ಕಪುಟ್ಟ ಕೆರೆ ಕೊಳ ಸಾಲದು. ನದಿ ಅಥವಾ ಸರೋವರದಂತೆ ನೀರಿನ ಪಾತ್ರವೂ ವಿಶಾಲವಾಗಿಯೇ ಇರಬೇಕೆನ್ನಿ. ದಡದಲ್ಲಿ ನಿಂತುಕೊಂಡೇ ಆಡುವುದಾದರೂ ನೀರಿನ ಸನಿಹದಲ್ಲಿ ತುಸು ಹೆಚ್ಚಿನ ಎಚ್ಚರಿಕೆಯೂ ಬೇಕೆನ್ನಿ. ಒಟ್ಟಿನಲ್ಲಿ ಇದೇ ಕಪ್ಪೆಕಲ್ಲು ಆಟ. ಗಮ್ಮತ್ತೆಂದರೆ ಈ ಆಟಕ್ಕೆ ತಂಡ ಕಟ್ಟಿಕೊಳ್ಳಬೇಕಾದ್ದಿಲ್ಲ. ಎದುರಾಳಿ ಬೇಕಂತಿಲ್ಲ. ತೀರ್ಪುಗಾರರ ಅವಶ್ಯಕತೆಯಿಲ್ಲ. ಕೊನೆಗೆ ಪ್ರೇಕ್ಷಕರೂ ಇರಬೇಕೆಂದೇನಿಲ್ಲ. ಬೊಗಸೆ ತುಂಬ ಚಪ್ಪಟೆ ಕಲ್ಲುಗಳು, ನದಿಯ ತುಂಬ ನೀರು ಇದ್ದರಾಯಿತು. ಒಬ್ಬನೇ/ಒಬ್ಬಳೇ ಕಲ್ಲೆಸೆಯುತ್ತ ಎಸೆಯುತ್ತ, ಅದೆಷ್ಟು ಸರ್ತಿ ಕುಪ್ಪಳಿಸಿತೆಂದು ಲೆಕ್ಕ ಹಾಕುತ್ತ, ಲೆಕ್ಕ ಹೆಚ್ಚಿಸಿಕೊಳ್ಳುತ್ತ ಹೋಗಬಹುದು. ಆಟದ ಖುಷಿಯಲ್ಲೇ ಮೈಮರೆಯಬಹುದು.

ಜೆರ್ರಿ ಕೋಲ್‌ಮನ್ ಮೆಕ್‌ಘಿ ಎಂಬೊಬ್ಬ ಶ್ರೀಸಾಮಾನ್ಯ ಅಮೆರಿಕನ್ನನೂ ಕಪ್ಪೆಕಲ್ಲು ಆಡುತ್ತಿದ್ದದ್ದು ಖುಷಿಯಲ್ಲಿ ಮೈಮರೆಯುವುದಕ್ಕೆಂದೇ. ಮನಸ್ಸಿನ ದುಗುಡ ಮಾಯವಾಗಬೇಕೆಂದೇ. ಆತ ಟೆಕ್ಸಸ್ ರಾಜ್ಯದ ಆಯಿಲ್ ಕಂಪನಿಯೊಂದರಲ್ಲಿ ಫೀಲ್ಡ್ ಎಂಜಿನಿಯರ್ ಆಗಿದ್ದವನು. ಆಯಿಲ್ ಡ್ರಿಲ್ಲಿಂಗ್ ಕೆಲಸದ ಮೇಲೆ ಬೇರೆಬೇರೆ ದೇಶಗಳಿಗೆ, ಸಮುದ್ರ ತೀರಗಳಿಗೆ ಪ್ರವಾಸ ಹೋಗಬೇಕಾಗುತ್ತಿತ್ತು. ಹಾಗೆ 1979ರಲ್ಲಿ ಒಮ್ಮೆ ಯುರೋಪ್‌ನಲ್ಲಿ ಸ್ಪೈನ್ ದೇಶಕ್ಕೆ ಹೋಗಿದ್ದನು. ಅಲ್ಲಿ ಉತ್ತರಸಮುದ್ರದಲ್ಲಿ ಆಯಿಲ್ ಡ್ರಿಲ್ಲಿಂಗ್ ಕೆಲಸ. ಅವನ ವೈವಾಹಿಕ ಜೀವನದಲ್ಲಿ ಬಿರುಗಾಳಿ ಎದ್ದಿದ್ದ ದಿನಗಳವು. ಅದರಿಂದ ತುಂಬ ನೊಂದುಕೊಂಡಿದ್ದನು. ದಿನದ ಕೆಲಸ ಮುಗಿದ ಮೇಲೆ ಸಂಜೆ ಹೊತ್ತಿನಲ್ಲಿ ಬೇಸರ ಕಳೆಯಲಿಕ್ಕೆಂದು ಒಬ್ಬನೇ ಕಡಲತೀರಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದನು. ಕಾಲಕ್ಷೇಪ ಆಗಬೇಕೆಂದು ನೀರಿಗೆ ಕಲ್ಲೆಸೆಯುತ್ತಿದ್ದನು. ಸಿಟ್ಟು, ಹತಾಶೆ ಮೈಗೂಡಿದ್ದರಿಂದಲೋ ಏನೋ ಜೋರಾಗಿಯೇ ಎಸೆಯುತ್ತಿದ್ದನು. ಅವು ಸಮುದ್ರತೀರದ ಬೆಣಚು ಕಲ್ಲುಗಳು. ಚಪ್ಪಟೆ ಆಕಾರದವು. ಕಪ್ಪೆಕಲ್ಲು ಆಟಕ್ಕೆ ಹೇಳಿಮಾಡಿಸಿದಂಥವು. ಕಲ್ಲುಗಳನ್ನು ಎಸೆಯುವ ನಿರ್ದಿಷ್ಟ ಕ್ರಮದಿಂದಾಗಿ ಅವು ಮುಳುಗದೆ ನೀರಮೇಲೆ ಜಿಗಿಯುತ್ತಿದ್ದವು. ಕೆಲವೊಂದು ಹತ್ತಿಪ್ಪತ್ತು ಸರ್ತಿ ಪುಟಿಯುತ್ತಿದ್ದುದೂ ಉಂಟು! ಮೆಕ್‌ಘಿಯ ಕಪ್ಪೆಕಲ್ಲು ಆಟವನ್ನು ಪುಕ್ಕಟೆ ಮನೋರಂಜನೆ ಎಂಬಂತೆ ನೋಡುವುದಕ್ಕೆ ಅಲ್ಲಿ ಜನ ಸೇರುತ್ತಿದ್ದರು. ಹಿರಿಕಿರಿಯರೆನ್ನದೆ ಎಲ್ಲರಿಗೂ ಆ ವೀಕ್ಷಣೆಯಲ್ಲಿ ಆಸಕ್ತಿ ಹುಟ್ಟಿತ್ತು. ಆ ರೀತಿ ನೀರಮೇಲೆ ಜಿಗಿಯುವಂತೆ ಕಲ್ಲೆಸೆಯುವ ವಿದ್ಯೆಯನ್ನು ತಮಗೂ ಕಲಿಸಿಕೊಡುವಂತೆ ಅವನಲ್ಲಿ ದುಂಬಾಲು ಬೀಳುತ್ತಿದ್ದರು. ಅವರ ಪಾಲಿಗೆ ಮೆಕ್‌ಘಿ ಒಬ್ಬ ಮಹಾನ್ ಕ್ರೀಡಾಪಟು, ಬೆರಗುಗಣ್ಣಿಂದ ನೋಡಬಹುದಾದ ಹೀರೋ ಆಗಿಬಿಟ್ಟಿದ್ದನು.

ಕಪ್ಪೆಕಲ್ಲು ಆಟ (ಇಂಗ್ಲಿಷ್‌ನಲ್ಲಿ stone skipping ಎನ್ನುತ್ತಾರೆ) ಮೆಕ್‌ಘಿಯ ಜೀವನವನ್ನೇ ಬದಲಾಯಿಸಿತು. ಆಟದ ಬಗ್ಗೆ ಅವನು The Secrets of Stone Skipping ಎಂಬ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದನು. ಕಲ್ಲೆಸೆಯುವ ತಂತ್ರಗಾರಿಕೆ, ಕಲ್ಲಿನ ಆಕಾರ, ಗಾತ್ರ, ತೂಕ, ಎಸೆತದ ಕೋನ ಮುಂತಾದವನ್ನೆಲ್ಲ ಅದರಲ್ಲಿ ವಿವರಿಸಿದನು. ಪುರಾತನ ಗ್ರೀಕರೂ ಸ್ವಚ್ಛಂದ ಸರೋವರಗಳಲ್ಲಿ ಕಪ್ಪೆಕಲ್ಲು ಆಡುತ್ತಿದ್ದರು; ಹದಿನೈದನೆಯ ಶತಮಾನದಲ್ಲಿ ಚಾಲ್ತಿಗೆ ಬಂದ ducks and drakes ಎಂಬ ಇಂಗ್ಲಿಷ್ ಪದಪುಂಜ (ಲಂಗುಲಗಾಮಿಲ್ಲದೆ ದುಡ್ಡು ಖರ್ಚು ಮಾಡುತ್ತ ಮಾಡುತ್ತ ಕೊನೆಗೆ ಮುಳುಗಿ ಹೋಗುವವರನ್ನು ಕುರಿತಂತೆ) ಸ್ಟೋನ್ ಸ್ಕಿಪ್ಪಿಂಗ್‌ನಿಂದಲೇ ಬಂದದ್ದು; ಶೇಕ್ಸ್‌ಪಿಯರ್ ಮತ್ತು ಹೋಮರ್‌ನ ಬರಹಗಳಲ್ಲೂ ಸ್ಟೋನ್ ಸ್ಕಿಪ್ಪಿಂಗ್‌ನ ಉಲ್ಲೇಖವಿದೆ; ಹಿಮಪ್ರದೇಶಗಳಲ್ಲಿ ವಾಸಿಸುವ ಎಸ್ಕಿಮೋಗಳು ಮಂಜಿನ ಮೇಲೂ, ಸಹಾರಾ ಮರುಭೂಮಿಯಲ್ಲಿ ವಾಸಿಸುವ ಬೆಡುಯ್ನ್ ಬುಡಕಟ್ಟು ಜನಾಂಗದವರು ನುಣುಪಾದ ಮರಳುಗುಡ್ಡಗಳ ಮೇಲೂ ಸ್ಟೋನ್ ಸ್ಕಿಪ್ಪಿಂಗ್ ಆಡುತ್ತಿದ್ದರು... ಅಂತೆಲ್ಲ ಕಪ್ಪೆಕಲ್ಲು ಆಟದ ಚರಿತ್ರೆಯನ್ನೂ ಸ್ವಾರಸ್ಯಗಳನ್ನೂ ಮೆಕ್‌ಘಿ ಆ ಪುಸ್ತಕದಲ್ಲಿ ಬಣ್ಣಿಸಿದನು. ಪುಸ್ತಕ ಪ್ರಕಟವಾಗಿ ಕಪ್ಪೆಕಲ್ಲು ಆಟ ಹೆಚ್ಚುಹೆಚ್ಚು ಜನರ ಆಸಕ್ತಿ ಕೆರಳಿಸಿತು. ಅಂಥವರನ್ನು ಸೇರಿಸಿಕೊಂಡು NASSA (North American Stone Skipping Association) ಎಂಬ 'ಕಪ್ಪೆಕಲ್ಲು ಕ್ರೇಜಿ'ಗಳ ಸಂಘವನ್ನೂ ಮೆಕ್‌ಘಿ ಸ್ಥಾಪಿಸಿದನು. ಮನೋದೌರ್ಬಲ್ಯ ಉಳ್ಳವರಿಗೂ, ವ್ಹೀಲ್‌ಚೇರ್ ಬಳಸುವ ವಿಕಲಾಂಗರಿಗೂ ಕಪ್ಪೆಕಲ್ಲು ಆಟ ಕಲಿಸಿಕೊಟ್ಟು ಅವರ ಮುಖದಲ್ಲಿ ನಗು ಅರಳುವಂತೆ ಮಾಡಿದನು. ಕಪ್ಪೆಕಲ್ಲು ಆಟದ ಬಗ್ಗೆ ಅವನ ಅಬ್ಸೆಷನ್ ಎಲ್ಲಿಯವರೆಗಿತ್ತೆಂದರೆ ಸ್ಪೆಷಲ್ ಒಲಿಂಪಿಕ್ ಪಂದ್ಯಾಟಗಳಲ್ಲಿ ಕಪ್ಪೆಕಲ್ಲು ಆಟವನ್ನೂ ಸೇರಿಸುವಂತೆ ಅಧಿಕಾರಿಗಳ ಮನವೊಲಿಸಿದ್ದನು! ಒಮ್ಮೆ ಟೆಕ್ಸಸ್‌ನ ಬ್ಲಾಂಕೊ ನದೀತಟದಲ್ಲಿ, ವಿಡಿಯೊ ರೆಕಾರ್ಡಿಂಗ್ ಮಾಡುತ್ತಿದ್ದ ಸ್ನೇಹಿತನ ಸಮ್ಮುಖದಲ್ಲಿ, ಮೆಕ್‌ಘಿ ಎಸೆದ ಒಂದು ಚಪ್ಪಟೆಕಲ್ಲು ನದೀನೀರಿನಲ್ಲಿ ಮೂವತ್ತೆಂಟು ಸರ್ತಿ ಜಿಗಿದು ಅಲ್ಲಿ ನೆರೆದಿದ್ದವರನ್ನು ದಂಗುಬಡಿಸಿತ್ತು. ಆ ಸಮಯಕ್ಕೆ ಅದು ಗಿನ್ನೆಸ್ ದಾಖಲೆಯಾಗಿಯೂ ಸೇರಿಕೊಂಡಿತ್ತು.

ಅಂತೂ ಮೆಕ್‌ಘಿ ಮಾಡಿದ ಪ್ರಚಾರದಿಂದಾಗಿ ಅಮೆರಿಕದಲ್ಲಿ ಕಪ್ಪೆಕಲ್ಲು ಕ್ರೇಜ್ ಹರಡಿತು. ಬೇಸಗೆಯ ವಾರಾಂತ್ಯಗಳಲ್ಲಿ ಮನೋರಂಜನೆಯ ಸಾಧನವಾಯಿತು. ಗ್ರಾಮೀಣ ಪ್ರದೇಶಗಳಲ್ಲಿ, ಕೆರೆ-ಸರೋವರಗಳಿರುವ ಹಳ್ಳಿಗಳಲ್ಲಿ ಕಪ್ಪೆಕಲ್ಲು ಪಂದ್ಯಾಟಗಳೂ ಆರಂಭವಾದವು. ಸಾಮಾಜಿಕ ಕಾರ್ಯಗಳಿಗಾಗಿ ಧನಸಂಗ್ರಹಣೆ (ಫಂಡ್ ರೈಸಿಂಗ್) ಮಾಡುವವರೂ ಜನಾಕರ್ಷಣೆಗಾಗಿ ಕಪ್ಪೆಕಲ್ಲು ಆಟವನ್ನು ಆಯ್ದುಕೊಂಡರು. ಹೊರಾಂಗಣ ಆಟವೆಂದಮೇಲೆ ಯಾರಿಗೆ ತಾನೆ ಇಷ್ಟವಾಗದು? ಒಂದು ಡಾಲರ್ ಪ್ರವೇಶಧನ ಕೊಟ್ಟರೆ ಐದು ಕಲ್ಲು ಎಸೆಯಬಹುದು. ಅತಿಹೆಚ್ಚು ಜಿಗಿತಗಳನ್ನು ಸಾಧಿಸಿದವರಿಗೆ ಟ್ರೋಫಿ. ಹಾಗೆ ಆರಂಭವಾದದ್ದೇ ಮಿಷಿಗನ್ ರಾಜ್ಯದ ಮೆಕಿನಾಕ್ ಐಲ್ಯಾಂಡ್ ಎಂಬ ಪ್ರವಾಸಿತಾಣದಲ್ಲಿ ಪ್ರತಿವರ್ಷ ಜುಲೈ 4ರಂದು (ಅಮೆರಿಕದ ಸ್ವಾತಂತ್ರ್ಯ ದಿನಾಚರಣೆಯಂದು) ನಡೆಯುವ ಅಂತಾರಾಷ್ಟ್ರೀಯ ಕಪ್ಪೆಕಲ್ಲು ಚಾಂಪಿಯನ್‌ಶಿಪ್ ಪಂದ್ಯಾಟ. ಹೌದು, ಅಂತಾರಾಷ್ಟ್ರೀಯ ಏಕೆಂದರೆ ದೇಶವಿದೇಶಗಳಿಂದ ಆಸಕ್ತರು ಬಂದು ಒಂದೋ ಆಟಗಾರರಾಗಿ, ಇಲ್ಲವೇ ನೋಟಗಾರರಾಗಿ ಭಾಗವಹಿಸುತ್ತಾರೆ. ಅದರ ಜನಪ್ರಿಯತೆಯನ್ನು ಕಂಡು ಪೆನ್ಸಿಲ್ವೇನಿಯಾ, ವರ್ಮಾಂಟ್, ಅರ್ಕನ್ಸಾಸ್ ಸಂಸ್ಥಾನಗಳಲ್ಲೂ ಕಪ್ಪೆಕಲ್ಲು ಚಾಂಪಿಯನ್‌ಶಿಪ್ ಪಂದ್ಯಗಳು ಪ್ರತಿವರ್ಷ ನಡೆಯುತ್ತಿವೆ. ಹೊಸಹೊಸ ದಾಖಲೆಗಳು ಬರೆಯಲ್ಪಡುತ್ತವೆ. 2002ರಲ್ಲಿ ಪೆನ್ಸಿಲ್ವೇನಿಯಾದಲ್ಲಿ ಕರ್ಟ್ ಸ್ಟೈನರ್ ಎಂಬವನು 40 ಜಿಗಿತಗಳಿಂದ ಈ ಹಿಂದೆ ಮೆಕ್‌ಘಿಯ ಹೆಸರಲ್ಲಿದ್ದ 38 ಜಿಗಿತಗಳ ದಾಖಲೆ ಮುರಿದನು. ಐದು ವರ್ಷಗಳ ಬಳಿಕ 2007ರಲ್ಲಿ ರಸೆಲ್ ಬಾಯರ್ಸ್ ಎಂಬಾತ 51 ಜಿಗಿತಗಳನ್ನು ಸಾಧಿಸಿದರೆ ಮರುವರ್ಷವೇ ಮಾಕ್ಸ್ ಸ್ಟೈನರ್ ಎಂಬುವವ ಜಿಗಿತಗಳ ಸಂಖ್ಯೆಯನ್ನು 61ಕ್ಕೇರಿಸಿದನು. ಈಗ ಗಿನ್ನೆಸ್ ದಾಖಲೆಯಲ್ಲಿರುವ ಹೆಸರು 88 ಜಿಗಿತಗಳೊಂದಿಗೆ ಕರ್ಟ್ ಸ್ಟೈನರ್‌ನದು. 2013ರ ಸೆಪ್ಟೆಂಬರ್ 6ರಂದು ಪೆನ್ಸಿಲ್ವೇನಿಯಾದಲ್ಲಿ ಆ ಪರಾಕ್ರಮ ನಡೆದದ್ದು.

ಕಪ್ಪೆಕಲ್ಲು ಆಟವನ್ನು ಕುರಿತ ಈ ಎಲ್ಲ ರೋಚಕ ವಿವರಗಳು ನಿಮಗೆ www.stoneskipping.com ಎಂಬ ವೆಬ್‌ಸೈಟ್‌ನಲ್ಲಿ ವಿಡಿಯೋಗಳ ಸಹಿತ ಸಿಗುತ್ತವೆ. ತುಂಬ ಹಿಂದೆ ಚಪ್ಪಟೆಕಲ್ಲಿನ ಬದಲಿಗೆ ಆಯಿಸ್ಟರ್ ಚಿಪ್ಪುಗಳನ್ನು ಇದೇ ರೀತಿ ನೀರಿಗೆಸೆದು ಅವು ಜಿಗಿಯುವುದನ್ನು ನೋಡಿ ಆನಂದಿಸುತ್ತಿದ್ದರಂತೆ; ಅಮೆರಿಕದ ಮೊತ್ತಮೊದಲ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್‌ನಿಗೂ ಕಪ್ಪೆಕಲ್ಲು ಆಡುವ ಅಭ್ಯಾಸವಿತ್ತಂತೆ; ಆತನಿಗೇನು ರಾಷ್ಟ್ರಾಧ್ಯಕ್ಷನೆಂದ ಮೇಲೆ ಚಪ್ಪಟೆ ಕಲ್ಲುಗಳನ್ನಲ್ಲ ಬೆಳ್ಳಿಯ ಡಾಲರ್ ನಾಣ್ಯಗಳನ್ನು ಬೇಕಿದ್ದರೂ ಮೋಜಿಗಾಗಿ ನೀರಿಗೆಸೆಯಬಹುದಿತ್ತು... ಅಂತೆಲ್ಲ ಸ್ವಾರಸ್ಯಕರ ಸಂಗತಿಗಳೂ ಅದರಲ್ಲಿವೆ. ಕೋವಿಡ್‌ನಿಂದಾದ ಲಾಕ್‌ಡೌನ್ ಸಮಯದಲ್ಲಿ 2020ರ ಕಪ್ಪೆಕಲ್ಲು ಚಾಂಪಿಯನ್‌ಶಿಪ್ ನೋಡಲಿಕ್ಕೆ ಪ್ರೇಕ್ಷಕರು ಸೇರುವುದು ಕಷ್ಟವಿತ್ತಾದ್ದರಿಂದ ESPN ಕ್ರೀಡಾವಾಹಿನಿಯಲ್ಲಿ ಪಂದ್ಯದ ನೇರಪ್ರಸಾರ ಇದ್ದ ಬಗೆಗಿನ ವಿವರಗಳು ಕೂಡ ಆ ವೆಬ್‌ಸೈಟ್‌ನಲ್ಲಿವೆ. ಅಮೆರಿಕದಂತೆಯೇ ಯುರೋಪ್‌ನ ಸ್ಕಾಟ್ಲೆಂಡ್‌ನಲ್ಲಿಯೂ ಕಪ್ಪೆಕಲ್ಲು ಪಂದ್ಯಾವಳಿ ಪ್ರತಿವರ್ಷ ನಡೆಯುತ್ತದಂತೆ. ಅಷ್ಟೇಅಲ್ಲ, ಮೊನ್ನೆ ಸೆಪ್ಟೆಂಬರ್‌ನಲ್ಲಿ ನಡೆದ ಪಂದ್ಯಾವಳಿಯಲ್ಲಿ ಕೆಲವು ಸ್ಪರ್ಧಿಗಳು ಕಲ್ಲುಗಳನ್ನು ತಮಗೆ ಬೇಕಾದಂತೆ ಕೆತ್ತಿಕೊಂಡು ತಂದಿದ್ದರು, ಅವುಗಳ ಜಿಗಿಯುವ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದರು, ತನ್ಮೂಲಕ ಮೋಸದ ಆಟಕ್ಕೆ ತೊಡಗಿದ್ದರು. ಕ್ರಿಕೆಟ್‌ನಲ್ಲಿ ಬಾಲ್ ಟ್ಯಾಂಪರಿಂಗ್ ಮಾಡಿದರೆನ್ನುವ ಆರೋಪ ಆಗಾಗ ಕೇಳಿಬರುತ್ತದಲ್ಲವೇ ಹಾಗೆ. ಇದನ್ನು Cheating scandal rocks world stone skimming championships ಎಂಬ ಆಕರ್ಷಕ ತಲೆಬರಹ ಕೊಟ್ಟು ಬಿಬಿಸಿಯೇ ವರದಿ ಮಾಡಿತ್ತು! ಅಂದಹಾಗೆ Stone skipping ಎನ್ನುವುದು ನೀರಿಗೆಸೆದ ಕಲ್ಲು ಎಷ್ಟು ಸರ್ತಿ ಜಿಗಿಯಿತು ಎಂಬ ಸಂಖ್ಯೆಗೆ ಮಹತ್ವವಿರುವ ಕ್ರೀಡೆಗೆ; Stone skimming ಎನ್ನುವುದು ನೀರಿಗೆಸೆದ ಕಲ್ಲು ಸಾಗಿದ ದೂರಕ್ಕೆ ಮಹತ್ವ ನೀಡುವ ಕ್ರೀಡೆಗೆ. ಆಟದ ಹೆಸರಿನಲ್ಲಿ ಸ್ಪೆಲ್ಲಿಂಗ್ ವ್ಯತ್ಯಾಸ ಮತ್ತು ಆಟದ ಮಾನದಂಡದಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು. ಯುರೋಪ್‌ನಲ್ಲಿ ಹೆಚ್ಚು ಜನಪ್ರಿಯವಾಗಿರುವುದು ಸ್ಟೋನ್ ಸ್ಕಿಮ್ಮಿಂಗ್.

ಸರಿ, ಇಂತಿರುವ ಕಪ್ಪೆಕಲ್ಲು ಆಟ ಬರೀ ಕ್ರೀಡೆ ಮತ್ತು ಮನೋಲ್ಲಾಸದ ಬಾಬತ್ತು ಮಾತ್ರವಲ್ಲ. ಇದರಲ್ಲೊಂದು ಅತ್ಯುಪಯುಕ್ತವಾದ ಭೌತಶಾಸ್ತ್ರ ತತ್ತ್ವವೂ ಅಡಗಿದೆ. ಅದೇನೆಂದು ಸರಳ ಭಾಷೆಯಲ್ಲೇ ಒಂಚೂರು ತಿಳಿದುಕೊಳ್ಳೋಣ. 1968ರಲ್ಲಿ ಮೆಸ್ಸಾಚುಸೆಟ್ಸ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಕಿರ್ಸ್ಟನ್ ಕೊತ್ಸ್ ಎಂಬಾತ ಮಂಡಿಸಿರುವ ಸಿದ್ಧಾಂತ ಹೀಗಿದೆ: ಚಪ್ಪಟೆಯಾದ ಕಲ್ಲು ಸುಮಾರು 20 ಅಥವಾ 30 ಡಿಗ್ರಿ ಕೋನದಲ್ಲಿ ನೀರನ್ನು ತಾಗುತ್ತದೆ. ರನ್‌ವೇ ಮೇಲೆ ವಿಮಾನ ಹೇಗೆ ಮೊದಲು ಹಿಂದಿನ ಚಕ್ರಗಳ ಮೇಲೆ ಲ್ಯಾಂಡ್ ಆಗಿ ಆಮೇಲೆ ಮುಂದಿನ ಚಕ್ರಗಳು ಭೂಸ್ಪರ್ಶ ಮಾಡುತ್ತವೆಯೋ, ಹಾಗೆಯೇ ಕಪ್ಪೆಕಲ್ಲಿನ ಮೊದಲ ಜಲಸ್ಪರ್ಶ ಹಿಂಭಾಗದಿಂದ ಆಗುತ್ತದೆ. ಇದರಿಂದ ಕಲ್ಲಿನ ಬುಡಭಾಗದ ಸಮತಳವು ನೀರಿನ ಮೇಲ್ಮೈಗೆ 20 ಡಿಗ್ರಿ ಕೋನ ದಲ್ಲಿ ಇದ್ದಂತಾಗುತ್ತದೆ. ಕಲ್ಲಿನ ವೇಗ ಮತ್ತು ಭ್ರಮಣ(ಸ್ಪಿನ್) ನಿಂದಾಗಿ ಅಲ್ಲಿ ಒತ್ತಡ ಕಡಿಮೆಯಾಗಿ ನೀರು ಮೇಲಕ್ಕೆ ನುಗ್ಗಿ ಕಲ್ಲನ್ನು ಎತ್ತಿದಂತಾಗುತ್ತದೆ. ಒಂದು ಸೆಕೆಂಡಿನ ನೂರನೇ ಒಂದು ಭಾಗದಷ್ಟು ಸಮಯದೊಳಗೆ ನಡೆದುಹೋಗುವ ಈ ಪ್ರಕ್ರಿಯೆ ಕಲ್ಲನ್ನು ಮತ್ತೆ ಜಿಗಿಯುವಂತೆ ಮಾಡುತ್ತದೆ. ಆರಂಭದಲ್ಲಿ ಕಲ್ಲಿನ ಚಲನಶಕ್ತಿ ಎಷ್ಟಿತ್ತು ಎಂಬುದನ್ನು ಅವಲಂಬಿಸಿ ಕಲ್ಲು ಎಷ್ಟು ಸಲ ಜಿಗಿಯುತ್ತದೆ ಎನ್ನುವುದು ನಿರ್ಧಾರಿತವಾಗುತ್ತದೆ. 2003ರಲ್ಲಿ ಫ್ರಾನ್ಸ್ ವಿಶ್ವವಿದ್ಯಾಲಯದ ಭೌತಶಾಸ್ತ್ರಜ್ಞ ಲಿಡೆರಿಕ್ ಬೊಕ್ವೆಟ್ ಎಂಬಾತ ಇದಕ್ಕೊಂದು ಗಣಿತ ಸೂತ್ರವನ್ನೂ ಸ್ಥಾಪಿಸಿದನು. ಕಲ್ಲಿನ ತೂಕ, ಎಸೆತದ ಕೋನ, ವೇಗ ಮತ್ತು ಭ್ರಮಣಗಳನ್ನಾಧರಿಸಿ ಜಿಗಿತದ ಸಂಖ್ಯೆಯನ್ನು ಕರಾರುವಾಕ್ಕಾಗಿ ಕಂಡುಹಿಡಿದನು. ಅದರಂತೆ ಆಗ ಮೆಕ್‌ಘಿಯ ದಾಖಲೆಯೆನಿಸಿದ್ದ 38 ಜಿಗಿತಗಳಾಗಬೇಕಾದರೆ ಕಲ್ಲನ್ನು ಗಂಟೆಗೆ 43 ಕಿ.ಮೀ ವೇಗದಲ್ಲಿ, ಸೆಕೆಂಡಿಗೆ ಹದಿನಾಲ್ಕು ಸ್ಪಿನ್ ಇರುವಂತೆ ಎಸೆದಿರಬೇಕು ಎಂದು ಲಿಡೆರಿಕ್ ವಿವರಿಸಿದನು.

ಆದರೆ ಇದಕ್ಕೂ ಹಿಂದೆ, ಎರಡನೇ ಪ್ರಪಂಚ ಯುದ್ಧ ನಡೆದ ಹೊತ್ತಿನಲ್ಲೇ, ಬಾರ್ನ್ಸ್ ವಾಲ್ಲಿಸ್ ಎಂಬ ಬ್ರಿಟಿಷ್ ತಂತ್ರಜ್ಞಾನಿಯು ಸ್ಟೋನ್ ಸ್ಕಿಪ್ಪಿಂಗ್ ತತ್ತ್ವವನ್ನೇ ಆಧರಿಸಿ Bouncing Bombs ಎಂದು ಹೆಸರುವಾಸಿಯಾದ ಏರಿಯಲ್ ಬಾಂಬ್‌ಗಳನ್ನು ತಯಾರಿಸಿದ್ದನು. ಶತ್ರುಸೈನ್ಯವಾದ ಜರ್ಮನಿಯ ಯುದ್ಧನೌಕೆ ಟ್ರಿಪಿಟ್ಜ್ ಮತ್ತು ಜರ್ಮನಿ ದೇಶಕ್ಕೆಲ್ಲ ವಿದ್ಯುತ್ ಪೂರೈಕೆ ಮಾಡುತ್ತಿದ್ದ ರೂಹರ್ ಕಣಿವೆಯ ಅಣೆಕಟ್ಟುಗಳನ್ನು ಹೇಗಾದರೂ ಮಾಡಿ ಧ್ವಂಸಗೊಳಿಸುವುದು ಆಗ ಬ್ರಿಟಿಷ್ ಸೈನ್ಯದ ಆದ್ಯತೆಯಾಗಿತ್ತು. ಆದರೆ ಜರ್ಮನಿಯೂ ತನ್ನ ನೌಕೆಗಳಿಗೆ ಮತ್ತು ಅಣೆಕಟ್ಟುಗಳಂಥ ಸೂಕ್ಷ್ಮ ಸ್ಥಳಗಳಿಗೆ ಬಿಗಿ ಬಂದೋಬಸ್ತ್ ಮಾಡಿರುತ್ತಿತ್ತು. ಅಣೆಕಟ್ಟುಗಳ ಮೇಲಿನಿಂದ ಬಾಂಬುಗಳನ್ನು ಎಸೆಯದಂತೆ ಎತ್ತರೆತ್ತರಕ್ಕೆ ಬಲೆಗಳನ್ನು ಹರಡಲಾಗುತ್ತಿತ್ತು. ಅಣೆಕಟ್ಟು ಒಡೆಯಬೇಕಾದರೆ ಅದರ ಗೋಡೆಗೇ ಗುರಿಯಿಟ್ಟ ಬಾಂಬ್ ಬೀಳಬೇಕು. ಬಲೆಗಳಿರುವಾಗ ಅದು ಸಾಧ್ಯವಿಲ್ಲ. ಅಂಥ ಸನ್ನಿವೇಶದಲ್ಲಿಯೇ ಬಾರ್ನ್ಸ್ ವಾಲ್ಲಿಸ್ ವಿನ್ಯಾಸಗೊಳಿಸಿದ ಬೌನ್ಸಿಂಗ್ ಬಾಂಬ್‌ಗಳನ್ನು ಬಳಸಲಾಯಿತು. ಅಣೆಕಟ್ಟಿನಿಂದ ಸುಮಾರು ದೂರದಲ್ಲಿ ಬೀಳುವ ಬಾಂಬ್ ಕಪ್ಪೆಕಲ್ಲಿನಂತೆ ನೀರಿನಲ್ಲೇ ಜಿಗಿತಗಳನ್ನು ಮಾಡಿ ಕೊನೆಗೆ ಅಣೆಕಟ್ಟಿನ ಸಮೀಪ ಬಂದಾಗ ಮುಳುಗಿ ಸ್ಫೋಟಗೊಳ್ಳುವಂತೆ ಮಾಡಲಾಯ್ತು. ಅಣೆಕಟ್ಟಿನಿಂದ ಎಷ್ಟು ದೂರದಲ್ಲಿ, ಎಷ್ಟು ಎತ್ತರದಿಂದ, ಎಷ್ಟು ಸ್ಪಿನ್‌ನೊಂದಿಗೆ ಬಾಂಬುಗಳನ್ನು ಬೀಳಿಸಬೇಕೆಂದು ಬಾರ್ನ್ಸ್ ವ್ಯಾಲಿಸ್ ಹಾಕಿದ್ದ ಲೆಕ್ಕ ಒಂಚೂರೂ ತಪ್ಪಾಗಲಿಲ್ಲ. ಮೊನ್ನೆ ಏಷ್ಯಾಕಪ್ ಫೈನಲ್ ಮ್ಯಾಚ್‌ನಲ್ಲಿ ಕುಲದೀಪ್ ಯಾದವ್ ಮತ್ತಿತರ ಸ್ಪಿನ್ ಮಾಂತ್ರಿಕರು ಪಾಕಿಸ್ತಾನದ ದಾಂಡಿಗರ ವಿಕೆಟ್‌ಗಳನ್ನು ದಬದಬನೆ ಉರುಳಿಸಿದಂತೆಯೇ, 1943ರ ಮೇ 16 ಮತ್ತು 17ರಂದು ಬ್ರಿಟನ್‌ನ ರಾಯಲ್ ಏರ್‌ಫೋರ್ಸ್‌ನ ಯುದ್ಧವಿಮಾನಗಳು ಕರಾರುವಾಕ್ಕಾಗಿ ಬೌನ್ಸಿಂಗ್ ಬಾಂಬ್‌ಗಳನ್ನು ಎಸೆದು ಜರ್ಮನಿಯ ಅಣೆಕಟ್ಟುಗಳನ್ನು ಪುಡಿಪುಡಿ ಮಾಡಿಬಿಟ್ಟಿದ್ದವು. The Dam Busters ಎಂಬ ಇಂಗ್ಲಿಷ್ ಚಲನಚಿತ್ರದಲ್ಲಿ ಇದೆಲ್ಲವನ್ನೂ ರೋಚಕವಾಗಿ ತೋರಿಸಿದ್ದಾರೆ.

ಯುದ್ಧದಲ್ಲಿ ಸರ್ವನಾಶಕ್ಕೆ ಉಪಯೋಗವಾಗುವುದಕ್ಕಿಂತ ಒಳ್ಳೆಯ ಉದ್ದೇಶಗಳಿಗೆ ಕಪ್ಪೆಕಲ್ಲು ತತ್ತ್ವವನ್ನು ಬಳಸುವುದರಲ್ಲೂ ವಿಜ್ಞಾನಿಗಳು ನಿರತರಾಗಿದ್ದಾರೆ. ಅಂತರಿಕ್ಷಯಾನ(ಸ್ಪೇಸ್ ಷಟಲ್) ಭೂಮಿಗೆ ಹಿಂದಿರುಗುವಾಗ ಸಾಂದ್ರವಾದ ಭೂವಾತಾವರಣವನ್ನು ಸ್ಪರ್ಶಿಸುತ್ತಿದ್ದಂತೆ ಒಂದಿಷ್ಟು ಕಪ್ಪೆಜಿಗಿತಗಳನ್ನು ಮಾಡಿಯೇ ಆಮೇಲೆ ಇಳಿಯುವಂತೆ ನೋಡಿಕೊಳ್ಳಲಾಗುತ್ತದೆ. ಹಾಗೆಯೇ ಹೈಪರ್‌ಸೋರ್ ಪ್ಲೇನ್ ಎಂಬ ಹೊಸ ನಮೂನೆಯ ವಾಯುಯಾನದ ಕಲ್ಪನೆಯೂ ಕಪ್ಪೆಕಲ್ಲು ತತ್ತ್ವವನ್ನು ಆಧರಿಸಿದ್ದೇ ಆಗಿದೆ. ಅಂಥ ವಿಮಾನವು ಹೊರಡುವ ಸ್ಥಳದಲ್ಲಿ ರಾಕೆಟ್‌ನಂತೆ ಉಡ್ಡಯನಗೊಂಡು ಸುಮಾರು 40 ಕಿ.ಮೀ.ಗಳಷ್ಟು ಎತ್ತರಕ್ಕೆ ಆಕಾಶದತ್ತ ಹೋಗಿ ಅಲ್ಲಿಂದ ನ್ಯೂಟ್ರಲ್ ಗಿಯರ್‌ನಲ್ಲೆಂಬಂತೆ ಕೆಳಕ್ಕೆ ಭೂಮಿಯತ್ತ ಜಾರುತ್ತದೆ. ದಟ್ಟವಾದ ಭೂವಾತಾವರಣವನ್ನು ಸ್ಪರ್ಶಿಸಿದಾಗ ಎಂಜಿನ್‌ಗಳು ಸ್ವಯಂಚಾಲಿತವಾಗಿ ವಿಮಾನ ಮತ್ತೊಮ್ಮೆ ಸ್ವಲ್ಪವೇ ಮೇಲಕ್ಕೆ ಜಿಗಿಯುತ್ತದೆ, ಮತ್ತೆ ಕೆಳಕ್ಕೆ ಜಾರುತ್ತದೆ. ಈರೀತಿ ಪೂರ್ವನಿರ್ಧಾರಿತ ಸಂಖ್ಯೆಯ ಜಿಗಿತಗಳನ್ನು ಪೂರೈಸಿ ಕೊನೆಗೆ ಗಮ್ಯಸ್ಥಳವನ್ನು ತಲುಪುತ್ತದೆ. ವಾಷಿಂಗ್ಟನ್‌ನಿಂದ ಬೆಂಗಳೂರಿಗೆ ಹೈಪರ್‌ಸೋರ್ ಪ್ಲೇನ್‌ನಲ್ಲಿ ಹೊರಟರೆ ಸುಮಾರು ಇಪ್ಪತ್ತು ಜಿಗಿತಗಳಿಂದ ಒಂದೂವರೆ-ಎರಡು ಗಂಟೆಗಳ ಅವಧಿಯಲ್ಲಿ ತಲುಪಬಹುದೇನೋ. ಯಾರಿಗೆ ಗೊತ್ತು, ಇನ್ನು ಕೆಲವು ದಶಕಗಳು ಕಳೆದಮೇಲೆ ಇದು ಕನಸಲ್ಲ ನಿಜವೇ ಆಗಬಹುದು!

ಇರಲಿ, ಹೈಪರ್‌ಸೋರ್ ಪ್ಲೇನ್‌ಗಳ ವಿಚಾರವನ್ನು ಆಮೇಲೆ ನೋಡಿಕೊಳ್ಳಬಹುದು. ಆದರೆ ಯಃಕಶ್ಚಿತ್ ಕಪ್ಪೆಕಲ್ಲು ರೀತಿಯ, ಹಳ್ಳಿಗುಗ್ಗುಗಳು ಆಡುವ ಆಟ ಎಂಬ ತಿರಸ್ಕಾರ ಮೂಡಬಹುದಾದ, ಆಟವೊಂದು ಇಷ್ಟೊಂದು ಚಟುವಟಿಕೆಗಳಿಗೆ ಮತ್ತು ಜಾಗತಿಕ ಮಟ್ಟದ ಚಿಂತನೆಗಳಿಗೆ ಆಸ್ಪದ ನೀಡುತ್ತದೆಯೆನ್ನುವುದು ಸದ್ಯದ ಬೆರಗು.

ನಾನು ಭಾರತವನ್ನು ಪ್ರೀತಿಸುತ್ತೇನೆ ಎನ್ನಲು ಮನವಿಲ್ಲ...



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

2019ರ ಡಿಸೆಂಬರ್ 15ರವರೆಗೆ, ಹಳೆದೆಹಲಿಯ ನಿವಾಸಿಗಳಿಗೆ ಶಾಹೀನ್ ಬಾಗ್ ಬಗ್ಗೆ ಹೆಚ್ಚಿನ ಕಲ್ಪನೆ ಇರಲಿಲ್ಲ. ಅನೇಕರು ಅದರ ಬಗ್ಗೆ ಕೇಳಿಯೂ ಇರಲಿಲ್ಲ. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿದ್ಯಾರ್ಥಿಗಳ ಮೇಲೆ ಪೊಲೀಸರು ದೌರ್ಜನ್ಯವೆಸಗಿದ್ದಾರೆ ಎನ್ನುವ ಸುದ್ದಿ ಬಂದಾಗ, ಡಿಸೆಂಬರ್‌ನ ಒಂದು ಸಂಜೆ ಎಲ್ಲವನ್ನೂ ಬದಲಿಸಿಬಿಟ್ಟಿತು. ಈ ಚಳವಳಿಯಲ್ಲಿ ಜಾಮಿಯಾದಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ ವಾಸಿಸುವ ಶಾಹೀನ್ ಬಾಗ್‌ನ 70 ಮತ್ತು 80ರ ಹರೆಯದ ಮಹಿಳೆಯರನ್ನು ಮುಂದೆಬಿಡಲಾಯಿತು. ಸಿಎಎಯನ್ನು ಯುವಕರು ಶಾಂತಿಯುತವಾಗಿ, ನಿರಂತರವಾಗಿ ವಿರೋಧಿಸಬಹುದಾಗಿತ್ತು. ಆದರೆ ಅಚ್ಚರಿಯೆಂಬಂತೆ ಪ್ರತಿಭಟನೆಯ ನೇತೃತ್ವ ವಹಿಸಿದ್ದು ಈ ಮಹಿಳೆಯರು. ಅವರೆಂದಿಗೂ ತಮ್ಮ ಮನೆಗಳಿಂದ ಹೊರಬಂದವರಾಗಿರಲಿಲ್ಲ; ಆದರಿಲ್ಲಿ ಒಂದು ಕೈಯಲ್ಲಿ ಭಾರತದ ಸಂವಿಧಾನವನ್ನೂ ಮತ್ತೊಂದರಲ್ಲಿ ಕುರಾನ್ ಪ್ರತಿಯನ್ನೂ ಹಿಡಿದು ನಿಂತಿದ್ದರು.

ಪ್ರತಿಭಟನೆ ನೋಡನೋಡುತ್ತಿದ್ದಂತೆ ಬೃಹತ್ ಚಳವಳಿಯಾಗಿ ಮಾರ್ಪಟ್ಟಿತು, ದೇಶಾದ್ಯಂತ ಹರಡಿ ಅಂತಾರಾಷ್ಟ್ರೀಯ ಗಮನವನ್ನೂ ಸೆಳೆಯಿತು. ಶಾಹೀನ್ ಬಾಗ್‌ನ ಅಜ್ಜಿಯರು ಟೈಮ್ ನಿಯತಕಾಲಿಕದಲ್ಲಿ ಸ್ಥಾನ ಪಡೆದರು. ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾದೇಶದ ಧಾರ್ಮಿಕ ಅಲ್ಪಸಂಖ್ಯಾತರಿಗೆ ಅಂದರೆ ಹಿಂದುಗಳು, ಜೈನರು ಮತ್ತು ಬೌದ್ಧರಿಗೆ ಭಾರತದಲ್ಲಿ ಪೌರತ್ವ ಪಡೆಯಲು ಅನುವು ಮಾಡಿಕೊಡುವ ಸಿಎಎ ವಿರುದ್ಧದ ಈ ಹೋರಾಟದ ಬಗ್ಗೆ ವಿದೇಶಿ ಪತ್ರಿಕೆಗಳು ಬರೆಯಲು ಪ್ರಾರಂಭಿಸಿದವು. ಮುಂದಿನದೆಲ್ಲ ಗೊತ್ತಿರುವಂಥದ್ದೇ.

ಈಗ ಮತ್ತದೇ ಮಾದರಿಯ 'ಐ ಲವ್ ಮೊಹಮ್ಮದ್' ಎಂಬ ಅಭಿಯಾನ ದೇಶದಲ್ಲಿ ಶುರುವಾದಂತೆ ಕಾಣುತ್ತಿದೆ. ಆದರಿಲ್ಲಿ ನಿಜವಾದ ಪ್ರಶ್ನೆಯಿರುವುದು, ಇದು ನಿಜವಾಗಿಯೂ ಮುಸ್ಲಿಂ ಸಮುದಾಯದ ಭಾವನೆಗಳ ಸ್ವಾಭಾವಿಕ ಹೊರಹರಿವೇ ಅಥವಾ ರಾಜಕೀಯ ಪುಢಾರಿಗಳಿಂದ ಉತ್ತೇಜಿಸಲ್ಪಟ್ಟ, ಎಚ್ಚರಿಕೆಯಿಂದ ಸಂಘಟಿಸಿದ 'ಟೂಲ್ ಕಿಟ್' ಆಗಿದೆಯೇ ಎಂಬುದು. ಪುರಾವೆಗಳು ಎರಡನೆಯದನ್ನೇ ಹೆಚ್ಚು ಪುಷ್ಟೀಕರಿಸುತ್ತವೆ ಎಂಬುದು ಗಮನಾರ್ಹ. 2025ರ ಸೆಪ್ಟೆಂಬರ್ 4ರಂದು, ಕಾನ್ಪುರದ ರಾವತ್ಪುರ ಪ್ರದೇಶದಲ್ಲಿ, ಈದ್-ಎ-ಮಿಲಾದ್-ಉನ್-ನಬಿ (ಪ್ರವಾದಿ ಮುಹಮ್ಮದ್ ಅವರ ಜನ್ಮದಿನ) ಗಾಗಿ ಇಸ್ಲಾಂ ಸಮುದಾಯದವರ ಮೆರವಣಿಗೆ ನಡೆಯುತ್ತಿತ್ತು. ಅಲ್ಲಿ 'ಐ ಲವ್ ಮುಹಮ್ಮದ್' ಎಂಬ ಬ್ಯಾನರ್ ಅನ್ನು ಪ್ರದರ್ಶಿಸಲಾಯಿತು. ಅದೇ ವೇಳೆ, ಹಿಂದೂ ಧಾರ್ಮಿಕ ಮೆರವಣಿಗೆಯು ಅದೇ ಹಾದಿಯಲ್ಲಿ ಹಾದುಹೋಗುತ್ತಿತ್ತು. ಆಗ, ಗುಂಪಿನಲ್ಲಿದ್ದ ಕೆಲವು ಮುಸ್ಲಿಂ ಯುವಕರು ಹಿಂದೂ ಪೋಸ್ಟರ್‌ಗಳನ್ನು ಕೋಲುಗಳಿಂದ ಹರಿದು, ಘರ್ಷಣೆಗೆ ನಾಂದಿ ಹಾಡಿದರು ಎಂಬುದನ್ನು ವರದಿಗಳು ದೃಢಪಡಿಸುತ್ತವೆ. ಕೋಮು ಸೌಹಾರ್ದಕ್ಕೆ ಭಂಗ ತಂದಿದ್ದಕ್ಕಾಗಿ ಪೊಲೀಸರು ಮಧ್ಯಪ್ರವೇಶಿಸಿ ಗಲಭೆಕೋರರ ವಿರುದ್ಧ ಎಫ್‌ಐಆರ್ ದಾಖಲಿಸಿದರು. ಆದರೆ, ಇದನ್ನು ಸ್ಥಳೀಯ ಕಾನೂನು-ಸುವ್ಯವಸ್ಥೆಯ ಸಮಸ್ಯೆಯಾಗಿ ಪರಿಗಣಿಸಲಿಲ್ಲ; ಎಫ್‌ಐಆರ್ ದಾಖಲಿಸಿದ್ದನ್ನು 'ನಾನು ಮುಹಮ್ಮದ್‌ನನ್ನು ಪ್ರೀತಿಸುತ್ತೇನೆ' ಎಂದು ಹೇಳಿದ್ದಕ್ಕಾಗಿ ಮುಸ್ಲಿಮರ ವಿರುದ್ಧ ನಡೆಯುತ್ತಿರುವ ಪಿತೂರಿ ಎಂಬಂತೆ ಬಿಂಬಿಸಲಾಯಿತು.

ಈ ಅಭಿಯಾನ ಅನತಿಕಾಲದಲ್ಲಿ ಅರ್ಧ ಉತ್ತರ ಪ್ರದೇಶವನ್ನಾವರಿಸಿ ಅದರಾಚೆಗೂ ಹರಡಿತು. ಉತ್ತರಪ್ರದೇಶದ ಬಹ್ರೈಚ್, ಬರೇಲಿ, ಲಖನೌ, ಅಮೇಥಿ, ಉನ್ನಾವೋ, ಕೌಶಂಬಿ, ಮಹಾರಾಜಗಂಜ್ ಎಲ್ಲವೂ ಇಂಥದೇ ಪ್ರತಿಭಟನೆಗಳಿಗೆ ಸಾಕ್ಷಿಯಾದವು. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್‌ಗಳಲ್ಲಿ ರಾಷ್ಟ್ರವ್ಯಾಪಿ 'ಐ ಲವ್ ಮೊಹಮ್ಮದ್'ನದ್ದೇ ಸುದ್ದಿಯಾಯಿತು. ಇದೇ ವೇಳೆ ಮಧ್ಯಪ್ರದೇಶದಲ್ಲಿ ಕಾಳಿ ವಿಗ್ರಹದ ಮೇಲೆ ಕಲ್ಲು ತೂರಾಟವಾಯಿತು. ಗುಜರಾತ್‌ನ ಗೋಧ್ರಾದಲ್ಲಿ ಪ್ರತಿಭಟನಾ ನಿರತ ಗುಂಪು ಪೊಲೀಸ್ ಠಾಣೆಯನ್ನು ಸುತ್ತುವರಿಯಿತು. ಉತ್ತರಾಖಂಡದ ಕಾಶಿಪುರದಲ್ಲಿ ಪ್ರತಿಭಟನಾಕಾರರು ಪೊಲೀಸ್ ಸಿಬ್ಬಂದಿಯನ್ನು ಥಳಿಸಿದ ಘಟನೆಯೂ ವರದಿಯಾಯಿತು.

ಉತ್ತರಪ್ರದೇಶದ ನಗರವೊಂದರಲ್ಲಿ ಮೂಲತಃ ಕಾನೂನು-ಸುವ್ಯವಸ್ಥೆಯ ಪ್ರಕರಣವಾಗಬೇಕಿದ್ದ ವಿಷಯವು ಅನೇಕ ರಾಜ್ಯಗಳಲ್ಲಿ ಕೋಮುವಾದಿ ಆಂದೋಲನವಾಗಿ ತಿರುಗಿತು. 'ಐ ಲವ್ ಮುಹಮ್ಮದ್' ಬ್ಯಾನರ್‌ಗೆ ಸಂಬಂಧಿಸಿ ಕರ್ನಾಟಕದಲ್ಲೂ ಕೋಮು ಗಲಭೆಗಳು ಅಲ್ಲಲ್ಲಿ ದಾಖಲಾಗುತ್ತಿದ್ದು, ಪೊಲೀಸರ ಸಕಾಲಿಕ ಮಧ್ಯಪ್ರವೇಶದಿಂದ ದೊಡ್ಡದಾಗುತ್ತಿಲ್ಲ ಅಷ್ಟೆ. ಇತ್ತೀಚೆಗೆ ದಾವಣಗೆರೆಯ ಕಾರ್ಲ್ ಮಾರ್ಕ್ಸ್ ನಗರದಲ್ಲಿ 'ಐ ಲವ್ ಮುಹಮ್ಮದ್' ಫ್ಲೆಕ್ಸ್ ಬ್ಯಾನರ್‌ಗಾಗಿ ಕೋಮು ಉದ್ವಿಗ್ನತೆ ಭುಗಿಲೆದ್ದಿತ್ತು. ಕಲ್ಲು ತೂರಾಟದಿಂದ ಸಣ್ಣಪುಟ್ಟ ಗಾಯಗಳು, ಆಸ್ತಿಪಾಸ್ತಿ ಹಾನಿ ಸಂಭವಿಸಿದೆ. ಪೊಲೀಸರು ತ್ವರಿತವಾಗಿ ಮಧ್ಯಪ್ರವೇಶಿಸಿ, ಬ್ಯಾನರ್ ಅನ್ನು ತೆಗೆದುಹಾಕಿ, ಶಾಂತಿಯನ್ನು ಪುನಃಸ್ಥಾಪಿಸಿದರು ಎನ್ನಲಾಗಿದೆ. ಗಣೇಶನ ಮೆರವಣಿಗೆಯ ವೇಳೆ ಮಂಡ್ಯ ಹಾಗೂ ಇತರ ಊರುಗಳಲ್ಲಿ ನಡೆದ ಕಲ್ಲು ತೂರಾಟ, ಘರ್ಷಣೆಗಳಿಂದ ಸ್ವಲ್ಪ ಚೇತರಿಸಿಕೊಳ್ಳುತ್ತಿದ್ದ ಕರ್ನಾಟಕ, ಹೊಸದೊಂದು ವಿವಾದಕ್ಕೆ ಸಾಕ್ಷಿಯಾಯಿತು.

ಇತ್ತೀಚೆಗೆ ಲೇಹ್ ಲಡಾಖ್‌ನಲ್ಲಿ ನಡೆದ ದಂಗೆಯ ಬಗ್ಗೆ, ಅದರ ಹಿಂದಿರುವ ವಿದೇಶಿ ಕೈವಾಡಗಳ ಬಗ್ಗೆ ಇನ್ನೂ ತನಿಖೆಗಳಾಗುತ್ತಿವೆ. ಆದರೆ, ಇದು ಆಕಸ್ಮಿಕ ಘಟನೆಯಲ್ಲ, ಪ್ರತ್ಯೇಕತಾವಾದಿಗಳು, ದೇಶದಲ್ಲಿ ಅರಾಜಕತೆ ಸೃಷ್ಟಿಮಾಡಬೇಕೆನ್ನುವವರೇ ಇದರ ಹಿಂದಿದ್ದಾರೆ ಎನ್ನುವ ಸತ್ಯ ಒಂದೊಂದಾಗಿ ಬಯಲಾಗುತ್ತಿವೆ.

'ಇಂಡಿಯಾ' ಮೈತ್ರಿಕೂಟದ ಕೆಲವು ರಾಜಕೀಯ ಪಕ್ಷಗಳು ಈ 'ಐ ಲವ್ ಮುಹಮ್ಮದ್' ಅಭಿಯಾನಗಳನ್ನು ಪರೋಕ್ಷವಾಗಿ ಅನುಮೋದಿಸಲು ಪ್ರಾರಂಭಿಸಿದ ನಂತರವಂತೂ, ಅದು ವೇಗ-ವಿಸ್ತಾರವನ್ನೂ ಪಡೆಯಿತು. ಸೆಪ್ಟೆಂಬರ್ 20ರಂದು ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗ ಹೇಳಿಕೆ ನೀಡಿ, ಬ್ಯಾನರ್‌ಗಳನ್ನು ಪ್ರದರ್ಶಿಸಿದ್ದಕ್ಕಾಗಿ ಎಫ್‌ಐಆರ್ ಎದುರಿಸುತ್ತಿರುವವರನ್ನು ತನ್ನ ಪ್ರತಿನಿಧಿಗಳು ಭೇಟಿ ಮಾಡಿ ಧೈರ್ಯತುಂಬುತ್ತಿದ್ದಾರೆ ಎಂದಿದೆ. ಇದಾದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ ನಾಯಕಿ ಶಮಾ ಮೊಹಮ್ಮದ್ ಈ ಘೋಷಣೆಯನ್ನು ಬಹಿರಂಗವಾಗಿ ಬೆಂಬಲಿಸಿದರು ಕೂಡಾ. ಸಮಾಜವಾದಿ ಪಕ್ಷವೂ ಈ ಅಭಿಯಾನಕ್ಕೆ ಪರೋಕ್ಷ ಬೆಂಬಲ ನೀಡುತ್ತಿರುವಂತಿದೆ. ನಾನು ಮುಹಮ್ಮದ್‌ನನ್ನು ಪ್ರೀತಿಸುತ್ತೇನೆ ಎಂದಿದ್ದಕ್ಕಾಗಿ ಜೈಲಿಗೆ ಹೋಗಲೂ ಸಿದ್ಧ ಎಂದು ಎಸ್‌ಪಿ ನಾಯಕ ಅಬು ಅಜ್ಮಿ ಘೋಷಿಸಿ ಬೆಂಕಿಗೆ ತುಪ್ಪ ಸುರಿದರು. ಪಕ್ಷದ ವಕ್ತಾರ ಅಮಿಕ್ ಜಮ್ಯೆ, 'ಐ ಲವ್ ಶ್ರೀರಾಮ್' ಅಥವಾ 'ಐ ಲವ್ ಮುಹಮ್ಮದ್' ಎರಡೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಒಳಪಡುತ್ತವೆ ಎಂದು ಹೇಳಿ ಹಿಂದುಗಳನ್ನು ಚುಚ್ಚುವ ಕೆಲಸ ಮಾಡಿದರು. ಎಐಎಂಐಎಂ ಪಕ್ಷದ ಮುಖ್ಯಸ್ಥ ಅಸಾದುದ್ದೀನ್ ಓವೈಸಿ, 'ಐ ಲವ್ ಮುಹಮ್ಮದ್' ಎನ್ನುವುದು ಅಪರಾಧವಾಗಿದ್ದರೆ, ಅದಕ್ಕೆ ನೀಡಬಹುದಾದ ಶಿಕ್ಷೆಯನ್ನು ಸ್ವೀಕರಿಸಲು ಸಿದ್ಧರಿದ್ದೇವೆ ಎಂದು ಘೋಷಿಸಿದ ನಂತರ ಬರೇಲಿಯಲ್ಲಿ ಹಿಂಸಾಚಾರ ಉಲ್ಬಣಗೊಂಡಿತು. ನಂತರ, ಕಾಶಿಪುರದಲ್ಲಿ ಅಶಾಂತಿಯನ್ನು ಪ್ರಚೋದಿಸುವಲ್ಲಿ ಎಸ್‌ಪಿ ನಾಯಕ ನದೀಮ್ ಅಖ್ತರ್ ಪ್ರಮುಖ ವ್ಯಕ್ತಿ ಎಂದು ವರದಿಗಳು ಸೂಚಿಸುತ್ತಿವೆ. ಕೇವಲ 'ಐ ಲವ್ ಮುಹಮ್ಮದ್' ಘೋಷಣೆಗಾಗಿ ಲಕ್ಷಾಂತರ ಮುಸ್ಲಿಮರ ವಿರುದ್ಧ ಅನ್ಯಾಯವಾಗಿ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಎಐಎಂಐಎಂ ವಕ್ತಾರ ವಾರಿಸ್ ಪಠಾಣ್ ಕೂಡಾ ಆರೋಪಿಸುತ್ತಿದ್ದಾರೆ.

ಈ ಪ್ರತಿಭಟನೆಗಳ ಗಮನಾರ್ಹ ಅಂಶವೆಂದರೆ, ಶಾಹೀನ್ ಬಾಗ್‌ನಲ್ಲಿನಂತೆ ಮುಸ್ಲಿಂ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆ. ಲಖನೌದಲ್ಲಿ, ವಿವಾದಾತ್ಮಕ ಕವಿ ಮುನಾವರ್ ರಾಣಾರ ಪುತ್ರಿ ಹಾಗೂ ಸಮಾಜವಾದಿ ಪಕ್ಷದ ವಕ್ತಾರೆ ಸುಮಯ್ಯ ರಾಣಾ ಇತರ ಪ್ರತಿಭಟನಾಕಾರ್ತಿಯರೊಂದಿಗೆ ಪ್ರತಿಭಟನೆಯ ನೇತೃತ್ವ ವಹಿಸುತ್ತಿದ್ದಾರೆ. ಸಿಎಎ-ಎನ್‌ಆರ್‌ಸಿ ವಿವಾದದ ವೇಳೆ ಶಾಹೀನ್ ಬಾಗ್ ಪ್ರತಿಭಟನೆಯ ತಂತ್ರಗಳನ್ನು ಇದು ಪ್ರತಿಸೃಷ್ಟಿಸುತ್ತಿರುವಂತೆ ಕಾಣುತ್ತಿದೆ. ಶಾಹೀನ್ ಬಾಗ್‌ನಲ್ಲಿ ಶಾಂತಿಯುತ ಹಾಗೂ ಬಲಿಪಶುವಿನ ಚಿತ್ರಣವನ್ನು ಪ್ರದರ್ಶಿಸಿ ಜಗತ್ತಿನ ಸಹಾನುಭೂತಿ ಗಳಿಸಲು ಮಹಿಳೆಯರನ್ನು ಮುಂಚೂಣಿಯಲ್ಲಿರಿಸಲಾಗಿತ್ತು. ವಾಸ್ತವದಲ್ಲಿ, ಆಂದೋಲನದ ವರ್ಚಸ್ಸನ್ನು ಮೃದುವೆಂದು ಬಿಂಬಿಸಲು ಬೃಹತ್ ರಾಜಕೀಯ ಕಾರ್ಯತಂತ್ರವೊಂದರ ಭಾಗವಾಗಿಯೂ ಈ ತಂತ್ರವು ಆ ಆಂದೋಲನದ ಪ್ರಭಾವವನ್ನು ಹೆಚ್ಚಿಸಿತ್ತು.

ಐ ಲವ್ ಮುಹಮ್ಮದ್ ಬ್ಯಾನರ್‌ಗಳನ್ನು ಪ್ರದರ್ಶಿಸಿದ್ದಕ್ಕಾಗಿ ಎಫ್‌ಐಆರ್‌ಗಳನ್ನು ನೋಂದಾಯಿಸಲಾಗಿಲ್ಲ, ಬದಲಾಗಿ ಹಿಂದೂ ಪೋಸ್ಟರ್‌ಗಳನ್ನು ಧ್ವಂಸಗೊಳಿಸಿದ್ದರಿಂದ, ಕೋಮು ಉದ್ವಿಗ್ನತೆಯನ್ನು ಪ್ರಚೋದಿಸುವಂಥ ಘೋಷಣೆಗಳನ್ನು ಪರಿಚಯಿಸಿದ್ದರಿಂದ ಹಾಗೆ ಮಾಡಲಾಯಿತು ಎಂಬುದನ್ನು ಎತ್ತಿ ತೋರಿಸಲು ಹೆಚ್ಚಿನ ಮಾಧ್ಯಮಗಳು ಮತ್ತು ರಾಜಕೀಯ



ಪಕ್ಷಗಳು ವಿಫಲವಾಗಿವೆ. ನಿಜ ಹೇಳಬೇಕೆಂದರೆ, ಈ ಘಟನೆಗಳ ನೈಜಬಲಿಪಶುಗಳು ಹಿಂದೂಗಳೇ ಆಗಿದ್ದಾರೆ, ಆದರೆ ಹಿಂದೂ ದೇವತೆಗಳು/ಪೋಸ್ಟರ್‌ಗಳಿಗೆ ಅಗೌರವ ತೋರಿದ ಕಥೆಯನ್ನು ಬೇರೆಯದೇ ರೀತಿಯಲ್ಲಿ ತಿರುಗಿಸಲಾಯಿತು, ಮುಸ್ಲಿಮರನ್ನು ಕಿರುಕುಳದ ಬಲಿಪಶುಗಳೆಂದು ಚಿತ್ರಿಸಲಾಯಿತು. ಈ ವಾಸ್ತವದ ಉದ್ದೇಶಪೂರ್ವಕ ವಿರೂಪವು, ಮೂಲ ಅಪರಾಧದಿಂದ ಗಮನವನ್ನು ಬೇರೆಡೆಗೆ ಸೆಳೆಯಿತು ಮತ್ತು ರಾಜಕೀಯ ಶಕ್ತಿಗಳು ಸ್ವಂತಲಾಭಕ್ಕೆ ಪರಿಸ್ಥಿತಿಯನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು.

ಈ ತರಹದ ಘಟನೆಗಳ ಇಂಥ ತಪ್ಪಾದ ನಿರೂಪಣೆಯನ್ನು ದೇಶಾದ್ಯಂತ ವಿಸ್ತರಿಸಿ ರಾಜಕೀಯವಾಗಿ ಬಳಸಿಕೊಳ್ಳುವಲ್ಲಿನ ಕಾಂಗ್ರೆಸ್‌ನ ಪಾತ್ರ, ದೇಶದ ಜನತೆಗೆ ಹೊಸದೇನಲ್ಲ ಅಥವಾ ದಶಕಗಳಿಂದ ಇರುವ ಕಾಂಗ್ರೆಸ್ಸಿನ ತುಷ್ಟೀಕರಣದ ಧೋರಣೆಯನ್ನು ಅರಿತ ಯಾರಿಗೂ ಇದು ಆಶ್ಚರ್ಯವೆನಿಸಲೇ ಇಲ್ಲ. ಇಸ್ಲಾಮಿಕ್ ಭಯೋತ್ಪಾದಕರಿಗಿಂತ ಹಿಂದೂ ಮೂಲಭೂತವಾದಿ ಸಂಘಟನೆಗಳು ಹೆಚ್ಚು ಅಪಾಯಕಾರಿ ಎಂದು ರಾಹುಲ್ ಗಾಂಧಿ, ಚಿದಂಬರಂ ಮುಂತಾದ ಕಾಂಗ್ರೆಸ್ಸಿನ ನಾಯಕರುಗಳು ಹಿಂದೆ ಹೇಳಿರುವುದನ್ನು ಕೇಳಿದ್ದೇವೆ. ಅಷ್ಟೇ ಅಲ್ಲದೆ, ಇದು 'ಹಿಂದೂ ಭಯೋತ್ಪಾದನೆ' ಎಂಬ ಸುಳ್ಳುಸಿದ್ಧಾಂತವನ್ನು ಹಿಂದೊಮ್ಮೆ ಆರೋಪಿಸಿದ ಪಕ್ಷವೇ. ಒಂದುಕಡೆ 'ಮೊಹಬ್ಬತ್ ಕಿ ದುಕಾನ್'ನಂಥ ಘೋಷಣೆಗಳನ್ನು ಬಳಸುವ ಕಾಂಗ್ರೆಸ್ ನಾಯಕರು, ಈ ಸಂದರ್ಭದಲ್ಲಿ ಸತ್ಯವನ್ನು ಅರಿಯುವಲ್ಲಿ ಆಸಕ್ತಿ ತೋರದೇ, ತನಿಖೆಗಳಲ್ಲಿ ವಿಶ್ವಾಸ ಇರಿಸದೇ ಅಥವಾ ತನಿಖಾ ವರದಿಗಳು ಬರುವ ತನಕ ಕಾಯದೇ, ವಿಧ್ವಂಸಕತೆ, ಹಿಂಸಾಚಾರ ಮತ್ತು ಪೊಲೀಸರ ಮೇಲಿನ ದಾಳಿಯಲ್ಲಿ ತೊಡಗಿರುವ ಗುಂಪುಗಳಿಗೆ ಪರೋಕ್ಷವಾಗಿ ಬೆಂಬಲಿಸಲು ತವಕಿಸುತ್ತಿರುವಂತೆ ಕಾಣುತ್ತಿದೆ. ಬಿಹಾರದಲ್ಲಿ ಚುನಾವಣೆ ಸಮೀಪಿಸುತ್ತಿದ್ದು, ಶತಾಯಗತಾಯ ಗೆಲ್ಲಲೇಬೇಕೆಂಬ ಹಪಹಪಿಯಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಶ್ರಮಿಸುತ್ತಿವೆ. ಈಗ ಮುಸ್ಲಿಮರ ಪರನಿಂತರೆ, ಬಿಹಾರದಲ್ಲಿ ಮುಸ್ಲಿಮರ ಮತಗಳ ಕ್ರೋಡೀಕರಣ ಸುಲಭವಾಗಬಹುದು ಎಂದು ಕಾಂಗ್ರೆಸ್ ಆಲೋಚಿಸುತ್ತಿದ್ದಂತಿದೆ.

ಐ ಲವ್ ಮುಹಮ್ಮದ್ ಚಳವಳಿಯು ಸ್ವಯಂಪ್ರೇರಿತವಾದ ಹಾಗೂ ಕೇವಲ ನಂಬಿಕೆಯ ಆಧಾರದ ಪ್ರದರ್ಶನವಾಗಿರಲಿಲ್ಲ, ಇದು ಎಚ್ಚರಿಕೆಯಿಂದ ರೂಪಿಸಲಾದ ಅಭಿಯಾನವಾಗಿದೆ, ಭಾವನೆಗಳನ್ನು ಪ್ರಚೋದಿಸಲು ಮತ್ತು ರಾಜಕೀಯ ಲಾಭಕ್ಕಾಗಿ ಬಲಿಪಶುವಿನ ಚಿತ್ರಣವನ್ನು ರಚಿಸಲು ವಿನ್ಯಾಸಗೊಳಿಸಲಾಗಿದೆ ಎನ್ನುವುದು ಎದ್ದು ಕಾಣುತ್ತಿದೆ. ಧಾರ್ಮಿಕ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳುವ ಮತ್ತು ಸತ್ಯವನ್ನು ತಿರುಚುವ ಮೂಲಕ, ರಾಜಕೀಯ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಸ್ಥಳೀಯ ಘರ್ಷಣೆಯನ್ನು ರಾಷ್ಟ್ರವ್ಯಾಪಿ ಫ್ಲ್ಯಾಶ್ ಪಾಯಿಂಟ್ ಆಗಿ ಪರಿವರ್ತಿಸಲು ಯತ್ನಿಸುತ್ತಿರುವುದರಲ್ಲಿ ಅನುಮಾನವಿಲ್ಲ.

ಸತತವಾಗಿ 3 ಚುನಾವಣೆಗಳನ್ನು ಗೆದ್ದು ಕೇಂದ್ರದಲ್ಲಿ ಭದ್ರವಾಗಿರುವ ಸರಕಾರವನ್ನುಬುಡಮೇಲು ಮಾಡುವಲ್ಲಿನ ಎಲ್ಲ ಯತ್ನಗಳೂ ವ್ಯರ್ಥವಾದವು. ಇವಿಎಂಗಳನ್ನು ದೂರಿಯಾಯ್ತು, ಮತಗಳ್ಳತನದ ಆರೋಪ ಮಾಡಿಯಾಯ್ತು, ಆದರೂ ವಿಪಕ್ಷಗಳಿಗೆ ಚುನಾವಣೆಗಳನ್ನು ಗೆಲ್ಲಲಾಗುತ್ತಿಲ್ಲ, ಗಣತಿಯ ಹೆಸರಿನಲ್ಲಿ ಜಾತಿ ಜಾತಿಗಳ ಮಧ್ಯೆ ಬೆಂಕಿ ಹಚ್ಚಿದರೂ ಪ್ರಯೋಜನ ಅಷ್ಟಾಗಿ ಕಾಣುತ್ತಿಲ್ಲ. ಹಾಗಾದರೆ ಸರಕಾರಗಳನ್ನು ಉರುಳಿಸುವ ಇನ್ನುಳಿದ ದಾರಿಗಳು ಯಾವುದು? ಒಂದೇ ದಾರಿ. ಶ್ರೀಲಂಕಾ, ಬಾಂಗ್ಲಾ ದೇಶ, ನೇಪಾಳಗಳು ತೋರಿಸಿದ ದಾರಿ ನಮ್ಮದೂ ಆಗಬಹುದಾ ಎಂದು ಕೆಲವು ಹಿತಾಸಕ್ತಿಗಳು ಪರೀಕ್ಷಿಸುತ್ತಿರುವಂತಿದೆ. ವೃಥಾ ಅಪವಾದ ಮಾಡೋಣವೆಂದರೆ 12 ವರ್ಷದ ಮೋದಿಯವರ ನೇತೃತ್ವದ ಕೇಂದ್ರ ಸರಕಾರ ಅಥವಾ ಉತ್ತರಪ್ರದೇಶದ ಆದಿತ್ಯನಾಥರ ಆಡಳಿತದಲ್ಲಿ ಗಟ್ಟಿಯಾದ ಭ್ರಷ್ಟಾಚಾರದ ಪ್ರಕರಣಗಳು ಕಾಣುತ್ತಿಲ್ಲ. ನಕ್ಸಲರ ಮೂಲಕ ಸಮಾಜದಲ್ಲಿ ಅಶಾಂತಿ ಹರಡೋಣವೆಂದರೆ, ಅವರೂ ಒಂದೋ ಬೇಷರತ್ತಾಗಿ ಶರಣಾಗುತ್ತಿದ್ದಾರೆ ಅಥವಾ ಸೈನ್ಯದ ಗುಂಡಿಗೆ ಬಲಿಯಾಗುತ್ತಿದ್ದಾರೆ. ಈಗ ಉಳಿದಿರುವ ಒಂದೇ ದಾರಿಯೆಂದರೆ, ಸಾರ್ವತ್ರಿಕ ದಂಗೆಗಳು. ಕೋಮುಗಲಭೆ-ಸಾರ್ವತ್ರಿಕ ದಂಗೆಗಳ ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿಸುವುದು. ಈ ತಂತ್ರದ ಬಳಕೆಯಿಂದ ನೆರೆರಾಷ್ಟ್ರಗಳಲ್ಲಿ ಚುನಾಯಿತ ಸರಕಾರಗಳನ್ನೇ ತಲೆಕೆಳಗಾಗಿಸುವಲ್ಲಿ ಯಶಸ್ಸನ್ನು ಕಂಡಾಗಿದೆ, ಭಾರತದಲ್ಲೂ ಈ ತಂತ್ರವನ್ನೇಕೆ ಬಳಸಬಾರದು ಎಂಬ ವಿದೇಶಿ ಬೆಂಬಲಿತ/ನಿರ್ದೇಶಿತ ಗುಂಪುಗಳು ಯತ್ನಿಸುತ್ತಿರುವಂತೆ ಭಾಸವಾಗುತ್ತಿದೆ.

ಆದರೆ, ಉತ್ತರಪ್ರದೇಶದಲ್ಲಿರುವುದು ಬಿಜೆಪಿ ಸರಕಾರ ಎನ್ನುವುದಕ್ಕಿಂತ ಹೆಚ್ಚಾಗಿ, ಯೋಗಿ ಆದಿತ್ಯನಾಥರ ಸರಕಾರವಾಗಿರುವುದರಿಂದ ಪರಿಸ್ಥಿತಿ ಇನ್ನೂ ನಿಯಂತ್ರಣದಲ್ಲಿದೆ ಎನ್ನಬಹುದು. ಮನೆಮುಂದೆ ಪೋಸ್ಟರ್ ಅಂಟಿಸಿಕೊಂಡವರೆಲ್ಲ, ಈಗ ನಿಧಾನವಾಗಿ ತಾವೇ ಕೀಳುತ್ತಿದ್ದಾರೆ. ಅಲ್ಲಿ ಯಾರಾದರೂ ದಂಗೆಯೆಬ್ಬಿಸುವ ಕಾರ್ಯಮಾಡಿದರೆ ಅವರ ಮೂರು ತಲೆಮಾರುಗಳು ನೆನಪಿಟ್ಟುಕೊಳ್ಳುವ ಪಾಠವನ್ನು ಕಲಿಸಲಾಗುವುದು ಎಂದು ಆದಿತ್ಯನಾಥರೇ ಗುಡುಗಿದ್ದಾರೆ. ಉತ್ತರ ಪ್ರದೇಶಕ್ಕೇನೋ ಆದಿತ್ಯನಾಥರಿದ್ದಾರೆ; ಆದರೆ, ಬೇರೆ ರಾಜ್ಯಗಳಿಗೆ ಹಾಗಲ್ಲವಲ್ಲ. ಪಾಕಿಸ್ತಾನ, ಬಾಂಗ್ಲಾಗಳಿಂದ ಸಾವಿರಾರು ಅಕ್ರಮ ವಲಸಿಗರು ರಾಜ್ಯದಲ್ಲಿ ನೆಲೆನಿಂತರೂ, ಏನೂ ತಿಳಿಯದವರಂತೆ ತಣ್ಣಗೆ ಪ್ರತಿಕ್ರಿಯಿಸುವ ಸರಕಾರಗಳೇ ಹೆಚ್ಚಿವೆ. ಹಾಗಾಗಿ, ಪರಿಸ್ಥಿತಿ ಕೈಮೀರಿ ಹೋಗುವ ಮುನ್ನ, ಉಳಿದ ರಾಜ್ಯಗಳ ಮುಖ್ಯಮಂತ್ರಿಗಳು ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ತುಷ್ಟೀಕರಣದ ರಾಜಕಾರಣವನ್ನು ಬಿಟ್ಟು ಎಚ್ಚರಗೊಳ್ಳುವುದೊಳಿತು.

POK- ಪಾಕ್ ಆಕ್ಯುಪೈಡ್ ಕಪ್

ಸಿನಿಗನ್ನಡ

ಕಾಂತಾರ ಪಾರ್ಟ್ 1' ಸಿನಿಮಾ ದೊಡ್ಡ ಸದ್ದು ಮಾಡುತ್ತಿದೆ. ಎಂದಿನಂತೆ ಬಹುತೇಕರು 'ಸೂಪರ್' ಅಂತಿದ್ದರೆ, ಕೆಲವರು 'ಮಾಮೂಲು' ಅಂತ ಮೂಗು ಮುರಿಯುತ್ತಿದ್ದಾರೆ. ಏನೇ ಆದ್ರೂ ಬಾಲಿವುಡ್ ಮಂದಿ ಕೂಡಾ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಕಾಂತಾರ ಚಿತ್ರಮಂದಿರಗಳಲ್ಲಿ ಅಬ್ಬರಿಸುತ್ತಿದೆ. ಅನೇಕ ಸಿನಿಮಾ ಮಂದಿ ಈ ಚಿತ್ರವನ್ನು ಮೆಚ್ಚಿ ಹೊಗಳುತ್ತಿದ್ದಾರೆ. ಅವರಲ್ಲಿ ಪರಭಾಷೆಯವರೂ ಇದ್ದಾರೆ ಅನ್ನೋದು ವಿಶೇಷ. ಈ ಸಾಲಿನಲ್ಲಿ ಅಂದಕಾಲತ್ತಿಲ್ ಗ್ರೇಟ್ ಡೈರೆಕ್ಟರ್ ರಾಮ್‌ಗೋಪಾಲ್ ವರ್ಮಾ ಕೂಡಾ ಇದ್ದಾರೆ. 'ದೇಶದ ಎಲ್ಲ ಸಿನಿಮಾ ಮೇಕರ್ಸ್‌ಗೂ ನಾಚಿಕೆ ಆಗಬೇಕು, ಹಾಗಿದೆ ಕಾಂತಾರ' ಅಂತ ಹೇಳಿದ್ದಾರೆ ವರ್ಮಾ. ಈ ಸಿನಿಮಾ ಚೆನ್ನಾಗಿದ್ರೆ ಇತರ ಮೇಕರ್ಸ್‌ಗೆ ಯಾಕೆ ನಾಚಿಕೆ ಆಗಬೇಕು ಅಂತ ಅವರು ಹೇಳಿಲ್ಲ. ಆದರೆ ಒಂದು ಮಾತಂತೂ ನಿಜ. ಬೇರೆ ಯಾರಿಗೆ ಆಗದೇ ಇದ್ರೂ ರಾಮ್‌ಗೋಪಾಲ್ ವರ್ಮಾ ಅವರಿಗಂತೂ ನಾಚಿಕೆ ಆಗಲೇಬೇಕು. ಒಂದು ಕಾಲದಲ್ಲಿ 'ಇಂಡಸ್ಟ್ರಿ ಆಳುವಂಥ ಆಳು' ಅಂತ ಹೆಸರು ಮಾಡಿದ್ದ ಈ ಆಸಾಮಿ, ಈಗ ಆಲ್‌ಮೋಸ್ಟ್ ಸೆಕ್ಸ್ ಸಿನಿಮಾ ಎನ್ನುವಂಥ ಸಿನಿಮಾಗಳನ್ನು ಮಾಡ್ತಾ ಇದ್ದಾರೆ. ಎಳೆ ವಯಸ್ಸಿನ ಹುಡುಗಿಯರ ಅಂಗಾಂಗಗಳನ್ನೇ ಬಂಡವಾಳವಾಗಿ ಇಟ್ಕೊಂಡು ತಲೆ-ಬುಡ ಇಲ್ಲದ ಕಥೆ ಮಾಡಿ ಮೈ ತೋರಿಸೋ ಸಿನಿಮಾ ಮಾಡ್ತಾ ಇದ್ದಾರೆ. ಅಷ್ಟೇ ಅಲ್ಲ ತಮ್ಮ ಸೋಷಿಯಲ್ ಮೀಡಿಯಾ ಪೇಜುಗಳಲ್ಲೂ ತಮ್ಮ ಹೀರೋಯಿನ್‌ಗಳೊಡನೆ, ಅಷ್ಟೇ ಅಲ್ಲದೆ ಪೋರ್ನ್ ಸ್ಟಾರ್‌ಗಳೊಡನೆ ಅಸಹ್ಯ, ಅಸಭ್ಯವಾಗಿ ಇರುವಂಥ ಫೋಟೋಗಳನ್ನು ಹಾಕಿ ವಿಕೃತಿ ಪ್ರದರ್ಶನ ಮಾಡ್ತಾ ಇದ್ದಾರೆ ವರ್ಮಾ. ಹಾಗಾಗಿ ಎಳೆ ವಯಸ್ಸಿನಲ್ಲಿ ಒಳ್ಳೊಳ್ಳೆ ಸಿನಿಮಾ ಮಾಡಿ 'ಸತ್ಯ'ದರ್ಶನ ಮಾಡಿಸಿದ್ದ ವರ್ಮಾ ಈಗ ತಮ್ಮ 'ಕಂಪನಿ' ಬದಲಾಯಿಸಿಕೊಂಡು 'ರಂಗೀಲಾ' ಆಟಗಳನ್ನು ಆಡ್ತಾ ಇರೋದನ್ನು ನೋಡಿದಾಗ ಖಂಡಿತಾ ಕಾಂತಾರ ಸಿನಿಮಾ ನೋಡಿ ವರ್ಮಾ ಅಂಥವರಿಗೆ ನಾಚಿಕೆ ಆಗಬೇಕು ಅಂದ್ರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ತುಂಟರಗಾಳಿ
ಹರಿ ಪರಾಕ್
vveditoped@gmail.com

ಲೂಸ್ ಟಾಕ್ ▸▸ ಮೊಹ್ಸೀನ್ ನಖ್ವಿ

- **ಏನ್ ಸರ್, ಇಂಡಿಯಾದವರಿಗೆ ಗೆದ್ರೂ ಕಪ್ ಕೊಡಲ್ಲ ಅಂದುಬಿಟ್ರಲ್ಲ?**
- ಮತ್ತೆ, ಆಟ ಆಡಿದ ಮೇಲೆ ಕುಲುಕೋಕೆ ಕೈ ಕೊಡದೇ ಇರೋರ ಕೈಗೆ, ಕಪ್ ಯಾಕೆ ಕೊಡಬೇಕು? ಕಪ್ಪಾ? ನಿಮಗೇಕೆ ಕೊಡಬೇಕು ಕಪ್ಪಾ?
- **ಅವ್ರು ಕೈ ಕುಲುಕಲಿಲ್ಲ ಅಂತ ಇಷ್ಟೊಂದು ಮುಲುಕ್ತೀರಲ್ಲ, ನೀವು ಕಪ್ ಕೊಡಲ್ಲ ಅಂದಿದ್ದಕ್ಕೆ ಇಂಡಿಯನ್ ಪ್ಲೇಯರ್ಸ್ ರಿಯಾಕ್ಷನ್ ಏನಿತ್ತು?**
- ಏನೋ ಗೊತ್ತಿಲ್ಲ. ಆದ್ರೂ ಕೆಲವರು, ನಖ್ವಿ ಕಪ್ ಕೊಡಲ್ಲ ಅಂದಿದ್ದಕ್ಕೆ ನಾವೆಲ್ಲ ನಕ್ವಿ ಅಂತ ಆಡಿಕೊಳ್ತಾ ಇದ್ರಂತೆ.
- **ರಾಜಕೀಯನ ಆಟದಲ್ಲಿ ಮಿಕ್ಸ್ ಮಾಡೋದು ಸರಿನಾ?**
- ನೀವೇ ಶುರು ಮಾಡಿದ್ದು. ಈಗ ಈ ಕಪ್ ಕಾಶ್ಮೀರ ಇದ್ದಂಗೆ. ಸದ್ಯಕ್ಕೆ ಈ ಏಷ್ಯಾ ಕಪ್, POK ಅಂದ್ರೆ ಪಾಕ್ ಆಕ್ಯುಪೈಡ್ ಕಪ್ ಇದ್ದಂಗೆ.
- **ಹೋಗ್ಲಿ, ನಿಮ್ಮ ಕೈಯಿಂದ ಕಪ್ ತಗೊಳ್ಳಲ್ಲ ಅಂದ ಸೂರ್ಯಕುಮಾರ್ ಯಾದವ್‌ಗೆ ಏನ್ ಹೇಳ್ತೀರಾ?**
- ಜಮೀರ್ ಅಹ್ಮದ್ ಸ್ಟೈಲಲ್ಲಿ, 'ಏನಪ್ಪಾ ಸೂರ್ಯ, ನಿಂಗೆ ದೇವ್ರು ಒಳ್ಳೇದ್ ಮಾಡ್ತದಾ, ಥೂ ನಿನ್ ಜನ್ಮಕ್ಕೆ' ಅಂತ ಬೈಬೇಕು ಅನ್ನಿಸುತ್ತೆ.
- **ಅಷ್ಟೇ ಮಾಡೋಕಾಗೋದು ನಿಮ್ ಕೈಲಿ ಪಾಪ, ಆದ್ರೂ ಇಷ್ಟೊಂದ್ ಹಠ ಸರೀನಾ.. ಎಲ್ಲದಕ್ಕೂ ಒಂದ್ ಲಿಮಿಟ್ ಇರುತ್ತೆ ಅಲ್ವಾ?**
- ಹೌದು SKY ಈಸ್ ದ ಲಿಮಿಟ್

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಒಂದಿನ ಕಾರ್‌ನಲ್ಲಿ ಒಬ್ಬ ವ್ಯಕ್ತಿ ತುಂಬಾ ಫಾಸ್ಟ್ ಆಗಿ ಹೋಗ್ತಾ ಇದ್ದ. ಹೈವೇನಲ್ಲಿ ಟ್ರಾಫಿಕ್ ಪೊಲೀಸ್ ಹಿಡಿದ್ರು. 'ಯಾಕೆ ಓವರ್ ಸ್ಪೀಡಿಂಗ್ ಮಾಡ್ತಾ ಇದ್ದೀರಾ?' ಅಂತ ಕೇಳಿದ್ದಕ್ಕೆ ಆತ 'ನನ್ನ ಕೆಲಸಕ್ಕೆ ಲೇಟ್ ಆಗ್ತಾ ಇದೆ, ಅದಕ್ಕೆ ಫಾಸ್ಟ್ ಆಗಿ ಹೋಗ್ತಾ ಇದ್ದೆ' ಅಂದ. 'ಏನಂಥ ಅರ್ಜೆಂಟ್ ಕೆಲ್ಸ? ಎಲ್ಲಿ ಕೆಲ್ಸ ಮಾಡೋದು ನೀನು? ಏನು ನಿನ್ನ ಕೆಲ್ಸ?' ಅಂತ ಕೇಳಿದ್ರು ಪೊಲೀಸ್. ಅದಕ್ಕೆ ಆ ವ್ಯಕ್ತಿ 'ನಾನು ಜಂಬೋ ಸರ್ಕಸ್‌ನಲ್ಲಿ ಕೆಲ್ಸ ಮಾಡ್ತಾ ಇರೋದು, ಅಲ್ಲಿ ನಾನು ಬ್ಯಾಲೆನ್ಸಿಂಗ್ ಕೆಲ್ಸ ಮಾಡ್ತೀನಿ. ಒಂದ್ 20 ರಿಂಗ್‌ಗಳನ್ನ ಗಾಳಿಯಲ್ಲಿ ಎಸೆದು, ಅವು ಕೆಳಗೆ ಬರ್ತಾ ಇದ್ದ ಹಾಗೆ ಹಿಡಿಯುತ್ತಾ, ಮತ್ತೆ ಕೈಯಲ್ಲಿರೋದನ್ನ ಮೇಲೆ ಎಸೆದು ಹಿಡಿಯುತ್ತಾ ಬ್ಯಾಲೆನ್ಸ್ ಮಾಡೋದು ನನ್ನ ಕೆಲಸ' ಅಂದ. ಅದಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ 'ನಿನ್ನ ನಂಬೋದು ಹೆಂಗೆ? ಎಲ್ಲಿ, ಒಂದ್ಸಲ ಇಲ್ಲೇ ಮಾಡಿ ತೋರಿಸು' ಅಂದ. ಅದಕ್ಕೆ ಆ ವ್ಯಕ್ತಿ, 'ಇಲ್ಲ ರಿಂಗ್‌ಗಳೆಲ್ಲಾ ಅಲ್ಲೇ ಸರ್ಕಸ್‌ನಲ್ಲಿ ಇರ್ತಾವೆ. ನನ್ನತ್ರ ಇರಲ್ಲ' ಅಂದ. ಹೀಗೆ ಪೊಲೀಸ್ ಮತ್ತು ಆ ವ್ಯಕ್ತಿ ಮಧ್ಯೆ ಸಂಭಾಷಣೆ ನಡೆಯುತ್ತಿರುವಾಗ ಅಲ್ಲಿಗೆ ಖೇಮು ಕಾರಲ್ಲಿ ಬಂದ. ಖೇಮು ಸಂಜೆ ಹೊತ್ತಿಗೇ ಕುಡಿದು ಫುಲ್ ಟೈಟ್ ಆಗಿದ್ದ. ಪೊಲೀಸ್ ಅವನನ್ನು ನೋಡಿ, ಕೈ ತೋರಿಸಿ ಗಾಡಿ ನಿಲ್ಲಿಸಿ, 'ಇವ್ರದ್ದು ಮುಗಿದ ಮೇಲೆ ನಿಮ್ಮನ್ನ ಚೆಕ್ ಮಾಡ್ತೀನಿ, ಗಾಡಿ ಸೈಡಿಗೆ ಹಾಕಿ' ಅಂತ ಹೇಳಿದ. ಸರಿ, ಇವರಿಬ್ಬರೂ ಮಾತಾಡ್ತಾ ಇರೋದನ್ನ ಮೊದಲೇ ಗಮನಿಸಿದ್ದ ಖೇಮು, ಅಲ್ಲೇ ಸೈಡಲ್ಲಿ ನಿಂತುಕೊಂಡ. ಪೊಲೀಸ್ ಮತ್ತೆ ಆ ಮೊದಲನೇ ವ್ಯಕ್ತಿಯ ಬಳಿ ಹೋದ. ಆ ವ್ಯಕ್ತಿ ರಿಂಗ್ ಇಲ್ಲ ಅಂದಿದ್ದಕ್ಕೆ, 'ಸರಿ ನನ್ನ ಕಾರ್‌ನಲ್ಲಿ ಒಂದಷ್ಟು ರಿಂಗ್ಸ್ ಇದ್ದಾವೆ, ಅವುಗಳನ್ನೇ ಎಸೆದು, ಹಿಡಿದು ಬ್ಯಾಲೆನ್ಸ್ ಮಾಡಿ ತೋರಿಸು' ಅಂದ ಪೊಲೀಸ್. ಆ ವ್ಯಕ್ತಿ ಒಪ್ಪಿಕೊಂಡು ಪೊಲೀಸ್ ತಂದುಕೊಟ್ಟ ಆ ರಿಂಗ್‌ಗಳನ್ನ ಮೇಲೆ ಎಸೆದು ಹಿಡಿಯುತ್ತಾ ಬ್ಯಾಲೆನ್ಸ್ ಮಾಡಿ ತೋರಿಸಿದ. ಅದನ್ನು ನೋಡಿ ಪೊಲೀಸ್‌ಗೆ ಅವನು ಸರ್ಕಸ್‌ನಲ್ಲಿ ಕೆಲಸ ಮಾಡ್ತಾನೆ ಅಂತ ನಂಬಿಕೆ ಬಂತು. ಸರಿ, ನೀನಿನ್ನು ಹೊರಡು ಅಂತ ಅವನನ್ನು ಕಳಿಸಿದ. ಇದನ್ನು ನೋಡಿದ ಖೇಮು, ತನ್ನ ಕಾರನ್ನು ಅಲ್ಲೇ ಬಿಟ್ಟು, ಸೀದಾ ಹೋಗಿ ಪೊಲೀಸ್ ಗಾಡಿಯಲ್ಲಿ ಕುಳಿತುಬಿಟ್ಟ. ಪೊಲೀಸ್‌ಗೆ ಆಶ್ಚರ್ಯ ಆಯ್ತು. 'ಯಾಕೆ ನೀನೇ ಬಂದು ಪೊಲೀಸ್ ಕಾರಲ್ಲಿ ಕೂತೆ?' ಅಂತ ಕೇಳಿದ್ದಕ್ಕೆ ಖೇಮು ಹೇಳಿದ 'ಅಯ್ಯೋ, ಅಷ್ಟೆಲ್ಲಾ ರಿಂಗ್ ಎಸೆದು ಹಿಡಿದು ಬ್ಯಾಲೆನ್ಸ್ ಮಾಡಿ ತೋರಿಸಿ, ನಾನು ಕುಡಿದಿಲ್ಲ ಅಂತ ಪ್ರೂವ್ ಮಾಡೋಕೆ ನನ್ ಕೈಲಾಗಲ್ಲ, ನಾನೇ ಹೇಳ್ತಾ ಇದ್ದೀನಿ, ಫುಲ್ ಟೈಟಾಗಿದ್ದೀನಿ. ಅರೆಸ್ಟ್ ಮಾಡಿ ನನ್ನ'.

ಲೈನ್ ಮ್ಯಾನ್

- **ಮತ್ತೆ ಮತ್ತೆ ದೇಶದ್ರೋಹಿ ಕೆಲಸ ಮಾಡಲು 'ಪ್ರಯತ್ನ' ಮಾಡುವವನು**
- 'ಟ್ರೈ'ಟರ್
- **ಕರಾಟೆ ಕಲಿತ ಹುಡುಗಿ**
- ಹೊಡೆದಾಡುವಾ ಕಾಮನಬಿಲ್ಲು
- **ಎಣ್ಣೆ ಹೊಡೆಯುವ ಪಂಜಾಬಿ ಹುಡುಗಿ**
- ಪಂಜಾಬಿ 'ಕುಡಿ'
- **ಸಣ್ಣ ಪುಟ್ಟ ಸಾಲ ಕೊಡುವ ಕೆಲಸ ಮಾಡುವವನ ಮಾತು**
- ಕಾಯಕವೇ ಕೈಸಾಲ
- **ಹಳಸಿದ ಆಹಾರ ತಿಂದು ಗಟ್ಟಿಮುಟ್ಟಾಗಿರುವವನ ಮಾತು**
- 'ಬೂಸ್ಟ್' ಈಸ್ ದ ಸೀಕ್ರೆಟ್ ಆಫ್ ಮೈ ಎನರ್ಜಿ
- **ಪ್ರಾಣಿಗಳು ಯಾರನ್ನಾದರೂ ಕೊಂದರೆ ಅವುಗಳನ್ನೇಕೆ ಜೈಲಿಗೆ ಹಾಕಲ್ಲ?**
- ಯಾಕಂದ್ರೆ ಅವು 'ಬಾಲಾ'ಪರಾಧಿಗಳು
- **ಹಿಂದೂ ರುದ್ರಭೂಮಿಯಲ್ಲಿ ಬಿಬಿಎಂಪಿ ಕಚೇರಿ**
- ಇವರು ಜನಗಳನ್ನಷ್ಟೇ ಅಲ್ಲ, ಹೆಣಗಳನ್ನೂ 'ಬದುಕೋಕೆ ಬಿಡಲ್ಲ'
- **ಕವಿ ಆಗಿ 14 ವರ್ಷ ಅನುಭವ ಇರೋನ ಸಾಧನೆ**
- ಕ'ವನವಾಸ'
- **ಸಾರಿಗೆ ಗಾದೆ**
- ಬಾಯಿ ಬಿಟ್ಟು ಕೇಳದೇ ಇದ್ರೆ, ಬಿಎಂಟಿಸಿ ಡ್ರೈವರ್ರೂ ಸ್ಟಾಪ್ ಕೊಡಲ್ಲ
- **ಬೆಳೆಗೆ ಸರಿಯಾದ ಬೆಲೆ ಸಿಗದ ರೈತನ ಸಂಕಟ**
- 'ಮಂಡಿ' ನೋವು

ಜಿಂಕೆಮರಿಯ ಬೇಟೆಗೆ ಬಲೆ ಬೀಸಿದ ಅಡುಗೆಭಟ್ಟ...

ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಭಾಗ-20

ತನ್ನ ಡಿಸ್ಟಿಲರಿ ಸಾಮ್ರಾಜ್ಯದ ರಕ್ಷಣೆಗೆಂದು ರಾಜಕೀಯವನ್ನು 'ಉಪವೃತ್ತಿ'ಯನ್ನಾಗಿಸಿಕೊಂಡಿದ್ದ 'ಮದ್ಯದೊರೆ'ಗೆ ಸಮಾಜಸೇವಾ ಸಂಸ್ಥೆಯೊಂದಿಗೆ ಯಾವ ಸಂಬಂಧವಿಲ್ಲದಿದ್ದರೂ ವಾಮಮಾರ್ಗದಲ್ಲಿ ಅದರೊಳಗೆ ತೂರಿಕೊಳ್ಳಲು ಹವಣಿಸಿದ್ದು, ಕಥನಕ್ಕೆ ಕಿವಿಯಾಗಿದ್ದ ಶಿಷ್ಯರಲ್ಲಿ ಒಂದೆಡೆ ಅಚ್ಚರಿಯನ್ನೂ, ಮತ್ತೊಂದೆಡೆ ಹೇವರಿಕೆಯನ್ನೂ ಉಂಟುಮಾಡಿತ್ತು. ಸಂಸ್ಥೆಯ ಆವರಣದಲ್ಲಿ ನಕಾರಾತ್ಮಕ ಛಾಯೆ ತುಂಬಿಕೊಂಡಿದೆ ಎಂದು ಮ್ಯಾನೇಜರ್ ಶುರುವಿನಲ್ಲಿ ಅವಧೂತರಲ್ಲಿ ಅಲವತ್ತುಕೊಂಡಿದ್ದಾಗ, ''ಅಲ್ಲೊಂದು ಕಳ್ಳಬೆಕ್ಕು ಸೇರಿಕೊಂಡಿದೆ, ಅದನ್ನು ತೊಲಗಿಸಿದರೆ ವಾತಾವರಣ ತಿಳಿಯಾಗುತ್ತದೆ'' ಎಂದು ಅವಧೂತರು ಒಗಟಿನಂತೆ ಉತ್ತರಿಸಿದ್ದು ಶಿಷ್ಯರಿಗೆ ಈಗ ನೆನಪಾಯಿತು.

ಆ ನೆನಕೆಯಲ್ಲೇ ಶಿಷ್ಯರೊಬ್ಬರು, ''ಗುರುಗಳೇ, ನಮಗೆ ಒಗ್ಗದ ದ್ರವ್ಯವೊಂದು ದೇಹದೊಳಗೆ ಪ್ರವೇಶಿಸಿದಾಗ, ಅದನ್ನು ಅಲ್ಲಿಂದ ಹೊರದಬ್ಬಲು ಪ್ರತಿಕಾಯ ವ್ಯವಸ್ಥೆಯು ಇನ್ನಿಲ್ಲದಂತೆ ಹೋರಾಡುತ್ತದೆ ಎಂದು ಶಾಲೆಯಲ್ಲಿ ಓದಿದ್ದೆವು. ಆದರೆ, ಸಂಸ್ಥೆಗೆ ಹೊರಗಿನವರಾಗಿದ್ದ ಈ 'ಲಿಕ್ಕರ್ ಕಿಂಗ್' ಕಳ್ಳಬೆಕ್ಕಿನಂತೆ ಸುಲಭವಾಗಿ ಒಳಗೆ ತೂರಿಕೊಂಡಿದ್ದಾರೂ ಹೇಗೆ? ಅದಕ್ಕೆ ಯಾರಿಂದಲೂ ಸಣ್ಣಮಟ್ಟಿಗಿನ ಪ್ರತಿರೋಧವೂ ವ್ಯಕ್ತವಾಗಲಿಲ್ಲವೇ?'' ಎಂದು ಕೇಳಿದರು.

ವಿಷಾದದ ನಗೆ ನಕ್ಕ ಅವಧೂತರು, ''ಯಾರು ಯಾಕೆ ಪ್ರತಿರೋಧಿಸ್ತಾರಪ್ಪಾ? 'ಕಾಮಿನಿ-ಕಾಂಚಾಣ'ವೆಂಬ ಪ್ರಲೋಭನೆಗಳಿಗಿರುವ 'ಪ್ರಭಾವ-ಪ್ರಕಾಶ' ಅದೆಷ್ಟರ ಮಟ್ಟಿಗೆ ಕಣ್ಣು ಕೋರೈಸುವಂತೆ ಇರುತ್ತದೆಯೆಂದರೆ, ಅದರ ಎದುರು ಎಲ್ಲ ನೀತಿ-ನಿಜಾಯತಿಗಳೂ ಹೊಳಪು ಕಳೆದುಕೊಂಡುಬಿಡುತ್ತವೆ. ಇಲ್ಲೂ ಅದೇ ಆಗಿದ್ದು. ಸಂಸ್ಥೆಯ ಅಭಿವೃದ್ಧಿ ಸಮಿತಿಯ ಸದಸ್ಯರಾಗಿದ್ದ 'ಹಿರಿ-ಮರಿ' ರಾಜಕಾರಣಿಗಳಿಬ್ಬರ ಉನ್ನತ ರಾಜಕೀಯ ಬಯಕೆಗಳನ್ನು ಅರಿತ ಕಳ್ಳಬೆಕ್ಕು, ಅದಕ್ಕೆ ಬೇಕಾದ ದುಡ್ಡುಕಾಸನ್ನು ತಾನು ಹೊಂದಿಸುವುದಾಗಿಯೂ, ಅದಕ್ಕೆ ಪ್ರತಿಯಾಗಿ ಅಭಿವೃದ್ಧಿ ಸಮಿತಿಯ ಮೇಲುಸ್ತುವಾರಿಯನ್ನು ತನ್ನ ಸುಪರ್ದಿಗೆ ಬಿಡಬೇಕೆಂದೂ ಅವರಿಬ್ಬರಿಗೆ ಗಾಳ ಹಾಕಿತು. 'ಹೋಲಿಕೆಯಲ್ಲಿ, ಲಿಕ್ಕರ್ ವ್ಯಾಪಾರವೇ ಬೃಹತ್ ಶಾಮಿಯಾನಾದಷ್ಟು ವ್ಯಾಪಕವಾಗಿರುವಾಗ, ಪುಟಗೋಸಿ ಗಾತ್ರದ ಈ ಸಮಿತಿಯ ಮೇಲುಸ್ತುವಾರಿಗೆ ಈ ಲಿಕ್ಕರ್ ಕಿಂಗ್ ಹಾತೊರೆಯುತ್ತಿರುವುದೇಕೆ?' ಎಂಬ ಸಂದೇಹ 'ಹಿರಿ-ಮರಿ' ಪುಢಾರಿಗಳ ಬುರುಡೆಯಲ್ಲೊಮ್ಮೆ ಇಣುಕಿತಾದರೂ, 'ಅಪ್ಪನಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷಗಿರಿಯೂ, ಮಗನಿಗೆ ಯಾವುದೋ ಮಂತ್ರಿಗಿರಿಯೂ ದಕ್ಕುವುದಕ್ಕೆ ಲಿಕ್ಕರ್ ಕಿಂಗ್ ದುಡ್ಡಿನ ಕಂತೆಯ ರತ್ನಗಂಬಳಿ ಹಾಸುವುದಾದರೆ ಅದನ್ಯಾಕೆ ತಪ್ಪಿಸಿಕೊಳ್ಳಬೇಕು? ಸ್ವತಃ ಭಾಗ್ಯಲಕ್ಷ್ಮಿಯೇ ಬಾಗಿಲು ಬಡಿಯುತ್ತಿರುವಾಗಲೂ ಅದನ್ನು ತೆರೆಯದವನು ಮೂರ್ಖನಾಗುತ್ತಾನೆ' ಎಂಬ ಗ್ರಹಿಕೆಯಲ್ಲಿ ಅಪ್ಪ-ಮಗ ಈ ಡೀಲ್‌ಗೆ ಒಪ್ಪಿಬಿಟ್ಟರು! ಇಷ್ಟಾಗಿಯೂ 'ಮಠದ ಸ್ವಾಮೀಜಿ ಏನಾದರೂ ಅಪಸ್ವರ ಎತ್ತಿದರೆ?' ಎಂಬ ಶಂಕೆಯೂ ಅವರಿಬ್ಬರ ಮನದಲ್ಲೊಮ್ಮೆ ಸುಳಿಯಿತು. ಆದರೆ, 'ಲಿಕ್ಕರ್ ಕಿಂಗ್ ಯಾವುದೇ ಮಾರ್ಗದಲ್ಲಿ ಹಣ ಗಳಿಸುತ್ತಿರಲಿ, ಸಂಸ್ಥೆಗೆ ಮತ್ತು ಮಠಕ್ಕೆ ಹಣದ ಹೊಳೆ ಹರಿದರೆ ಸಾಕು' ಎಂಬ ನಿರೀಕ್ಷೆಯಲ್ಲಿ 'ಸರ್ವಸಂಗಪರಿತ್ಯಾಗಿ' ಸ್ವಾಮೀಜಿಯೂ ಈ ಪ್ರಸ್ತಾವನೆಗೆ ಠಸ್ಸೆ ಒತ್ತಿಬಿಟ್ಟರು. ಅದ್ಯಾರೋ ಪುಣ್ಯಾತ್ಮರು ಸಮಾಜೋದ್ಧಾರದ ಸದಾಶಯದೊಂದಿಗೆ ಕಟ್ಟಿದ್ದ ಆ ಸಂಸ್ಥೆಯ ಆವರಣಕ್ಕೆ ಅಮಲುಕಾರಕ ಮದ್ಯದ ಕೆಟ್ಟಘಮಲು ರಾಚುವುದಕ್ಕೆ ಸ್ವಾಮೀಜಿಯೇ ಪೂರ್ಣಕುಂಭ ಸ್ವಾಗತ ನೀಡಿಬಿಟ್ಟರು, ತನ್ಮೂಲಕ ತಮ್ಮ ಕಾವಿಯನ್ನು ಮತ್ತೊಮ್ಮೆ ಸಡಿಲಿಸಿಬಿಟ್ಟರು'' ಎನ್ನುತ್ತಾ ಮೌನವಾದರು.

ಅವಧೂತರಿಗೆ ಬೇಸರವಾಗಿರುವುದು ಶಿಷ್ಯರಿಗೆ ಗೊತ್ತಾಯಿತು. ಬಡಮಕ್ಕಳಿಗೆ ಉಚಿತ ಊಟ-ವಸತಿ-ಶಿಕ್ಷಣ ನೀಡುವ ಸದಾಶಯದೊಂದಿಗೆ ರೂಪುಗೊಂಡ ನಾಡಿನ ಒಂದಷ್ಟು ಸ್ಥಾಪಿತ ವ್ಯವಸ್ಥೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ತೂರಿಕೊಂಡಿದ್ದರ ಪರಿಣಾಮ ಅವು ಮೂಲ ಆಶಯವನ್ನೇ ಕಳೆದುಕೊಂಡು 'ದುಡ್ಡು ಮಾಡುವ' ಯಂತ್ರಗಳಾಗಿಬಿಟ್ಟಿರುವ ಕಹಿವಾಸ್ತವವು ಶಿಷ್ಯರ ಮನದಲ್ಲೊಮ್ಮೆ ಹಾದುಹೋಯಿತು. ಆದರೆ, ಶಾರದೆಯ ಕಥನದಲ್ಲಿ ಒಂದು ಗುಕ್ಕು ಜಾಸ್ತಿ ಎನ್ನುವಂತೆ, 'ಕಾಮಿನಿ'ಯನ್ನು ದಕ್ಕಿಸಿಕೊಳ್ಳಲು ಕಳ್ಳಬೆಕ್ಕು ಸುರಿದ 'ಕಾಂಚಾಣ'ವು ಸಂಸ್ಥೆಯ ಆವರಣವನ್ನೂ ಸ್ಮಶಾನಸದೃಶವಾಗಿಸಿಬಿಟ್ಟಿತು ಎಂಬುದು ಶಿಷ್ಯರಿಗೆ ಮನದಟ್ಟಾಯಿತು.

''ತನ್ನ ಬಯಕೆಗೆ ಹಸಿರು ನಿಶಾನೆ ದಕ್ಕಿದ್ದಕ್ಕೆ ಕಳ್ಳಬೆಕ್ಕಿಗೆ ಖುಷಿಯಾಯಿತು''- ತುಲನಾತ್ಮಕ ವಿಶ್ಲೇಷಣೆಯಲ್ಲಿ ತೊಡಗಿದ್ದ ಶಿಷ್ಯರನ್ನು ಹೀಗೆ ಎಚ್ಚರಿಸಿದ ಅವಧೂತರು ಮುಂದುವರಿದು, ''ಲಿಕ್ಕರ್ ವ್ಯವಹಾರದಲ್ಲಿ ಭಾರಿ ಕುಳವೇ ಆಗಿದ್ದ ಕಳ್ಳಬೆಕ್ಕು, ಕಂಪನಿಯ ತರಹೇವಾರಿ ಉತ್ಪನ್ನಗಳ ರೂಪದರ್ಶಿಗಳಾಗಿ ಬಂದಿದ್ದ ಹುಡುಗಿಯರಲ್ಲಿ ಕೆಲವರ ಅಸಹಾಯಕತೆಯನ್ನು ಬಳಸಿಕೊಂಡು ಬಲೆಬೀಸಿ ಅದಾಗಲೇ ಒಡನಾಡಿತ್ತು. ಇಷ್ಟಾಗಿಯೂ, ಶಾರದೆಯ ಲಾವಣ್ಯವನ್ನು ಕಂಡು 'ಇವಳನ್ನು ಹೇಗಾದರೂ ದಕ್ಕಿಸಿಕೊಳ್ಳಲೇಬೇಕು' ಎಂಬ ಹಠಕ್ಕೆ ಬಿದ್ದಿತ್ತು. ಎಲ್ಲ ತೆರನಾದ ಉಚಿತ ಸೌಕರ್ಯಗಳನ್ನೂ ನೀಡುತ್ತಿರುವುದರಿಂದ, ಆಕೆಯ ಸೌಂದರ್ಯವನ್ನು ಇಡಿಯಾಗಿ ಸವಿಯುವ ಹಕ್ಕು ತನಗಿದೆ ಎಂಬ 'ವಿತಂಡ ಗ್ರಹಿಕೆ'ಯನ್ನು ಕಳ್ಳಬೆಕ್ಕು ಮನದಲ್ಲಿ ಗಟ್ಟಿಯಾಗಿಸಿಕೊಳ್ಳಲು ಶುರುಮಾಡಿತು. ಆದರೆ, ಕಳ್ಳಬೆಕ್ಕು ವಾಡಿಕೆಯಂತೆ ಹಾಕುವ ಕಾಳುಗಳಿಗೆ ಬೀಳುವ ಪಾರಿವಾಳವಾಗಿರಲಿಲ್ಲ ಸಂಸ್ಕಾರವಂತೆ ಶಾರದೆ, ಅವಳು 'ಹೋಮಕುಂಡದ ಅಗ್ನಿಯಿಂದ ಎದ್ದ ಬೆಳಕು'.

ಹೀಗಾಗಿ, ಕಳ್ಳವೇಷ ಧರಿಸಲು ಕಳ್ಳಬೆಕ್ಕು ತಂತ್ರಹೂಡಿತು. ಸಂಸ್ಥೆಯ ಅಭಿವೃದ್ಧಿ ಸಮಿತಿಯ ಮೇಲುಸ್ತುವಾರಿ ಎಂಬ ಹಣೆಪಟ್ಟಿಯಡಿ ಒಂದು ಸುಸಜ್ಜಿತ ಕುಟೀರವೂ ಕಳ್ಳಬೆಕ್ಕಿಗೆ ದಕ್ಕಿತು. ಅಲ್ಲೊಂದು ದೊಡ್ಡ ಗಾತ್ರದ ದೇವರ ಫೋಟೋವನ್ನು ಸಜ್ಜುಗೊಳಿಸಿ ಪೂರಕ ವಾತಾವರಣವನ್ನು ಸೃಷ್ಟಿಸಿಕೊಂಡ ಕಳ್ಳಬೆಕ್ಕು, ವಾರಕ್ಕೊಮ್ಮೆ ಅಲ್ಲಿಗೆ ಬಂದಾಗಲೆಲ್ಲಾ ಪೂಜಾ ಕಾರ್ಯವನ್ನು ಹಮ್ಮಿಕೊಳ್ಳುತ್ತಿತ್ತು. ಇದರ ಹಿಂದಿನ ಸಂಚನ್ನು ಅರಿಯದ ಮಠದ ಸ್ವಾಮೀಜಿ, ಹೀಗೆ ಹಮ್ಮಿಕೊಂಡ ಪೂಜೆಯಲ್ಲಿ ಕಳ್ಳಬೆಕ್ಕಿಗೆ ನೆರವಾಗುವಂತೆ ಶಾರದೆ ಸೇರಿದಂತೆ ಮಿಕ್ಕ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಸೂಚಿಸುತ್ತಿದ್ದರು. ಈ ಸೂಚನೆ ಜಾರಿಯಾಗಿದ್ದೇ ಆಗಿದ್ದು, ಕಳ್ಳಬೆಕ್ಕಿನ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯಿತು. ಹಾಗೆ ನೋಡಿದರೆ, ನಾನು ಕೆಲ ದಿನಗಳ ಹಿಂದೆಯೇ ಹೇಳಿದಂತೆ, ಉಚಿತ ಊಟ-ವಸತಿ-ವಿದ್ಯಾಭ್ಯಾಸ ಪಡೆಯುತ್ತಿದ್ದುದಕ್ಕೆ ಪ್ರತಿಯಾಗಿ 'ಸೇವೆ'ಯ ಹೆಸರಿನಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಂಸ್ಥೆಯ ಆವರಣದಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಬೇಕಾದುದು ಅಲಿಖಿತ ನಿಯಮವಾಗಿತ್ತು. ಗಿಡಗಳಿಗೆ ನೀರುಣಿಸುವುದು, ಪೂಜೆಗೆ ಹೂವು-ಪತ್ರೆ ಕೊಯ್ದುತರುವುದು, ಹಸುವಿನ ಹಾಲು ಕರೆಯುವುದು, ಗೋಶಾಲೆಯನ್ನು ಚೊಕ್ಕ ಮಾಡುವುದು ಮುಂತಾದ ಕೆಲಸಗಳು ಅದರಲ್ಲಿ ಸೇರಿದ್ದವು. ಅಂತೆಯೇ, ಹೊಸದಾಗಿ ಸಜ್ಜುಗೊಂಡ ಕಳ್ಳಬೆಕ್ಕಿನ ಕುಟೀರದಲ್ಲೂ ಹೀಗೆ ಪೂಜೆ ನಡೆಯುವಾಗೆಲ್ಲಾ ವಿದ್ಯಾರ್ಥಿನಿಯರಿಗೆ, ವಿಶೇಷವಾಗಿ ಶಾರದೆಗೆ 'ಬುಲಾವ್' ಬರುತ್ತಿತ್ತು. ಕೆಲವೇ ದಿನಗಳ ಹಿಂದೆ ತಾನು ಕಾರ್ಯಕ್ರಮದಲ್ಲಿ ಹಾಡಿದ ಗೀತೆಯನ್ನು ಮೆಚ್ಚಿಕೊಂಡು, ಸಂಸ್ಥೆಯ ಕಚೇರಿಗೆ ಕರೆಸಿಕೊಂಡು ಗರಿಗರಿ ನೋಟು ನೀಡಲು ಮುಂದೆಬಂದಿದ್ದ ಈ 'ಹೊಸಧಣಿ'ಯನ್ನು ತಾನು ತಪ್ಪಾಗಿ ಭಾವಿಸಿಬಿಟ್ಟಿದ್ದೆನಾ? ಎಂದು ಶಾರದೆಯೂ ಕೆಲ ಕಾಲದವರೆಗೆ ತಪ್ಪಿತಸ್ಥ ಭಾವನೆಯ ಜೋಕಾಲಿಯಲ್ಲಿ ವೃಥಾ ಜೀಕಿದ್ದುಂಟು! ಸಾಲದೆಂಬಂತೆ ಕಳ್ಳಬೆಕ್ಕು ಕೂಡ ತನ್ನ ಸಂಚಿನ ಭಾಗವಾಗಿ ಶಾರದೆಯೊಂದಿಗೆ ಶಿಷ್ಟರೀತಿಯಲ್ಲೇ ನಡೆದುಕೊಳ್ಳುತ್ತಿತ್ತು. ಹೀಗಾಗಿ ಕಳ್ಳಬೆಕ್ಕು ಕರೆದಾಗೆಲ್ಲಾ, 'ಇದು ಕೆಲಕಾಲದವರೆಗಷ್ಟೇ ಜಿಂಕೆಯ ಚರ್ಮವನ್ನು ಹೊದ್ದಿರುವ ಮಾರ್ಜಾಲ' ಎಂದರಿಯದ ಶಾರದೆ ಹಿಂಜರಿಕೆ ಬಿಟ್ಟು, ಹೇಳಿದ ಕೆಲಸಗಳನ್ನು ಮಾಡಿಕೊಟ್ಟು ಬರುತ್ತಿದ್ದಳು, ಬೆರೆತು ಮಾತನಾಡುತ್ತಿದ್ದಳು'' ಎಂದು ಹೇಳಿ ಅರೆಕ್ಷಣ ಮಾತು ನಿಲ್ಲಿಸಿದರು.

''ಆದರೆ ಗುರುಗಳೇ, ಅಲೌಕಿಕ ಜ್ಞಾನಿಗಳಾಗಿದ್ದ ಮಠದ ಸ್ವಾಮೀಜಿಗಳಿಗಾಗಲೀ, ಲೌಕಿಕ ವ್ಯವಹಾರಜ್ಞಾನವಿದ್ದ ಸಂಸ್ಥೆಯ ಮ್ಯಾನೇಜರ್‌ಗಾಗಲೀ ಈ ಯಾವ ಸಂಚೂ ಅರಿವಾಗಲೇ ಇಲ್ಲವೇ? ಕುಟೀರವನ್ನು ಸೇರಿಕೊಂಡಿರುವುದು ಛದ್ಮವೇಷ ಧರಿಸಿದ ಕಳ್ಳಬೆಕ್ಕು ಎಂಬ ಲವಲೇಶ ಸಂದೇಹವೂ ಅವರಿಗೆ ಬರಲಿಲ್ಲವೇ?'' ಎಂದು ಶಿಷ್ಯರೊಬ್ಬರು ಪ್ರಶ್ನಿಸಿದರು.

ಅದಕ್ಕೆ ಅವಧೂತರು, ''ಸಂಸ್ಥೆಗೆ-ಮಠಕ್ಕೆ ದಂಡಿಯಾಗಿ ಹಣ ಬಂದು ಬೀಳುತ್ತಿರುವಾಗ ಲೌಕಿಕ-ಅಲೌಕಿಕ ಜ್ಞಾನಗಳೆಲ್ಲಾ ಯಾರಿಗೆ ಬೇಕಯ್ಯಾ?! ಅವರಿಬ್ಬರೂ ತಂತಮ್ಮ ಜ್ಞಾನಭಂಡಾರವನ್ನು ಮೂಟೆಕಟ್ಟಿ ಯಾವುದೋ ಕಾಲವಾಗಿತ್ತು. ಸ್ವಾಮೀಜಿಯ ಕಾವಿಬಟ್ಟೆಯನ್ನೂ, ಮ್ಯಾನೇಜರ್‌ರ ಸಫಾರಿ ದಿರಿಸನ್ನೂ ಒಗೆದು ಒಣಗಲು ಹಾಕುತ್ತಿದ್ದ ಹಗ್ಗಕ್ಕೆ ಆ ಮೂಟೆಯನ್ನೂ ತೂಗಿಹಾಕಲಾಗಿತ್ತು. ಹೀಗೆ ದೊಡ್ಡವರೆನಿಸಿಕೊಂಡವರೇ ದಾರಿಬಿಟ್ಟ ಮೇಲೆ ನಳಪಾಕನಂಥ ಅಡುಗೆಭಟ್ಟನಿಗೆ ಎಲ್ಲಿಯ ಅಂಕುಶ? ತನ್ನ ಉಪಾಯವು ನಿಧಾನವಾಗಿ ಹಳಿಗೆ ಬರುತ್ತಿರುವುದನ್ನು ಮನಗಂಡ ಆತ ಅಖಾಡವನ್ನು ಪ್ರವೇಶಿಸಿಬಿಟ್ಟ. ಕಳ್ಳಬೆಕ್ಕಿಗೆ ಕೊಟ್ಟ ಮಾತಿನಂತೆ, ತಾನು ಹೂಡಿದ್ದ ಸಂಚಿನ ನೆರವೇರಿಕೆಗೆ ತನ್ನ ವೃತ್ತಿಯನ್ನೇ ಬಳಸಿಕೊಂಡುಬಿಟ್ಟ. ಅದೊಂದು ಸಂಜೆ ತನ್ನ ಕುಟೀರದಲ್ಲಿ ಹಮ್ಮಿಕೊಂಡಿದ್ದ ವಾರದ ಪೂಜೆಯ ವೇಳೆ ನಳಪಾಕನನ್ನು ಭೇಟಿಯಾದ ಕಳ್ಳಬೆಕ್ಕು, 'ನಾನಿಲ್ಲಿ ಬಂದು ಸಾಕಷ್ಟು ದಿನವಾದವು, ಶಾರದೆ ಎಂಬ ಹಣ್ಣನ್ನು ನನ್ನ ಬುಟ್ಟಿಗೆ ಕೆಡವುತ್ತೇನೆ ಎಂದು ಹೇಳಿದ್ದೆಯಲ್ಲಾ? ಯಾವಾಗ ಕೆಡವುತ್ತೀಯ?' ಎಂದು ನಾಚಿಕೆಬಿಟ್ಟು ಕೇಳಿತು. ವಿಕೃತವಾಗಿ ನಕ್ಕ ನಳಪಾಕ, 'ಚಿಂತೆ ಬೇಡ ಧಣೀ, ಹಣ್ಣು ಮಾಗಿದೆ. ಇಂದು ರಾತ್ರಿ ತೊಟ್ಟು ಕಳಚಿಕೊಂಡು ರೆಂಬೆಯಿಂದ ಅದಾಗೇ ಬೀಳುತ್ತೆ. ಪಾದಪೂಜೆಗೆಂದು ಬೇರೊಂದು ಊರಿಗೆ ಹೋಗಿರುವ ಸ್ವಾಮೀಜಿಯ ಜತೆಗೆ, ಮ್ಯಾನೇಜರ್, ಮಿಕ್ಕ ಸಿಬ್ಬಂದಿಯೂ ತೆರಳಿದ್ದಾರೆ. ವಿದ್ಯಾರ್ಥಿಗಳೆಲ್ಲಾ ಊಟದ ನಂತರ ಕೊಂಚ ಓದಿ ಮಲಗಿಬಿಡುತ್ತಾರೆ. ಹೇಳೋರು ಕೇಳೋರು ಯಾರೂ ಇರೋಲ್ಲ. ಆಗ ನಿಮ್ಮ ಕೆಲಸವನ್ನು ಪೂರೈಸಿಕೊಳ್ಳೋರಂತೆ...' ಎಂದು ಹೇಳಿ ಎರಡೂ ಕೈಗಳನ್ನು ಶಕುನಿಯಂತೆ ಉಜ್ಜಿಕೊಂಡ. ಆ ಇಶಾರೆಯನ್ನು ಗ್ರಹಿಸಿ ಅವನ ಕೈಗೆ ನೋಟಿನ ಕಂತೆ ತುರುಕಿದ ಕಳ್ಳಬೆಕ್ಕು, 'ಅದು ಸರಿ, ಅವಳು ನಿಜಕ್ಕೂ ಬರ್ತಾಳಾ?' ಎಂದು ಕೇಳಿತು. 'ನಿಮಗ್ಯಾಕೆ ಅದರ ಚಿಂತೆ, ಅದನ್ನ ನನಗೆ ಬಿಡಿ' ಎಂದು ಹೇಳಿ ನಳಪಾಕ ಅಲ್ಲಿಂದ ತೆರಳಿದ. ಸಂಜೆಯ ಪೂಜೆಯಲ್ಲಿ ಪ್ರಸಾದವಾಗಿ ವಿತರಿಸಲು ಕಡಲೇಕಾಳು ಉಸಲಿಯನ್ನು ತಯಾರಿಸಿ ಪರಾತದಲ್ಲಿ ತುಂಬಿಸಿತಂದಿಟ್ಟ ನಳಪಾಕ, ಪ್ರತ್ಯೇಕ ಡಬ್ಬಿಯಲ್ಲಿದ್ದ ಉಸಲಿಯನ್ನು ಕಳ್ಳಬೆಕ್ಕಿಗೆ ನೀಡಿ, 'ಇದನ್ನು ಶಾರದೆಗೆ ಮಾತ್ರ ನೀಡಿ, ನಂತರ ಅವಳು ಪುಂಗಿಯ ನಾದಕ್ಕೆ ತಲೆದೂಗುವ ಹಾವಿನಂತೆ ನಿಮ್ಮ ಹಿಂದೆಯೇ ಕೋಣೆಗೆ ಬರ್ತಾಳೆ' ಎಂದು ಹಲ್ಲುಕಿಸಿದ. 'ನಾಮ್-ಕೆ-ವಾಸ್ತೆ' ಪೂಜೆಯ ನಂತರ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಪ್ರಸಾದ ನೀಡಿ, 'ನಿಮ್ಮ ನಿಮ್ಮ ಕೋಣೆಯಲ್ಲಿ ಸೇವಿಸಿ' ಎಂದು ಸೂಚಿಸಲಾಯಿತು. ಅಂತೆಯೇ ಶಾರದೆಗೂ ಒಂದು ದೊನ್ನೆಯ ತುಂಬಾ 'ನಿಗದಿತ' ಉಸಲಿ ದಕ್ಕಿತು. ಶಾರದೆ ತನ್ನ ಕೋಣೆಗೆ ಬಂದಳು. ಆದರೆ ಆಕೆ ಸಂಸ್ಕಾರವಂತೆ, ತನಗೆ ತಿನ್ನುವುದಕ್ಕೆ ಏನೇ ಸಿಕ್ಕರೂ ಹತ್ತಿರದಲ್ಲೇ ಸುಳಿದಾಡುವ ನಾಯಿಗೆ ಚೂರು ತಿನ್ನಿಸಿ ನಂತರ ತಾನು ಮೆಲ್ಲುವುದು ಆಕೆಯ ಅಭ್ಯಾಸ. ಅಂತೆಯೇ, ಅರ್ಧಹಿಡಿ ಉಸಲಿಯನ್ನು ನಾಯಿಗೂ ಹಾಕಿದಳು, ನೋಡನೋಡುತ್ತಲೇ ವಿಪರೀತವಾಗಿ ಬೆವರತೊಡಗಿದಳು'' ಎಂದರು.

ಆಗ ಶಿಷ್ಯರೊಬ್ಬರು, ''ಅದೇಕೆ ಗುರುಗಳೇ?'' ಎಂದು ಪ್ರಶ್ನಿಸಿದರು.

ಅದಕ್ಕೆ ಅವಧೂತರು, ''ಉಸಲಿಯನ್ನು ತಿಂದ ನಾಯಿ ಕೆಲಕ್ಷಣದಲ್ಲೇ ವಿಚಿತ್ರವಾಗಿ ಆಡುತ್ತಾ ಪ್ರಜ್ಞೆತಪ್ಪಿತು. ದುರುಳ ನಳಪಾಕ ಉಸಲಿಯಲ್ಲಿ ಮತ್ತು ಬರಿಸುವ ಔಷಧಿಯನ್ನು ಬೆರೆಸಿಬಿಟ್ಟಿದ್ದ...'' ಎನ್ನುತ್ತಾ ನಿಟ್ಟುಸಿರುಬಿಟ್ಟರು.

(ಮುಂದುವರಿಯುವುದು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 153

ಸಮಾಚಾರ ಸಣ್ಣದಲ್ಲ

ವಾಣಿಜ್ಯ ಬಳಕೆ ಎಲ್ಪಿಜಿ ಸಿಲಿಂಡರ್ ದರ ಏರಿಕೆ

ದೆಹಲಿ: ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ದರ ಮತ್ತೊಮ್ಮೆ ಏರಿಕೆಯಾಗಿದೆ.

ತೈಲ ಮತ್ತು ಅನಿಲ ಸರಬರಾಜು ಕಂಪನಿಗಳು ಅ.1ರಿಂದಲೆ ಜಾರಿಗೆ ಬರುವಂತೆ 19 ಕಿಲೋ ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರದಲ್ಲಿ 15.50 ರು. ಗಳಷ್ಟು ಏರಿಕೆ ಮಾಡಿವೆ. ಇದರಿಂದಾಗಿ ಕಮರ್ಷಿಯಲ್ ಎಲ್‌ಪಿಜಿ 19 ಕೆಜಿ ಸಿಲಿಂಡರ್ ದರ ದೆಹಲಿಯಲ್ಲಿ 1,595.50 ರು.ಗೆ ಏರಿಕೆಯಾಗಿದೆ. ಆದರೆ, ಗೃಹ ಬಳಕೆಯ 14.2 ಕಿಲೋ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಫಾಸ್ಟ್ಯಾಗ್ ಇಲ್ಲದವರು 'ಯುಪಿಐ' ಪೇ ಮಾಡಿ

ದೆಹಲಿ: ಫಾಸ್ಟ್ಯಾಗ್ ಇಲ್ಲದ ವಾಹನಗಳ ಮಾಲೀಕರು, ಚಾಲಕರಿಗೆ ಖುಷಿಯಾಗುವಂತಹ ಪ್ರಕಟಣೆಯನ್ನು ಕೇಂದ್ರದ ರಸ್ತೆ ಸಾರಿಗೆ-ಹೆದ್ದಾರಿ ಸಚಿವಾಲಯ ಹೊರಡಿಸಿದೆ. ಫಾಸ್ಟ್ಯಾಗ್ ಇಲ್ಲದ ವಾಹನಗಳ ಮಾಲೀಕರು ನ.15ರಿಂದ ದುಪ್ಪಟ್ಟು ಹಣ ಪಾವತಿಸಬೇಕಾಗಿಲ್ಲ. ಬದಲಾಗಿ ಯುಪಿಐ

ಬಳಸಿ ಟೋಲ್ ಮೊತ್ತ ಪಾವತಿಸಬಹುದಾಗಿದೆ ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಫಾಸ್ಟ್ಯಾಗ್ ಇಲ್ಲದ ವಾಹನಗಳವರು 'ದುಪ್ಪಟ್ಟು' ಹಣ ಪಾವತಿಸಬೇಕು ಎಂಬ ದಂಡಶುಲ್ಕ ನಿಯಮದಲ್ಲಿ ಬದಲಾವಣೆ ಮಾಡಿರುವ ರಸ್ತೆ ಸಾರಿಗೆ ಸಚಿವಾಲಯ, ಡಿಜಿಟಲ್ ಪಾವತಿಗೆ ಉತ್ತೇಜನ ನೀಡಿದೆ. ಆದರೆ, ಫಾಸ್ಟ್ಯಾಗ್‌ಗೆ ನಿಗದಿಪಡಿಸಿದ್ದಕ್ಕಿಂತ ಶೇ.25ರಷ್ಟು ಹೆಚ್ಚುವರಿ ಶುಲ್ಕವನ್ನು ಡಿಜಿಟಲ್ ಪೇ ಮಾಡಬೇಕಿದೆ. ಯುಪಿಐ ಸೌಲಭ್ಯವಿಲ್ಲ ಎಂದು ನಗದು ಪಾವತಿಗೆ ಮುಂದಾದರೆ ಹಿಂದಿನಂತೆಯೇ 'ದುಪ್ಪಟ್ಟು' ಟೋಲ್ ಕಟ್ಟಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದೆ. ಈ ಹೊಸ ನಿಯಮದ ಪ್ರಕಾರ, ಫಾಸ್ಟ್ಯಾಗ್ ಇಲ್ಲದ ಅಥವಾ ದೋಷಯುಕ್ತ ಫಾಸ್ಟ್ಯಾಗ್ ಹೊಂದಿರುವ ವಾಹನಗಳು ಯುಪಿಐ ಮಾರ್ಗದಲ್ಲಿ ನಿಗದಿತ ಶುಲ್ಕದ ಜತೆಗೆ ಶೇ.25ರಷ್ಟು ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ. ಅಂದರೆ, ವಾಹನದ ಟೋಲ್ 100 ರು. ಇದ್ದರೆ 'ಯುಪಿಐ'ನಲ್ಲಿ 125 ರು. ಪಾವತಿಸಬೇಕು. ನಗದು ರೂಪದಲ್ಲಾದರೆ 200 ರು. ಪಾವತಿಸಬೇಕು ಎಂದು ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಉ.ಪ್ರ ಮಸೀದಿ ಮೇಲೆ ಸೌದಿ ಧ್ವಜ: ಒಬ್ಬನ ಸೆರೆ

ಅಜಂಗಢ: ಉತ್ತರ ಪ್ರದೇಶದ ಅಜಂಗಢ ಜಿಲ್ಲೆಯಲ್ಲಿ ಅತ್ರೌಲಿಯಾ ಪೊಲೀಸ್ ಠಾಣಾ ವ್ಯಾಪ್ತಿಯ ನೂರಿ ಮಸೀದಿ ಮೇಲೆ ಶುಕ್ರವಾರ ಸೌದಿ ಅರೇಬಿಯ ದೇಶದ ಧ್ವಜ ಹಾರಿಸಲಾಗಿದ್ದು, ಅದರ ವಿಡಿಯೊ ವೈರಲ್ ಆಗಿದೆ. ಆ ಬಳಿಕ ಸಬ್ ಇನ್‌ಸ್ಪೆಕ್ಟರ್ ಜಾಫರ್ ಅಯೂಬ್ ಸಿಬ್ಬಂದಿಗಳ ಜತೆ ಸ್ಥಳಕ್ಕೆ ತೆರಳಿ ಮಸೀದಿ ಮೇಲಿನಿಂದ ಸೌದಿ ಧ್ವಜ ತೆಗೆಸಿದ್ದಾರೆ. ಮಸೀದಿ ಉಸ್ತುವಾರಿ ಹೊಣೆ ಹೊತ್ತಿದ್ದ ಕಡಸರ ಶಿವದಾಸ್ ಕಾ ಪುರ ಗ್ರಾಮದ ನೂರ್ ಆಲಂ(25) ಎಂಬಾತನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲು ಮತ್ತು ಸಮಾಜದಲ್ಲಿ ದ್ವೇಷ ಹರಡಲೆಂದೇ ಈ ಕೃತ್ಯ ನಡೆಸಲಾಗಿದೆ. ಆರೋಪಿ ಆಲಂನನ್ನು ಬಂಧಿಸಿ, ಪ್ರಕರಣ ದಾಖಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮೀಣ) ಚಿರಾಗ್ ಜೈನ್ ತಿಳಿಸಿದ್ದಾರೆ.

ಇಟಲಿ ಅಪಘಾತ: ಉದ್ಯಮಿ ದಂಪತಿ ಸಾವು

ರೋಮ್: ಅನಿವಾಸಿ ಭಾರತೀಯ ದಂಪತಿ ಇಟಲಿಯಲ್ಲಿ ಗುರುವಾರ ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೀಡಾದರು. ಮಹಾರಾಷ್ಟ್ರದ ನಾಗಪುರದಲ್ಲಿ ಗುಲ್ಷನ್ ಪ್ಲಾಜಾ ಹೋಟೆಲ್ ಒಡೆಯರಾಗಿರುವ ಉದ್ಯಮಿ ಜಾವೇದ್(55) ಅಖ್ತರ್ ಮತ್ತು ಪತ್ನಿ ನಾದಿರಾ ಗುಲ್ಷನ್(47) ಪುತ್ರಿಯರಾದ ಅರ್ಜೂ ಅಖ್ತರ್(21), ಶಿಫಾ ಅಖ್ತರ್ ಮತ್ತು ಪುತ್ರ ಜಾಝೆಲ್ ಅಖ್ತರ್ ಜತೆಗೆ ಯೂರೋಪ್ ಪ್ರವಾಸದಲ್ಲಿದ್ದರು. ಸೆ.22ರಂದು ಫ್ರಾನ್ಸ್‌ನಿಂದ ಅವರ ಯೂರೋಪ್ ಪ್ರವಾಸ ಆರಂಭವಾಗಿತ್ತು. ಅವರು ಮಿನಿ ಬಸ್‌ನಲ್ಲಿ ಪ್ರಯಾಣಿಸುತ್ತಾ ಸೈಟ್ ಸೀಯಿಂಗ್ ನಡೆಸಿದ್ದಾಗ ಗ್ರೊಸೆಟ್ಟಾ ನಗರ ಸಮೀಪದ ಔರೇಲಿಯಾ ಹೆದ್ದಾರಿಯಲ್ಲಿ ಮಿನಿ ಬಸ್ ಗುರುವಾರ ರಸ್ತೆಯಂಚಿನಲ್ಲಿ ಕೆಟ್ಟು ನಿಂತಿದ್ದ ಬೃಹತ್ ಸಾಗಣೆ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಅಖ್ತರ್ ದಂಪತಿ ಮತ್ತು ಮಿನಿ ಬಸ್ ಚಾಲಕ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಅಸುನೀಗಿದ್ದಾರೆ. ಅಖ್ತರ್ ಅವರ ಮೂವರು ಮಕ್ಕಳೂ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಪುತ್ರಿ ಅರ್ಜೂ ತಲೆಗೆ ಪೆಟ್ಟು ಬಿದ್ದಿದ್ದು, ಪರಿಸ್ಥಿತಿ ಗಂಭೀರವಾಗಿದೆ. ಶಿಫಾ ಮತ್ತು ಜಾಝೆಲ್ ಗ್ರೊಸೆಟ್ಟಾದ ಫ್ಲಾರೆನ್ಸ್ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ. ಗಾಯಾಳುಗಳನ್ನು ಹೆಲಿಕಾಪ್ಟರ್‌ನಲ್ಲಿ ಆಸ್ಪತ್ರೆಗೆ ತಲುಪಿಸಲಾಗಿದೆ. ಇಟಲಿಯಲ್ಲಿನ ಭಾರತೀಯ ರಾಯಭಾರ ಕಚೇರಿ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದ್ದು, ನಾಗಪುರದಲ್ಲಿನ ಕುಟುಂಬದವರ ಜತೆ ಸಂಪರ್ಕದಲ್ಲಿರುವುದಾಗಿ ಹೇಳಿದ್ದಾರೆ.

ಶಿಶುಗಳ ಸರಣಿ ಸಾವು: 6 ರಾಜ್ಯದ 19 ಔಷಧ ಘಟಕಗಳ ಪರಿಶೋಧನೆ

ಎರಡು ವರ್ಷಕ್ಕೂ ಕಡಿಮೆ ವಯಸ್ಸಿನ ಶಿಶುಗಳಿಗೆ ಕೆಮ್ಮು ಬಾಧಿಸಿದಲ್ಲಿ ಸಿರಪ್ ನೀಡದಂತೆ ಸೂಚನೆ

ದೆಹಲಿ: ಮಧ್ಯಪ್ರದೇಶದಲ್ಲಿ ಕೆಮ್ಮಿನಿಂದ ಬಳಲುತ್ತಿದ್ದ ಮತ್ತೊಂದು ಶಿಶು ಶನಿವಾರ ಸಾವಿಗೀಡಾಗಿದೆ. ಇದರೊಂದಿಗೆ ಮಧ್ಯಪ್ರದೇಶ, ರಾಜಸ್ಥಾನದಲ್ಲಿ 2 ವರ್ಷಕ್ಕೂ ಕಡಿಮೆಯಿರುವ ಶಿಶುಗಳ ಸಾವಿನ ಸರಣಿ ಮುಂದುವರಿದಿದ್ದು, ಶಿಶುಗಳ ಸಾವಿನ ಸಂಖ್ಯೆ ಶನಿವಾರದ ವೇಳೆಗೆ 12ಕ್ಕೇರಿದೆ.

ಕಳೆದ ಕೆಲ ವಾರಗಳಲ್ಲಿ ಸರಣಿಯೋಪಾದಿಯಲ್ಲಿ ಹಸುಗೂಸುಗಳ ಸಾವಿಗೀಡಾಗುತ್ತಿರು ವುದನ್ನು ಕಂಡು ಕಡೆಗೂ ಎಚ್ಚೆತ್ತ ಕೇಂದ್ರದ ಆರೋಗ್ಯ ಸಚಿವಾಲಯ, 2 ವರ್ಷಕ್ಕೂ ಕಡಿಮೆ ವಯಸ್ಸಿನ ಶಿಶುಗಳಿಗೆ ಕೆಮ್ಮು ಬಾಧಿಸಿದಲ್ಲಿ ಸಿರಪ್ ನೀಡದಂತೆ ಸೂಚನೆ ಹೊರಡಿಸಿದೆ. ಅಲ್ಲದೇ, 6 ರಾಜ್ಯಗಳಲ್ಲಿರುವ 19 ಔಷಧ ತಯಾರಿಕಾ ಘಟಕಗಳಿಗೆ ತಜ್ಞರ ತಂಡಗಳನ್ನು ಕಳುಹಿಸಿ ಔಷಧಗಳ ಪರೀಕ್ಷೆ ನಡೆಸಲಾರಂಭಿಸಿದೆ.

ಕೇಂದ್ರದ ಔಷಧ ನಿಯಂತ್ರಣ ಗುಣಮಟ್ಟ ಸಂಸ್ಥೆಯ (ಸಿಡಿಎಸ್‌ಸಿಒ) ತಜ್ಞರ ನೇತೃತ್ವದ ಹಲವು ತಂಡಗಳು 6 ರಾಜ್ಯಗಳಲ್ಲಿ 19 ಕಡೆ ತಪಾಸಣೆ ನಡೆಸುತ್ತಿವೆ. ರಾಷ್ಟ್ರೀಯ ವೈರಾಲಜಿ ಸಂಸ್ಥೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ, ರಾಷ್ಟ್ರೀಯ ಪರಿಸರ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ, ಸಿಡಿಎಸ್‌ಸಿ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್) ಮೊದಲಾದ ಸಂಸ್ಥೆಗಳ ತಜ್ಞರ ತಂಡಗಳು 6 ರಾಜ್ಯಗಳಿಗೆ ತೆರಳಿವೆ. ಮುಖ್ಯವಾಗಿ ಆಂಧ್ರಪ್ರದೇಶದ ಚಿಂದ್ವಾರ ಪ್ರದೇಶದಲ್ಲಿ ಸಮಗ್ರ ಪರಿಶೋಧನೆ ನಡೆಸಲಿವೆ. ಶಿಶುಗಳ ಸಾವಿನ ಸರಣಿ ಏಕಾಯಿತು? ಯಾವ ಔಷಧದಲ್ಲಿ ದೋಷವಿದೆ ಎಂಬುದನು ಕಂಡುಕೊಳ್ಳುವ ಪ್ರಯತ್ನ ನಡೆದಿದೆ ಎಂದು ಆರೋಗ್ಯ ಸಚಿವಾಲಯ ಶನಿವಾರ ಸುದ್ದಿಸಂಸ್ಥೆಗೆ ತಿಳಿಸಿದೆ.

ಮಧ್ಯಪ್ರದೇಶ ಸರಕಾರದ ಕೋರಿಕೆ ಮೇರೆಗೆ ತಮಿಳುನಾಡು ಆಹಾರ ಸುರಕ್ಷತೆ ಮತ್ತು ಔಷಧ ನಿರ್ವಹಣೆ ಇಲಾಖೆಯ ತಜ್ಞರು ಮತ್ತು ಅಧಿಕಾರಿಗಳ ತಂಡ ಕಾಂಚಿಪುರಂನಲ್ಲಿನ ಶ್ರೀಸನ್ ಫಾರ್ಮಾದಲ್ಲಿ ತಯಾರಾಗುವ 'ಕೋಲ್ಡ್ರಿಫ್' ಸಿರಪ್‌ನ ಮಾದರಿಗಳನ್ನು ಸಂಗ್ರಹಿಸಿದ್ದು, ಸಮಗ್ರ ಪರಿಶೋಧನೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದೆ ಎಂದು ತಿಳಿದುಬಂದಿದೆ.

ನಿಷೇಧ ಏಕೆ?

ಕಾಂಚಿಪುರಂನಲ್ಲಿರುವ ಔಷಧ ತಯಾರಿಕಾ ಕಂಪನಿಯ ಕೋಲ್ಡ್ರಿಫ್ ಸಿರಪ್‌ನಲ್ಲಿ ಶೇ.48.6ರಷ್ಟು 'ಡೈಥಿಲೀನ್ ಗ್ಲೈಕಾಲ್'(ಡಿಇಜಿ) ರಾಸಾಯನಿಕ ಬಳಸಲಾಗಿದೆ. ಈ 'ಡಿಇಜಿ'ಯನ್ನು ಕೈಗಾರಿಕೆಗಳಲ್ಲಿ ಬಳಸುವ ವಿಷಕಾರಕ ದ್ರಾವಣ ಎಂದೇ ಗುರುತಿಸಲಾಗುತ್ತಿದೆ. ಹಾಗಾಗಿಯೇ ನಿಷೇಧಿಸಲಾಗಿದೆ ಎಂದು ರಾಜ್ಯ ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರದಿಂದಲೂ ವಿವಿಧ ಇಲಾಖೆಗಳ ತಜ್ಞರ ತಂಡ ರಾಜ್ಯಕ್ಕೆ ಆಗಮಿಸಿದ್ದು, ಆ ತಂಡದ ಜತೆಗೂಡಿ ರಾಜ್ಯದ ತಜ್ಞರ ತಂಡವೂ 'ಕೋಲ್ಡ್ರಿಫ್' ಸಿರಪ್ ತಯಾರಿಕಾ ಘಟಕವನ್ನು ಸಮಗ್ರ ತಪಾಸಣೆಗೆ ಒಳಪಡಿಸಿದೆ. ಮಾದರಿಗಳನ್ನೂ ಸಂಗ್ರಹಿಸಲಾಗಿದ್ದು, ಪ್ರಯೋಗಾಲಯಕ್ಕೆ ಪರಿಶೀಲನೆಗೆ ಕಳುಹಿಸಿಕೊಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಲವು ದೇಶಗಳಲ್ಲೂ ಕೆಮ್ಮಿನ ಸಿರಪ್ ನಿಷೇಧ

ತಮಿಳುನಾಡಿನ ಕಾಂಚಿಪುರಂನ ಔಷಧ ಘಟಕದಲ್ಲಿ ತಯಾರಾದ ಕೋಲ್ಡ್ರಿಫ್ ಸಿರಪ್ ಭಾರತದ ಕೆಲವು ರಾಜ್ಯಗಳಲ್ಲಷ್ಟೇ ಅಲ್ಲ, ದೂರದ ದೇಶದಲ್ಲಿಯೂ ಕಳವಳಕ್ಕೆ ಕಾರಣವಾಗಿದ್ದು, ನಿಷೇಧಕ್ಕೆ ಒಳಗಾಗಿದೆ. ಆಫ್ರಿಕಾ ಖಂಡದ ದೇಶಗಳಲ್ಲಿ ಭಾರತದಿಂದ ರಫ್ತಾಗಿರುವ ಕೆಮ್ಮಿನ ಸಿರಪ್‌ಗೆ ನಿಷೇಧ ಹೇರಲಾಗಿದೆ. ಮೇಡೆನ್ ಫಾರ್ಮಾಸ್ಯುಟಿಕಲ್ ಕಂಪನಿ ತಯಾರಿಸಿದ ಕೆಮ್ಮಿನ ಸಿರಪ್ ಸೇವಿಸಿ 2022ರ ಅಕ್ಟೋಬರ್‌ನಲ್ಲಿ ಗಾಂಬಿಯಾ ದೇಶವೊಂದರಲ್ಲಿಯೇ 70ಕ್ಕೂ ಹೆಚ್ಚು ಮಕ್ಕಳು ಸಾವಿಗೀಡಾದರು, ಆ ಬಳಿಕ ಗಾಂಬಿಯಾ, ಉಜ್ಬೇಕಿಸ್ತಾನ, ಇರಾಕ್ ದೇಶಗಳು ಈ ಕೆಮ್ಮಿನ್ ಸಿರಪ್ ಬಳಕೆ ನಿಲ್ಲಿಸಿ, ಉಳಿದಿದ್ದ ಸಿರಪ್ ಬಾಟಲಿಗಳನ್ನು ಭಾರತದ ಕಂಪನಿಗೇ ವಾಪಸ್ ಕಳುಹಿಸಿದವು. ಅಲ್ಲದೇ ಗಾಂಬಿಯಾದಲ್ಲಿ ಸಾವಿಗೀಡಾದ 70 ಶಿಶುಗಳ ಪೋಷಕರಲ್ಲಿ ಕೆಲವರು ಮೇಡೆನ್ ಫಾರ್ಮಾಸ್ಯುಟಿಕಲ್ ಕಂಪನಿ ಮತ್ತು ಗಾಂಬಿಯಾದ ಆಮದುದಾರ ಕಂಪನಿ ವಿರುದ್ಧ ನ್ಯಾಯಾಲಯದಲ್ಲಿ ದಾವೆ ನಡೆಸುತ್ತಿದ್ದಾರೆ. ಪ್ರತಿ ಮಗುವಿನ ಸಾವಿಗೆ ತಲಾ 2 ಕೋಟಿ ರು. ಪರಿಹಾರವನ್ನೂ ಕೇಳಿದ್ದಾರೆ.

2 ವರ್ಷದ ಶಿಶುವಿಗೆ ಕೆಮ್ಮಿನ ಸಿರಪ್ ಬೇಡ

ಮಧ್ಯಪ್ರದೇಶ-ರಾಜಸ್ಥಾನದಲ್ಲಿ 2 ವರ್ಷಕ್ಕೂ ಕಡಿಮೆ ವಯಸ್ಸಿನ 11 ಶಿಶುಗಳು ಸರಣಿಯೋಪಾದಿ ಸಾವಿಗೀಡಾಗಿದ್ದು, ಅದಕ್ಕೆ ಕೆಮ್ಮಿನ ಸಿರಪ್ ಕೊಟ್ಟಿದ್ದೇ ಕಾರಣ ಎನ್ನಲಾಗಿದೆ.

ಶಿಶುಗಳ ಸರಣಿ ಸಾವಿಗೆ ಕಳವಳಗೊಂಡ ಕೇಂದ್ರ ಆರೋಗ್ಯ ಸೇವೆಗಳ ನಿರ್ದೇಶನಾಲಯ(ಡಿಜಿಎಚ್‌ಎಸ್), 2 ವರ್ಷದೊಳಗಿನ ಶಿಶುಗಳಿಗೆ ಕೆಮ್ಮು-ಶೀತಕ್ಕೆ ಸಿರಪ್ ನೀಡಬೇಡಿ ಎಂದು ಪೋಷಕರಿಗೆ, ವೈದ್ಯ ಸಮುದಾಯಕ್ಕೆ ಸೂಚನೆ ನೀಡಿದೆ. ಈ ಸಂಬಂಧ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಇಲಾಖೆಗಳಿಗೆ ಪತ್ರ ಬರೆದಿದ್ದು, ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿ. ವೈದ್ಯಕೀಯ ಸಮುದಾಯದ ಗಮನಕ್ಕೂ ತನ್ನಿರಿ ಎಂದು ಸೂಚನೆ ನೀಡಿದೆ.

ಕೆಮ್ಮಿನ ಸಿರಪ್ ಸೇವಿಸಿದ ನಂತರ ಮಧ್ಯಪ್ರದೇಶದ ಛಿಂದ್ವಾರಾ ಜಿಲ್ಲೆಯಲ್ಲಿ 9 ಮಕ್ಕಳ ಸಾವಿಗೀಡಾಗಿದ್ದರೆ, ರಾಜಸ್ಥಾನದ ಸಿಕಾರ್‌ನಲ್ಲಿ ಎರಡು ಶಿಶುಗಳ ಸಾವು ವರದಿಯಾಗಿದೆ. ಶಿಶುಗಳ ಹಠಾತ್ ಸಾವಿಗೆ ಕೆಮ್ಮಿನ ಸಿರಪ್ ಕಾರಣವಾಗಿರಬಹುದು ಎಂದು ಎರಡೂ ರಾಜ್ಯದ ಆರೋಗ್ಯ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಎರಡೂ ಕಡೆಗಳಲ್ಲಿಯೂ ತನಿಖೆಗೆ ಆದೇಶಿಸಲಾಗಿದೆ.

ಕೆಮ್ಮು ಬಹಳಷ್ಟು ಬಾರಿ ಔಷಧದ ಅಗತ್ಯವಿಲ್ಲದೆ ನಿವಾರಣೆ ಆಗುತ್ತದೆ. 5 ವರ್ಷದೊಳಗಿನ ಮಕ್ಕಳಿಗಂತೂ ಕೆಮ್ಮು-ಶೀತಕ್ಕೆ ಸಿರಪ್ ನೀಡಬೇಕಾಗಿ ಬರುವುದಿಲ್ಲ. ತೀರಾ ಅನಿವಾರ್ಯವೆನಿಸಿದರೆ ಮಾತ್ರವೇ ಅತ್ಯಲ್ಪ ಪ್ರಮಾಣದಲ್ಲಿ, ಅದೂ ಕಡಿಮೆ ಅವಧಿಗೆ ಸಿರಪ್ ಕುಡಿಸಬಹುದು ಎಂದು 'ಡಿಜಿಎಚ್‌ಎಸ್' ಹೇಳಿದೆ. ಕೆಮ್ಮಿಗೆ ಸಿರಪ್ ಸಲಹೆ ನೀಡುವಾಗ ವಿವೇಚನೆ ಬಳಸಿ ಎಂದೂ ವೈದ್ಯರಿಗೆ ಸೂಚಿಸಿದೆ.

ತ.ನಾಡು, ಮಧ್ಯಪ್ರದೇಶದಲ್ಲಿ ಕೋಲ್ಡ್ರಿಫ್ ಸಿರಪ್‌ಗೆ ನಿಷೇಧ

ಸಿರಪ್ ಸೇವಿಸಿದ ಮ.ಪ್ರ, ರಾಜಸ್ಥಾನದ 12 ಶಿಶು ಸಾವು

ಚೆನ್ನೈ: 'ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಕೆಮ್ಮಿನಿಂದ ಬಳಲುತ್ತಿದ್ದ 2 ವರ್ಷಕ್ಕೂ ಕಿರಿಯ ಶಿಶುಗಳು ಕೆಮ್ಮಿನ ಸಿರಪ್ ನೀಡಲಾಗಿದೆ. ಆ ಬಳಿಕ 12 ಶಿಶುಗಳು ಸಾವಿಗೀಡಾಗಿವೆ. ಶಿಶುಗಳ ಸಾವಿಗೆ ಸಿರಪ್ ಸೇವನೆಯೇ ಕಾರಣ' ಎಂಬ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡು ಮತ್ತು ಮಧ್ಯಪ್ರದೇಶ ಸರಕಾರಗಳು ಕೆಮ್ಮಿಗೆ ಬಳಸುವ 'ಕೋಲ್ಡ್ರಿಫ್' ಸಿರಫ್‌ಗೆ ನಿಷೇಧ ಹೇರಿವೆ.

ಅ.1ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ತಮಿಳುನಾಡಿನಲ್ಲಿ 'ಕೋಲ್ಡ್ರಿಫ್' ಸಿರಪ್ ನಿಷೇಧ ವಿಧಿಸಲಾಗಿದ್ದು, ಮಾರುಕಟ್ಟೆಗೆ ಸರಬರಾಜಾಗಿರುವ ಸಿರಪ್ ಬಾಟಲಿಗಳನ್ನು ಹಿಂತೆಗೆದುಕೊಳ್ಳುವಂತೆ ಸಿರಪ್ ತಯಾರಕ ಕಂಪನಿಗೆ ಮತ್ತು ಸರಬರಾಜುದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

'ಕೋಲ್ಡ್ರಿಫ್' ಕೆಮ್ಮಿನ ಸಿರಪ್ಪನ್ನು ತಮಿಳುನಾಡಿನ ಕಾಂಚಿಪುರಂನಲ್ಲಿರುವ ಕಂಪನಿಯೇ ತಯಾರಿಸುತ್ತಿದೆ ಎಂಬುದು ಉಲ್ಲೇಖಾರ್ಹ ಅಂಶವಾಗಿದೆ. ಇದೇ ಕಂಪನಿಯ ಕೋಲ್ಡ್ರಿಫ್ ಸಿರಪ್ ಶಿಶುಗಳು ಸರಣಿಯೋಪಾದಿಯಲ್ಲಿ ಸಾವಿಗೀಡಾದ ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಿಗೆ ಸರಬರಾಜು ಆಗಿವೆ. ಅಲ್ಲದೇ, ಪುದುಚೇರಿಗೆ ಇದೇ ಕಂಪನಿಯ ಸಿರಪ್ ಪೂರೈಕೆ ಆಗುತ್ತಿದೆ.

ಎಕೆ-630 ಏರ್‌ಡಿಫೆನ್ಸ್ ಸಿಸ್ಟಂ ಖರೀದಿಸಿ ಪಾಕ್ ಗಡಿಗೆ ನಿಯೋಜನೆ

ಮಿಷನ್ ಸುದರ್ಶನ ಚಕ್ರದಡಿ ಸಿದ್ಧತೆ

ದೆಹಲಿ: 'ಮಿಷನ್ ಸುದರ್ಶನ ಚಕ್ರ' ಯೋಜನೆಯ ಭಾಗವಾಗಿ ಭಾರತೀಯ ಸೇನಾಪಡೆಗೆ ಎಕೆ-630 ಏರ್ ಡಿಫೆನ್ಸ್ ಸಿಸ್ಟಂ (ವಾಯುದಾಳಿ ವಿನಾಶ ಬಂದೂಕು)ಗಳನ್ನು ಖರೀದಿಸಿ ಪಾಕಿಸ್ತಾನದ ಗಡಿಯಂಚಿನಲ್ಲಿ ನಿಯೋಜನೆ ಮಾಡಲು ಮುಂದಾಗಿದೆ.

'ಎಕೆ-430 ಎಡಿಎಸ್' ಸಿಡಿಸುವ ಗುಂಡುಗಳು 4 ಕಿ.ಮೀ.ಗಳಷ್ಟು ದೂರವರೆಗೂ ಸಾಗಿ ವಾಯು ಮಾರ್ಗದಲ್ಲಿ ದಾಳಿ ಮಾಡುವ ಶತ್ರು ದೇಶದ ಕ್ಷಿಪಣಿ, ಡ್ರೋನ್‌ಗಳನ್ನು ನಾಶಪಡಿಸಬಲ್ಲವಾಗಿವೆ. ಈ 'ಎಡಿಎಸ್' ಅದೆಷ್ಟು ವೇಗವಾಗಿ ಚಲಿಸಬಲ್ಲದು ಎಂದರೆ, 1 ನಿಮಿಷಕ್ಕೆ 3,000 ಗುಂಡುಗಳನ್ನು ಸಿಡಿಸಬಲ್ಲಷ್ಟು ಶಕ್ತಿಯುತವಾಗಿದೆ. ಈ 'ಎಡಿಎಸ್' ವೃತ್ತಾಕಾರವಾಗಿದ್ದು, ಮಿಲಿಟರ್ ಟ್ರಕ್ ಮೇಲೆ ಜೋಡಿಸಲಾಗಿದೆ. ಹಾಗಾಗಿ ಗಡಿ ಭಾಗದಲ್ಲಿ ಎಲ್ಲಿಗೆ ಬೇಕಾದರೂ ಸರಾಗವಾಗಿ ಸ್ಥಳಾಂತರಿಸಬಹುದಾಗಿದೆ.

ಪಾಕಿಸ್ತಾನದ ಗಡಿಯಂಚಿನಲ್ಲಿರುವ ಭಾರತದ ಗ್ರಾಮ-ಪಟ್ಟಣಗಳ ನಾಗರಿಕರ ಸುರಕ್ಷತೆಗಾಗಿ ಎಕೆ-430 ಸ್ವಯಂಚಾಲಿತ ಬಂದೂಕುಗಳನ್ನು ನಿಯೋಜನೆ ಮಾಡಲಾಗುವುದು ಎಂದು ಸೇನಾಧಿಕಾರಿಗಳು ಸುದ್ದಿಸಂಸ್ಥೆಗೆ ಶನಿವಾರ ಮಾಹಿತಿ ನೀಡಿದ್ದಾರೆ.

ವಿಷ್ಣು ಭಗವಾನರ ಸುದರ್ಶನ ಚಕ್ರದ ಹೆಸರನ್ನೇ ಇಡಲಾಗಿರುವ 'ಮಿಷನ್ ಸುದರ್ಶನ ಚಕ್ರ'ದ ಉದ್ದೇಶವೇ ಶತ್ರುಪಡೆಯ ವಾಯುಮಾರ್ಗದ ದಾಳಿಗಳನ್ನು ಯಶಸ್ವಿಯಾಗಿ ತಡೆಯುವುದಾಗಿದೆ. ಭಾರತ ಸರಕಾರ ಸ್ವಾಮ್ಯದ ಶಸ್ತ್ರಾಸ್ತ್ರ ತಯಾರಿಕಾ ಸಂಸ್ಥೆಯಿಂದ 30 ಎಂಎಂ ಗಾತ್ರದ 'ಎಕೆ-630' ಎಡಿಎಸ್‌ನ 6 ಬಂದೂಕುಗಳನ್ನು ಖರೀದಿಸಲು ಭಾರತೀಯ ಸೇನೆ ಇತ್ತೀಚೆಗಷ್ಟೇ ಟೆಂಡರ್ ಪ್ರಕಟಿಸಿದೆ.

ಮಿಷನ್ ಸುದರ್ಶನ ಚಕ್ರ

'ಮಿಷನ್ ಸುದರ್ಶನ ಚಕ್ರ' ಯೋಜನೆಯ ಗುರಿಯೇ 2035ರ ವೇಳೆಗೆ ಸಮಗ್ರ, ಸ್ಥಳೀಯ ಭದ್ರತಾ ಗುರಾಣಿ ರಚಿಸುವುದಾಗಿದೆ. ಶತ್ರು ದೇಶಗಳ ದಾಳಿಯಿಂದ ದೇಶವನ್ನು, ದೇಶವಾಸಿಗಳನ್ನು ರಕ್ಷಿಸಲು ಕಣ್ಗಾವಲು, ಸೈಬರ್ ಭದ್ರತೆ ಮತ್ತು ವಾಯು ರಕ್ಷಣಾ ವ್ಯವಸ್ಥೆಗಳು ಈ ಯೋಜನೆಯಲ್ಲಿವೆ.

ಡಲ್ಲಾಸ್: ಭಾರತೀಯನ ಹತ್ಯೆ

ಹೈದರಾಬಾದ್: ಉನ್ನತ ವ್ಯಾಸಂಗಕ್ಕಾಗಿ ಅಮೆರಿಕದ ಡಲ್ಲಾಸ್ ನಗರಕ್ಕೆ ಹೋಗಿದ್ದ ತೆಲಂಗಾಣದ ಮೂಲದ 28 ವರ್ಷದ ಯುವಕನನ್ನು ದುಷ್ಕರ್ಮಿಗಳು ಶುಕ್ರವಾರ ರಾತ್ರಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಹೈದರಾಬಾದ್‌ನ ಎಲ್‌ಬಿ ನಗರ ನಿವಾಸಿ ಪೋಲೆ ಚಂದ್ರಶೇಖರ್ ಹತನಾದ ಯುವಕ.

ಡಲ್ಲಾಸ್ ನಗರದಲ್ಲಿನ ಗ್ಯಾಸೊಲಿನ್(ಪೆಟ್ರೋಲ್) ಬಂಕ್‌ನಲ್ಲಿ ಚಂದ್ರಶೇಖರ್ ಅರೆಕಾಲಿಕ ಕೆಲಸ ಮಾಡುತ್ತಿದ್ದರ. ದಂತ ಶಸ್ತ್ರಚಿಕಿತ್ಸೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಲೆಂದು 2023ರಲ್ಲಿ ಅಮೆರಿಕಕ್ಕೆ ತೆರಳಿದ್ದರು. 6 ತಿಂಗಳ ಹಿಂದೆ ವ್ಯಾಸಂಗ ಪೂರ್ಣಗೊಳಿಸಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿ ಸಂದರ್ಶನಗಳಿಗೆ ಹಾಜರಾಗುತ್ತಿದ್ದರು. ವೆಚ್ಚ ನಿರ್ವಹಣೆಗಾಗಿ ಗ್ಯಾಸೊಲಿನ್ ಬಂಕ್‌ನಲ್ಲಿ ಪಾರ್ಟ್‌ಟೈ ಕೆಲಸ ಮಾಡುತ್ತಿದ್ದರು ಎಂದು ಅವರ ಸಹೋದರ ದಾಮೋದರ್ ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಸರಕಾರದ ಹಳೆಯ ಕಂಪ್ಯೂಟರ್ ರದ್ದಿಗೆ ಬದಲು ಶಾಲೆಗೆ ದಾನ

ವಿದ್ಯಾಂಜಲಿ ಯೋಜನೆ: ಕೇಂದ್ರ ನಿರ್ಧಾರ

ದೆಹಲಿ: ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಕಚೇರಿಗಳಲ್ಲಿ ಬಳಸಿ ಹಳೆಯದಾದ, ಆದರೆ ಇನ್ನೂ ಬಳಸಬಹುದಾದ ಕಂಪ್ಯೂಟರ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ರದ್ದಿಗೆ ಹಾಕುವ ಬದಲು ಸರಕಾರಿ ಶಾಲೆ ಮತ್ತಿತರ ಶಿಕ್ಷಣ ಸಂಸ್ಥೆಗಳಿಗೆ ದಾನವಾಗಿ ಕೊಡಲು ಕೇಂದ್ರ ಸರಕಾರ ನಿರ್ಧರಿಸಿದೆ.

'ವಿದ್ಯಾಂಜಲಿ'

ಕೇಂದ್ರ ಸರಕಾರದ ವಿವಿಧ ಸಚಿವಾಲಯಗಳಲ್ಲಿ ಮತ್ತು ಇಲಾಖೆಗಳಲ್ಲಿನ ಹಳೆಯದಾದ, ಆದರೆ ಬಳಸಬಹುದಾದ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಸರಕಾರಿ ಶಾಲೆಗಳಿಗೆ ಕೊಡುವ 'ವಿದ್ಯಾಂಜಲಿ ಯೋಜನೆ' ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಲಿದೆ. 'ವಿದ್ಯಾಂಜಲಿ ಯೋಜನೆ' ಹೆಸರಿನಲ್ಲಿಯೇ ವೆಬ್ ಪೋರ್ಟಲ್ ಆರಂಭಿಸಲಾಗಿದ್ದು, ಸಿಎಸ್‌ಆರ್ ಚಟುವಟಿಕೆಗೂ, ದಾನಿಗಳಿಗೂ ಇಲ್ಲಿ ದೇಣಿಗೆ ನೀಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ.

ದೇಶದಲ್ಲಿನ ಒಟ್ಟು 14.71 ಲಕ್ಷ ಶಾಲೆಗಳಲ್ಲಿ 13.13 ಲಕ್ಷದಷ್ಟು ಸರಕಾರಿ ಶಾಲೆಗಳಾಗಿವೆ. ಅದರಲ್ಲಿ ಶೇ.60.2ರಷ್ಟು ಶಾಲೆಗಳಲ್ಲಿ ಕಂಪ್ಯೂಟರ್‌ಗಳಿದ್ದು, ಶೇ.58.6 ಕಡೆ ಇಂಟರ್ನೆಟ್ ಸಂಪರ್ಕವೂ ಇದೆ. 79,349 ಸರಕಾರಿ ಅನುದಾನಿತ ಶಾಲೆಗಳಲ್ಲಿ ಶೇ.74ರಷ್ಟು ಸಂಸ್ಥೆಗಳಲ್ಲಿಯೂ ಕಂಪ್ಯೂಟಗಳಿವೆ ಮತ್ತು ಶೇ. 73.4ರಷ್ಟು ಸಂಸ್ಥೆಗಳಲ್ಲಿ ಇಂಟರ್ನೆಟ್ ಸಂಪರ್ಕವಿದೆ. ಉಳಿದ ಶೇ. 39.8ರಷ್ಟು ಸರಕಾರಿ ಶಾಲೆಗಳಿಗೆ ಬಳಕೆಗೆ ಯೋಗ್ಯವಾದ ಹಳೆಯ ಕಂಪ್ಯೂಟರ್‌ಗಳನ್ನು ಕೊಡಲು ಸರಕಾರ ನಿರ್ಧರಿಸಿದೆ. ಸಚಿವಾಲಯ ಮತ್ತು ಇಲಾಖೆಗಳಲ್ಲಿನ ಹಳೆಯ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳ ಸಂಗ್ರಹವನ್ನು ಕಡಿಮೆ ಮಾಡಿಕೊಳ್ಳುವ ಆಲೋಚನೆಯೂ ಈ ನಿರ್ಧಾರದ ಹಿಂದಿದೆ. ಸ್ವಚ್ಛತಾ ಕಾರ್ಯಕ್ರಮ ಮತ್ತು ಹಳೆಯ ವಸ್ತುಗಳ ವಿಲೇವಾರಿ ಸಂಬಂಧ ಸೆಪ್ಟೆಂಬರ್‌ನಲ್ಲಿ ಆರಂಭಿಸಿದ ವಿಶೇಷ ಅಭಿಯಾನ 5.0ಗಾಗಿ ನಡೆಸಲಾದ ಸಚಿವಾಲಯಗಳು ಮತ್ತು ಇಲಾಖೆಗಳ ನೋಡಲ್ ಅಧಿಕಾರಿಗಳ ಪರಿಶೀಲನಾ(ವಿಡಿಯೊ ಕಾನ್ಫರೆನ್ಸ್) ಸಭೆಯಲ್ಲಿ ಈ ಪ್ರಸ್ತಾಪ ಬಂದ ಬಳಿಕ ಸರಕಾರ ಈ ಕ್ರಮಕ್ಕೆ ಮುಂದಾಗಿದೆ. ಆಡಳಿತ ಸುಧಾರಣೆ-ಸಾರ್ವಜನಿಕ ಕುಂದು ಕೊರತೆ ಇಲಾಖೆ ಕಾರ್ಯದರ್ಶಿ ವಿ.ಶ್ರೀನಿವಾಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಆಂಧ್ರ ಆಟೋ-ಕ್ಯಾಬ್ ಚಾಲಕರಿಗೆ ₹15,000

ಅಮರಾವತಿ: ಆಂಧ್ರ ಪ್ರದೇಶದಲ್ಲಿ ಅರ್ಹರಾದ ಆಟೋರಿಕ್ಷಾ ಮತ್ತು ಕ್ಯಾಬ್ ಚಾಲಕರಿಗೆ ವಾರ್ಷಿಕ 15,000 ರು. ಆರ್ಥಿಕ ನೆರವು ನೀಡಲು ಸಿಎಂ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಸಚಿವ ಸಂಪುಟ ಅನುಮೋದಿಸಿದೆ. 'ಆಟೋ ಡ್ರೈವರ್ ಸೇವಾಲೊ' ಯೋಜನೆ ಯಡಿ ರಾಜ್ಯಾದ್ಯಂತ ಇರುವ 2.90 ಲಕ್ಷಕ್ಕೂ ಅಧಿಕ ಆಟೋ, ಕ್ಯಾಬ್ ಚಾಲಕರಿಗೆ ವರ್ಷಕ್ಕೊಮ್ಮೆ 15 ಸಾವಿರ ರು. ಆರ್ಥಿಕ ನೆರವು ನೀಡಲಾಗುವುದು. ಈ ಸಂಬಂಧ 2025-26ನೇ ಹಣಕಾಸು ವರ್ಷಕ್ಕೆ 436 ಕೋಟಿ ರು. ಮೀಸಲಿಡಲಾಗಿದೆ. ಯೋಜನೆ ಶನಿವಾರ ಆರಂಭಗೊಂಡಿದೆ ಎಂದು ಸಚಿವ ಕೆ.ಪಾರ್ಥಸಾರಥಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಪ್ರಮುಖ ಘಟನೆಗಳು ಮತ್ತು ಮೈಲುಗಲ್ಲು



ಸಮಾಚಾರ ಸಣ್ಣದಲ್ಲ

ಕಾರು-ಬೈಕು ಡಿಕ್ಕಿ: ಇಬ್ಬರ ಸಾವು

ರಾಯಚೂರು: ಮಾನ್ವಿ ತಾಲೂಕಿನ ಪೋತ್ನಾಳದ ಪೆಟ್ರೋಲ್ ಬಂಕ್ ಹತ್ತಿರ ಕಾರು ಬೈಕ್ ಮುಖಾಮುಖಿ ಡಿಕ್ಕಿ ಅಕ್ಕ, ತಮ್ಮ ಸಾವು. ರಾಯಚೂರು ಕಡೆಯಿಂದ ಅತಿ ವೇಗವಾಗಿ ಬಂದ ಕಾರು ಮಾನ್ವಿ ಕಡೆ ಹೊರಟ ಬೈಕ್ ಮುಖಮುಖಿ ಡಿಕ್ಕಿಯಾಗಿ ದೇವರಾಜ್ ಕರೆಗುಡ್ಡ (25) ಮರಿಯಮ್ಮ ಗಂಡ ಫಕೀರಪ್ಪ (28) ವರ್ಷ ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ವಲ್ಕಂದಿನ್ನಿ ಗ್ರಾಮದಿಂದ ಅಕ್ಕ ಮರಿಯಮ್ಮನ್ನ ತವರುಮನೆ ಕರೇಗುಡ್ಡಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಈ ಘಟನೆ ಸಂಭವಿಸಿದೆ. ಭಾನುವಾರ ಕರೇಗುಡ್ಡದಲ್ಲಿ ಜಾತ್ರೆಗೆ ಅಕ್ಕನನ್ನು ಕರೆದುಕೊಂಡು ಹೋಗಲು ಬಂದಾಗ ದಾರಿ ಮಧ್ಯೆ ಈ ಅಪಘಾತ ಸಂಭವಿಸಿದೆ. ಮಾನ್ವಿ ಪೊಲೀಸ್ ಸ್ಥಳಕ್ಕಾಗಮಿಸಿ ಪರಿಶೀಲನೆ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಲಿಂಡರ್ ಸ್ಫೋಟ: ಇಬ್ಬರ ಸಾವು

ವಿಜಯನಗರ: ಜಿಲ್ಲೆ ಹೊಸಪೇಟೆಯ ಗಾದಿಗನೂರುನಲ್ಲಿ ಸಿಲಿಂಡರ್ ಸ್ಫೋಟಗೊಂಡು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಪೈಕಿ ಇಬ್ಬರು ಮೃತಪಟ್ಟಿದ್ದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಮೃತರ ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದರು. ಮೃತರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಸರಕಾರದ ಪರವಾಗಿ ಮೃತರಾದ ಹಾಲಪ್ಪ ಹಾಗೂ ಗಂಗಮ್ಮ ಕುಟುಂಬಗಳಿಗೆ ತಲಾ 5 ಲಕ್ಷ ರು. ಪರಿಹಾರ ಘೋಷಿಸಿದರು. ಘಟನೆಯಿಂದ ಮನೆಗೆ ಹಾನಿಯಾಗಿದ್ದು, ವೈಯಕ್ತಿಕ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡುವುದಾಗಿ ತಿಳಿಸಿದರು. ನಂತರ ಆಂಬುಲೆನ್ಸ್ ಮೂಲಕ ಪಾರ್ಥಿವ ಶರೀರ ಸ್ವ ಗ್ರಾಮಕ್ಕೆ ಕಳುಹಿಸಿಕೊಡಲು ಸಚಿವರು ವ್ಯವಸ್ಥೆ ಮಾಡಿಕೊಟ್ಟರು. ಅಂತ್ಯಕ್ರಿಯೆಗೆ ಎಲ್ಲ ರೀತಿಯ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿ ಕವಿತಾ ಮಣ್ಣಿಕೇರಿ ಅವರಿಗೆ ಸೂಚನೆ ನೀಡಿದರು.

ಕ್ರೀಡಾಭ್ಯಾಸದ ಜತೆಗೆ ವಿದ್ಯಾಭ್ಯಾಸಕ್ಕೆ ಆದ್ಯತೆ

ಮುದಗಲ್: ಇತ್ತೀಚಿನ ವಿದ್ಯಾರ್ಥಿಗಳು ಆಟದ ಜೊತೆಗೆ ಅಭ್ಯಾಸಕ್ಕೆ ಆದ್ಯತೆ ನೀಡಿ ಹಿರಿಯ ನೌಕರರ ಹಾದಿಯಲ್ಲಿ ನಡೆಯಬೇಕು ಎಂದು ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಗೌಡರ ತಿಳಿಸಿದರು.ಸಮೀಪದ ಕಿಲಾರಹಟ್ಟಿ ಗ್ರಾಮದ ಶ್ರೀದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಸರ್ಕಾರಿ ನೌಕರ ಬಳಗದ ವತಿಯಿಂದ ದಸರಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್ ಗೆ ಚಾಲನೆ ನೀಡಿ ನಂತರ ಮಾತನಾಡಿದ ಅವರು ಗ್ರಾಮದ ಯುವಕರು ಉತ್ತಮವಾಗಿ ಅಭ್ಯಾಸ ಮಾಡಿ ಸರ್ಕಾರಿ ನೌಕರಿ ಪಡೆದು ಊರಿನ ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ ಎಂದರು. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹಾವಿನ, ಡಾ::ಮಂಜುನಾಥ್ ಹಟ್ಟಿ, ಶರಣಬಸವ,ಹನಮನಗೌಡ ಪಾಟೀಲ್, ಬೀರಪ್ಪ, ಅಮರೇಶ್ ಗೋರೆಬಾಳ, ಪ್ರೇಮ್ ಸಿಂಗ್, ನಾಗನಗೌಡ ಪಾಟೀಲ್, ವಸಂತ್ ತುಂಬದ, ಬಸವರಾಜ ಬೂದಿ, ಸೋಮನೋಗೌಡ, ಹೋಳಿಯಪ್ಪಾ ತುಂಬದ ಇದ್ದರು.

ಅಗಲಿದ ಜೀವ

ಅನ್ನಪೂರ್ಣಮ್ಮ ಹೊಸಮನಿ

ಕಾರಟಗಿ: ತಾಲೂಕಿನ ಸಿದ್ದಾಪುರ ಗ್ರಾಮದ ರೆಡ್ಡಿ ಸಮಾಜದ ಹಿರಿಯರಾದ ಅನ್ನಪೂರ್ಣಮ್ಮ ಗಂಡ ದಿ.ಶಂಕರಗೌಡ ಹೊಸಮನಿ(59) ಇವರು ಶನಿವಾರ ಗ್ರಾಮದ ನಿವಾಸದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ. ಮೃತರ ನಿಧನಕ್ಕೆ ಸಚಿವ ಶಿವರಾಜ ಎಸ್ ತಂಗಡಗಿ, ಜಿ.ಪಂ.ಮಾಜಿ ಅಧ್ಯಕ್ಷ ಎಚ್. ವಿಶ್ವನಾಥ ರೆಡ್ಡಿ, ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರೀಯೆ ಭಾನುವಾರ ಬೆಳಗ್ಗೆ 11 ಗಂಟೆಗೆ ಸಿದ್ದಾಪುರ ಸಮೀಪದ ಎಸ್.ಬಿ ರೆಡ್ಡಿ ಕ್ಯಾಂಪಿನಲ್ಲಿರುವ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

{ಶಿವರಾಜ ತಂಗಡಗಿ} ಸಚಿವ

ಡಿಸಿಎಂ ಡಿ.ಕೆ.ಶಿವಕುಮಾರ ಸಮೀಕ್ಷೆ ವೇಳೆ ವೈಯಕ್ತಿಕ ವಿಚಾರ ಕೇಳಿರುವುದಕ್ಕೆ ಟೂ ಮಚ್ ಎಂದು ಹೇಳಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ವೈಯಕ್ತಿಕ ಪ್ರಶ್ನೆ ಯಾವುದೂ ಕೇಳಿಲ್ಲ. ಗಣತಿದಾರರು ಪ್ರಶ್ನೆ ಕೇಳುತ್ತಾರೆ. ಆದರೆ ಎಲ್ಲ ಪ್ರಶ್ನೆಗಳಿಗೂ ನೀವು ಹೇಳಿದ್ದನ್ನು ಬರೆದುಕೊಂಡು ಹೋಗುತ್ತಾರೆ. ಗಣತಿದಾರರು ಕೇಳುವ ಪ್ರಶ್ನೆಗೆ ಉತ್ತರ ನೀಡುವುದು, ಬಿಡುವುದು ನಿಮಗೆ ಬಿಟ್ಟ ವಿಚಾರ.

2 ಸಾವಿರ ಕೋಟಿ ರು. ಕಾಮಗಾರಿಗೆ ಅ.6ರಂದು ಸಿಎಂ ಚಾಲನೆ | ಸಚಿವ ಶಿವರಾಜ ತಂಗಡಗಿ

ಕಾಮಗಾರಿ ಶಂಕುಸ್ಥಾಪನೆ, ಲೋಕಾರ್ಪಣೆ

ಕೊಪ್ಪಳ: ಜಿಲ್ಲೆಯ ವಿವಿಧ ಭಾಗದಲ್ಲಿ ಮಂಜೂರಾಗಿರುವ ಸುಮಾರು 2 ಸಾವಿರ ಕೋಟಿ ರು. ವೆಚ್ಚದ ಕಾಮಗಾರಿಗಳಿಗೆ ಅ.6 ರಂದು ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದರು. ಕೊಪ್ಪಳದ ಹೊಸಪೇಟೆ ರಸ್ತೆಯಲ್ಲಿ ನಡೆಯಲಿರುವ ಬೃಹತ್ ಸಮಾವೇಶದಲ್ಲಿ ಸಿಎಂ ಕಾಮಗಾರಿಗೆ ಚಾಲನೆ ನೀಡುವರು. ಸುಮಾರು 1 ಲಕ್ಷಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಸೇರಲಿದ್ದಾರೆ. ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶ ನಡೆಯುತ್ತಿದ್ದೇವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಡಿಸಿಎಂ ಡಿ.ಕೆ. ಶಿವಕುಮಾರ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಸೇರಿ ಎಲ್ಲ ಸಚಿವರನ್ನು ಆಹ್ವಾನಿಸಿದ್ದೇವೆ. ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಕೆ.ಪಾಟೀಲ್, ಜಮೀರ್ ಅಹ್ಮದ್ ಖಾನ್, ಪ್ರಿಯಾಂಕಾ ಖರ್ಗೆ ಸೇರಿ ವಿವಿಧ ಸಚಿವರು ಭಾಗವಹಿಸುವರು ಎಂದು ತಿಳಿಸಿದರು.

ಕೊಪ್ಪಳದಲ್ಲಿ ಸೆ.6 ನಡೆಯುವ ಸಿಎಂ ಸಿದ್ದರಾಮಯ್ಯ ಕಾರ್ಯಕ್ರಮದ ವೇದಿಕೆಯನ್ನು ಗಣ್ಯರು ವೀಕ್ಷಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 150 ಕೋಟಿ ರು. ವೆಚ್ಚದ 36 ವಸತಿ ನಿಲಯಗಳ ಭೂಮಿ ಪೂಜೆ ನೆರವೇರಲಿದೆ. ತೋಟಗಾರಿಕಾ ಪಾರ್ಕ್, ಕೆರೆ ತುಂಬಿಸುವುದು, ಏತ ನೀರಾವರಿ ಯೋಜನೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಏತ ನೀರಾವರಿ ಘೋಷಣೆ ಮಾಡುವಂತೆ ಮನವಿ ಮಾಡಿದ್ದೇವೆ. ತೋಟಗಾರಿಕಾ ಪಾರ್ಕ್ ನಿರ್ಮಾಣಕ್ಕೆ 2 ಕಂಪನಿ ಮುಂದೆ ಬಂದಿವೆ. 10 ಕೋಟಿ ರು. ಅನುದಾನ ಕೆಕೆಆರ್‌ಡಿಬಿಯಿಂದ ನೀಡುತ್ತಿದ್ದೇವೆ. ಇದಕ್ಕೆ ಜಮೀನು ನೀಡಿದ ರೈತರು ನ್ಯಾಯಾಲಯಕ್ಕೆ ಹೋಗಿದ್ದರು. ಹೆಚ್ಚುವರಿ ಅನುದಾನ ನೀಡುವಂತೆ ಕೇಳಿದ್ದಾರೆ. ಈ ನಿಟ್ಟಿನಲ್ಲಿ ಹೆಚ್ಚುವರಿ ಹಣ ಕೇಳುವುದಿಲ್ಲ ಎಂದು ಜಮೀನು ಮಾಲೀಕರು ಪತ್ರ ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದರು.

ಕೊಪ್ಪಳ ವಿಶ್ವವಿದ್ಯಾಲಯ ಜಿಲ್ಲಾ ಕೇಂದ್ರದಲ್ಲೇ ಇರಬೇಕು. ಆದರೆ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವೆಲು ತಳಕಲ್ ಗ್ರಾಮದಲ್ಲಿ ಇರಬೇಕು ಎಂದು ಬಯಸಿದ್ದಾರೆ. ಅಂಜನಾದ್ರಿ ಅಭಿವೃದ್ಧಿ ಕುರಿತು ಜಮೀನು ಸಮಸ್ಯೆ ಇದ್ದು, ಇದು ಸರಿಯಾದರೆ ಎಲ್ಲವೂ ಪರಿಹಾರ ಆಗಲಿದೆ. ಅಂಜನಾದ್ರಿ, ಸುತ್ತಲಿನ ಗ್ರಾಮಸ್ಥರ ಬೇಡಿಕೆಯಂತೆ ದೇವಸ್ಥಾನ ಸುತ್ತಲೂ ಅಭಿವೃದ್ಧಿ ಮಾಡುತ್ತೇವೆ.

ಡಿಸಿಎಂ ಡಿ.ಕೆ.ಶಿವಕುಮಾರ ಸಮೀಕ್ಷೆ ವೇಳೆ ವೈಯಕ್ತಿಕ ವಿಚಾರ ಕೇಳಿರುವುದಕ್ಕೆ ಟೂ ಮಚ್ ಎಂದು ಹೇಳಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ವೈಯಕ್ತಿಕ ಪ್ರಶ್ನೆ ಯಾವುದೂ ಕೇಳಿಲ್ಲ. ಗಣತಿದಾರರು ಪ್ರಶ್ನೆ ಕೇಳುತ್ತಾರೆ. ಆದರೆ ಎಲ್ಲ ಪ್ರಶ್ನೆಗಳಿಗೂ ನೀವು ಹೇಳಿದ್ದನ್ನು ಬರೆದುಕೊಂಡು ಹೋಗುತ್ತಾರೆ. ಗಣತಿದಾರರು ಕೇಳುವ ಪ್ರಶ್ನೆಗೆ ಉತ್ತರ ನೀಡುವುದು, ಬಿಡುವುದು ನಿಮಗೆ ಬಿಟ್ಟ ವಿಚಾರ.
-ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಟೀಕೆಗೆ ನ್ಯಾಯಾಲಯದ ತೀರ್ಪು ಉತ್ತರ

ಕಳೆದ 2015ರಲ್ಲಿ ನಡೆದಿದ್ದ ವಿದ್ಯಾರ್ಥಿ ಯಲ್ಲಾಲಿಂಗ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಬಗ್ಗೆ ಟೀಕೆ- ಟಿಪ್ಪಣೆ ಮಾಡಿದ್ದರು. ಎಲ್ಲ ಟೀಕೆಗೆ ನ್ಯಾಯಾಲಯದ ತೀರ್ಪು ಉತ್ತರ ನೀಡಿದೆ. ಆಪ್ತರು ಎಂದು ಎಲ್ಲದಕ್ಕೂ ಸಹಕಾರ ನೀಡುವುದಿಲ್ಲ. ಎಲ್ಲರಿಗೂ ಉತ್ತರ ಸಿಕ್ಕಿದೆ. ತೀರ್ಪು ತಾಯಿ ಒಪ್ಪುತ್ತಾಳೋ? ಇಲ್ಲವೋ? ಗೊತ್ತಿಲ್ಲ. ನ್ಯಾಯಾಲಯದ ಆದೇಶ ನಾನು ಗೌರವಿಸುತ್ತೇನೆ. ಅಂತಹ ವಿಚಾರಕ್ಕೆ ನಾವು ಕುಮ್ಮಕ್ಕು ನೀಡುವುದಿಲ್ಲ. ಯಲ್ಲಾಲಿಂಗನ ಸ್ವಗ್ರಾಮ ಕನಕಾಪುರ ಗ್ರಾಮದಲ್ಲಿ ಏನಾಗಬೇಕೋ, ಎಲ್ಲವೂ ಆಗಿದೆ ಎಂದು ಸಚಿವ ಶಿವರಾಜ ತಂಗಡಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಳೆಯಿಂದ ಹತ್ತಿ, ತೊಗರಿ ಬೆಳೆ ನಾಶ, ಕಂಗಾಲಾದ ರೈತ

ಬಸವರಾಜ ನಾಗಡದಿನ್ನಿ,ರಾಯಚೂರು

ಭಾರಿ ಮಳೆಯಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಯಿತು ಎಂಬ ಮಾತು ಈಗ ರೈತರಿಗೆ ಅನ್ವಯವಾಗುತ್ತಿದೆ. ಸಕಾಲಕ್ಕೆ ಸುರಿದ ಮಳೆಯಿಂದ ಹತ್ತಿ, ತೊಗರಿ, ಈರುಳ್ಳಿ ಬಿತ್ತನೆ ಮಾಡಲಾಗಿತ್ತು. ಬಿಟ್ಟು ಬಿಡದೆ ಸುರಿದ ಮಳೆಯಿಂದ ಹತ್ತಿ ಮತ್ತು ತೊಗರಿ ಬೆಳೆಗಳು ಸಂಪೂರ್ಣ ಹಾನಿಯಾಗಿದ್ದರೆ, ಈರುಳ್ಳಿಯನ್ನ ಕೊಂಡುಕೊಳ್ಳುವವರಿಲ್ಲದೆ ಹತಾಶರಾದ ರೈತರು ರಸ್ತೆಗೆ ಸುರಿಯುವಂಥ ಸ್ಥಿತಿಗೆ ತಲುಪಿದ್ದಾರೆ.

ಕಳೆದೆರಡು ವರ್ಷದ ಹಿಂದೆ ಹೆಚ್ಚಿನ ಬೆಲೆಗೆ ಮಾರಾಟವಾಗಿ ಮೆರೆದಿದ್ದ ಈರುಳ್ಳಿಯನ್ನ ಇಂದು ಕೇಳುವವರಿಲ್ಲದಂತಾಗಿದೆ. ಖರೀದಿದಾರರು ಇಲ್ಲದೆ ಇರುವುದರಿಂದ ರೈತರಿಗೆ ತೀವ್ರ ಸಂಕಷ್ಟ ಎದುರಿಸುವಂತಾಗಿದೆ. ಎಪಿಎಂಸಿಗೆ ನಿತ್ಯ 100 ರಿಂದ 200 ಕ್ವಿಂಟಲ್ ವರೆಗೂ ಈರುಳ್ಳಿ ಬರುತ್ತಿದೆ. ಆದರೆ ಕ್ವಿಂಟಲ್ ಈರುಳ್ಳಿಗೆ 705 ರಿಂದ 910 ರವರೆಗೆ ದರ ನಿಗದಿಯಾಗಿರುವುದರಿಂದ ಕೆಜಿಗೆ 1 ರುಪಾಯಿ ಸಹ ದೊರೆಯದೆ ಇರುವುದರಿಂದ ಜಿಲ್ಲೆಯ ರೈತನೋರ್ವ ಸುಮಾರು 250 ಪ್ಯಾಕೇಟ್‌ಗಳಲ್ಲಿ ತಂದಿದ್ದ ತನ್ನ 62 ಕ್ವಿಂಟಾಲ್ ಈರುಳ್ಳಿಯನ್ನು ನಗರದ ರಾಜೇಂದ್ರ ಗಂಜ್ ಎಂಪಿಎಂಸಿ ಆವರಣದಲ್ಲೇ ಸುರಿದುಬಿಟ್ಟು ಹೋಗಿದ್ದಾನೆ.

ಖರೀದಿಗೆ ವರ್ತಕರಿಲ್ಲ: ರಾಯಚೂರಿನ ರಾಜೇಂದ್ರ ಗಂಜ್ ಇಡೀ ರಾಜ್ಯದಲ್ಲಿಯೇದೊಡ್ಡ ಮಾರುಕಟ್ಟೆ ಎಂಬ ಹೆಸರು ಹೊಂದಿತ್ತು. ಆದರೆ ಇಂಥ ಎಪಿಎಂಸಿಯಲ್ಲಿ ಈರುಳ್ಳಿ ಖರೀದಿಸುವ ವರ್ತಕರು ಕೇವಲ ಮೂವರೇ ಇದ್ದಾರೆ. ಇದರಿಂದ ಅವರು ಮನಬಂದಂತೆ ದರ ನಿಗದಿ ಮಾಡುತ್ತಾರೆಂಬ ಆರೋಪಗಳಿವೆ. ಮಾರುಕಟ್ಟೆಗೆ ಎಷ್ಟೇಣಟಿಜಜಜಿಟಿಜಜ ಉತ್ಪನ್ನ ಬಂದರೂ ಈ ಮೂವರೇ ಖರೀದಿಸಬೇಕಿದೆ. ನಮಗೆ ಬೇಡಿಕೆ ಬಂದಿಲ್ಲ. ಹೀಗಾಗಿ ನಾವು ಖರೀದಿಸುವುದಿಲ್ಲ, ರೈತರು ಬೇರೆ ಎಲ್ಲಿಯಾದರೂ ಮಾರಿಕೊಳ್ಳಬಹುದು ಎನ್ನುತ್ತಿದ್ದಾರೆ.

ಈರುಳ್ಳಿಯನ್ನು ಕೊಂಡು ಕೊಳ್ಳುವವರಿಲ್ಲದೆ ರೈತರು ಸಮಸ್ಯೆಯಲ್ಲಿದ್ದು, ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚಿಸಿರುವೆ.
-ಡಾ.ಶರಣ ಪ್ರಕಾಶ ಪಾಟೀಲ, ಸಚಿವ

ಈರುಳ್ಳಿಗೆ ಭಾರಿ ಬೇಡಿಕೆ

ಜಿಲ್ಲೆಯಲ್ಲಿ ಸುಮಾರು ಈ ಬಾರಿ 745 ಹೆಕ್ಟರ್ ಪ್ರದೇಶದಲ್ಲಿ ಈ ಬಾರಿ ಈರುಳ್ಳಿ ಬೆಳೆಯನ್ನು ಬೆಳೆಯಲಾಗಿದ್ದು, ಈರುಳ್ಳಿಗೆ ಭಾರೀ ಬೇಡಿಕೆಯಿದ್ದು, ದೂರದ ಊರುಗಳಿಗೂ ರಫ್ತು ಮಾಡಲಾಗುತ್ತದೆ. ಆದರೆ ಈಚೆಗೆ ಸುರಿದ ಮಳೆಯಿಂದ ಕೆಲ ಭಾಗದಲ್ಲಿ ಈರುಳ್ಳಿ ಕೊಳೆತು ರೈತರು ನಷ್ಟಕ್ಕೆ ತುತ್ತಾಗಿದ್ದಾರೆ. ಈಗ ಮಾರುಕಟ್ಟೆಯಲ್ಲೂ ಖರೀದಿ ಮಾಡದಿರುವುದು ರೈತರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ರಾಯಚೂರು, ದೇವದುರ್ಗ, ಲಿಂಗಸೂಗೂರು ತಾಲೂಕು ಭಾಗದಲ್ಲಿ ಹೆಚ್ಚಾಗಿ ಈರುಳ್ಳಿ ಬೆಳೆಯಲಾಗಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ರೈತರಿಗೆ ಸಾಗಣೆ ವೆಚ್ಚ ಉಳಿಯುತ್ತಿತ್ತು. ಜಿಲ್ಲೆಯಿಂದ ಮಾತ್ರವಲ್ಲ, ಅಕ್ಕಪಕ್ಕದ ಆಂಧ್ರ ಪ್ರದೇಶ ಹಾಗೂ ತೆಲಂಗಾಣದಿಂದಲೂ ರೈತರು ಈರುಳ್ಳಿಯನ್ನ ರಾಯಚೂರು ಮಾರುಕಟ್ಟೆಗೆ ತರುತ್ತಿದ್ದರು. ಈಗ ಖರೀದಿ ದಾರರೇ ಇಲ್ಲದ ಕಾರಣಕ್ಕೆ ದೂರದ ಹೈದರಾಬಾದ್, ಕರ್ನೂಲ್ ಸೇರಿ ಬೇರೆ ಕಡೆಗೆ ಸಾಗಣೆ ಮಾಡಬೇಕಿದ್ದು, ರೈತರಿಗೆ ಹೊರೆಯಾಗಲಿದೆ. ಹೀಗಾಗಿ ಕೆಲ ರೈತರು ಎರಡು ದಿನಗಳಿಂದ ಇಲ್ಲಿನ ತರಕಾರಿ ಮಾರುಕಟ್ಟೆಯಲ್ಲೇ ಈರುಳ್ಳಿ ಮಾರಾಟ ಮಾಡಿದ್ದಾರೆ. ಆದರೆ ಇಲ್ಲಿ ಹೆಚ್ಚಿನ ಕಮಿಷನ್ ಪಡೆಯುತ್ತಿದ್ದು, ಇಲ್ಲೂ ನಷ್ಟ ಉಂಟಾಗುತ್ತಿದೆ.

ಈಶಾನ್ಯ ಶಿಕ್ಷಕ ಮತದಾರರ ನೋಂದಣಿ

ಹೊಸಪೇಟೆ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಹೊಸದಾಗಿ ಸಿದ್ಧಪಡಿಸಲಾಗುತ್ತಿದ್ದು, ಅರ್ಹ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕವಿತಾ.ಎಸ್.ಮನ್ನಿಕೇರಿ ತಿಳಿಸಿದ್ದಾರೆ.

ನ.1ನ್ನು ಅರ್ಹತಾ ದಿನಾಂಕವಾಗಿ ಪರಿಗಣಿಸಿ ಈ ಹೊಸ ಪಟ್ಟಿ ಸಿದ್ಧಪಡಿಸುವ ಕಾರ್ಯ ಆರಂಭವಾಗಿದೆ. ಹಿಂದಿನ ಪಟ್ಟಿಯಲ್ಲಿ ಹೆಸರು ಹೊಂದಿರುವ ಮತದಾರರು ಕೂಡ ನಮೂನೆ 19 ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕು.

ಮತದಾರರ ಪಟ್ಟಿ ಸಿದ್ಧಪಡಿಸುವ ವೇಳಾಪಟ್ಟಿ :

- ನವೆಂಬರ್ 6: ಅರ್ಜಿ ನಮೂನೆ 19 ಸ್ವೀಕರಿಸಲು ಕೊನೆಯ ದಿನ.
- ನವೆಂಬರ್ 25: ಕರಡು ಮತದಾರರ ಪಟ್ಟಿ ಪ್ರಕಟ.
- ನವೆಂಬರ್ 25ರಿಂದ: ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ನಿಗಧಿಪಡಿಸಿದ ಅವಧಿ.
- ಡಿಸೆಂಬರ್ 30 : ಅಂತಿಮ ಮತದಾರರ ಪಟ್ಟಿ ಪ್ರಕಟ.

ಹೆಸರು ನೋಂದಾಯಿಸಲು ಮಾರ್ಗಸೂಚಿಗಳು :

ಭಾರತದ ಪ್ರಜೆಯಾಗಿರುವ, ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಮಾನ್ಯ ನಿವಾಸಿಯಾಗಿರುವ, ಮತ್ತು ನ.1 ಕ್ಕೆ ಮುಂಚಿನ 6 ವರ್ಷಗಳಲ್ಲಿ ಒಟ್ಟು ಕನಿಷ್ಠ 3 ವರ್ಷಗಳ ಕಾಲ ಪ್ರೌಢಶಾಲೆಗಿಂತ ಕಡಿಮೆ ಇಲ್ಲದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ಬೋಧನಾ ವೃತ್ತಿಯಲ್ಲಿ ನಿರತರಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಅರ್ಹರಾಗಿರುತ್ತಾರೆ. ಆದರೆ, ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಬದಲಾಗಿ, ಅರ್ಜಿದಾರರು ನಮೂನೆ 19 ಅನ್ನು ಭರ್ತಿ ಮಾಡಿ, ತಮ್ಮ ಸಂಸ್ಥೆಯಿಂದ ಪಡೆದ ಅನುಬಂಧ-2 ರ ಪ್ರಮಾಣಪತ್ರ ದೊಂದಿಗೆ ಸಲ್ಲಿಸಬೇಕು.

ಕರ್ನಾಟಕ ಈಶಾನ್ಯ ಶಿಕ್ಷಕರ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ (ಮಹಾನಗರ ಪಾಲಿಕೆ ಹಾಗೂ ತಹಸೀಲ್ದಾರ ಕಾರ್ಯಾಲಯದಲ್ಲಿ) ನಿಗದಿಪಡಿಸಿದ ಕಾಲಮಿತಿಯೊಳಗೆ ಸಲ್ಲಿಸಬಹುದಾಗಿದೆ.

ಸೊಳ್ಳೆ ನಿಯಂತ್ರಣಕ್ಕೆ ಎಲ್ಲರೂ ಕೈ ಜೋಡಿಸಿ: ಡಿಎಚ್‌ಒ

ಬಳ್ಳಾರಿ: ಸಾರ್ವಜನಿಕರು ತಮ್ಮ ಮನೆಯ ಸುತ್ತಮುತ್ತ ನೀರು ನಿಲ್ಲುವುದನ್ನು ತಪ್ಪಿಸಿ, ಡೆಂಘೀ ಹರಡುವ ಈಡಿಸ್ ಈಜಿಪ್ಟೆ ಸೊಳ್ಳೆಯ ಸಂತತಿಯನ್ನು ನಾಶ ಮಾಡುವ ಮೂಲಕ ಸೊಳ್ಳೆ ನಿಯಂತ್ರಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಮೇಶ್ ಬಾಬು ತಿಳಿಸಿದ್ದಾರೆ.

ನಿಂತ ನೀರಿನಿಂದ ಸೊಳ್ಳೆ ಉತ್ಪತ್ತಿಯಾಗುವ ಜತೆಗೆ ಮಕ್ಕಳಿಗೆ ಡೆಂಗ್ಯೂ ಸೇರಿದಂತೆ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಚಿಕುನ್‌ಗುನ್ಯಾ, ಮಲೇರಿಯಾ, ಆನೇಕಾಲು ರೋಗ, ಮೆದುಳು ಜ್ವರ ಮುಂತಾದವುಗಳು ಕಂಡುಬರುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಡೆಂಘೀ ಸಂಬಂಧಿತ ಜ್ವರವಾಗಿದ್ದರೆ ರೋಗಿಯ ಪ್ಲೇಟ್‌ಲೆಟ್ಸ್‌ಗಳ ಶೀಘ್ರ ಕುಸಿಯುವಿಕೆಯಿಂದ ಆರೋಗ್ಯ ಸಮಸ್ಯೆ ಎದುರಾಗಿ ರಕ್ತಸ್ರಾವದಂತಹ ಗಂಭಿರ ಸಮಸ್ಯೆ ಉಂಟಾಗಬಹುದು. ಯಾರಿಗಾದರೂ ಮೂರು ದಿನಗಳಿಗಿಂತ ಕಡಿಮೆಯಾಗದ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಂಡಲ್ಲಿ ನಿರ್ಲಕ್ಷಿಸದೇ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಅಗತ್ಯ ಪರೀಕ್ಷೆ ಮಾಡಿಸಿ ವೈದ್ಯರ ಸಲಹೆಯಂತೆ ಲಕ್ಷಣಗಳ ಆಧಾರದ ಮೇರೆಗೆ ಚಿಕಿತ್ಸೆ ಪಡೆಯಬೇಕು ಎಂದಿದ್ದಾರೆ.

ಮುಂಜಾಗ್ರತೆ ಕ್ರಮಕ್ಕೆ ಸೂಚನೆ

ಡ್ರಮ್, ಬ್ಯಾರಲ್, ನೀರಿನ ತೊಟ್ಟಿ, ಕಲ್ಲಿನ ಡೋಣಿ, ಹೂವಿನ ಕುಂಡಲ ಮುಂತಾದ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ಹಾಗೂ ಮುಚ್ಚಳ ಮುಚ್ಚಿ ಬಟ್ಟೆ ಕಟ್ಟಿ ಬಳಕೆ ಮಾಡದ ನೀರು ಸಂಗ್ರಹಕಗಳಿಗೆ ಕೊಬ್ಬರಿ ಎಣ್ಣೆಯನ್ನು ಹಾಕುವ ಮೂಲಕ ಸೊಳ್ಳೆ ಉತ್ಪತ್ತಿ ತಡೆಯಬಹುದು. ಹಳೆಯ ಡಬ್ಬಿ, ಟ್ಯೂಬ್, ಒಡೆದ ಬಕೆಟ್, ಕುಡಿಯುವ ಪಾನೀಯದ ಬಾಟಲ್, ಕಸ, ಪುಡಿಯನ್ನು ಸರಿಯಾಗಿ ವಿಲೇವಾರಿ ಮಾಡಿ ಹೂದಾನಿ ಅಥವಾ ಕಪ್‌ಗಳಲ್ಲಿ ನೀರನ್ನು ದಿನವೂ ಬದಲಾಯಿಸಬೇಕು. ಟ್ಯಾಂಕ್, ಬಕೆಟ್‌ಗಳು ಮುಚ್ಚಿ, ಕೂಲರ್, ಫ್ರಿಜ್ ಹಿಂಬದಿ ಭಾಗದ ಟ್ರೇಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಪೂರ್ಣಬಾಹು ಬಟ್ಟೆಗಳನ್ನು ಧರಿಸಿ ಕಿಟಕಿ-ಬಾಗಿಲುಗಳಿಗೆ ಕಿಡೆ ಜಾಲಿ ಅಳವಡಿಸಿ ಡೆಂಘೀ ಜ್ವರ ಹರಡದಂತೆ ಎಚ್ಚರವಹಿಸಬೇಕು ಎಂದು ಡಿಎಚ್‌ಒ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕರ ಮನೆ ಮುಂದೆ 15ರಂದು ಧರಣಿ

ಸುದ್ದಿಗೋಷ್ಠಿಯಲ್ಲಿ ಸಣ್ಣ ಗುತ್ತಿದಾರರ ಸಂಘದ ಅಧ್ಯಕ್ಷ ಶರಣಗೌಡ ಸುಂಕೇಶ್ವರಹಾಳ್ ಮಾತನಾಡಿದರು.

ಲಿಂಗಸೂಗೂರು: ನಾರಾಯಣಪುರ ಬಲದಂಡೆ ಕಾಲುವೆ ಉಪಗುತ್ತಿಗೆ ಪಡೆದು ಕಾಮಗಾರಿ ಮುಗಿಸಿದ್ದೇವೆ. ನಮಗೆ ಈ ವರೆಗೂ ಸುಮಾರು 4 ಕೋಟಿ 85 ಲಕ್ಷ ಕಾಮಗಾರಿ ಬಿಲ್ಲನ್ನು ನೀಡದೆ ಅನ್ಯಾಯವೆಸಗುತ್ತಿರುವ ಎನ್.ಡಿ ವಡ್ಡರ್ ಕಂಪನಿಯ ಲಿಂಗಸೂಗೂರು ಕ್ಷೇತ್ರದ ಶಾಸಕ ಮಾನಪ್ಪ ವಜ್ಜಲ್ ಅವರ ವರ್ತನೆಗೆ ಬೇಸತ್ತು ಅ.15ರಂದು ಶಾಸಕರ ಮನೆ ಮುಂದೆ ಉಪವಾಸ ಸತ್ಯಾಗ್ರಹ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ದೇವದುರ್ಗ ತಾಲೂಕು ಸಣ್ಣ ಗುತ್ತಿದಾರರ ಸಂಘದ ಅಧ್ಯಕ್ಷ ಶರಣಗೌಡ ಸುಂಕೇಶ್ವರಹಾಳ್ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾರಾಯಣಪುರ ಬಲದಂಡೆ ಕಾಲುವೆ ದುರಸ್ತಿ ಪ್ಯಾಕೇಜ್ ಒಟ್ಟು 1466 ಕೋಟಿ ಮೊತ್ತದ ಗುತ್ತಿಗೆ ಒಪ್ಪುದವನ್ನ ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ್ ಸಹೋದರರ, ಎನ್.ಡಿ.ವಡ್ಡರ್ ಕಂಪನಿಗೆ ಆಗಿರುತ್ತದೆ. ನಾವುಗಳು ಉಪಗುತ್ತಿಗೆ ಒಪ್ಪಂದಕ್ಕೆ ದಿನಾಂಕ 24.4.2024 ರಂದು ಡಿಸ್ಟ್ರಿಬ್ಯೂಟರಿ 17. ಬಲಬದಿಯ ಉಪಕಾಲುವೆ 1, ಒಟ್ಟು 7.00 ಕಿ. ಮೀ.

ಡಿಸ್ಟ್ರಿಬ್ಯೂಟರಿ ಉಪ ಕಾಲುವೆ ನಂ.3. ಒಟ್ಟು 3.5 ಕಿ.ಮೀ. ಡಿಸ್ಟ್ರಿಬ್ಯೂಟರಿ ಉಪಕಾಲವೇ ನಾಲ್ಕು ಒಟ್ಟು 4ಕಿ.ಮೀ.ಒಟ್ಟಾರೆ 17 ಡಿ ಡಿಸ್ಟ್ರಿಬ್ಯೂಟರ್ ಅಡಿ ಒಟ್ಟು 13.5 ಕಾಮಗಾರಿ ನಿರ್ಮಾಣಕ್ಕೆ ಉಪ ಗುತ್ತಿಗೆ ಒಪ್ಪಂದವಾಗಿರುತ್ತದೆ. ಒಟ್ಟು ಅಂದಾಜು ಮೊತ್ತ ಮೊತ್ತ 4 ಕೋಟಿ 87 ಲಕ್ಷ ರು. ಆಗಿರುತ್ತದೆ. ಕೃಷ್ಣಭಾಗ್ಯ ಜಲ ನಿಗಮದ ಎಸ್ಟಿಮೇಷನ್ ಹಾಗೂ ಉಪಗುತ್ತಿಗೆ ಒಪ್ಪಂದದ ಶರತ್ತುಗಳ ಅನ್ವಯ ತುಕಾರಾಮ ಜಿನ್ನಾಪುರ ಸಮೇತ ಶರಣೆಗೌಡ ಸುಂಕೇಶ್ವರ ಹಾಳ, ಪರಮಾನಂದ ಸುಂಕೇಶ್ವರಹಾಳ, ಶಿವು ಸಾಹುಕಾರ ಅಮರಾಪುರ, ಆಂಜನೇಯ ಬಡಿಗೇರ್ ಸುಂಕೇಶ್ವರಹಾಳ, ವೀರೇಶ್ ಹೂವಿನಬಾಯಿ ಮತ್ತು ಅಮರೇಶ್ ಇಟ್ಟಿಗೆ ಸೇರಿಕೊಂಡು ನಾವು ಪಡೆದ ಉಪಗುತ್ತಿಗೆ ಕೆಲಸವನ್ನು ನಿಗದಿತ ಸಮಯದಲ್ಲಿ ಸಂಪೂರ್ಣವಾಗಿ ಮಾಡಿ ಮುಗಿಸಿದ್ದೇವೆ. ಕಾಮಗಾರಿ ಮುಗಿದು ಒಂದು ವರ್ಷ ಆರು ತಿಂಗಳು ಗತಿಸಿದರು ನಮಗೆ ಬಿಲ್ ಪಾವತಿ ಮಾಡುತ್ತಿಲ್ಲ ಎಂದು ದೂರಿದರು.

ಅ.15 ರ ಒಳಗೆ ನಮ್ಮ ಹಣವನ್ನು ಪಾವತಿ ಮಾಡದಿದ್ದರೆ 15 ರಂದು ಶಾಸಕರ ಮನೆಯ ಮುಂದೆ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲು ನಿರ್ಧಿಸಿದ್ದು ಜಿಲ್ಲೆಯ ಗುತ್ತಿಗೆದಾರರು ನಮ್ಮ ಜೀವನ ಅಥವಾ ಮರಣ ಎಂಬ ಈ ಹೋರಾಟಕ್ಕೆ ಬೆಂಬಲಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಂಜಿನಯ್ಯ ಬಡಿಗೇರ್, ವೀರೇಶ ಹೂವಿನಭಾವಿ, ತುಕಾರಾಂ ಜಿನ್ನಾಪುರ, ಪರಮಾನಂದ, ಶಿವು ಸಾಹುಕಾರ, ಅಮರೇಶ, ರಂಗಪ್ಪ ಇದ್ದರು.

ಎಸ್ಸಿ ಎಸ್ಟಿ ಕುಟುಂಬಗಳಿಗೆ ಸ್ಪಂದಿಸಲು ಜಿಲ್ಲಾಧಿಕಾರಿ ಸೂಚನೆ

ರಾಯಚೂರು: ದೌರ್ಜನ್ಯದಿಂದ ಮೃತಪಟ್ಟ ಪ್ರಕರಣಗಳಲ್ಲಿ ಮೃತರ ಕುಟುಂಬದ ಅವಲಂಬಿತರಿಗೆ ಸರಕಾರದಿಂದ ನಿಯಮಾನುಸಾರ ಕೆಲವು ಸೌಲಭ್ಯಗಳು ಸಿಗುತ್ತವೆ ಎಂಬುದು ಬಹುತೇಕ ಜನತೆಗೆ ಅರಿವಿಲ್ಲ. ಆಯಾ ತಾಲೂಕಿನ ಅಧಿಕಾರಿಗಳು ಅಂತಹ ಕುಟುಂಬದ ಅವಲಂಬಿತರು, ಸಂತ್ರಸ್ತರಿಗೆ ಭೇಟಿ ಮಾಡಿ ಅವರಿಗೆ ಸ್ಪಂದನೆ ನೀಡಬೇಕು ಎಂದು ಜಿಲ್ಲಾಧಿಕಾರಿ ನಿತೀಶ್.ಕೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನಡೆದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಮೇಲುಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ದೌರ್ಜನ್ಯಕ್ಕೊಳಗಾಗಿ ಮೃತಪಟ್ಟಿದ್ದಾರೆ ಎಂಬುದು ಸಾಭೀತಾದಲ್ಲಿ ಅಂತಹ ಪ್ರಕರಣದಲ್ಲಿ ಮೃತರ ಕುಟುಂಬದ ಅವಲಂಬಿತರು, ಸಂತ್ರಸ್ಥರಿಗೆ ಪರಿಹಾರ ಮತ್ತು ಸರಕಾರಿ ನೌಕರಿ ಸಿಗುತ್ತದೆ ಎಂಬುದಾಗಿ ಅಧಿಕಾರಿಗಳು, ಮೃತರ ಕುಟುಂಬದ ಸಂತ್ರಸ್ಥರಿಗೆ ತಿಳಿಸಿ, ಮನವರಿಕೆ ಮಾಡಿ ಅವರಿಗೆ ದಾಖಲಾತಿ ಸಿದ್ದಪಡಿಸಲು, ಸಲ್ಲಿಸಲು ಮಾರ್ಗದರ್ಶನ ಮಾಡಬೇಕು. ಇಂತಹ ಪ್ರಕರಣದಲ್ಲಿ ಚಾರ್ಜಸೀಟ್ ಸಲ್ಲಿಕೆ ವಿಳಂಬವಾಗದಂತೆ ಜಿಲ್ಲಾ ಪೊಲೀಸ್ ಇಲಾಖೆಯ ಜತೆಗೆ ಸಮನ್ವಯ ಮಾಡಬೇಕು. ಈ ಬಗ್ಗೆ ಸಮಿತಿಯಲ್ಲಿರುವ ಸದಸ್ಯರು ಸಹ ಗಮನ ಹರಿಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ, ಐಎಎಸ್ ಪ್ರೊಬೆಷನರಿ ಅಧಿಕಾರಿ ಪುರುರಾಜ್ ಸಿಂಗ್, ನಾಮ ನಿರ್ದೇಶಿತ ಸದಸ್ಯರಾದ ರವೀಂದ್ರ ಜಲ್ದಾರ್, ಕೆ ಇ ಕುಮಾರ, ಹೇಮರಾಜ ಅಸ್ಕಿಹಾಳ, ರವಿಕುಮಾರ ಅಸ್ಕಿಹಾಳ, ಪವನ್ ಕಿಶೋರ ಪಾಟೀಲ, ಬಸವರಾಜ ನಕ್ಕುಂದಿ, ಟಿ ಸುಧಾಮ ಭಾಗಿಯಾಗಿದ್ದರು.

ಗಾಂಧಿ, ಶಾಸ್ತ್ರಿ ಜೀವನ ಮೌಲ್ಯ ಅಳವಡಿಸಿಕೊಳ್ಳಿ

ಬಳ್ಳಾರಿ: ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರು ನಮ್ಮ ದೇಶವು ಸದಾ ಗೌರವಿಸುವ ಎರಡು ಮೇರು ವ್ಯಕ್ತಿತ್ವಗಳು, ಇವರ ಸ್ಮರಣೆ ಇಂದಿನ ಕಾಲಘಟ್ಟದಲ್ಲಿ ಅಗತ್ಯವಿದೆ. ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳೋಣ ಎಂದು ವಿಶ್ರೀಕೃ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ ಮುನಿರಾಜು ಹೇಳಿದರು. ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಚರಿಸಿದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಿಶ್ವವಿದ್ಯಾಲಯದ ಕುಲಸಚಿವ ನಾಗರಾಜು ಅಧ್ಯಕ್ಷತೆವಹಿಸಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಜೀವನವೇ ಒಂದು ಸಂದೇಶ ಆ ಸಂದೇಶವು ನಮಗೆಲ್ಲರಿಗೂ ಮಾದರಿಯಾಗಿದೆ. ಶಾಸ್ತ್ರಿಜಿಯವರ ಸರಳತೆಯನ್ನು ಅವರ ಜೀವನದ ಕೆಲವು ಘಟನೆಗಳನ್ನು ವಿವರಿಸುವ ಮೂಲಕ ಸ್ಮರಿಸಿದರು. ಆ ಮೂಲಕ ಸರಳತೆಯ ಮಹತ್ವವನ್ನು ಪ್ರತಿಯೊಬ್ಬರೂ ಪಾಲಿಸಬೇಕು ಮತ್ತು ಅದರ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿಶ್ವವಿದ್ಯಾಲಯದ ಆಂಗ್ಲ ವಿಭಾಗದ ಪ್ರಾಧ್ಯಾಪಕ ಪ್ರೊ. ರಾಬರ್ಟ್ ಜೋಸ್ ಮಾತನಾಡಿದರು. ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಕುಮಾರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದ ನಂತರ ಸಸಿ ನೆಡುವ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಎಲ್ಲ ವಿಭಾಗಗಳ ಮುಖ್ಯಸ್ಥರು, ಬೋಧಕರು ಮತ್ತು ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ಬೀದಿ ದೀಪ ಅಳವಡಿಕೆ, ನಿರ್ವಹಣೆಗೆ ಸೂಚನೆ

ಕಾರಟಗಿ: ಪಟ್ಟಣದ ವ್ಯಾಪ್ತಿಯ ಬೀದಿ ದೀಪಗಳ ನಿರ್ವಹಣೆ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಮತ್ತು ಎಲ್ಲೆಡೆ ಸೋಲಾರ ವಿದ್ಯುತ್ ದೀಪ ಅಳವಡಿಸಿ ನಿರ್ವಹಣೆ ಮಾಡಲು ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ಇಲ್ಲಿನ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಎಚ್.ಈಶಪ್ಪ ಹೇಳಿದರು.

ಇಲ್ಲಿನ ಪುರಸಭೆ ಸಭಾಂಗಣದಲ್ಲಿ ಶನಿವಾರ ನಡೆದ ಸ್ಥಾಯಿ ಸಮಿತಿಯ ತುರ್ತು ಸಭೆಯಲ್ಲಿ ಪಟ್ಟಣದ ಬೀದಿ ದೀಪ ಅಳವಡಿಕೆ, ಘನತ್ಯಾಜ್ಯ ವಿಲೇವಾರಿ ಘಟಕದ ಕುರಿತು ಸೇರಿದಂತೆ ಕೆಲ ಮೂಲಸೌಕರ್ಯ ಒದಗಿಸುವ ಕುರಿತು ನಡೆದ ಚರ್ಚೆಯಲ್ಲಿ ಅವರು ಮಾತನಾಡಿದರು.

ಪಟ್ಟಣ ವೇಗವಾಗಿ ಬೆಳೆಯುತ್ತಿದ್ದ ಪುರಸಭೆಗೆ ಬೀದಿ ದೀಪಗಳ ನಿರ್ವಹಣೆ ಒಂದು ದೊಡ್ಡ ಸವಾಲಾಗಿದೆ. ಮೊದಲಿಗೆ ಬೀದಿ ದೀಪಗಳ ವ್ಯವಸ್ಥೆಯನ್ನು ಸುಧಾರಿಸಬೇಕು, ಹಗಲಿನಲ್ಲಿ ಉರಿಯುವದನ್ನು ಮೊದಲು ನಿಲ್ಲಿಸುವ ವ್ಯವಸ್ಥೆ ಮಾಡಿ ರಾತ್ರಿ ವೇಳೆಯಲ್ಲಿ ಮಾತ್ರ ಅವುಗಳ ಕಾರ್ಯನಿರ್ವಹಣೆ ಮಾಡುವ ವ್ಯವಸ್ಥೆಯನ್ನು ಮೊದಲು ಜಾರಿಗೆ ತಂದು ಪುರಸಭೆಗೆ ಹೊಣೆಯಾಗುವ ವಿದ್ಯುತ್ ಬಿಲ್ ಹೆಚ್ಚುವರಿ ವೆಚ್ಚವನ್ನು ಕಡಿತ ಮಾಡಲು ಕ್ರಮಕೈಗೊಳ್ಳುಲು ಸ್ಥಾಯಿ ಸಮಿತಿ ನಿರ್ಧರಿಸಿತು.

ಜತೆಗೆ ಬೀದಿ ದೀಪಗಳ ನಿರ್ವಹಣಗೆ ಲ್ಯಾಡರ್ ವಾಹನ ಖರೀದಿಸಲು ಸಮಿತಿ ನಿರ್ಧರಿಸಿತು. ಜತೆಗೆ 12 ಮತ್ತು 18ನೇ ವಾರ್ಡ್‌ಗಳಲ್ಲಿ ಹೈಮಾಸ್ಕ್ ದೀಪಗಳನ್ನು ಅಳವಡಿಸಲು ಚರ್ಚಿಸಿ ತೀರ್ಮಾನಿಸಿತು. ಮುಖ್ಯವಾಗಿ ಪಟ್ಟಣದ ಬಹುತೇಕ ಕಡೆ ಸೋಲಾರ ವಿದ್ಯುತ್ ದೀಪಗಳನ್ನು ಅಳವಡಿಸುವ ಕುರಿತು ಸುಧೀರ್ಘವಾಗಿ ಸಮಿತಿ ಚರ್ಚಿಸಿತು. ಮುಖ್ಯವಾಗಿ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಅವಶ್ಯಕತೆ ಇರುವ ವಾಹನಗನ್ನು ಕೂಡಲೇ ಖರೀದಿಸಲು ಸಹ ಸಮಿತಿ ಒಪ್ಪಿಗೆ ನೀಡಿತು.

ಸಭೆಯಲ್ಲಿ ಮುಖ್ಯಾಧಿಕಾರಿ ಡಾ.ಸಾಬಣ್ಣ ಕಟ್ಟೇಕಾರ, ಸ್ಥಾಯಿ ಸಮಿತಿ ಸದಸ್ಯರಾದ ರಾಮೇಶ ನಾಯಕ, ದೊಡ್ಡ ಬಸವರಾಜ್ ಬೂದಿ, ಆನಂದ ಎಂ., ಸುಜಾತ ನಾಗರಾಜ, ಶ್ರೀನಿವಾಸ ರೆಡ್ಡಿ, ಎಂಜಿನಿಯರ್ ಮಂಜುನಾಥ ನಾಯಕ ಮತ್ತು ಚೆನ್ನಬಸವ ಸ್ವಾಮಿ ಇದ್ದರು.

ಕಾರಟಗಿ ಪುರಸಭೆಯ ಸಭಾಂಗಣದಲ್ಲಿ ಸ್ಥಾಯಿ ಸಮಿತಿಯ ತುರ್ತು ಸಭೆ ಶನಿವಾರ ನಡೆಯಿತು. ಸ್ಥಾಯಿ ಸಮಿತಿ ಅಧ್ಯಕ್ಷ ಎಚ್.ಈಶಪ್ಪ, ಮುಖ್ಯಾಧಿಕಾರಿ ಡಾ.ಸಾಬಣ್ಣ ಕಟ್ಟೇಕಾರ ಇದ್ದರು.

ಅರ್ಹತೆ ಇದ್ದರೂ ಅವಕಾಶ ಕೈತಪ್ಪಿದೆ

ಕಾರಟಗಿ: ಕಳೆದ 2016 ರಿಂದ 2025ರ ಒಳಗೆ ಒಟ್ಟು 3.6 ವರ್ಷ ಇಲ್ಲಿನ ನಾಗಣಕಲ್ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದ್ದೇನೆ. ಅರ್ಹತೆ ಇದ್ದರೂ ರಾಜಕೀಯ ಮುಖಂಡರ ಪ್ರಭಾವ ಬಳಸಿ ಆಥಿತಿ ಉಪನ್ಯಾಸಕ ಹುದ್ದೆ ಕೈ ತಪ್ಪುತ್ತಿದೆ ಎಂದು ಮಂಜುನಾಥ ಮುಕ್ಕುಂದ ಅಳಲು ತೋಡಿ ಕೊಂಡರು. ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಾನು ಇಲ್ಲಿಯ ಮೂಲ ನಿವಾಸಿ, ನನ್ನ ವಿದ್ಯಾಭ್ಯಾಸ ಇದೇ ಡಿಪ್ಲೋಮಾ ಕಾಲೇಜಿನಲ್ಲಿ ಮುಗಿದಿದೆ. ಮುಂದೆ ಎಂಜಿನಿಯರಿಂಗ್ ಹಾಗೂ ಎಂಟೆಕ್ ಪದವಿ ಪಡೆದು ಇದೇ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದ್ದೇನೆ. ಕರ್ತವ್ಯ ನಿರ್ವಹಿಸಿದ ನನಗೆ ಮರು ವರ್ಷ ಅವಕಾಶ ಕಲ್ಪಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಅರ್ಹತೆ ಇಲ್ಲದಿದ್ದರೂ ರಾಜಕೀಯ ಒತ್ತಡಕ್ಕೆ ಮಣಿದು, ಬಸವರಾಜ ಎಂಬುವರನ್ನು ನೇಮಕ ಮಾಡಲಾಯಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಾನು ಉಳಿದ ತಿಂಗಳು ಕೆಲಸ ಮಾಡಿದ್ದೇನೆ ಎಂದು ತಿಳಿಸಿದರು. ಆರ್ಥಿಕ ಮುಗ್ಗಟ್ಟಿನಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದೇನೆ. ಯಾವುದೇ ತಪ್ಪು ಮಾಡದೇ ಅನ್ಯಾಯಕ್ಕೆ ಬಲಿಯಾಗಿದ್ದೇನೆ. ದಯಮಾಡಿ ನನಗೆ ನನ್ನ ಕೆಲಸವನ್ನು ಮರು ನೀಡಬೇಕೆಂದು ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗೆ ಮನವಿ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಸೋದರಿ ಮದುವೆಗೆ ಅಭಿಷೇಕ್ ಗೈರು



ಚಂಡೀಗಢ: ಭಾರತ ಟಿ20 ತಂಡದ ತಾರಾ ಆಟಗಾರ ಅಭಿಷೇಕ್ ಶರ್ಮಾ ಸಹೋದರಿ ಕೋಮಲ್ ಶರ್ಮಾ ಮದುವೆ ಶುಕ್ರವಾರ ಪಂಜಾಬ್‌ನ ಅಮೃತಸರದಲ್ಲಿ ಅದ್ದೂರಿಯಾಗಿ ನಡೆದಿದೆ. ಉದ್ಯಮಿ ಲೋವಿಶ್ ಒಬೆರಾಯ್‌ರನ್ನು ಅವರು ವರಿಸಿದರು. ಈ ಸಂಭ್ರಮದ ಸಂದರ್ಭದಲ್ಲಿ ಸಹೋದರ ಅಭಿಷೇಕ್ ಆಸ್ಟ್ರೇಲಿಯಾ ಎ ತಂಡದ ವಿರುದ್ಧ ಅನಧಿಕೃತ 2ನೇ ಏಕದಿನ ಪಂದ್ಯ ಆಡುತ್ತಿದ್ದರು. ವಿವಾಹಪೂರ್ವ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದ ಅಭಿಷೇಕ್, ಮದುವೆ ದಿನ ಕ್ರಿಕೆಟ್ ಪಂದ್ಯಕ್ಕೇ ಆದ್ಯತೆ ನೀಡಿದರು! ಇದು ನನ್ನ ಜೀವನದ ದೊಡ್ಡ ಸಂತೋಷದ ಸಂದರ್ಭ, ಆದರೆ ಸಹೋದರನಿಲ್ಲದ ಬೇಸರವಿದೆ ಎಂದು ಕೋಮಲ್ ಹೇಳಿಕೊಂಡಿದ್ದಾರೆ. ಅವರ ಮದುವೆಯ ಹಿಂದಿನ ದಿನ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಯುವರಾಜ್ ಸಿಂಗ್ ಕುಣಿದು ಸಂತೋಷ ಪಟ್ಟಿದ್ದಾರೆ. ಅಭಿಷೇಕ್ ಶರ್ಮಾ ಸದ್ಯ ಅದ್ಭುತ ಲಯದಲ್ಲಿದ್ದಾರೆ. ಇತ್ತೀಚೆಗಷ್ಟೇ ಮುಕ್ತಾಯವಾದ ಏಷ್ಯಾಕಪ್ ಟೂರ್ನಿಯಲ್ಲಿ ಅವರು ಸತತ ಮೂರು ಅರ್ಧಶತಕ ಸಹಿತ 314 ರನ್ ಸಿಡಿಸಿದ್ದರು. ಸರಣಿಶ್ರೇಷ್ಠ ಪ್ರಶಸ್ತಿಯನ್ನು ತಮ್ಮ ದಾಗಿಸಿಕೊಂಡಿದ್ದರು. ಇದೀಗ ಅವರು ಭಾರತ 'ಎ' ತಂಡದಲ್ಲಿ ಸ್ಥಾನ ಪಡೆದಿದ್ದು, ಆಸ್ಟ್ರೇಲಿಯಾ 'ಎ' ವಿರುದ್ಧದ ಸರಣಿಯಲ್ಲಿ ಆಡುತ್ತಿದ್ದಾರೆ.

3ನೇ ಪತ್ನಿ ಸನಾಗೂ ಕೈಕೊಟ್ಟ ಶೋಯಿಬ್?



ನವದೆಹಲಿ: ಭಾರತೀಯ ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರ ಮಾಜಿ ಪತಿ ಮತ್ತು ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯಿಬ್ ಮಲಿಕ್ ಮತ್ತೆ ಸುದ್ದಿಯಲ್ಲಿದ್ದಾರೆ. ಮಾಜಿ ಕ್ರಿಕೆಟಿಗ ತಮ್ಮ ಮೂರನೇ ಪತ್ನಿ ಸನಾ ಜಾವೇದ್ ಅವರಿಂದ ವಿಚ್ಛೇದನ ಪಡೆಯಲು ಮುಂದಾಗಿದ್ದಾರೆ ಎಂದು ವರದಿಯಾಗಿದೆ. ಜನವರಿ 2024 ರಲ್ಲಿ ತಮ್ಮ ಮದುವೆಯನ್ನು ಘೋಷಿಸಿದಾಗ ದಂಪತಿಗಳು ಎಲ್ಲರಿಗೂ ಭಾರೀ ಆಘಾತ ನೀಡಿದ್ದರು.

ಶೋಯಿಬ್ ಮತ್ತು ಸಾನಿಯಾ 14 ವರ್ಷಗಳ ಕಾಲ ದಂಪತಿಗಳಾಗಿದ್ದರು. ಇವರ ವಿವಾಹ ವಿಚ್ಛೇದನದ ಬೆನ್ನಲ್ಲಿಯೇ, ಶೋಯಿಬ್ ಅವರ ಮೂರನೇ ವಿವಾಹದ ಘೋಷಣೆ ಯಾಯಿತು. ಶೋಯಿಬ್ ಮತ್ತು ಸಾನಿಯಾ ದಂಪತಿಗೆ ಇಜಾನ್ ಎಂಬ ಮಗನಿದ್ದು, ಅವನು ದುಬೈನಲ್ಲಿ ಸಾನಿಯಾ ಮಿರ್ಜಾ ಜೊತೆಯಲ್ಲಿಯೇ ಇದ್ದಾನೆ. ವರದಿಗಳ ಪ್ರಕಾರ ಶೋಯಿಬ್ ಹಾಗೂ ಸನಾ ನಡುವೆ ಮನಸ್ತಾಪ ಶುರುವಾಗಿದ್ದು, ಮತ್ತೊಂದು ವಿಚ್ಛೇದನತ್ತ ಮಲಿಕ್ ಸಾಗಿದ್ದಾರೆ ಎನ್ನಲಾಗಿದೆ. ಆದರೆ ಈ ಬಗ್ಗೆ ಇವರಿಬ್ಬರಲ್ಲಿ ಯಾರೂ ಕೂಡ ಸ್ಪಷ್ಟೀಕರಣ ನೀಡಿಲ್ಲ. ಈ ನಡುವೆ ಸನಾ ತಾವು ಶೋಯಿಬ್ ಜೊತೆಗೆ ಅಮೆರಿಕದಲ್ಲಿರುವ ಒಂದು ಚಿತ್ರವನ್ನು ಪೋಸ್ಟ್ ಮಾಡಿದ್ದಾರೆ.

ಅಗರ್ಕರ್ ಪ್ರಕಾರ ಮೂರೂ ಮಾದರಿಗೆ ಪ್ರತ್ಯೇಕ ನಾಯಕರ ಆಯ್ಕೆ ಅಸಾಧ್ಯ | ಮೊದಲು ಟೆಸ್ಟ್, ಈಗ ಏಕದಿನ, ಮುಂದೆ ಟಿ20ಗೂ ಗಿಲ್ ನಾಯಕ?

4 ವರ್ಷಗಳ ರೋಹಿತ್ ನಾಯಕತ್ವದ ಯುಗಾಂತ್ಯ | ಸೂರ್ಯಕುಮಾರ್‌ಗೆ ಟಿ20 ಪಟ್ಟ ಕೈತಪ್ಪುವ ಭೀತಿ | ಏಕದಿನ ತಂಡಕ್ಕೆ ಮರಳಿದ ವಿರಾಟ್ ಕೊಹ್ಲಿ

ಯಶಸ್ವಿ ರೋಹಿತ್‌ಗೆ ಏಕದಿನ ಪಟ್ಟ ಹೋಗಿದ್ದೇಕೆ?

ಮುಂಬೈ: ಅ.19ರಿಂದ ಆರಂಭವಾಗಲಿರುವ ಭಾರತ ಆಸ್ಟ್ರೇಲಿಯಾ ಪ್ರವಾಸಕ್ಕೆ ಭಾರತ ಏಕದಿನ ಹಾಗೂ ಟಿ20 ತಂಡವನ್ನು ಪ್ರಕಟಿಸಲಾಗಿದೆ. ಅ.19ರಿಂದ 25ರವರೆಗೆ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ 3 ಏಕದಿನ ಪಂದ್ಯಗಳಿಗೆ ಶುಭಮನ್ ಗಿಲ್‌ರನ್ನು ನೂತನ ನಾಯಕರನ್ನಾಗಿ ನೇಮಿಸಲಾಗಿದೆ. 4 ವರ್ಷಗಳಿಂದ ನಾಯಕತ್ವದಲ್ಲಿದ್ದ ರೋಹಿತ್ ಶರ್ಮಾ ಪಟ್ಟ ಕಳೆದು ಕೊಂಡಿದ್ದಾರೆ. ಅಲ್ಲಿಗೆ ಭಾರತ ಕ್ರಿಕೆಟ್‌ನಲ್ಲಿ ರೋಹಿತ್ ಶರ್ಮಾ ನಾಯಕತ್ವದ ಯುಗಾಂತ್ಯವಾಗಿದೆ. ವಿರಾಟ್ ಕೊಹ್ಲಿ ಮತ್ತೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದ್ದಾರೆ.

ಅ.29ರಿಂದ ನ.8ರವರೆಗೆ ನಡೆಯಲಿರುವ 5 ಟಿ20 ಪಂದ್ಯಗಳ ಸರಣಿಗೆ ಸೂರ್ಯಕುಮಾರ್ ಯಾದವ್ ನಾಯಕರಾಗಿದ್ದಾರೆ. ಗಿಲ್ ಉಪನಾಯಕರಾಗಿದ್ದಾರೆ. ಭವಿಷ್ಯದಲ್ಲಿ ಟಿ20 ನಾಯಕತ್ವವೂ ಗಿಲ್ ಹೆಗಲೇರುವ ಸಾಧ್ಯತೆಯಿದೆ. ರೋಹಿತ್ ಮೊದಲು ಟಿ20, ನಂತರ ಟೆಸ್ಟ್‌ಗೆ ವಿದಾಯ ಹೇಳಿದ್ದರು. ಇದೀಗ ಏಕದಿನ ತಂಡದಲ್ಲಿ ಆಟಗಾರರಾಗಿ ಮಾತ್ರ ಉಳಿದು ಕೊಂಡಿದ್ದಾರೆ.

2023ರಲ್ಲಿ ಭಾರತ ಏಕದಿನ ತಂಡವನ್ನು ವಿಶ್ವಕಪ್ ಫೈನಲ್‌ಗೆ ರೋಹಿತ್ ಒಯ್ದಿದ್ದರು. 2024ರಲ್ಲಿ ಭಾರತ ಅವರ ನಾಯಕತ್ವದಲ್ಲೇ ಟಿ20 ವಿಶ್ವ ಚಾಂಪಿಯನ್ ಆಗಿತ್ತು. ಈ ವರ್ಷಾರಂಭದಲ್ಲಿ ಭಾರತ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದಿತ್ತು. ರೋಹಿತ್ ಒಟ್ಟು 56 ಏಕದಿನಗಳಲ್ಲಿ ತಂಡವನ್ನು ಮುನ್ನಡೆಸಿ, 42ರಲ್ಲಿ ಗೆಲುವು ಸಾಧಿಸಿದ್ದಾರೆ. 12 ಸೋಲು ಕಂಡಿದ್ದಾರೆ. ಶೇ.75 ಗೆಲುವಿನ ದಾಖಲೆ ಹೊಂದುವ ಮೂಲಕ ನಾಯಕನಾಗಿ ಅತ್ಯುತ್ತಮ ಪ್ರದರ್ಶನ ನೀಡಿದ್ದರೂ, ನಾಯಕ ಪಟ್ಟದಿಂದ ಕೈಬಿಟ್ಟಿರುವುದಕ್ಕೆ ಅಚ್ಚರಿಯುಂಟಾಗಿದೆ.

ಬಿಸಿಸಿಐ ಆಯ್ಕೆಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಪ್ರಕಾರ, ವಾಸ್ತವಿಕವಾಗಿ ಮೂರು ಮಾದರಿಗೆ ಮೂರು ನಾಯಕರನ್ನು ಆಯ್ಕೆ ಮಾಡುವುದು ಅಸಾಧ್ಯ. ಯೋಜನೆ ಮಾಡುವುದು, ಸ್ಥಿರತೆ ಸಾಧಿಸಲು ಕಷ್ಟವಾಗುತ್ತದೆ. ಅಲ್ಲದೇ ಮುಂದಿನ ವಿಶ್ವಕಪ್ ಅನ್ನೂ ನಾವು ಗಮನದಲ್ಲಿಟ್ಟುಕೊಂಡು ಯೋಜನೆ ಮಾಡಬೇಕು. ರೋಹಿತ್-ಕೊಹ್ಲಿ 2027ರ ಏಕದಿನ ವಿಶ್ವಕಪ್‌ನಲ್ಲಿ ಆಡಿಯೇ ಆಡುತ್ತೇವೆಂದು ಖಚಿತವಾಗಿ ಹೇಳಿಲ್ಲ ಎಂದು ಅಜಿತ್ ಅಗರ್ಕರ್ ಹೇಳಿದ್ದಾರೆ. ಅಲ್ಲಿಗೆ ಹಲವು ವಿಚಾರಗಳನ್ನು ಅಗರ್ಕರ್ ಪರೋಕ್ಷವಾಗಿ ಸ್ಪಷ್ಟಪಡಿಸಿದ್ದಾರೆ. ಇಬ್ಬರೂ ಮುಂದಿನ ವಿಶ್ವಕಪ್‌ನಲ್ಲಿ ಆಡುವ ಭರವಸೆ ನೀಡದಿರುವುದೇ ರೋಹಿತ್ ಪಟ್ಟ ಕಳೆದುಕೊಳ್ಳಲು ಕಾರಣ ಎಂದು ಸೂಚ್ಯವಾಗಿ ತಿಳಿಸಿದ್ದಾರೆ. ಹಾಗೆಯೇ ಮೂರೂ ಮಾದರಿಗೆ ಪ್ರತ್ಯೇಕ ನಾಯಕತ್ವ ಕಷ್ಟ ಎನ್ನುವ ಮೂಲಕ ರೋಹಿತ್ ನಿರ್ಗಮನಕ್ಕೆ ಕಾರಣ ತಿಳಿಸಿದ್ದಾರೆ. ಜೊತೆಗೆ ಸೂರ್ಯಕುಮಾರ್ ಟಿ20 ಹೊಣೆಯೂ ಖಾತ್ರಿಯಲ್ಲ ಎಂಬ ಸಂದೇಶ ನೀಡಿದ್ದಾರೆ.

ರಾಜ್ಯದ ರಾಹುಲ್, ಪ್ರಸಿದ್ಧ್ ತಂಡದಲ್ಲಿ: ಬ್ಯಾಟರ್ ಮತ್ತು ವಿಕೆಟ್ ಕೀಪರ್ ಕೆ.ಎಲ್.ರಾಹುಲ್ ತಂಡದಲ್ಲಿದ್ದಾರೆ. ಹಾಗೆಯೇ ವೇಗದ ಬೌಲರ್ ಪ್ರಸಿದ್ಧಕೃಷ್ಣ ಕೂಡ ಸ್ಥಾನ ಪಡೆದಿದ್ದಾರೆ. ಇನ್ನು ಟಿ20 ತಂಡದಲ್ಲಿ ರಾಜ್ಯದ ಯಾರಿಗೂ ಸ್ಥಾನ ಸಿಕ್ಕಿಲ್ಲ.

ಜಡೇಜಾ ಭವಿಷ್ಯ ಅತಂತ್ರ?: ವಿಂಡೀಸ್ ವಿರುದ್ಧ ಪಂದ್ಯಶ್ರೇಷ್ಠರಾಗಿರುವ ರವೀಂದ್ರ ಜಡೇಜಾಗೆ ಏಕದಿನ ಸರಣಿಯಲ್ಲಿ ವಿಶ್ರಾಂತಿ ನೀಡಲಾಗಿದೆ. ಮೇಲ್ನೋಟಕ್ಕೆ ಇದು ವಿಶ್ರಾಂತಿ ಎನ್ನಲಾಗಿದ್ದರೂ, ಅವರ ಏಕದಿನ ಭವಿಷ್ಯ ಅತಂತ್ರವಾಗಿದೆ ಎನ್ನಲಾಗಿದೆ.

ಗಿಲ್‌ಗೆ ಇಂಗ್ಲೆಂಡ್ ಯಶಸ್ಸೇ ನಿರ್ಣಾಯಕ

ಇಂಗ್ಲೆಂಡ್‌ನ 5 ಪಂದ್ಯಗಳ ಟೆಸ್ಟ್ ಪ್ರವಾಸದಲ್ಲಿ ಶುಭಮನ್ ಗಿಲ್ ನಾಯಕರಾಗಿ ಯಶಸ್ಸು ಸಾಧಿಸಿದ್ದರು. ಸರಣಿ 2-2ರಿಂದ ಸಮನಾಗಿತ್ತು. ಯುವಕರನ್ನು ಕಟ್ಟಿಕೊಂಡು ಅವರು ಪರಿಸ್ಥಿತಿಯನ್ನು ಅತ್ಯುತ್ತಮವಾಗಿ ನಿಭಾಯಿಸಿದ್ದರು. ಅಲ್ಲಿ ಅವರು 754 ರನ್ ಗಳಿಸಿ ದ್ವಿಪಕ್ಷೀಯ ಟೆಸ್ಟ್ ಸರಣಿಯೊಂದರಲ್ಲಿ ಗರಿಷ್ಠ ರನ್ ಗಳಿಸಿದ 5ನೇ ಸಾಧಕನಾಗಿದ್ದರು. ಇತ್ತೀಚೆಗೆ ಮುಗಿದ ಏಷ್ಯಾ ಕಪ್ ಟಿ20ಯಲ್ಲೂ ಉಪನಾಯಕರಾಗಿ ಉತ್ತಮ ಸಾಧನೆ ಮಾಡಿದ್ದರು. ಒಟ್ಟು 55 ಏಕದಿನ ಪಂದ್ಯವಾಡಿರುವ ಅವರು ದ್ವಿಶತಕ ಸಹಿತ 2775 ರನ್ ಬಾರಿಸಿದ್ದಾರೆ. ಆರಂಭಿಕನಿಂದ 4ನೇ ಕ್ರಮಾಂಕದವರೆಗೆ ಬ್ಯಾಟ್ ಮಾಡಬಲ್ಲರು.

ಗಿಲ್ ಭಾರತದ 28ನೇ ಏಕದಿನ ನಾಯಕ

ರೋಹಿತ್ ಶರ್ಮಾರಿಂದ ತಂಡದ ಚುಕ್ಕಾಣಿ ಪಡೆದಿರುವ ಶುಭಮನ್ ಗಿಲ್, ಭಾರತ ಏಕದಿನ ಕ್ರಿಕೆಟ್ ಕಂಡ 28ನೇ ನಾಯಕ. ಅಜಿತ್ ವಾಡೇಕರ್ ಏಕದಿನ ತಂಡದ ಮೊದಲನೇ ನಾಯಕ.

ಏಕದಿನ ತಂಡ

ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಅಕ್ಷರ್ ಪಟೇಲ್, ಕೆ.ಎಲ್.ರಾಹುಲ್ (ವಿಕೆಟ್ ಕೀಪರ್), ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಮೊಹಮ್ಮದ್ ಸಿರಾಜ್, ಅರ್ಶದೀಪ್ ಸಿಂಗ್, ಪ್ರಸಿದ್‌ಕೃಷ್ಣ, ಧ್ರುವ ಜುರೆಲ್ (ವಿಕೆಟ್ ಕೀಪರ್), ಯಶಸ್ವಿ ಜೈಸ್ವಾಲ್.

ಟಿ20 ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಶುಭಮನ್ ಗಿಲ್ (ಉಪನಾಯಕ), ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ, ಅರ್ಶದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್.

ಅಭಿಮಾನಿಗಳ ಆಕ್ರೋಶ, ಹರ್ಭಜನ್ ಬೇಸರ

ರೋಹಿತ್ ಶರ್ಮಾರನ್ನು ನಾಯಕ ಸ್ಥಾನದಿಂದ ಕೈಬಿಟ್ಟಿರುವುದಕ್ಕೆ ಅಭಿಮಾನಿಗಳು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಇದು ಅನ್ಯಾಯ, ಯಾವ ಆಧಾರದಲ್ಲಿ ಇಂತಹ ಯಶಸ್ವಿ ನಾಯಕನಿಗೆ ಬಿಸಿಸಿಐ ಹೀಗೆ ಮಾಡಿದೆ ಎಂದು ಕೇಳಿದ್ದಾರೆ. ಇನ್ನು ಮಾಜಿ ಸ್ಪಿನ್ನರ್ ಹರ್ಭಜನ್ ಸಿಂಗ್ , ಈ ಸುದ್ದಿ ನನಗೇ ಆಘಾತವನ್ನುಂಟು ಮಾಡಿದೆ. ಆಸ್ಟ್ರೇಲಿಯಾ ಪ್ರವಾಸಕ್ಕೆ ರೋಹಿತ್‌ರನ್ನು ನಾಯಕರನ್ನಾಗಿ ಮಾಡಬೇಕಿತ್ತು. ಅವರು ಭಾರತ ತಂಡದ ಆಧಾರಸ್ತಂಭಗಳಲ್ಲೊಬ್ಬರು. 2027ರ ಏಕದಿನ ವಿಶ್ವಕಪ್ ಇನ್ನೂ 2 ವರ್ಷ ಮುಂದಿದೆ. ಶುಭಮನ್ ಸ್ವಲ್ಪ ಕಾಯಬಹುದಿತ್ತು ಭಜ್ಜಿ ಹೇಳಿದ್ದಾರೆ.

1ನೇ ಟೆಸ್ಟ್: ದುರ್ಬಲ ವಿಂಡೀಸ್ ವಿರುದ್ಧ 140 ರನ್ ಗೆಲುವು | ಜಡೇಜಾ ಪಂದ್ಯಶ್ರೇಷ್ಠ

ಭಾರತ ತಂಡಕ್ಕೆ ಇನಿಂಗ್ಸ್ ಜಯಭೇರಿ

ಅಹ್ಮದಾಬಾದ್: ನೇಪಾಳ ವಿರುದ್ಧವೂ ಟಿ20 ಪಂದ್ಯ ಸೋತು ತನ್ನ ಕ್ರಿಕೆಟ್ ಇತಿಹಾಸದಲ್ಲೇ ಪೂರ್ಣ ಅಧಃಪತನಕ್ಕೊಳಗಾಗಿರುವ ವೆಸ್ಟ್ ಇಂಡೀಸನ್ನು ಶನಿವಾರ ಭಾರತ 1ನೇ ಟೆಸ್ಟ್‌ನಲ್ಲಿ ಇನಿಂಗ್ಸ್ ಮತ್ತು 140 ರನ್‌ಗಳಿಂದ ಸೋಲಿಸಿದೆ. 2025-2027ರ ಟೆಸ್ಟ್ ಚಾಂಪಿಯನ್‌ಶಿಪ್ ಆವರ್ತನದಲ್ಲಿ ಭಾರತಕ್ಕಿದು 6ನೇ ಪಂದ್ಯ, 3ನೇ ಜಯ. ಶೇ.55.56 ಪ್ರತಿಶತ ಜಯ ಹೊಂದುವ ಮೂಲಕ ಅಂಕಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ.

ವಿಂಡೀಸ್ ವಿರುದ್ಧ ಭಾರತ ಕೇವಲ ಎರಡೂವರೆ ದಿನಗಳಲ್ಲಿ ಗೆಲುವು ಸಾಧಿಸಿತು. ಈ ಜಯ ನಿರೀಕ್ಷಿತವೇ ಆಗಿತ್ತು. ಮೊದಲನೇ ಇನಿಂಗ್ಸ್‌ನಲ್ಲಿ ವಿಂಡೀಸ್ 162 ರನ್‌ಗಳಿಗೆ ಆಲೌಟಾಗಿತ್ತು. ಭಾರತ 1ನೇ ಇನಿಂಗ್ಸ್‌ನಲ್ಲಿ ಕೆ.ಎಲ್.ರಾಹುಲ್ (100), ಧ್ರುವ ಜುರೆಲ್ (125), ರವೀಂದ್ರ ಜಡೇಜಾ (104) ಶತಕಗಳ ನೆರವಿನಿಂದ 5 ವಿಕೆಟ್‌ಗೆ 448 ರನ್ ಗಳಿಸಿತ್ತು. ಭಾರೀ ಹಿನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿದ ವಿಂಡೀಸ್ 146 ರನ್‌ಗಳಿಗೆ ಕುಸಿಯಿತು. ಅಲಿಕ್ ಅಥನಾಜೆ 38 ರನ್ ಗಳಿಸಿದ್ದೇ ಗರಿಷ್ಠ ರನ್. ಮೊಹಮ್ಮದ್ ಸಿರಾಜ್ 3 ವಿಕೆಟ್ ಪಡೆದರು. ಬ್ಯಾಟಿಂಗ್‌ನಲ್ಲಿ ಮಿಂಚಿದ್ದ ಜಡೇಜಾ ಬೌಲಿಂಗ್‌ನಲ್ಲಿ 4 ವಿಕೆಟ್ ಎಗರಿಸಿ ಪಂದ್ಯಶ್ರೇಷ್ಠ ಗೌರವ ಪಡೆದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್ 1ನೇ ಇನಿಂಗ್ಸ್ 162. ಭಾರತ 1ನೇ ಇನಿಂಗ್ಸ್ 448/5 ಡಿ. (ರಾಹುಲ್ 100, ಜುರೆಲ್ 125, ಜಡೇಜಾ 104, ಚೇಸ್ 90ಕ್ಕೆ 2). ವಿಂಡೀಸ್ 2ನೇ ಇನಿಂಗ್ಸ್ 146 (ಅಥನಾಜೆ 38, ಜಡೇಜಾ 54ಕ್ಕೆ 4, ಸಿರಾಜ್ 31ಕ್ಕೆ 3).

ಮಹಿಳಾ ಏಕದಿನ ವಿಶ್ವಕಪ್: ಪಾಕ್ ಆಟಗಾರ್ತಿಯರ ಕೈಕುಲುಕುತ್ತಾ ಭಾರತ?

ಇಂದು ಮತ್ತೆ ಭಾರತ-ಪಾಕ್ ಸಮರ

ಕೊಲಂಬೊ: ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಭಾನುವಾರ ಭಾರತ-ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಮೊದಲ ಪಂದ್ಯದಲ್ಲಿ ಗೆದ್ದಿರುವ ಭಾರತ, ತನ್ನ ಮೊದಲನೇ ಪಂದ್ಯದಲ್ಲಿ ಸೋತಿರುವ ಪಾಕಿಸ್ತಾನದ ವಿರುದ್ಧ ಆಡಲಿರುವುದು ಹಲವು ಕಾರಣಕ್ಕೆ ಕುತೂಹಲ ಕೆರಳಿಸಿದೆ. ಈ ಪಂದ್ಯ ರಾಜಕೀಯ ಕಾರಣಗಳಿಂದ ಸುದ್ದಿಯಲ್ಲಿದೆ.

ಈಗಾಗಲೇ ಭಾರತ-ಪಾಕಿಸ್ತಾನ ಪುರುಷರ ತಂಡಗಳು ಏಷ್ಯಾ ಕಪ್‌ನಲ್ಲಿ ಪರಸ್ಪರ ಮುಖ ನೋಡದೇ, ಕೈಕುಲಕದೇ ದೊಡ್ಡ ವಿವಾದಕ್ಕೆ ಕಾರಣವಾಗಿವೆ. ಮಹಿಳಾ ಪಂದ್ಯದಲ್ಲೂ ಭಾರತ ತಂಡ ಪಾಕಿಸ್ತಾನಿ ಆಟಗಾರ್ತಿಯರ ಕೈಕುಲುಕುವುದು ಅನುಮಾನ. ಪುರುಷರ ತಂಡದ ಧೋರಣೆಯೇ ಇಲ್ಲೂ ಮುಂದುವರಿಯುವ ಸಾಧ್ಯತೆಯಿದೆ.

ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ ಭಾರತ ಪ್ರಬಲವಾಗಿದೆ. ಇದುವರೆಗೆ ಪಾಕಿಸ್ತಾನದ ವಿರುದ್ಧ ಆಡಿರುವ ಹನ್ನೊಂದೂ ಏಕದಿನ ಪಂದ್ಯಗಳಲ್ಲಿ ಭಾರತ ಗೆದ್ದಿದೆ. ಪಾಕಿಸ್ತಾನದ್ದು ಶೂನ್ಯ ಫಲಿತಾಂಶ. ಆದರೆ ಕೊಲಂಬೊದಲ್ಲಿ ಮಳೆಯಿರುವುದರಿಂದ ಪ್ರಸ್ತುತ ಪಂದ್ಯ ನಡೆಯುವುದು ಅನುಮಾನ.

ಅಂಕಣ ಹೇಗಿದೆ?: ಮಳೆ ಕಾರಣಕ್ಕೆ ಮೈದಾನದಲ್ಲಿ ತೇವಾಂಶವಿರಲಿದೆ. ಇದು ಬ್ಯಾಟರ್ ಸ್ನೇಹಿ ಅಂಕಣವಾದರೂ, ತೇವದ ಕಾರಣ ರನ್ ಗಳಿಸಲು ಕಷ್ಟವಾಗಲಿದೆ. ವೇಗದ ಬೌಲರ್‌ಗಳಿಗೆ ಪೂರಕವಾಗಿದೆ. ಸ್ಪಿನ್ನರ್‌ಗಳಿಗೂ ನೆರವಿದೆ.

ಮಳೆಗೆ ಶ್ರೀಲಂಕಾ-ಆಸೀಸ್ ಪಂದ್ಯ ರದ್ದು

ಕೊಲಂಬೊ: ಶನಿವಾರದ ಶ್ರೀಲಂಕಾ-ಆಸ್ಟ್ರೇಲಿಯಾ ಪಂದ್ಯ ಮಳೆಯಿಂದ ಒಂದೂ ಎಸೆತ ಕಾಣದೇ ರದ್ದಾಗಿದೆ. ಎರಡೂ ತಂಡಗಳಿಗೆ ಅಂಕಗಳನ್ನು ಹಂಚಲಾಗಿದೆ. ಆಸ್ಟ್ರೇಲಿಯಾ 1 ಜಯ, ಇನ್ನೊಂದು ಪಂದ್ಯ ರದ್ದಾಗುವುದರೊಂದಿಗೆ 3 ಅಂಕದೊಂದಿಗೆ ಅಗ್ರಸ್ಥಾನದಲ್ಲಿದೆ. ಲಂಕಾ 1 ಸೋಲು, 1 ಪಂದ್ಯ ರದ್ದಾಗುವುದರೊಂದಿಗೆ ಬರೀ 1 ಅಂಕ ಗಳಿಸಿ 5ನೇ ಸ್ಥಾನದಲ್ಲಿದೆ.

ಸ್ಥಳ: ಕೊಲಂಬೊ. **ಪಂದ್ಯಾರಂಭ:** ಮ.3, **ನೇರಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್

ಮನೆಕಟ್ಟಿದ ಕಥೆ ಹೇಳಿದ ರಘು

ರಾಜ್ಯ ಚಲನಚಿತ್ರ ಪ್ರಶಸ್ತಿ ಘೋಷಣೆಯಾಗಿದ್ದು, ದೊಡ್ಡಹಟ್ಟಿ ಬೋರೇಗೌಡ ಚಿತ್ರಕ್ಕೆ ಪ್ರಥಮ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಲಭಿಸಿದೆ. ಗ್ರಾಮೀಣ ಸೊಗಡಿನ ಈ ಸಿನಿಮಾ ಸಾಮಾಜಿಕ ಕಳಕಳಿಯನ್ನು ಒಳಗೊಂಡಿದೆ. ನಿರ್ದೇಶಕ ಕೆ.ಎಂ.ರಘು ಪ್ರಶಸ್ತಿ ಸಿಕ್ಕಿದ ಖುಷಿಯನ್ನು ವಿ.ಸಿನಿಮಾಸ್‌ನೊಂದಿಗೆ ಹಂಚಿಕೊಂಡಿದ್ದಾರೆ.

ಊರಿನ ಬೋರೇಗೌಡ ಇದ್ದ ಆಸ್ತಿಯನ್ನು ಕಳೆದುಕೊಂಡು ಇರಲು ಮನೆಯಿಲ್ಲದೆ ಪರದಾಡುತ್ತಿರುತ್ತಾನೆ. ಸರಕಾರದಿಂದ ಬರುವ ಆಶ್ರಯ ಯೋಜನೆಯಿಂದ ಮನೆಯನ್ನಾದರೂ ಪಡೆಯಬೇಕು ಎಂಬ ಆಸೆಯಿಂದ ಒದ್ದಾಡುತ್ತಿರುತ್ತಾರೆ. ಆಶ್ರಯ ಪಡೆಯಲು ಆತ ಹೇಗೆಲ್ಲಾ ಪರದಾಡುತ್ತಾನೆ ಎಂಬುದನ್ನು ಚಿತ್ರದಲ್ಲಿ ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಡಲಾಗಿದೆ.

ನೈಜ ಘಟನೆ

ಗ್ರಾಮೀಣ ಭಾಗದಲ್ಲಿ ಸೂರಿಗಾಗಿ ಪರದಾಡುವವರನ್ನು ನೋಡಿದ್ದೇನೆ. ಅದೇ ನನಗೆ ಈ ಸಿನಿಮಾ ನಿರ್ದೇಶನ ಮಾಡಲು ಸ್ಫೂರ್ತಿ. ನಮ್ಮ ತಾಯಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು. ಪಂಚಾಯಿತಿಯಲ್ಲಿ ಮನೆಗಳ ಹಂಚಿಕೆ, ಅದರಲ್ಲಿ ಆಗುವ ಲೋಪ ಇದೆಲ್ಲವೂ ನನಗೆ ತಿಳಿದಿತ್ತು, ಅದೆಲ್ಲವನ್ನು ಆಧರಿಸಿ ಈ ಕಥೆ ಹೆಣೆದೆ. ದೊಡ್ಡಹಟ್ಟಿ ಬೋರೇಗೌಡ ನೈಜತೆಯಿಂದ ಕೂಡಿದೆ.

ಚಿತ್ರಕ್ಕಾಗಿ ಸಿದ್ಧವಾದ ಮನೆ

ನಾನು ನೋಡಿದ ಘಟನೆಗಳನ್ನು ಅಷ್ಟೇ ನೈಜವಾಗಿ ತೆರೆಯಲ್ಲಿ ಕಟ್ಟಿಕೊಡಬೇಕು ಎಂಬ ಉದ್ದೇಶದಿಂದ ಸಿನಿಮಾಗಾಗಿ ಒಂದು ಮನೆಯನ್ನು ಕಟ್ಟಿದೆವು. ಸೂರಿಗಾಗಿ ಪರದಾಡುತ್ತಿದ್ದ ವ್ಯಕ್ತಿಯನ್ನು ಹುಡುಕಿ ಅವರಿಗಾಗಿ, ಅವರ ಜಾಗದಲ್ಲಿಯೇ ಮನೆ ನಿರ್ಮಿಸಿದೆವು. ಅಲ್ಲಿಯೇ ಚಿತ್ರೀಕರಣ ನಡೆಸಿದೆವು.

ಜವಾಬ್ದಾರಿ ಹೆಚ್ಚಿದೆ

ಸಿನಿಮಾಗಳ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ನೀಡಬೇಕು ಎಂಬ ಉದ್ದೇಶ ನನ್ನದು. ಈಗ ನಮ್ಮ ದೊಡ್ಡಹಟ್ಟಿ ಬೋರೇಗೌಡ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಲಭಿಸಿದ್ದು, ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಮುಂದೆ ಮತ್ತಷ್ಟು ಒಳ್ಳೆಯ ಸಿನಿಮಾಗಳನ್ನು ನಿರ್ದೇಶಿಸುವತ್ತ ಗಮನ ಹರಿಸುತ್ತೇನೆ.

ಜನರಿಗೆ ಹಿಡಿಸಿದ ಕಥೆ

ದೊಡ್ಡಹಟ್ಟಿ ಬೋರೇಗೌಡ ಎಲ್ಲರಿಗೂ ಹಿಡಿಸಿದೆ. ಹಾಗಾಗಿ ನಮ್ಮ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಲಭಿಸಿದೆ. ನಾನು ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದವನು. ಹಾಗಾಗಿ ಅಲ್ಲಿನ ಜನರ ಕಷ್ಟ ಸುಖ ಅರಿತ್ತಿದ್ದೇನೆ.

ಪ್ರಶಸ್ತಿ ಸ್ಫೂರ್ತಿ ತುಂಬಿದೆ

ಕೊಡವ ಭಾಷೆಯ ನಾಡ ಪೆದ ಆಶಾ, ಪ್ರಾದೇಶಿಕ ಸಿನಿಮಾ ವಿಭಾಗದಲ್ಲಿ ಪ್ರಶಸ್ತಿಗೆ ಭಾಜನ ವಾಗಿದೆ. ಪ್ರಕಾಶ್ ಕಾರ್ಯಪ್ಪ ನಿರ್ದೇಶನದ ಈ ಚಿತ್ರವನ್ನು ಈರಮಂಡ ಹರಿಣಿ ನಿರ್ಮಾಣ ಮಾಡಿದ್ದಾರೆ. ಮಹಿಳಾ ಪ್ರಧಾನ ಕಥೆಯ ಈ ಸಿನಿಮಾವನ್ನು ಮಹಿಳೆಯೆ ನಿರ್ಮಾಣ ಮಾಡಿ ರುವುದು ವಿಶೇಷ. ರಾಜ್ಯ ಪ್ರಶಸ್ತಿ ಸಂದ ಖುಷಿ ಯಲ್ಲಿರುವ ನಿರ್ಮಾಪಕಿ ಹರಿಣಿ, ವಿ.ಸಿನಿ ಮಾಸ್‌ನೊಂದಿಗೆ ಸಂತಸ ಹಂಚಿಕೊಂಡಿದ್ದಾರೆ.

ಸಂಸ್ಕೃತಿ ಬಿಂಬಿಸುವ ಪ್ರಯತ್ನ

ಕೊಡಗು ಶ್ರೀಮಂತ ಸಂಸ್ಕೃತಿಯ ಜಿಲ್ಲೆ, ಇಲ್ಲಿನ ಸಂಸ್ಕೃತಿಯನ್ನು ಎಲ್ಲರಿಗೂ ಸಾರುವ ಪ್ರಯತ್ನ ಈ ಚಿತ್ರದಲ್ಲಿದೆ. ಗ್ರಾಮೀಣ ಸೊಗಡನ್ನು ಸುಂದರವಾಗಿ ಬಿಂಬಿಸಿ ಕೊಡವ ಸಂಸ್ಕೃತಿ, ಉಡುಗೆ ತೊಡುಗೆ, ಸಂಪ್ರದಾಯ, ಆಚಾರ ವಿಚಾರಗಳನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಅದರ ಜತೆಗೆ ಮಹಿಳಾ ಪ್ರಧಾನ ಕಥೆಯೂ ಮನಸೂರೆಗೊಳ್ಳಲಿದೆ. ಒಬ್ಬ ಹೆಣ್ಣು ಮಗಳು ಮನೆಬಿಟ್ಟು ಹೋದಾಗ ಆಕೆಯನ್ನು ಕಾಡುವ ಸವಾಲುಗಳು, ಮನೆಯವರಿಗೆ ಎದುರಾಗುವ ಸಮಸ್ಯೆಗಳು ಇದೆಲ್ಲವೂ ಚಿತ್ರದ ಕಥೆಯಲ್ಲಿ ಬೆರೆತಿವೆ.

ಒಳ್ಳೆಯ ಟೀಂ

ನಾಗೇಶ್ ಕಾಲೂರು ವಿರಚಿತ ಈ ಕಥೆ ಮನಸಿಗೆ ನಾಟಿತು. ಅದಕ್ಕೆ ತಕ್ಕಂತೆ ಒಳ್ಳೆಯ ನಿರ್ದೇಶಕರು ಸಿಕ್ಕರು. ಹಾಗಾಗಿ ನಿರ್ಮಾಣ ಮಾಡಲು ಸಮ್ಮತಿಸಿದೆ. ನಟನೆಯ ಜತೆಗೆ ಸಹಾಯಕ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದೇನೆ. ನನ್ನ ಪುತ್ರಿಯರಾದ ಖುಷಿ ಕಾವೇರಮ್ಮ ಹಾಗೂ ಕೇಸರಿ ಬೋಜಮ್ಮ ಕೂಡ ನನ್ನೊಂದಿಗೆ ನಟಿಸಿದ್ದಾರೆ.

ಸಾಮಾಜಿಕ ಜವಾಬ್ದಾರಿ

ನಮ್ಮ ಸಿನಿಮಾದಲ್ಲಿ ಅಂಗನವಾಡಿ ಶಿಕ್ಷಕರ ಕುರಿತ ಎಳೆಯೂ ಇದೆ. ಅಂಗನವಾಡಿಯ ಶಿಕ್ಷಕಿಯರ ಜವಾಬ್ದಾರಿ, ಮನೆಯಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ ಅದೆಲ್ಲವನ್ನು ಮರೆತು, ಮಕ್ಕಳ ಬಗ್ಗೆ ಕಾಳಜಿ ವಹಿಸುವ ಅವರ ಶ್ರದ್ಧೆ ಮನಮುಟ್ಟುವಂತೆ ಮೂಡಿಬಂದಿದೆ. ಹಾಗಾಗಿಯೇ ಅಂಗನವಾಡಿ ಶಿಕ್ಷಕಿಯರು, ಕಾರ್ಯಕರ್ತೆಯರಿಗಾಗಿ ಚಿತ್ರದ ವಿಶೇಷ ಪ್ರದರ್ಶನ ಏರ್ಪಡಿಸಲಾಗಿತ್ತು. ಸಿನಿಮಾ ನೋಡಿ ಎಲ್ಲರೂ ಮೆಚ್ಚಿದರು. ಇದರ ಜತೆಗೆ ಕೊಡವ ಸಮಾಜಗಳಲ್ಲಿಯೂ ನಮ್ಮ ಸಿನಿಮಾದ ವಿಶೇಷ ಪ್ರದರ್ಶನ ಆಯೋಜಿಸಲಾಗಿತ್ತು, ಮುಂದೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರದರ್ಶನ ಹಮ್ಮಿಕೊಳ್ಳುವ ಯೋಜನೆಯಿದೆ.

ಶೂಟಿಂಗ್ ಮುಗಿಸಿದ ಖೇಲಾ

ವಿ.ಜೆ.ಭರತ್ ನಿರ್ಮಿಸಿ, ನಿರ್ದೇಶಿಸುತ್ತಿರುವ ವಿಭಿನ್ನ ಕಥಾಹಂದರದ ಖೇಲಾ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ನವಿರಾದ ಪ್ರೇಮಕಥೆಯ ಈ ಸಿನಿಮಾದಲ್ಲಿ, ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಿ ಮನಗೆದ್ದಿದ್ದ ನಟ ವಿಹಾನ್ ಪ್ರಭಂಜನ್ ನಾಯಕನಾಗಿ ನಟಿಸಿದ್ದು, ಈ ಸಿನಿಮಾದ ಮೂಲಕ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಆಶಿಕಾ ರಾವ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಸಂಗೀತಾ ಭಟ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಯುವರಾಜ್ ಗೌಡ, ಸ್ವಾತಿ ಮುಂತಾದವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ನಿರ್ದೇಶಕರೆ ಕಥೆ, ಚಿತ್ರಕಥೆ ಬರೆದಿರುವ ಖೇಲಾ ಚಿತ್ರಕ್ಕೆ ಎಂ.ಎಸ್ ತ್ಯಾಗರಾಜ್ ಸಂಗೀತ ಸಂಯೋಜಿಸಿದ್ದಾರೆ. ಸ್ವಾಮಿ ಮೈಸೂರು ಛಾಯಾಗ್ರಹಣ ಹಾಗೂ ಅಮಿತ್ ಜವಳ್ಕರ್ ಸಂಕಲನ ಈ ಚಿತ್ರಕ್ಕಿದೆ. ಆರ್. ಪ್ರಮೋದ್ ಜೋಯಿಸ್ ಸಂಭಾಷಣೆ ಬರೆದಿದ್ದಾರೆ. ಬೆಂಗಳೂರು, ಮೈಸೂರು ಹಾಗೂ ಉತ್ತರ ಕಾಂಡದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿದೆ.

ನವೆಂಬರ್‌ಗೆ ಗರ್ಲ್ ಫ್ರೆಂಡ್ ದರ್ಶನ

ನಟಿ ರಶ್ಮಿಕಾ ಮಂದಣ್ಣ ಟಾಲಿವುಡ್, ಬಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ವಿಭಿನ್ನ ಕಥೆಗಳನ್ನು ಆಯ್ದುಕೊಳ್ಳುತ್ತಿರುವ ರಶ್ಮಿಕಾ ಈಗ ಲವ್ ಸ್ಟೋರಿ ಬೆರೆತ ಗರ್ಲ್ ಫ್ರೆಂಡ್ ಚಿತ್ರದಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ದಿ ಗರ್ಲ್‌ಫ್ರೆಂಡ್ ಚಿತ್ರದಲ್ಲಿ ಕನ್ನಡಿಗ ದೀಕ್ಷಿತ್ ಶೆಟ್ಟಿ ನಾಯಕನಾಗಿ ಅಭಿಯಿಸಿದ್ದಾರೆ. ಈಗ ಗರ್ಲ್ ಫ್ರೆಂಡ್ ಚಿತ್ರದಿಂದ ಹೊಸ ಅಪ್ಡೇಟ್ ಸಿಕ್ಕಿದೆ. ಟೈಟಲ್ ನಿಂದಲೇ ಹೆಚ್ಚು ಗಮನ ಸೆಳೆದಿರುವ ಈ ಚಿತ್ರ, ಯಾವಾಗ ರಿಲೀಸ್ ಆಗಲಿದೆ ಎಂಬ ಪ್ರಶ್ನೆಗೆ ಈಗ ಉತ್ತರ ಸಿಕ್ಕಿದೆ. ನವೆಂಬರ್ 7ರಂದು ದಿ ಗರ್ಲ್ ಫ್ರೆಂಡ್ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗಲಿದೆ. ಈ ಹಿಂದಿನ ಸಿನಿಮಾಗಳಲ್ಲಿ ಗ್ಲಾಮರ್ ಲುಕ್‌ನಲ್ಲಿ ಮಿಂಚಿದ್ದ ರಶ್ಮಿಕಾ ದಿ ಗರ್ಲ್‌ಫ್ರೆಂಡ್ ಸಿನಿಮಾದಲ್ಲಿ ಸಿಂಪಲ್ ಆಗಿ ಕಂಗೊಳಿಸಿದ್ದಾರೆ. ಈ ಚಿತ್ರವನ್ನು ಗೀತಾ ಆರ್ಟ್ಸ್ ಹಾಗೂ ಧೀರಜ್ ಮೊಗಿಲಿನೇನಿ ಎಂಟರ್‌ಟೇನ್‌ಮೆಂಟ್ ಸಂಸ್ಥೆಗಳು ಒಟ್ಟಾಗಿ ನಿರ್ಮಾಣ ಮಾಡುತ್ತಿವೆ. ಸುಂದರ ಪ್ರೇಮಕಥೆಯ ಈ ಸಿನಿಮಾವನ್ನು ರಾಹುಲ್ ರವೀಂದ್ರನ್ ನಿರ್ದೇಶನ ಮಾಡಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜನೆಯಲ್ಲಿ ಮಧುರ ಹಾಡುಗಳು ಮೂಡಿಬಂದಿವೆ. ಕೃಷ್ಣನ್ ವಸಂತ್ ಛಾಯಾಗ್ರಹಣ, ಚೋಟಾ ಕೆ ಪ್ರಸಾದ್ ಸಂಕಲನ ಈ ಸಿನಿಮಾಗಿದೆ.

ತೆರೆಗೆ ಸಿದ್ಧವಾದ ಕಲ್ಟ್

ಬನಾರಸ್ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಭರವಸೆ ಮೂಡಿಸಿರುವ ನಟ ಝೈದ್ ಖಾನ್ ಈಗ ಹೊಸ ಅವತಾರದಲ್ಲಿ ತೆರೆಗೆ ಎಂಟ್ರಿಕೊಡಲು ರೆಡಿಯಾಗಿದ್ದಾರೆ. ಝೈದ್ ಖಾನ್ ಕಲ್ಟ್ ಚಿತ್ರದಲ್ಲಿ ನಟಿಸಿದ್ದು, ರಗಡ್ ಆಗಿ ಮಿಂಚಲಿದ್ದಾರೆ. ಇದು ಆ್ಯಕ್ಷನ್, ರೊಮ್ಯಾಂಟಿಕ್ ಜಾನರ್‌ನ ಚಿತ್ರವಾಗಿದ್ದು, ಮಾಸ್ ಆಗಿ ಮೂಡಿಬಂದಿದೆ. ಝೈದ್ ಖಾನ್ ನಾಯಕರಾಗಿ ನಟಿಸುತ್ತಿರುವ ಎರಡನೇ ಚಿತ್ರ ಇದಾಗಿದ್ದು, ನಿರೀಕ್ಷೆ ಹೆಚ್ಚಿಸಿದೆ. ರಚಿತಾ ರಾಮ್ ಹಾಗೂ ಮಲೈಕಾ ವಸುಪಾಲ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ರಚಿತಾ ಕೂಡ ಹಿಂದೆಂದೂ ಕಾಣದ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಉಪಾಧ್ಯಕ್ಷ ಬೆಡಗಿ ಗ್ಲಾಮರ್ ಆಗಿ ಕಂಗೊಳಿಸಲಿದ್ದಾರೆ.

ಸದ್ಯ ಕಲ್ಟ್ ರಿಲೀಸ್‌ಗೆ ರೆಡಿಯಾಗಿದ್ದು ಜನವರಿ 23ಕ್ಕೆ ಅದ್ದೂರಿಯಾಗಿ ತೆರೆಗೆ ಬರಲಿದೆ. ಅನಿಲ್ ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಕಲ್ಟ್ ಹೈ ಬಜೆಟ್‌ನಲ್ಲಿ ನಿರ್ಮಾಣವಾಗಿದೆ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಈ ಚಿತ್ರದ ಹಾಡುಗಳಿಗೆ ಸಖತ್ ಡಿಮ್ಯಾಂಡ್ ಸೃಷ್ಟಿಯಾಗಿತ್ತು. ಹಾಗಾಗಿ ಆಡಿಯೊ ಹಕ್ಕು ದಾಖಲೆ ಮೊತ್ತಕ್ಕೆ ಮಾರಾಟವಾಗಿತ್ತು.

ನಿರ್ದೇಶಕ ಅನಿಲ್ ಕುಮಾರ್ ಸಾಹಿತ್ಯ ಬರೆದಿರುವ ಅಯ್ಯೋ ಶಿವನೇ... ಹಾಡು ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಕಲರ್ ಫುಲ್ ಆಗಿ ಮೂಡಿಬಂದಿರುವ ಈ ಹಾಡಿಗೆ ದ್ವಾಪರ ಖ್ಯಾತಿಯ ಜಸ್ಕರಣ್ ಸಿಂಗ್ ಹಾಗೂ ಪೃಥ್ವಿ ಭಟ್ ದನಿಯಾಗಿದ್ದಾರೆ. ಝೈದ್ ಖಾನ್ ಹಾಗೂ ಮಲೈಕಾ ವಸುಪಾಲ್ ಈ ಹಾಡಿಗೆ ಹೆಜ್ಜೆ ಹಾಕಿದ್ದು, ಈ ಹಾಡು ಈಗಾಗಲೇ ಮಿಲಿಯನ್ ಗಟ್ಟಲೇ ವೀಕ್ಷಣೆ ಕಂಡಿದೆ. ಈ ಗೀತೆಗೆ ಸಂತೋಷ್ ಶೇಖರ್ ನೃತ್ಯ ಸಂಯೋಜಿಸಿದ್ದಾರೆ. ಲೋಕಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದ್ದು, ಕೆವಿಎನ್ ಪ್ರೊಡಕ್ಷನ್ಸ್ ಕಲ್ಟ್ ಸಿನಿಮಾವನ್ನು ಅರ್ಪಿಸುತ್ತಿದೆ. ಜೆ.ಎಸ್.ವಾಲಿ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ವಿಶ್ವವಾಣಿ ಓದುವ ಲೋಕಕ್ಕೆ ಓದುವ ನಿಲ್ದಾಣ | 05.10.2025 ಭಾನುವಾರ

ವಿರಾಮ



ಸಂಜೆಯ ಸಮಯದಲ್ಲಿ ಅಗೇಡಿಯ ನೀರಿನ ಮೇಲ್ಮೈ ಬಳಿ ಹಾರಾಡುತ್ತಾ, ಒಂದೊಂದೇ ಗುಟುಕು ನೀರು ಕುಡಿಯುವ ರೀತಿಯಲ್ಲಿ, ಹತ್ತೆಂಟು ಬಾರಿ ನೀರನ್ನು ಮುತ್ತಿಕ್ಕುವ ಮಳೆ ಹಾತೆಯು (ಏರೋಪ್ಲೇನ್ ಚಿಟ್ಟೆ), ವಾಸ್ತವವಾಗಿ ಆಗ ನೀರು ಕುಡಿಯುವುದಿಲ್ಲ! ಬದಲಿಗೆ, ಆ ಕೀಟಗಳು ಮೊಟ್ಟೆಯಿಡುವಾಗ, ಆ ರೀತಿ ನೀರನ್ನು ಮುಟ್ಟುತ್ತವೆ! ಅದು ಅವುಗಳ ಸಂತಾನೋತ್ಪತ್ತಿಯ ಚಟುವಟಿಕೆಯ ಒಂದು ಭಾಗ. ನಮ್ಮ ಹಳ್ಳಿಗಳಲ್ಲಿ ಹೇರಳವಾಗಿ ಕಾಣಸಿಗುವ ಮಳೆ ಹಾತೆಗಳ ಜೀವನಕ್ರಮವೇ ವಿಶಿಷ್ಟ, ಅನನ್ಯ.



ಒಮ್ಮೆಗೆ 1500 ಮೊಟ್ಟೆ

ಹಲವು ಪ್ರಭೇದದ ಮಳೆಹಾತೆಗಳು ಮೊಟ್ಟೆಯಿಡಲು, ನಿಂತ ನೀರು ಅವಶ್ಯಕ; ಇನ್ನು ಕೆಲವು ಪ್ರಭೇದಗಳು ಹರಿವ ನೀರಿನಲ್ಲಿ, ಹುಲ್ಲುಗಿಡಗಳ ಕಾಂಡದೊಳಗೆ ಮೊಟ್ಟೆ ಇಡುತ್ತವೆ; ಒಣ ಪ್ರದೇಶದಲ್ಲೂ ಮೊಟ್ಟೆ ಇಡುವ ಮಳೆಹಾತೆಗಳಿವೆ. ಒಮ್ಮೆಗೆ ಸುಮಾರು 1500 ಮೊಟ್ಟೆಯಿಡುವ ಮಳೆ ಹಾತೆಗಳು, ತಮ್ಮ ವಿಶಿಷ್ಟ ಜೀವನಕ್ರಮದಿಂದಾಗಿ ವಿಜ್ಞಾನ ಜಗತ್ತಿನ ಗಮನ ಸೆಳೆದಿವೆ. ಅತಿವೇಗವಾಗಿ ಹಾರಾಡುವುದು, 360 ಡಿಗ್ರಿ ತಿರುಗಬಲ್ಲ ದೊಡ್ಡದಾದ ಕಣ್ಣುಗಳು, ಚುರುಕಾಗಿ ಹಾರಾಡುತ್ತ ಸೊಳ್ಳೆ, ನೊಣ ಮೊದಲಾದವುಗಳನ್ನು ಹಿಡಿದು ತಿನ್ನುವ ಗುಣ ಮೊದಲಾದವು ಮಳೆ ಹಾತೆಗಳ ವಿಶಿಷ್ಟ ಜೀವನಕ್ರಮದಲ್ಲಿ ಸೇರಿವೆ.

ಸಾವಿರಾರು ಕಿ.ಮೀ. ದೂರ ಪಯಣ!

ನಮ್ಮ ರಾಜ್ಯದಲ್ಲಿ ಮತ್ತು ಜಗತ್ತಿನಲ್ಲಿ ಅತಿ ಹೆಚ್ಚಾಗಿ ಕಾಣಸಿಗುವ ಮಳೆಹಾತೆಯ (ಡ್ರೇಗನ್ ಫ್ಲೈ) ಪ್ರಭೇದವೆಂದರೆ ಪ್ಯಾಂಟಾಲಾ ಫ್ಲೇವ್‌ಸೆನ್ಸ್. ಇವುಗಳ ವೈಶಿಷ್ಟ್ಯವೆಂದರೆ, ಸಾವಿರಾರು ಕಿ.ಮೀ. ದೂರದ ವಲಸೆ. ಕೀಟಜಗತ್ತಿನಲ್ಲಿ ಇಷ್ಟು ದೂರ ವಲಸೆ ಹೋಗುವ ಇನ್ನೊಂದು ಕೀಟವಿಲ್ಲ. ತನ್ನ ವಲಸೆಯ ಹಾದಿಯಲ್ಲಿ ಈ ಕೀಟವೊಂದು 6,000 ಕಿ.ಮೀ. ಸಂಚರಿಸ ಬಲ್ಲದು. ಇವುಗಳ ಒಟ್ಟೂ ಸಾಮೂಹಿಕ ವಲಸೆಯು 18,000 ಕಿ.ಮೀ. ತನಕ ಸಾಗಬಲ್ಲದು ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. ತೆಳುದೇಹ ಹೊಂದಿದ ಮಳೆಹಾತೆಯ ಒಂದು ಪ್ರಭೇದದ ಕೀಟಗಳು, ಹಿಂದೂಮಹಾಸಾಗರದಲ್ಲಿರುವ ಮಾಲ್ದೀವ್ಸ್ ದ್ವೀಪಗಳಿಂದ ಆಫ್ರಿಕಾದ ಸೋಮಾಲಿಯಾದ ತನಕ ಹಾರಾಟಮಾಡುತ್ತಾ ಸಾಗಿವೆ. ಸುಮಾರು 2,500 ಕಿ.ಮೀ. ದೂರದ ಈ ದಾರಿಯಲ್ಲಿ ಎಲ್ಲೂ ಕೆಳಗೆ ಇಳಿಯದೇ, ಸಮುದ್ರದ ಮೇಲೆಯೇ ಹಾರುತ್ತಾ ಸಾಗುವ ಶಕ್ತಿ ಈ ಕೀಟಕ್ಕಿದೆ !

ಮಳೆಹಾತೆಗಳ ಮಾಯಾಲೋಕ!

» ಶಶಿಧರ ಹಾಲಾಡಿ

ಮಳೆಗಾಲದ ಜಡಿಮಳೆ ಆರಂಭವಾಗುವುದಕ್ಕೆ ಕೆಲವು ದಿನಗಳ ಮುನ್ನ ಆಗಾಗ ಸುರಿದ ಮಳೆಯಿಂದಾಗಿ ಮನೆ ಮುಂದಿನ ಅಗೇಡಿಯಲ್ಲಿ ನೀರು ತುಂಬಿರುವ ಸಮಯ; ಸಂಜೆ ಹೊತ್ತಿನಲ್ಲಿ, ಆಗಸದ ಬೆಳಕನ್ನೇ ಪ್ರತಿಫಲಿಸಿ, ಇಡೀ ಅಗೇಡಿಯ ಮೇಲ್ಮೈಯು ಸಪಾಟು ವಿಶಾಲ ಕನ್ನಡಿಯಂತೆ ಬೆಳಗುವ ಕಾಲ; ಆ ನೀರಗನ್ನಡಿಯ ಮೇಲ್ಮೈಗೆ ಮುತ್ತಿಕ್ಕಿ, ಆಗಾಗ ಅಲ್ಲಿ ಪುಟಾಣಿ ತರಂಗಗಳನ್ನು ಎಬ್ಬಿಸುತ್ತಿರುವ ಆ ಪುಟ್ಟ ಕೀಟವೇ ಮಳೆ ಹಾತೆ; ಅಥವಾ ನಮ್ಮೂರಿನವರು ಕರೆಯುವಂತೆ 'ಮಳೆ ಹಾಂತೆ'. ಈ ಮಳೆ ಹಾತೆಗಳು ಒಂದೊಂದಾಗಿ ಇರುವುದೇ ಕಡಿಮೆ; ಅಲ್ಲಲ್ಲಿ ಹಾರಾಡುವ ಹತ್ತಾರು ಕೀಟಗಳ ಸಮೂಹವೇ ಆ ಅಗೇಡಿಯ ನೀರನ್ನು ಒಂದೊಂದೇ ಹನಿಯ ರೀತಿಯಲ್ಲಿ ಕುಡಿಯುವಂತೆ, ನೀರನ್ನು ಮುಟ್ಟಿ, ಒಂದೆರಡು ಅಡಿ ಮೇಲೇರಿ ಪುನಃ ನೀರನ್ನು ಮುಟ್ಟುತ್ತಿರುತ್ತವೆ. ಅವುಗಳ ಹಾರಾಡವನ್ನು ನೋಡುವುದೇ ಒಂದು ವಿಶಿಷ್ಟ ಅನುಭವ.

'ಮಳೆ ಹಾಂತೆ'ಗಳು ಈ ರೀತಿ ಹತ್ತಾರು ಸಲ ನೀರಿಗೆ ಮುತ್ತಿಕ್ಕಿ, ನೀರನ್ನು ಕುಡಿಯುತ್ತಾ ಹಾರಾಡುತ್ತಿದ್ದುದನ್ನು ಕಂಡ ನಮ್ಮ ಹಳ್ಳಿಯ ಜನರು, 'ಹೋ, ಇವತ್ತು ರಾತ್ರಿ ಮಳೆ ಬತತ್' ಎನ್ನುತ್ತಿದ್ದರು. ಈ ಕೀಟಗಳನ್ನು ಶಿಷ್ಟ ಭಾಷೆಯಲ್ಲಿ 'ಏರೋಪ್ಲೇನ್ ಚಿಟ್ಟೆ' (ಡ್ರೇಗನ್ ಫ್ಲೈ) ಎಂದು ಕರೆಯುತ್ತಾರೆ; ಆದರೆ ಈ ಹೆಸರಿನಿಂದ ಕರೆಯಲು ನನಗೆ ಅಷ್ಟು ಇಷ್ಟವಿಲ್ಲ – ಏಕೆಂದರೆ, 'ಏರೋಪ್ಲೇನ್ ಚಿಟ್ಟೆ' ಎಂಬ ಹೆಸರು ತೀರಾ ಇತ್ತೀಚಿಗನದು, ಕನ್ನಡ ಭಾಷೆಯ ಮೇಲೆ ಆಂಗ್ಲ ಭಾಷೆಯ ಪ್ರಭಾವ ಜಾಸ್ತಿಯಾದ ನಂತರ ಸೃಷ್ಟಿಗೊಂಡ ಹೆಸರಿದು. ಏರೋಪ್ಲೇನ್‌ಗಳು ಬಾನಿನಲ್ಲಿ ಹಾರಾಡುವಕ್ಕಿಂತ ಲಕ್ಷ ಲಕ್ಷ ವರ್ಷಗಳ ಮುಂಚೆಯೇ, ಈ ಹಾರಾಡುವ ಪುಟ್ಟ ಕೀಟಗಳು ನಮ್ಮಲ್ಲಿ ಮನೆ ಮಾಡಿದ್ದವು; ಆದ್ದರಿಂದ, ಕನ್ನಡದ ಹೆಸರೇ ಇದಕ್ಕೆ ಚಂದ ಎಂಬುದು ನನ್ನೆಣಿಕೆ. ನಮ್ಮ ಹಳ್ಳಿಯವರು ಇದಕ್ಕೆ ಇರಿಸಿರುವ 'ಮಳೆ ಹಾಂತೆ' ಎಂಬ ಹೆಸರು ಧ್ವನಿಪೂರ್ಣ; ಮಳೆಗಾಲ ಬರುವ ಸೂಚನೆಯನ್ನು ಈ ಕೀಟಗಳ ಹಾರಾಟದಲ್ಲಿ ಕಂಡ ನಮ್ಮೂರಿನವರು, ತಮ್ಮ ಮುಂದಿನ ಬೆಳೆಗೆ ಅಗತ್ಯವಿರುವ ನೀರನ್ನು ತರುವ ಮಳೆಗಾಲದ ಆಗಮನವನ್ನು ಇವು ಸೂಚಿಸುತ್ತವೆ ಎಂಬ ಆಶಾಭಾವವನ್ನೂ ವ್ಯಕ್ತಪಡಿಸಿದ್ದಾರೆ! ಆದರೆ, ಇಂತಹ ಸ್ಥಳೀಯ ಹೆಸರನ್ನು ವ್ಯಾಪಕವಾಗಿ ಬಳಸಲು ಒಂದು ಸಣ್ಣ ಸಮಸ್ಯೆ ಇದೆ:

ನಮ್ಮ ವಿಶಾಲ ಕರ್ನಾಟಕದಲ್ಲಿ ಒಂದೊಂದು ಭಾಗದ ಜನರು, ಒಂದೊಂದು ಹೆಸರಿನಿಂದ ಇದನ್ನು ಕರೆಯುವರು! ಕರಾವಳಿಯ ಭಾಗದ ನಮ್ಮೂರಿನಲ್ಲಿ ಮಳೆ ಹಾತೆ ಎಂದು ಕರೆದಂತೆ, ಬಯಲುಸೀಮೆಯವರು, ಉತ್ತರ ತುದಿಯವರು ಬೇರಾವುದೋ ಹೆಸರಿಟ್ಟಿರುತ್ತಾರೆ ಈ ಕೀಟಕ್ಕೆ.

ಮಕ್ಕಳಿಗೆ ಆಟ ಕೀಟಕ್ಕೆ ಕಾಟ

ಮಳೆಹಾತೆಗೂ ಮಕ್ಕಳಿಗೆ ಭಾರೀ ನಂಟು ಉಂಟು! ಮಳೆ ಹಾತೆಗಳು ಅಗೇಡಿಯ ನೀರನ್ನು ಒಂದೊಂದೇ ಗುಟುಕು ಕುಡಿಯುವಂತೆ ಹಾರಾಡುವುದು ಅವುಗಳ ಎದ್ದು ಕಾಣಿಸುವ ಚಟುವಟಿಕೆಯಾದರೆ, ಬೇರೆ ಸಮಯದಲ್ಲಿ ಅವು 'ಧ್ಯಾನ' ಮಾಡುತ್ತಿರುತ್ತವೆ! ಕೈಗೆಟಕುವಷ್ಟು ಎತ್ತರದ ಗಿಡಗಳ ರೆಂಬೆಗಳ ಮೇಲೆ, ಹುಲ್ಲುಗಿಡಗಳ ಕಡ್ಡಿಯಂತಹ ತುದಿಯಲ್ಲಿ ಕುಳಿತಿರುವುದು ಅವುಗಳ ವಿಶ್ರಾಮದ ಭಂಗಿ. ನೆಲದ ಮೇಲೆ ಬೆಳೆದ ಹುಲ್ಲುಕಡ್ಡಿಯೊಂದರ ತುದಿಯಲ್ಲಿ ಮೌನವಾಗಿ ಕುಳಿತಿರುವ ಮಳೆಹಾತೆಯ 'ಧ್ಯಾನಸ್ಥ ಸ್ಥಿತಿ'ಯನ್ನು ಕಂಡರೆ, ಕುತೂಹಲಗೊಳ್ಳದ ಮಕ್ಕಳೇ ಇಲ್ಲವೆನ್ನಬಹುದು! ಮೌನ ಮುನಿಯ ರೀತಿ ಕುಳಿತು, ತಮ್ಮ ಉದ್ದ ಬಾಲವನ್ನು ಹಿಂಭಾಗದಲ್ಲಿ ನೀಡಿಕೊಂಡು, ಪಾರದರ್ಶಕ ರೆಕ್ಕೆಗಳನ್ನು ಕತ್ತರಿ ಆಕಾರದಲ್ಲಿಟ್ಟುಕೊಂಡು, ತಲೆಯಷ್ಟೇ ದೊಡ್ಡ ಕಣ್ಣುಗಳನ್ನು ಅಲುಗಾಡಿಸದೇ ಮಳೆಹಾತೆ ಕುಳಿತಿರುವಾಗ, ಮಕ್ಕಳು ಮೆಲ್ಲನೆ ಅದರ ಹಿಂಭಾಗಕ್ಕೆ ಬಂದು, ಒಂದಿಂಚು ಉದ್ದದ ಅದರ ಬಾಲವನ್ನು ಗಬಕ್ಕನೆ ಹಿಡಿಯುತ್ತಾರೆ!

ಮಕ್ಕಳಿಗೆ ಅದೊಂದು ಕೀಟಲೆಯ ಆಟ; ಆದರೆ ಮಳೆ ಹಾಂತೆಗೆ ಅದು ಪ್ರಾಣ ಸಂಕಟ! ತನ್ನ ಉದ್ದನೆಯ ಬಾಲವು ಕೀಟಲೆ ಹುಡಗನೊಬ್ಬನ ಎರಡು ಬೆರಳುಗಳ ಸಂದಿಯಲ್ಲಿ ಸಿಕ್ಕಿ ಬಿದ್ದದ್ದೇ ಬಿದ್ದದ್ದು, ಆ ಮಳೆ ಹಾತೆಗೆ ವಿಪರೀತ ಗಾಬರಿ, ಭಯ! 'ನನ್ನ ಪಾಡಿಗೆ ನಾನು ಮೌನವಾಗಿ, ಈ ಗಿಡದ ಕಡ್ಡಿಯ ತುದಿಯಲ್ಲಿ ಕುಳಿತು ಧ್ಯಾನ ಮಾಡುತ್ತಿರುವಾಗ, ಇದೇಕೆ ಒಮ್ಮೆಗೇ ಈ ಹುಡುಗ ನನ್ನನ್ನು ಹಿಡಿದು ಆಘಾತಕ್ಕೆ ನೂಕಿಬಿಟ್ಟ?' ಎಂಬ ಪ್ರಶ್ನೆ ಆ ಕೀಟದ ಮನದಲ್ಲಿ ಮೂಡೀತು!

ಮಕ್ಕಳ ಕೈಗೆ ಸಿಕ್ಕಿಬಿದ್ದ ಆ ಮಳೆಹಾತೆ ಒಂದೇ ಸವನೆ ತನ್ನ ಪಾರದರ್ಶಕ ರೆಕ್ಕೆಗಳನ್ನು ಪಟಪಟನೆ ಬಡಿಯತೊಡಗುತ್ತದೆ! ಅವುಗಳ ರೆಕ್ಕೆಯ ಪ್ಲಾಸ್ಟಿಕ್ ಜರಿಯ ರೀತಿ ಇದೆ ಎನ್ನಬಹುದು; ಒಂದೇ ಸವನೆ ರೆಕ್ಕೆ ಬಡಿಯತೊಡಗಿದಾಗ ಪರಪರ ಎಂಬಂತೆ ಸದ್ದಾಗುತ್ತದೆ : ಆ ಸದ್ದನ್ನು ಕೇಳುವುದೇ ಕೀಟಲೆ ಹುಡುಗರ ಉದ್ದೇಶ; ಮಳೆ ಹಾತೆಯ ಬಾಲ ಹಿಡಿದಾಗ, ಗಾಬರಿಯಿಂದ ಅವು ರೆಪ್ಪೆ ಬಡಿಯತೊಡಗಿ, ಆಗ ಕಾಣಿಸುವ ಅವುಗಳ ಒದ್ದಾಟವನ್ನು ನೋಡುವುದೇ ಮಕ್ಕಳಿಗೆ ಒಂದು ಕೀಟಲೆ. ಕೆಲವು ಸೆಕೆಂಡುಗಳ ಕಾಲ ಆ ರೀತಿಯ ರಪ ರಪ ರೆಕ್ಕೆ ಬಡಿತವನ್ನು ನೋಡಿದ ಮಕ್ಕಳು, ಕೊನೆಗೆ ಕರುಣೆ ತೋರಿ, ತಮ್ಮ ಬೆರಳುಗಳ ಹಿಡಿತವನ್ನು ಸಡಲಿಸುತ್ತಾರೆ; ಪಾಪ, ಮಳೆ ಹಾತೆ, ಬಾಲದ ಹಿಡಿತ ತಪ್ಪಿದ್ದೇ, ಹಾರಿ, ದೂರ ಸಾಗಿ ಬದುಕಿದೆಯಾ ಬಡಜೀವವೇ ಎಂದು, ಬೇರೊಂದು ಹುಲ್ಲಿನ ತುದಿಯ ಮೇಲೆ ಕುಳಿತು, ಪುನಃ ಧ್ಯಾನಕ್ಕೆ ತೊಡಗುತ್ತದೆ.

ಇನ್ನೂ ಹೆಚ್ಚು ಕೀಟಲೆ ಮಾಡುವ ಹುಡುಗರರು, ಇಷ್ಟಕ್ಕೇ ಸುಮ್ಮನಾಗುವುದಿಲ್ಲ. ಮಳೆಹಾತೆಯನ್ನು ಹಿಡಿದು, ಅದರ ಬಾಲಕ್ಕೆ ಒಂದು ಉದ್ದನೆಯ ದಾರವನ್ನು ಕಟ್ಟಿ, ಹಾರಲು ಬಿಡುತ್ತಾರೆ; ದಾರದ ಇನ್ನೊಂದು ತುದಿ ಮಕ್ಕಳ ಕೈಯಲ್ಲಿ. ಪಾಪ, ತುಸು ದೂರ ಹಾರಿದ ಮಳೆಹಾತೆಯು, ಬಾಲಕ್ಕೆ ಕಟ್ಟಿದ ದಾರದಿಂದಾಗಿ, ಮೇಲೇರಿ ಕೆಳಗಿಳಿಯುವ ಗಿರಿಗಿಟ್ಲೆಯಾಗಿಬಿಡುತ್ತದೆ! ಅದನ್ನು ಹಿಡಿದು, ದಾರ ಕಟ್ಟಿದ ಬಾಲಕನಿಗೆ ಕರುಣೆಬಂದಾಗ ಮಾತ್ರ, ಅದರ ಈ ಅಸಹಾಯಕ ಸ್ಥಿತಿಗೆ ಮುಕ್ತಿ. ದಾರ ಕಟ್ಟಿದವರಿಗೆ ಬೇಗನೆ ಕರುಣೆ ಬರದಿದ್ದರೆ, ಅಂತಹ ಮಳೆಹಾತೆಯ ಜೀವನವೇ ಮುಕ್ತಿ!

ಅಂದಹಾಗೆ, ಸಂಜೆಯ ಸಮಯದಲ್ಲಿ ಅಗೇಡಿಯ ನೀರನ ಮೇಲ್ಮೈ ಬಳಿ ಹಾರಾಡುತ್ತಾ, ಒಂದೊಂದೇ ಗುಟುಕು ನೀರು ಕುಡಿಯುವ ರೀತಿಯಲ್ಲಿ, ಹತ್ತೆಂಟು ಬಾರಿ ನೀರಿಗೆ ಮುತ್ತಿಕ್ಕುವ ಮಳೆಹಾತೆಯು (ಏರೋಪ್ಲೇನ್ ಚಿಟ್ಟೆ), ವಾಸ್ತವ ವಾಗಿ ಆಗ ನೀರು ಕುಡಿಯುವುದಿಲ್ಲ! ಬದಲಿಗೆ, ಆ ಕೀಟಗಳು, ನೀರಿನಲ್ಲಿ ಮೊಟ್ಟೆಯಿಡುವಾಗ, ಆ ರೀತಿ ನೀರನ್ನು ಮುಟ್ಟುತ್ತವೆ! ಅದು ಅವುಗಳ ಸಂತಾನೋತ್ಪತ್ತಿಯ ಚಟುವಟಿಕೆಯ ಒಂದು ಭಾಗ.

ನಮ್ಮ ಹಳ್ಳಿಯಲ್ಲಿ ಮಳೆಹಾತೆಗಳು ಹೇರಳವಾಗಿವೆ; ವರ್ಷದ ಕೆಲವು ತಿಂಗಳುಗಳಲ್ಲಿ, ಹತ್ತಾರು, ನೂರಾರು ಸಂಖ್ಯೆಯಲ್ಲಿ ಅವು ಹಾರಾಡುವುದನ್ನು ಕಾಣಬಹುದು. ಮುಸ್ಸಂಜೆಯ ಹೊತ್ತಿನಲ್ಲಿ ಮನೆ ಮುಂದಿನ ಅಗೇಡಿಯ ನೀರಿನ ಮೇಲೆ, ಹತ್ತಾರು ಮಳೆಹಾತೆಗಳು ಹಾರಾಡುತ್ತಾ, ಕೆಲವು ಮಳೆಹಾತೆಗಳು (ಹೆಣ್ಣು ಕೀಟ) ನೀರನ್ನು ಪದೇ ಪದೇ ಮುಟ್ಟುತ್ತಾ ಇರುವ ಸಮಯದಲ್ಲಿ, ಅವುಗಳ ಇರವು ಎದ್ದು ಕಾಣುತ್ತದೆ. ಮಳೆಹಾತೆಯ ಹೆಣ್ಣು ಕೀಟವು ನೂರಾರು ಮೊಟ್ಟೆಗಳನ್ನು ನೀರಿನಲ್ಲಿ ಇಡುವ ಆ ಚಟುವಟಿಕೆಯು, ಅವುಗಳ 'ಮಳೆ ನೃತ್ಯ' ವೆಂದೇ ಹೇಳಬಹುದು. ಅಗೇಡಿಯಲ್ಲಿ ನೀರು ಇರುವ ಸಮಯದಲ್ಲಿ ಅಧಿಕವಾಗಿ ಕಾಣುವ ಇವು, ವರ್ಷದ ಇತರ ಕೆಲವು ಋತುಗಳಲ್ಲಿ ನಾಪತ್ತೆ! ಇದೇಕೆ ಹೀಗೆ ಎಂದು ಗಮನಿಸಿದರೆ, ಅವುಗಳ ಜೀವನಕ್ರಮವೇ ಹಾಗೆ ಎನ್ನುತ್ತಾರೆ ವಿಜ್ಞಾನಿಗಳು. ಕೆಲವು ಪ್ರಭೇದದ ಮಳೆಹಾತೆಗಳು, (ಉದಾ: ಪ್ಯಾಂಟಾಲಾ ಫ್ಲೇವ್‌ಸೆನ್ಸ್, ನಮ್ಮಲ್ಲಿ ಹೆಚ್ಚಾಗಿ ಕಾಣಸಿಗುವ ಏರೋಪ್ಲೇನ್ ಚಿಟ್ಟೆಯ ಪ್ರಭೇದ) ಸಾವಿರಾರು ಕಿ.ಮೀ.ಗಳಷ್ಟು ದೂರ ವಲಸೆ ಹೋಗುವುದೂ ಇದೆ!

ನೀರಿನಲ್ಲಿ ವಾಸಿಸುವ ಮರಿ!

ಮಳೆ ಹಾತೆಯ ಮರಿಯು (ಲಾರ್ವಾ) ನೀರಿನಲ್ಲಿ ವಾಸಿಸುತ್ತಾ, ಅಲ್ಲೇ ತನ್ನ ಜೀವನದ ಬಹುಪಾಲು ಸಮಯವನ್ನು ಕಳೆಯುತ್ತದೆ. ನೀರಿನ ಅಂಚಿನಲ್ಲಿ ಅಥವಾ ನೀರಿನಲ್ಲಿ ಇರುವ ಮೊಟ್ಟೆಗಳು ಒಡೆದು ಬರುವ ಲಾರ್ವಾ, ಹಲವು ತಿಂಗಳುಗಳ ಕಾಲ ಅದೇ ಸ್ವರೂಪದಲ್ಲಿರುತ್ತದೆ. ನೀರಿನಲ್ಲಿರುವ ಗೊದಮೊಟ್ಟೆ, ಇತರ ಜಲಚರಗಳು, ಮೀನುಗಳನ್ನು ಹಿಡಿದು ತಿನ್ನುವ ಈ ಲಾರ್ವಾಗಳು, ಹೊಟ್ಟೆಬಾಕರು. ಕೊನೆಗೊಮ್ಮೆ ತನ್ನ ಲಾರ್ವಾ ಸ್ವರೂಪವನ್ನು ತೊರೆದು, ನಾಲ್ಕು ರೆಕ್ಕೆಗಳನ್ನು ಪಡೆದು, ಹಾರಾಡುವ ಶಕ್ತಿ ಪಡೆಯುವ ಮಳೆ ಹಾತೆಯು, ಪುನಃ ತನ್ನ ಜೀವನಚಕ್ರವನ್ನು ಮುಂದುವರಿಸುತ್ತದೆ.

ನೀರಿನಲ್ಲಿ ಮೊಟ್ಟೆ

ಮೊಟ್ಟೆ ಇಡಲು, ಸಂತಾನೋತ್ಪತ್ತಿ ಮಾಡಲು ಅವುಗಳಿಗೆ ನೀರು ಬೇಕು. ಈ ಜಗತ್ತಿನಲ್ಲಿ 3,000ಕ್ಕೂ ಅಧಿಕ ಪ್ರಭೇದದ ಮಳೆಹಾತೆಗಳು ಇವೆಯಂತೆ. ಹೆಚ್ಚಿನ ಪ್ರಭೇದದ ಮಳೆಹಾತೆಗಳಿಗೆ ಸಂತಾನೋತ್ಪತ್ತಿ ಮಾಡಲು, ಮೊಟ್ಟೆ ಇಡಲು, ನೀರಿನಾಶ್ರಯ ಬೇಕೇಬೇಕು. ನಿಂತ ನೀರನಲ್ಲಿ ಮೊಟ್ಟೆಯಿಡುವ ಪ್ರಭೇದಗಳಿವೆ, ಹರಿವ ನೀರಿನಲ್ಲೂ ಮೊಟ್ಟೆ ಇಡುವ ಪ್ರಭೇದಗಳಿವೆ; ಇನ್ನ ಕೆಲವು ಪ್ರಭೇದಗಳು ಕೊಳದ ಅಂಚಿನಲ್ಲೋ, ನೀರಿಗೆ ಸನಿಹದ ಜಾಗದಲ್ಲೋ ಬೆಳೆಯುವ ಜೊಂಡು ಹುಲ್ಲುಗಳ ಕಾಂಡವನ್ನು ಸೀಳಿ, ಅದರೊಳಗೆ ಮೊಟ್ಟೆಯಿಡುತ್ತವೆ! ಕೊಳದ ನೀರಿನ ಮಟ್ಟವು ನಿಧಾನವಾಗಿ ಮೇಲೇರಿದ ನಂತರವಷ್ಟೇ, ಆ ಜೊಂಡುಹುಲ್ಲಿನ ಕಾಂಡದೊಳಗಿನ ಮೊಟ್ಟೆಯು ಮರಿಯಾಗುತ್ತದೆ. ಕೆಲವು ಪ್ರಭೇದದ ಈ ಕೀಟಗಳ ಮೊಟ್ಟೆಗಳು, ಬಿರುಬಿಸಿಲಿನಲ್ಲೂ ಬದುಕಿ ಇರಬಲ್ಲವು; ಮಳೆ ಬಂದಾಗ ಜೀವ ತಳೆಯಬಲ್ಲವು.

ವರ್ಷಗಟ್ಟಲೆ ಲಾರ್ವಾ ಸ್ಥಿತಿ

ಮಳೆಹಾತೆಯ ಮರಿಗಳೋ, ತಕ್ಷಣ ರೆಕ್ಕೆ ಪಡೆದು ಹಾರುವುದಿಲ್ಲ; ಬದಲಿಗೆ ಒಂದೆರಡು ವರ್ಷ ನೀರಿನಲ್ಲೇ ಇರುವ ಬೇರೆಯದೇ ಸ್ವರೂಪದ ಕೀಟಗಳಾಗಿ ಜೀವನ ನಡೆಸುತ್ತವೆ; ಹಲವು ತಿಂಗಳುಗಳ ನಂತರ, (ಕೆಲವು ಪ್ರಭೇದದ ಮಳೆ ಹಾತೆಗಳಲ್ಲಿ, 5 ವರ್ಷದ ನಂತರ!) ಈ ಕೀಟಗಳು, ರೆಕ್ಕೆಗಳನ್ನು ಪಡೆದು, ರೂಪಾಂತರ ಹೊಂದಿ, ಮಳೆಹಾತೆಯ ಸ್ವರೂಪ ಧರಿಸಿ, ರೆಕ್ಕೆಯನ್ನು ಸೃಷ್ಟಿಸಿಕೊಂಡು ಹಾರಾಡುವ ಶಕ್ತಿ ಗಳಿಸುತ್ತವೆ. ಆದರೆ, ನಮಗೆಲ್ಲಾ ಎದ್ದು ಕಾಣುವ ಈ ಸ್ವರೂಪದಲ್ಲಿ, ಮಳೆಹಾತೆಯ ಆಯಸ್ಸು ಕೆಲವೇ ವಾರ ಮಾತ್ರ! ಅನನ್ಯ ಜೀವನ ಚಕ್ರ, ಬಹು ಶಕ್ತಿಶಾಲಿಯಾಗಿರುವ ದೊಡ್ಡದಾದ ಕಣ್ಣುಗಳು, ಸಂತಾನೋತ್ಪತ್ತಿ ಪ್ರಕ್ರಿಯೆ, ಅದರಲ್ಲಿ ಗಂಡಿನ ವಿಶಿಷ್ಟ ಶಕ್ತಿ, ಹೆಣ್ಣು ಮೊಟ್ಟೆಯಿಡುವ ಕ್ರಮ, ನೀರಿನ ಮೇಲ್ಭಾಗದಲ್ಲಿ ಗಂಡು ಹೆಣ್ಣು ಕೀಟಗಳು ಪರಸ್ಪರ ಕೈಕೈ ಹಿಡಿದಂತೆ (ಬಾಲಗಳನ್ನು ಅಂಟಿಸಿಕೊಂಡು) ಹಾರಾಡುವ ರೀತಿ, ಒಂದೇ ಬಾರಿ 1500ಕ್ಕೂ ಅಧಿಕ ಮೊಟ್ಟೆಯಿಡುವುದು ಇಂತಹ ಹಲವು ವಿಸ್ಮಯಕಾರಿ ವಿದ್ಯಮಾನಗಳನ್ನು ತಮ್ಮ ಬದುಕಿನಲ್ಲಿ ಹುದುಗಿಸಿಕೊಂಡಿವೆ ಈ ಕೀಟಗಳು!

ನಮ್ಮ ಹಳ್ಳಿಯಲ್ಲೂ ಹಲವು ಪ್ರಭೇದದ ಮಳೆಹಾತೆಗಳನ್ನು ಕಾಣಬಹುದು. ಹೇರಳವಾಗಿ ಕಾಣಿಸುವ ಪ್ಯಾಂಟಾಲಾ ಫ್ಲೇವ್‌ಸೆನ್ಸ್ ಪ್ರಭೇದವೇ, ನಮ್ಮ ಮನೆಯ ಎದುರಿನ ಅಗೇಡಿಯ ನೀರಿನ ಮೇಲ್ಮೈಯ ಮೇಲೆ ಸಂಜೆಯ ಹೊತ್ತಿನಲ್ಲಿ ನೂರರ ಸಂಖ್ಯೆಯಲ್ಲಿ ಹಾರಾಡುತ್ತಿರುತ್ತವೆ. ಇವುಗಳ ಮಾಸಲು ಬಣ್ಣದ ರೆಕ್ಕೆಗಳು ಎದ್ದು ಕಾಣುವಂತಹದ್ದು.

ವರ್ಣ ವಿನ್ಯಾಸದ ರೆಕ್ಕೆ

ಇವುಗಳಿಗಿಂತ ತುಸು ಚಿಕ್ಕ ಗಾತ್ರದ ಹಲವು ಪ್ರಭೇದದ ಮಳೆಹಾತೆಗಳೂ ನಮ್ಮೂರಿನಲ್ಲಿವೆ. ಕೆಲವು ಮಳೆಹಾತೆಗಳ ರೆಕ್ಕೆಯ ವರ್ಣ ವಿನ್ಯಾಸವು ಬಹು ಚಂದ, ಆಕರ್ಷಕ. ಪುಟ್ಟ ಗಾತ್ರದ ಮಳೆಹಾತೆಯೊಂದು ತನ್ನ ರೆಕ್ಕೆಯನ್ನು ಅಗಲಿಸಿ ಕುಳಿತಾಗ, ಒಂದು ಚಿತ್ರವನ್ನು ಬರೆದಿಟ್ಟಂತೆ ಕಾಣುತ್ತದೆ. ನೀಳ ದೇಹದ, ಉದ್ದನೆಯ ಬಾಲ ಹೊಂದಿದ ಮಳೆಹಾತೆಗಳೂ ಇವೆ. ಆದರೆ ಇವುಗಳು ನಿಂತ ನೀರಿನ ಬಳಿ ಇರುವುದಕ್ಕಿಂತ ಹೆಚ್ಚಾಗಿ, ಹಕ್ಕಲುಗಳಲ್ಲಿ, ಹಾಡಿ ಹಕ್ಕಲಿನ ನಡುವಿನ ಹುಲ್ಲುಬೆಳೆಯುವ ಜಾಗದಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಇವುಗಳ ಸಂತಾನೋತ್ಪತ್ತಿಗೆ, ಅಗೇಡಿಯಲ್ಲಿನಂತೆ ಧಾರಾಳವಾಗಿ ನಿಂತ ನೀರು ಬೇಕಾಗಿಲ್ಲ, ಬಹುಷಃ, ಹಕ್ಕಲಿನ ಗಿಡಗಳ ನಡುವಿನ ಪರಿಸರದಲ್ಲಿ, ಅಲ್ಲಿನ ಜಲಾಶ್ರಯಗಳ ಸುತ್ತಮುತ್ತ ಅವುಗಳ ದಿನಚರಿ, ಸಂತಾನೋತ್ಪತ್ತಿ ನಡೆಯುತ್ತದೆ.

ನಮ್ಮ ದೇಶದ ಅವೆಷ್ಟೋ ಕೀಟಗಳನ್ನು ಇನ್ನಷ್ಟೇ ವೈಜ್ಞಾನಿಕವಾಗಿ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ ಎಂದಿದ್ದಾರೆ ತಜ್ಞರು; ನಮ್ಮ ಹಳ್ಳಿಯ ಮಳೆಹಾತೆಗಳ ವೈವಿಧ್ಯವನ್ನು ಗಮನಿಸಿದರೆ, ಇನ್ನೂ ವೈಜ್ಞಾನಿಕವಾಗಿ ಗುರುತಿಸಬೇಕಾದ ಹೊಸ ಪ್ರಭೇದಗಳೂ ಇವೆ ಎನಿಸುತ್ತದೆ. 2003ರಲ್ಲಿ ಕೇರಳದ ವೈನಾಡಿನಲ್ಲಿ ಹೊಸ ಪ್ರಭೇದದ ಮಳೆಹಾತೆಯನ್ನು ಗುರುತಿಸಲಾಗಿತ್ತು; ನಮ್ಮ ರಾಜ್ಯದ ಸಹ್ಯಾದ್ರಿಯಲ್ಲೂ ಹೊಸ ಹೊಸ ಪ್ರಭೇದದ ಇಂತಹ ಕೀಟಗಳು ಇರಲಿಕ್ಕೇಬೇಕು. ಅಂತಹವುಗಳನ್ನು ನಾವು ಪತ್ತೆ ಹಚ್ಚಿದಾಗ ಹೊಸ ಪ್ರಭೇದ ಎಂದು ಕರೆಯುತ್ತೇವೆ, ಆದರೆ ವಿಶಿಷ್ಟ ಜೀವನಕ್ರಮ ಹೊಂದಿರುವ ಈ ಮಳೆಹಾತೆಗಳು, ನಮಗಿಂತಲೂ ಅವೆಷ್ಟೋ ಲಕ್ಷ ವರ್ಷಗಳ ಹಿಂದಿನಿಂದಲೂ ಈ ಭೂಮಿಯ ಮೇಲೆ ವಾಸಿಸುತ್ತಿವೆ! ಈ ಹೋಲಿಕೆಯಲ್ಲಿ, ಈ ಜಗತ್ತಿಗೆ ನಾವೇ ಹೊಸಬರು!

ಪಂಪಾಯಾತ್ರೆ 1925!

ಅಕ್ಟೋಬರ್ 9 ಮತ್ತು 10 ರಂದು ಹೊನ್ನಾವರದಲ್ಲಿ 'ಜೀವಕಾರುಣ್ಯ ಪರಂಪರೆ ಮತ್ತು ವಿ.ಸೀತಾರಾಮಯ್ಯ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯುತ್ತಿದೆ. ವಿ.ಸೀ.ಯವರ ಮೊದಲ ಪುಸ್ತಕ 'ಪಂಪಾಯಾತ್ರೆ'ಯ ಸಮೀಕ್ಷೆ ಇಲ್ಲಿದೆ. ಈ ಬರಹವನ್ನು 'ಜೀವಕಾರುಣ್ಯ ಪರಂಪರೆ ಮತ್ತು ವಿ.ಸೀ.' ಎಂಬ ಪುಸ್ತಕದಿಂದ (ಅಭಿನವ ಪ್ರಕಟಣೆ) ಆಯ್ದುಕೊಳ್ಳಲಾಗಿದೆ.



» ನರಹಳ್ಳಿ ಬಾಲಸುಬ್ರಹ್ಮಣ್ಯ

'ಪಂಪಾಯಾತ್ರೆ' ವಿ.ಸೀ ಅವರ ಮೊದಲ ಕೃತಿ. ಇದು ಮೊದಲು ಪ್ರಬುದ್ಧ ಕರ್ನಾಟಕದಲ್ಲಿ ನಾಲ್ಕು ಸಂಚಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಆ ಸಂಚಿಕೆಗಳಲ್ಲಿ ಮಾಸ್ತಿಯವರ 'ಸುಬ್ಬಣ್ಣ' ಸಹ ಪ್ರಕಟವಾದುದನ್ನು ವಿ. ಸೀ. ಅವರು ಅತಿಶಯ ಹಿಗ್ಗಿನಿಂದ, ಅಭಿಮಾನದಿಂದ ನೆನಪಿಸಿಕೊಂಡಿದ್ದಾರೆ. ಆ ಕಾಲದ ಪ್ರತಿಭಾವಂತ ಸೃಜನಶೀಲ ಮನಸ್ಸುಗಳೆರಡು ತಮ್ಮ ಪ್ರಕಾರಗಳನ್ನು ಆಯ್ದುಕೊಂಡು ಅಭಿವ್ಯಕ್ತಿಸಿದ ಕ್ರಮವಾಗಿಯೂ ಈ ಪ್ರಸಂಗ ಉಲ್ಲೇಖನೀಯ. 1927ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದ 'ಪಂಪಾಯಾತ್ರೆ' ವಿ. ಸೀ. ಅವರಿಗೆ ಜನಪ್ರಿಯತೆಯನ್ನೂ, ಸಾಹಿತ್ಯ ವಲಯದಲ್ಲಿ ಗೌರವಾದರಗಳನ್ನೂ ತಂದುಕೊಟ್ಟಿತು.

ಪಂಪಾಯಾತ್ರೆ 1925ರಲ್ಲಿ ವಿ.ಸೀ ಅವರು ತಮ್ಮ ಹಿರಿಯ ಲೇಖಕ ಮಿತ್ರರೊಂದಿಗೆ ಬೆಳಗಾವಿಯ ಸಾಹಿತ್ಯ ಸಮ್ಮೇಳನದಿಂದ ಹಿಂತಿರುಗಿ ಬರುವಾಗ ಹಂಪೆಯನ್ನು ಸಂದರ್ಶಿಸಿದಾಗಿನ ಒಂದು ದಿನದ ಅನುಭವ ಕಥನ. ವಿ. ಸೀ. ಅವರಿಗೆ ಆಗ 27ರ ಹರೆಯ. ಅವರ ಜೊತೆಗಿದ್ದವರೆಲ್ಲ ಅವರಿಗಿಂತ ಹಿರಿಯರು; ಕನ್ನಡ ಸಂಸ್ಕೃತಿಯಲ್ಲಿ ಆ ವೇಳೆಗೆ ಹೆಸರು ಮಾಡಿ ಪ್ರಸಿದ್ಧರಾಗಿದ್ದಂಥವರು. ಈ ಕಥನದಲ್ಲಿ ಬರುವ ಯಜಮಾನರು ಬೆಳ್ಳಾವೆ ವೆಂಕಟನಾರಣಪ್ಪನವರು; ರಾಯರೆಂದರೆ ಡಿ. ವಿ. ಗುಂಡಪ್ಪನವರು; ವೆಂಕಟೇಶಯ್ಯನವರು ಟಿ. ಎಸ್. ವೆಂಕಣ್ಣಯ್ಯನವರು; ಮೂರ್ತಿ ಎಂದರೆ ಎಂ. ಆರ್. ಶ್ರೀನಿವಾಸಮೂರ್ತಿಗಳು. ವಿ. ಸೀ. ಅವರ ಮಾತುಗಳಲ್ಲಿಯೇ ಹೇಳುವುದಾದರೆ ಈ ಒಬ್ಬೊಬ್ಬರೂ ಜೀವನದ ತತ್ತ್ವಸಾಧನೆಯಲ್ಲಿ, ಚಾರಿತ್ರ್ಯದಲ್ಲಿ ತಮ್ಮ ತಮ್ಮ ರೀತಿಯಲ್ಲಿ ಮೇಲ್ಮಟ್ಟವನ್ನು ಸಾಧಿಸಿದ್ದವರು. ಇಂಥವರು ಸಹಯಾತ್ರಿಕರಾಗಿರುವುದರಿಂದ ಸಹಜವಾಗಿಯೇ ಈ ಕಥನದ ವಸ್ತುಪ್ರಪಂಚ ಮಹತ್ತ್ವವನ್ನು ಪಡೆದುಕೊಂಡುಬಿಟ್ಟಿದೆ. ವಿ. ಸೀ. ಅವರಿಗೆ ಇವರೆಲ್ಲರ ಬಗ್ಗೆ ಅಪಾರವಾದ ಗೌರವವಿದ್ದುದರಿಂದ ಇಡೀ ಬರವಣಿಗೆಗೆ ಒಂದು ಬಗೆಯ ಕಾಂತಿ ತಾನಾಗಿಯೇ ಒದಗಿಬಿಟ್ಟಿದೆ.

ವಿ. ಸೀ. ಹೇಳುತ್ತಾರೆ: ಬೆಳಗಾವಿಯಿಂದ ಹೊರಟು ಪುನಃ ಬೆಂಗಳೂರಿಗೆ ಹಿಂತಿರುಗುವವರೆಗೂ ಇವರ ಸಾನ್ನಿಧ್ಯ, ಸಾಹಚರ್ಯ, ಪ್ರೀತಿ, ಮನೋವಿಲಾಸ, ಇವರಮಟ್ಟದಲ್ಲಿನ ಮಾತುಕತೆ, ಅಭಿಪ್ರಾಯ ವಿನಿಮಯ, ಅನುಭವಗಳ ಶೋಧನೆ ಹೇಗೆ ನಡೆಯುತ್ತಿದ್ದುದೆಂಬುದನ್ನು ನಾನು ಬಲ್ಲೆ. ಅದೊಂದು ಅಮೃತ ಸಂಚಯ.

ಜೊತೆಗೆ ಇವರು ಸಂದರ್ಶಿಸಿದ ಸ್ಥಳ ಇತಿಹಾಸ, ಪುರಾಣ ಪ್ರಸಿದ್ಧವಾದುದು. 'ಹಂಪೆಯ ಹಾಳು ಪ್ರದೇಶ ನಮ್ಮ ಗತವೈಭವಕ್ಕೆ, ಕಳೆದುಹೋದ ಒಂದು ಜೀವನ ಪದ್ಧತಿಗೆ, ಒಂದು ಭವ್ಯ ಸಂಕೇತ. ಆಗ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದಾಗಿದ್ದ ಈ ಸಾಮ್ರಾಜ್ಯ ಯಾವ ಯಾವ ಪಾಪ ಕೃತ್ಯಗಳಿಂದ ಹಾಳಾಗಿಹೋಯಿತು ಎಂಬ ವಾಸ್ತವ ಸಂಗತಿ ನಮಗಿನ್ನೂ ಗೊತ್ತಾಗಬೇಕಿದೆ. ಆದರೆ ಅದೇ ಕಾರಣಕ್ಕಾಗಿ ಇಂದಿಗೂ ಹಂಪೆ ನಮ್ಮಮಟ್ಟಿಗೆ ಒಂದು ಭವ್ಯ ಪ್ರತೀಕವಾಗಿ ಉಳಿದಿದೆ. ನಮ್ಮ ಮೆಚ್ಚುಗೆಗೆ ಪಾತ್ರವಾಗಿರುವುದು ಈ ಪ್ರತೀಕವೇ. ಒಂದು

ವಾಸ್ತವ ಸಂಗತಿ ಪ್ರತೀಕವಾದಾಗ ಅದು ಸ್ವತಂತ್ರವಾದ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ನಮಗೆ ವಿಜಯನಗರ ಸಾಮ್ರಾಜ್ಯ ಬಹಳ ದೂರದ, ನಮ್ಮದಾದರೂ ನಮ್ಮದಲ್ಲದ ಒಂದು ಅಸಾಧಾರಣವಾದ ಮಾನುಷಸಿದ್ಧಿಯಾಗಿದೆ. ನಮ್ಮ ನವೋದಯದ ಕಾಲದ ಲೇಖಕರನ್ನು ಆಕರ್ಷಿಸಿದ್ದ ಈ ಮಾನುಷಸಿದ್ಧಿ ವಿ. ಸೀ. ಮನಸ್ಸು ಈ ವಾತಾವರಣದಿಂದ ಆಕರ್ಷಿತವಾದುದು ಸಹಜವಾಗಿತ್ತು.' (ಕೀರ್ತಿನಾಥ ಕುರ್ತಕೋಟಿ, ವಿ. ಸೀ ಸಮಗ್ರ ಗದ್ಯ 1, ಲಲಿತ ಪ್ರಬಂಧ ಸಂಪುಟ) ಹೀಗಾಗಿ ಪಂಪಾಯಾತ್ರೆಗೆ ಸಹಯಾತ್ರಿಕರ ಮಹತ್ವದ ಜೊತೆಗೆ ಸ್ಥಳ ಮಹಾತ್ಮೆಯ ಐತಿಹಾಸಿಕ, ಪೌರಾಣಿಕ ಮಹತ್ವವೂ ಸೇರಿಕೊಳ್ಳುವುದರಿಂದ ವಿ. ಸೀ. ಅವರ ಬರವಣಿಗೆಗೆ ಗಾಂಭೀರ್ಯ ಹಾಗೂ ವಿಷಾದದ ಅಂಶಗಳು ಸಹಜವಾಗಿ ಮಿಳಿತಗೊಂಡಿವೆ.

ಹೀಗೆ ಪಂಪಾಯಾತ್ರೆಯ ವಸ್ತುಪ್ರಪಂಚವೇ ಕೃತಿಗೆ ಒಂದು ಮಹತ್ತ್ವವನ್ನು ತಂದುಕೊಟ್ಟಿದೆ. ಆದರೆ ಈ ಕಥನವು ನಮ್ಮ ಗಮನಸೆಳೆಯುವುದು, ಮೆಚ್ಚುಗೆ ಪಡೆಯುವುದು ವಸ್ತು ಪ್ರಪಂಚದ ಮಹತ್ತ್ವದ ಜೊತೆಗೆ ವಿ. ಸೀ. ಅವರ ಪ್ರತಿಭಾವಿಲಾಸ ಸೃಷ್ಟಿಸುವ ಸಮಕಾಲೀನ ಜಗತ್ತಿನಿಂದ; ಇಲ್ಲಿಯ ಸಾಮಾನ್ಯವೆನ್ನಬಹುದಾದ ವಿವರಗಳು ಪಡೆದುಕೊಳ್ಳುವ ಅಪೂರ್ವಶಕ್ತಿಯಿಂದ.

ನವೋದಯ ಕಾಲದ ಮೌಲ್ಯಗಳಲ್ಲೊಂದಾದ ಸಾಮಾನ್ಯ ಮನುಷ್ಯನನ್ನು ಕೇಂದ್ರಕ್ಕೆ ತರುವ ಪ್ರಯತ್ನ ಇಲ್ಲಿ ಸಹಜವೆಂಬಂತೆ ಆಕಾರ ಪಡೆದಿದೆ. ಪಂಪಾಯಾತ್ರೆಯಲ್ಲಿ ಹಿರಿಯರ ಪಾತ್ರಗಳ ಜೊತೆಗೆ ಸಾಮಾನ್ಯವ್ಯಕ್ತಿಯಾದ ಚೆನ್ನಯ್ಯ ಪ್ರಮುಖ ಪಾತ್ರವೆಂಬಂತೆ ಚಿತ್ರಿತವಾಗಿರುವುದನ್ನು ನಾವು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಇತಿಹಾಸ, ಪುರಾಣಗಳ ನಡುವೆ ಅತ್ಯಂತ ಜೀವಂತವಾಗಿ ಚಿತ್ರಿತವಾಗಿರುವ ಪಾತ್ರ ಚೆನ್ನಯ್ಯ. ಈತ ಅವರಿಗೆ ಅಲ್ಲಿ ಮಾರ್ಗದರ್ಶಿ, ಆಪ್ತಸ್ನೇಹಿತ; ಹಾಗೆ ನೋಡಿದರೆ ಈ ಕಥನದ ಪ್ರವಾಸಿಗರೆಲ್ಲ ಘನ ವಿದ್ವಾಂಸರು, ಇತಿಹಾಸ ಪುರಾಣಗಳು ಅವರಿಗೆ ಅಂಗೈನಲ್ಲಿ. ಆದರೆ ವರ್ತಮಾನದಲ್ಲಿ ಚೆನ್ನಯ್ಯ ಇವರ ಮಾರ್ಗದರ್ಶಿ; ಅವನು ದಾರಿಗಳನ್ನು ಬಲ್ಲವನು.

ಮಾರ್ಗದರ್ಶಿ ಚೆನ್ನಯ್ಯ

ಹಂಪೆ ಪ್ರವಾಸಿಗರಿಗೆ ಇತಿಹಾಸ, ಪುರಾಣ ಇವುಗಳ ಪುನರ್‌ಸೃಷ್ಟಿ, ಮಾನುಷಸಿದ್ಧಿಯ ಸಂಕೇತ. ಆದರೆ ಚೆನ್ನಯ್ಯನಿಗೆ ಅದು ವಾಸ್ತವ. ಹಂಪೆಯ ದರ್ಶನವನ್ನು ಮಾಡಿ, ಹಿಂತಿರುಗಿ ಗೂಡು ಸೇರುವಾಗಿನ ಈ ಪ್ರವಾಸಿ ಗುಂಪಿನ ಅನುಭವ ಕಥನ ಪಂಪಾಯಾತ್ರೆಯ ಹೃದಯ ಭಾಗ. ಅತ್ಯಂತ ಸಜೀವ ಚಿತ್ರಣ.

ವಸಾಹತೋತ್ತರ ಚಿಂತನೆಯ ಈ ಸಂದರ್ಭದಲ್ಲಿ ವಿ. ಸೀ. ಅವರು ಕಟ್ಟಿಕೊಡುವ ಈ ಚಿತ್ರ ಅದು ಧ್ವನಿಸುವ ಅರ್ಥಪರಂಪರೆ ಅಧ್ಯಯನಯೋಗ್ಯ. ಇಲ್ಲಿ ಬರುವ ಆಲೆಮನೆಯ ಚಿತ್ರ, ಚೆನ್ನಯ್ಯ ವಿಠಲಸ್ವಾಮಿಯ ಗುಡಿಯ ಬಾಗಿಲ ಜಗಲಿಯ ಮೇಲೆ ಹುಳಿಮಾವಿನ ಕಾಯಿ ತಿನ್ನುತ್ತ ಅದನ್ನು ಕಪಿಗಳ ಜೊತೆಗೆ ಹಂಚಿ ತಿನ್ನುವುದು, ಮಳೆಯ ಆರ್ಭಟದಲ್ಲಿ ಅವರು ಪಡುವ ಅವಸ್ಥೆ, ಕತ್ತಲಿನಲ್ಲಿ ಚೆನ್ನಯ್ಯ ಸೇದುತ್ತಿದ್ದ ಬೀಡಿಯ ಬೆಳಕೆ ಮಾರ್ಗತೋರಿಸುವುದು, ನಡೆನಡೆಯುತ್ತಾ ರಾಯರು 'ಈಗ ಎಲ್ಲಿದ್ದೇವಯ್ಯಾ ಚೆನ್ನಯ್ಯ?' ಎಂದಾಗ ಆತ ಆಗ 'ತೋರಿಸಿದೆನಲ್ಲಾ ಸ್ವಾಮಿ, ಸೀತಮ್ಮನೋರು ಒಡವೆ ಬಿಸಾಕಿದ ಸ್ಥಳ ಎಂದು, ಅಲ್ಲಿಗೆ ಬಂದಿದ್ದೇವೆ' ಎಂಬ ವಿವರಣೆ ಈ ಎಲ್ಲವೂ ಸಹಜವಾಗಿಯೇ ಸಂಕೇತದ ಶಕ್ತಿ ಪಡೆದುಕೊಂಡುಬಿಡುತ್ತವೆ.

ವಿ. ಸೀ. ಕೃತಿಯ ಆರಂಭದಲ್ಲೇ ಇಂತಹ ಆವರಣವೊಂದನ್ನು ಸೃಷ್ಟಿಸುವ ಮೂಲಕ 'ಪಂಪಾಯಾತ್ರೆ'ಯ ಸ್ವರೂಪವನ್ನು ನಿರ್ದೇಶಿಸುತ್ತಾರೆ. ಹಂಪೆಯ ದರ್ಶನಕ್ಕಾಗಿ ಬಂದ ಈ ಐದು ಜನ ಸ್ನೇಹಿತರು ರಾತ್ರಿ ಅಲ್ಲಿ ಕಳೆಯುವ ಚಿತ್ರ ಅತ್ಯಂತ ಚೇತೋಹಾರಿಯಾದಂಥದ್ದು. ಘನವ್ಯಕ್ತಿತ್ವದ ಈ ಮಹನೀಯರೆಲ್ಲ ಸಾಮಾನ್ಯರ ಹಾಗೆ ನಮಗೆ ಕಾಣಿಸುತ್ತಾರೆ. ವರ್ತಮಾನದ ಈ ವಿವರಣೆಗಳು ಇಡೀ ಕೃತಿಯ ಆಕೃತಿಯನ್ನು ರೂಪಿಸಿದೆ. ಇತಿಹಾಸ ಇಲ್ಲಿ ಗತವೈಭವ, ಪುರಾಣ ಒಂದು ರೋಚಕ ಕಥೆ ಇವು ವರ್ತಮಾನದಲ್ಲಿ ಮಳೆ, ಗಾಳಿ, ಕತ್ತಲೆಯಲ್ಲಿ ದಾರಿತೋರಲಾರವು. ಈಗ ಇಲ್ಲಿಯ ದಾರಿ ಬಲ್ಲವನು ದೇಸೀ ಸಂಸ್ಕೃತಿಯ ಪ್ರತಿನಿಧಿ ಚೆನ್ನಯ್ಯ. ದಾರಿ ಕಾಣಿಸುವ ಜ್ಯೋತಿ ಎಂದರೆ ಆತ ಸೇದುತ್ತಿದ್ದ ಬೀಡಿಯ ಬೆಳಕು. ಇಲ್ಲಿ ಬರುವ ಕನಸು, ಸಹಜವೆಂಬಂತೆ ಚಿತ್ರಿತವಾಗುವ ಕಾಫಿಯ ಪ್ರಸಂಗ ಇವೆಲ್ಲವೂ ಈ ದೃಷ್ಟಿಯಿಂದ ಧ್ವನಿಪೂರ್ಣ.

ಕಳೆದ ಶತಮಾನದ ಮೂವತ್ತರ ದಶಕದಲ್ಲಿ ಪ್ರಕಟವಾದ ವಿ. ಸೀ. ಅವರ ಮೊದಲ ಕೃತಿ 'ಪಂಪಾಯಾತ್ರೆ' ಒಂದು ರೀತಿಯಲ್ಲಿ ಅವರ ಒಟ್ಟೂ ಸಾಹಿತ್ಯದ ಸ್ವರೂಪವನ್ನು ರೂಪಿಸಿದಂತಿದೆ. ಪರಂಪರೆಯ ಬಗ್ಗೆ ಆಳವಾದ ತಿಳಿವಳಿಕೆ ಹಾಗೂ ಆಧುನಿಕ ಜಗತ್ತಿನ ವಿಸ್ತಾರವಾದ ಅರಿವಿನ ಸಮಕಾಲೀನ ಪ್ರಜ್ಞೆ ಈ ಎರಡು ಜಗತ್ತುಗಳ ನಡುವೆ ಅವರ ಬರವಣಿಗೆಯ ರಚನಾವಿನ್ಯಾಸ ರೂಪುಗೊಂಡಂತೆ ತೋರುತ್ತದೆ.

ಪುಸ್ತಕ ವಿಮಾನ

ಮಳೆಯಾಳದ ಮಹಿಳಾ ಸಾಹಿತಿಗಳ ಪರಿಚಯ ನೀಡುವ ಈ ಪುಸ್ತಕವು, ಜತೆಯಲ್ಲೇ ಮಹತ್ವದ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಸಾಹಿತ್ಯದಲ್ಲಿ ಸ್ತ್ರೀವಾದದ ವಿವಿಧ ಸ್ವರೂಪ ಮತ್ತು ಸಾಧ್ಯತೆಗಳ ಕುರಿತು ಆಸಕ್ತರಾದವರು ಗಂಭೀರ ಅಧ್ಯಯನಕ್ಕೆ ಕೈಗೆತ್ತಿಕೊಳ್ಳಬಹುದಾದ ಕೃತಿಯಿದು.

ಮಲೆಯಾಳ ಸಾಹಿತ್ಯದಲ್ಲಿ ಮಹಿಳಾ ಧ್ವನಿಗಳು

» ಬೆಳಗೋಡು ರಮೇಶ ಭಟ್

ಇಂಗ್ಲೀಷ್ ಪ್ರಾಧ್ಯಾಪಕಿ ಪಾರ್ವತಿ ಐತಾಳರು ಕನ್ನಡ ಭಾಷೆಯ ಸೃಜನಶೀಲ ಸಾಹಿತ್ಯಕ್ಕೆ ಗಣನೀಯ ಕೊಡುಗೆಯನ್ನು ಕೊಟ್ಟಿರುವವರಾದರೂ, ಮಲಯಾಳಂ ಮತ್ತು ಕನ್ನಡ ಭಾಷಾ ಸಾಹಿತ್ಯದ ನಡುವೆ ಅಧ್ಯಯನಾರ್ಹ ಸೇತುವೆಯಾಗಿ ನೀಡಿದ ಕೊಡುಗೆಯ ತೂಕ ಒಂದು ಹಿಡಿ ಹೆಚ್ಚೇ. ಅವರು ಮಲಯಾಳಂ ಸಾಹಿತ್ಯದ ವಿಭಿನ್ನ ಕಾಲಘಟ್ಟಗಳ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ಪರಿಚಯಿಸಿದ್ದು ಮಾತ್ರವಲ್ಲ, ಈ ಅವಧಿಯ ಅಲ್ಲಿನ ಚಿಂತನಕ್ರಮದ ಗತಿ ಮತ್ತು ನಿಯತಿಯನ್ನು ಅಕೇಡೆಮಿಕ್ ಶಿಸ್ತಿನಿಂದ ಗುರುತಿಸಿಕೊಟ್ಟಿದ್ದಾರೆ. ಗತಿ ಎಂದರೆ ಮಾರ್ಗ ಮಾತ್ರವಲ್ಲ, ಅವಸ್ಥೆಯೂ ಹೌದು. ನಿಯತಿಯೆಂದರೆ ನಿಯಮ ಮಾತ್ರವಲ್ಲ, ನೇಮವೂ ಹೌದು. ತನ್ಮೂಲಕ ಅನುವಾದವೆಂದರೆ ಭಾಷಾನುವಾದಕ್ಕೆ ಮಿಗಿಲಾದುದು ಎಂಬ ಅವರ ಶಿಸ್ತು ಕನ್ನಡದಲ್ಲಿ ನಡೆದ ಮತ್ತು ನಡೆಯುತ್ತಿರುವ ಅನುವಾದ ಸಾಹಿತ್ಯಕ್ಕೆ ಬಹುತೇಕ ಅಪರಿಚಿತವೆನ್ನಿಸುವಂತಹದು.

ಪಾರ್ವತಿ ಐತಾಳರು ಕನ್ನಡಕ್ಕೆ ತಂದುಕೊಟ್ಟ ಮಲಯಾಳಂ ಮಹಿಳಾಸಾಹಿತ್ಯದ ಆಯ್ಕೆಯಲ್ಲಿ ಈ ಶಿಸ್ತಿನ ಒಂದು ಮಹತ್ವದ ಮಜಲನ್ನು ಕುತೂಹಲದಿಂದಲೂ ಗೌರವದಿಂದಲೂ ಗಮನಿಸಬಹುದು. ಅವರ ಮಲಯಾಳಂ ಹತ್ತು ಕಥೆಗಾರ್ತಿಯರು, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು ಎಂಬ ಸಂಕಲನಗಳು, ಕಮಲಾದಾಸರ ನೀರ್ ಮಾದಳ ಹೂಬಿಟ್ಟ ಕಾಲ, ಸಾರಾ ಜೋಸೆಫರ ಆಲಾಹಳ ಹೆಣ್ಣುಮಕ್ಕಳು ಮತ್ತು ಗಮನಸೆಳೆವ ಅನುವಾದಿತ ಬಿಡಿಕಥೆಗಳು ಪ್ರತ್ಯೇಕವಾದ ವಿಶ್ಲೇಷಣೆಯನ್ನು ಅಪೇಕ್ಷಿಸುವ ಪ್ರಯತ್ನಗಳು. ಹೀಗೆ ಪರಿಚಯವಾಗುವ ಮಲಯಾಳಂ ಲೇಖಕಿಯರ ಬರಹಗಳಲ್ಲಿ ಬಹುತೇಕ ಕಿನಾರೆ ಮೀರಿ ಹರಿವ ಪ್ರವಾಹವು ಇದೇ ಲೇಖಕಿಯು ಕನ್ನಡಕ್ಕೆ ತಂದುಕೊಟ್ಟ ಶಂಕರ ಪಿಳ್ಳೆ, ವೆಟ್ಟೂರ್, ಎಂಟಿವಿ ನಾಯರ್, ಝಕಾರಿಯಾ, ಅರ್ಶಾದ್ ಬತೇರಿ ಮೊದಲಾದ ಮಲಯಾಳಂ ಪುರುಷ ಲೇಖಕರು ಪರಿಚಯಿಸಿದ ಹೆಣ್ಣು ಹಂಬಲಕ್ಕಿಂತ ಭಿನ್ನವಾಗಿರುವಂತಹದು.

ಪಾರ್ವತಿ ಐತಾಳರ ಸೃಜನಶೀಲ ಸಾಹಿತ್ಯದಲ್ಲಿ ಚಿತ್ರಿತವಾಗುವ ಸ್ತ್ರೀವಾದವು ಮೆಲುದನಿಯದ್ದು. ಅವರ ಸ್ತ್ರೀವಾದಿ ವಕಾಲತ್ತು ಭಯಂಕರ ಅನ್ನಿಸುವ ಪುರುಷ ವಿರೋಧಿಯೂ ಆಗಿಲ್ಲ. ಅವರ ಒಟ್ಟು ಸಾಹಿತ್ಯವು ತಹತಹಿಸುವುದು ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಗಟ್ಟಿನ ಸಮಾನತೆಯನ್ನು. ಹೀಗಾಗಿ ಅವರ ಮೂಲಕ ಕನ್ನಡದ ಓದುಗರಿಗೆ ಪರಿಚಯವಾಗುವ ಬೇರೆಯದೇ ಸ್ತರದ ಮಲಯಾಳಂ ಲೇಖಕಿಯರ ಸ್ತ್ರೀವಾದವು ಅವರ ಖಾಸಗೀ ಅಭಿಪ್ರಾಯಗಳಿಗಿಂತ ಭಿನ್ನವೂ ಆಗಿರಬಹುದು. ಅಲ್ಲಿನ ಸ್ತ್ರೀವಾದವು ಚಳವಳಿಗಳಿಂದ ಹುಟ್ಟಿದ್ದು ಎಂದು ಹೇಳುತ್ತಲೇ ಅವರು 'ನಮ್ಮಲ್ಲಿ ಕೆಲವು ಶಿವಶರಣೆಯರ ವಚನಗಳಲ್ಲಿ ಲಿಂಗತಾರತಮ್ಯದ ವಿರುದ್ಧ ಪ್ರತಿಭಟನೆಯ ಧ್ವನಿಯಿತ್ತೆಂದು ನಾವು ಹೇಳಿದರೂ ಅದು ಒಂದು ಹೋರಾಟವಾಗಿ ರೂಪುಗೊಂಡಿರಲಿಲ್ಲ ಮತ್ತು ಮುಂದುವರೆಯಲೂ ಇಲ್ಲ' ಎಂದು ನಿಸ್ಸಂಕೋಚವಾಗಿ ಒಪ್ಪಿಕೊಳ್ಳುತ್ತಾರೆ. 'ನಮ್ಮ ಸ್ತ್ರೀವಾದದ ದಾಖಲಾತಿಯಲ್ಲಿ ಅಕ್ಕ ಮಹಾದೇವಿಯ ವಚನಗಳಲ್ಲಿನ ಪ್ರತಿಭಟನೆಯ ಧ್ವನಿಯನ್ನು ನಾವು ಗುರುತಿಸತೊಡಗಿದ್ದು ಸ್ತ್ರೀವಾದವು ಒಂದು ಚಳುವಳಿಯಾಗಿ ಸಕ್ರಿಯವಾದ ನಂತರವೇ' ಎಂಬ ಪಾರ್ವತಿ ಐತಾಳರ ಹೇಳಿಕೆಯೂ ಮಹತ್ವದ್ದೇ. ಈ ಹಿನ್ನೆಲೆಯಲ್ಲಿ 'ಮಲೆಯಾಳ ಸಾಹಿತ್ಯದಲ್ಲಿ ಮಹಿಳಾಧ್ವನಿಗಳು' ಎಂಬ ಕೃತಿಯ ಮೂಲಕ ಇವರು ತೆರೆದಿಡುವ ಗವಾಕ್ಷಿಯು ಮಲೆಯಾಳಂ ಮಹಿಳಾಸಾಹಿತ್ಯಕ್ಕೆ ಮಾತ್ರವಲ್ಲ, ಅಲ್ಲಿನ ಮಹಿಳಾ ಹೋರಾಟದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಮಹಿಳಾ ಹೋರಾಟದ ಇತಿಹಾಸಕ್ಕೂ ಬೆಳಕಿಂಡಿಯಾಗುತ್ತದೆ.

- ಮಲೆಯಾಳ ಸಾಹಿತ್ಯದಲ್ಲಿ ಮಹಿಳಾ ಧ್ವನಿಗಳು
- ಲೇ: ಪಾರ್ವತಿ ಜಿ ಐತಾಳ್
- ಪ್ರ: ಆದಿ ಪ್ರಕಾಶನ, ಮೈಸೂರು
- ಪುಟಗಳು:144 ಬೆಲೆ: ರು.170/-

41 ಲೇಖಕಿಯರ ಪರಿಚಯ

ಪಾರ್ವತಿ ಐತಾಳರು ಈ ಹೊತ್ತಿಗೆಯಲ್ಲಿ ಮಹಿಳಾ ಹೋರಾಟದ ಹಾದಿಯಲ್ಲಿ ಒಳಗೊಂಡ ನಲವತ್ತೊಂದು ಮಲಯಾಳಂ ಮಹಿಳಾ ಸಾಹಿತಿಗಳ ಪರಿಚಯವನ್ನೂ ಈ ನಿಟ್ಟಿನಲ್ಲಿ ಅವರ ಕೊಡುಗೆಯ ಮಹತ್ವವನ್ನೂ ಗುರುತಿಸಲು ನೆರವಾಗುತ್ತಾರೆ. ಕಳೆದ ಶತಮಾನದ ಮೊದಲ ತಲೆಮಾರಿನ ಮೇರಿ ಜಾನ್ ತೋಟ್ಟಂ (1899-1985) ರವರ ಕಾಲಾವಧಿಯಿಂದ ತೊಡಗಿ ಈ ತಲೆಮಾರಿನ ಸೂರ್ಯಾಗೋಪಿ (1987) ಯವರ ತನಕ ವಿವಿಧ ಕಾಲಘಟ್ಟಗಳಲ್ಲಿ ಮಲಯಾಳಂ ಸಾಹಿತ್ಯದಲ್ಲಿ ಪ್ರಸ್ತುತವಾದ ಮಾನವೀಯ ಕಾಳಜಿ ಮತ್ತು ಸ್ತ್ರೀಪರ ಚಿಂತನೆಯ ಬರಹಗಳನ್ನು ಅವರಿಲ್ಲಿ ಪ್ರಸ್ತಾಪಿಸುತ್ತಾರೆ.

ಈ ಸುದೀರ್ಘ ಕಾಲಾವಧಿಯಲ್ಲಿ ಮಲೆಯಾಳಂ ಮಹಿಳಾ ಸಾಹಿತ್ಯವು ಮಾಗಿದ ಬಗೆಯನ್ನು ಅವರು ಗುರುತಿಸುವ ಕ್ರಮವೂ ಗಮನಾರ್ಹವಾದುದು. ಉದಾಹರಣೆಗೆ ಶಾಹಿನಾರವರ ಬರವಣಿಗೆಯ ಕುರಿತು ಹೇಳುವಾಗ 'ಹೆಣ್ಣುಮಕ್ಕಳು ಬರೆಯುವಾಗ ಹೆಚ್ಚಾಗಿ ಕಂಡುಬರುವ ಕ್ಷಮಾಯಾಚನೆಯ ದನಿ ಇವರ ನಿರೂಪಣೆಯಲ್ಲಿಲ್ಲ' ಎನ್ನುವುದು; ಸಿತಾರಾರವರ ಅಗ್ನಿ ಕತೆಯ ಬಗ್ಗೆ 'ಕಥಾನಾಯಕಿ ಪ್ರಿಯಾ ತನ್ನ ಅಳು-ಕಣ್ಣೀರುಗಳನ್ನು ಒಳಗೆ ಅದಿಮಿಟ್ಟುಕೊಂಡ ಹುಲಿಯು ತನ್ನ ಉಗುರುಗಳನ್ನು ಸಂದರ್ಭ ಬಂದಾಗ ಹೊರಹಾಕುವಂತೆ ಹರಿತವಾದ ಮಾತುಗಳಿಂದ ಎದುರಾಳಿಗಳನ್ನು ಪರಚಿ ಗಾಯಮಾಡುತ್ತಾಳೆ' ಎನ್ನುವುದು, 'ಇದು ಹೆಚ್ಚಾಯಿತು ಎನ್ನುವ ಪುರುಷರಿರಬಹುದು, ಪ್ರತಿಕ್ರಿಯಿಸಲು ಭಯಪಡುವ ಮಹಿಳೆಯರೂ ಇರಬಹುದು. ಆದರೆ ಅದ್ಭುತವೆನ್ನಿಸುವಂಥ ಒಂದು ನಗಣ್ಯ ಭಾವವನ್ನೂ ಅಚ್ಚರಿ ಹುಟ್ಟಿಸುವ ದಿಟ್ಟತನವನ್ನೂ ಸಿತಾರಾ ಕಥೆಗಳ ನಾಯಕಿಯರು ಪ್ರಕಟಿಸುವುದು ಕಟುಸತ್ಯ' ಎಂದು ವಿಶ್ಲೇಷಿಸುವುದು; ವ್ಯವಸ್ಥೆಯಲ್ಲಿ ನೆಲೆನಿಂತಿರುವ ಹಲವನ್ನು ಬದಲಾಯಿಸಿಬಿಡುವ, ಒಂದು ಸಾಮಾಜಿಕ ಕ್ರಾಂತಿಯ ಮೂಲಕ ಸ್ತ್ರೀಯರಿಗೆ ಸಮಾನತೆಯನ್ನು ದೊರಕಿಸಿಕೊಡುವ ಹೊಸದೊಂದು ಲೋಕವನ್ನು ತಬ್ಬಿಕೊಳ್ಳಲು ಆಸೆಪಡುವ ಯುವಸಾಹಿತಿ ಎಂದು ಸಿ ಎಸ್ ಚಂದ್ರಿಕಾರನ್ನು ಪರಿಚಯಿಸುವುದು, ಪುರುಷ ಕೇಂದ್ರಿತ ವ್ಯವಸ್ಥೆಯೊಂದಿಗೆ ನನ್ನ ಕವಿತೆಗಳು ರಾಜಿ ಮಾಡಿಕೊಳ್ಳುವುದಿಲ್ಲ. ನನ್ನದು ಸ್ತ್ರೀಪ್ರಜ್ಞೆಯ ಕತ್ತಲ ಪ್ರವಾಹದೊಳಗಿಂದ ಒಂದು ಸೌಮ್ಯ ಪ್ರತಿಭಟನೆ' ಎನ್ನುವ ವಿ ಎಂ. ಗಿರಿಜಾರ ಮಾತುಗಳನ್ನು ಕೋಟ್ ಮಾಡುತ್ತ ಪುರುಷ ವಾಕ್ಯಗಳಲ್ಲಿ ಕೇವಲ ದೇಹಮಾತ್ರವಾಗಿ ಪರಿಗಣಿಸಲ್ಪಡುವ ಸ್ತ್ರೀಅಸ್ಮಿತೆಯನ್ನು ಬಿಡುಗಡೆಗೊಳಿಸಲೆತ್ನಿಸುವ ಅವರ ಕವಿತೆಗಳನ್ನು ವಿಶ್ಲೇಷಿಸುವುದೇ ಮೊದಲಾದ ಬರವಣಿಗೆಯು ಪಾರ್ವತಿ ಐತಾಳರ ವಿಮರ್ಶೆಯ ವಿಚಕ್ಷಣಮತಿಗೆ ಅಧ್ಯಯನಾರ್ಹ ಸಾಕ್ಷಿಗಳಂತಿವೆ.

ಅವರು ಈ ಕೃತಿಯ ಉಪಸಂಹಾರದಲ್ಲಿ ದೇಶದ ಇತರ ಭಾಷೆಗಳಲ್ಲಿ ಬಂದ ಮಹಿಳಾ ಸಾಹಿತ್ಯಕ್ಕಿಂತ ಮಲೆಯಾಳದ ಮಹಿಳಾ ಸಾಹಿತಿಗಳ ಬರವಣಿಗೆ ಭಿನ್ನವಾಗಿರುವುದನ್ನು ಗುರುತಿಸುತ್ತಾ, 'ಇದಕ್ಕೆ ರೂಢಿಗತ ಪರಂಪರೆಗಳು ಮತ್ತು ಸಾಸ್ಕೃತಿಕ ಭಿನ್ನತೆಗಳಿಂದಾಗಿ ಇರುವ ವ್ಯತ್ಯಾಸಗಳಲ್ಲದೆ, ದೇಶದ ಅತ್ಯಂತ ಹೆಚ್ಚು ಸಾಕ್ಷರತೆಯನ್ನು ಹೊಂದಿರುವ ರಾಜ್ಯವಾಗಿರುವುದರಿಂದ ಕೇರಳದ ಲೇಖಕಿಯರು ಇಂಗ್ಲೀಷ್ ಮತ್ತು ಪಾಶ್ಚಾತ್ಯ ಸಾಹಿತ್ಯವನ್ನು ಬಹಳ ಹಿಂದೆಯೇ ಓದಿ ಪ್ರಭಾವಿತರಾಗಿರುವುದು ಕಾರಣವಾಗಿರಬಹುದು' ಎನ್ನುತ್ತಾರೆ. ವಿವಿಧ ಭಾಷೆಗಳ ಮಹಿಳಾ ಸಾಹಿತ್ಯದ ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲ ಪಾರ್ವತಿ ಐತಾಳರು ಈ ಭಾಗದಲ್ಲಿಯೇ ಸ್ತ್ರೀವಾದ, ಮಾರ್ಕ್ಸ್ ವಾದ, ಸರ್ರಿಯಲಿಸಮ್, ಮ್ಯಾಜಿಕ್ ರಿಯಲಿಸಮ್, ವಸಾಹತುವಾದ, ಸಲಿಂಗಕಾಮ ಮೊದಲಾದ ಸಾಹಿತ್ಯ ಸಿದ್ಧಾಂತಗಳು ಇತರ ಭಾಷೆಯ ಸಾಹಿತ್ಯಗಳಿಗೆ ಹೋಲಿಸಿದರೆ ಮಲೆಯಾಳ ಮಹಿಳಾ ಸಾಹಿತ್ಯದಲ್ಲಿ ಬಹಳ ಹಿಂದೆಯೇ ಕಾಣಿಸಿಕೊಂಡಿದ್ದವು ಎನ್ನುವುದನ್ನೂ ಗುರುತಿಸುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ, ಸಾಹಿತ್ಯದಲ್ಲಿ ಸ್ತ್ರೀವಾದದ ವಿವಿಧ ಸ್ವರೂಪ ಮತ್ತು ಸಾಧ್ಯತೆಗಳ ಕುರಿತು ಆಸಕ್ತರಾದವರು ಗಂಭೀರ ಅಧ್ಯಯನಕ್ಕೆ ಕೈಗೆತ್ತಿಕೊಳ್ಳಬಹುದಾದ ಕೃತಿಯಿದು ಎಂದು ನಿಸ್ಸಂಶಯವಾಗಿ ಪ್ರಶಂಸಿಸಬಹುದಾದ ಪ್ರಯತ್ನವಿದು.

ರೂಪಕಗಳ ಬಳಕೆ

ಕಥೆಗಾರರಾಗಿ ಹೆಸರು ಮಾಡಿರುವ ಟಿ.ಎಂ.ರಮೇಶ ಅವರ ಎರಡನೆಯ ಕವನ ಸಂಕಲನ 'ಮತ್ತೆ ಬರಲಿ ಅಮೃತ ಘಳಿಗೆ' ಹಲವು ಕಾರಣಗಳಿಂದಾಗಿ ಗಮನ ಸೆಳೆಯುವಂತಿದೆ. ಇಲ್ಲಿರುವ 50 ಕವನಗಳು ವಿಶಿಷ್ಟ ಎನಿಸಿವೆ. ರಮೇಶ ಅವರ ಕಾವ್ಯಾನುಸಂಧಾನವನ್ನು ಮುನ್ನುಡಿಯಲ್ಲಿ ವಿವರವಾಗಿ ಟಿ.ಎಂ.ಜಗದೀಶ್ ಅವರು ಚರ್ಚಿಸಿದ್ದಾರೆ. ''ರಮೇಶರ ಬಹುಪಾಲು ಕವನಗಳು ದುರಂತ ಪ್ರಜ್ಞೆಯ ನೆಲೆಯಲ್ಲಿ ಸಂಚರಿಸುತ್ತಿದ್ದರೂ ಕಟು ವಾಸ್ತವದ, ದುರ್ಭರ ಬದುಕುಗಳ ನಗ್ನ ಚಿತ್ರಣವನ್ನು ಸಮರ್ಥ ಪ್ರತಿಮೆಗಳ ಮೂಲಕ ಕಟ್ಟಿಕೊಡುತ್ತವೆ. ರೂಪಕ, ಅಲಂಕಾರಗಳ ಮೂಲಕ ಮನುಷ್ಯನ ಮತ್ತು ದೈನಂದಿನ ಜಗತ್ತಿನ ಸಮನ್ವಯತೆಯನ್ನು ಸಾಧಿಸುತ್ತವೆ. ತಮ್ಮ ಹಲವು ಅಮೂಲ್ಯ ಅನುಭವಗಳನ್ನು ತೀವ್ರ ಸಂವೇದನೆಗಳ ಮೂಲಕ ಕಾವ್ಯಬಂಧದಲ್ಲಿ ಹಿಡಿದಿಡುವ ಸತ್ಯ ಪ್ರಯತ್ನಗಳನ್ನು ಈ ಸಂಕಲನದಲ್ಲಿ ರಮೇಶ್ ಮಾಡಿದ್ದಾರೆ. ಇಡೀ ಕವನ ಸಂಕಲನದ ಮಜಬೂತು ಆಕರ್ಷಣೆ ಎಂದರೆ ಅತ್ಯಂತ ಸಮತೋಲಿತವಾಗಿ ಓದುಗನನ್ನು ತಟ್ಟುವ ಸುಲಭ ರೂಪಕಗಳ ಬಳಕೆ. ಇದರಿಂದಾಗಿ ಶ್ರೀಸಾಮಾನ್ಯನಿಗೆ ಸಾಧಾರಣವಾಗಿ ಥುತ್ತೆಂದು ಕಾಣದಿರುವ ಕಟುಸತ್ಯಗಳ ಅನಾವರಣ ಕವನಗಳಲ್ಲೆಲ್ಲ ಹರಿದಾಡುತ್ತಿವೆ. ಇದೇ ಈ ಸಂಕಲನದ ಸೌಂದರ್ಯ. ಇಲ್ಲಿನ ಕವನಗಳಲ್ಲಿ ಮಾನವೀಯ ಸಂಬಂಧದೊಳಗಿರುವ ಸವಿಯು ಗೋಚರವಾಗುವಂತೆ ಮಾಗಿದ ಮುಖವಿರುವ, ಚಿಂತನೆಗೆ ಅವಕಾಶವಿರುವ ಅಂತರಂಗ ದರ್ಶನವೂ ಆಗುತ್ತದೆ. ಸಂಕಲನದಲ್ಲಿ ಸಮರ್ಥವಾಗಿ ಶೋಧ, ಹುಡುಕಾಟ ಇದೆ. ಜೊತೆಗೆ ಕಾವ್ಯಪ್ರಭೆಯ ಶೋಭೆ ಇದೆ. ಪೂರ್ಣತೆಯ ಕಡೆಗೆ ತುಡಿವ ತುಡಿತ ಇದೆ. ಕೊಂಡು ಕಾಪಿಟ್ಟು ಆಗಾಗ ಓದಬೇಕೆನ್ನಿಸುವ ಆಪ್ತ ಹೊತ್ತಗೆ 'ಮತ್ತೆ ಬರಲಿ ಅಮೃತ ಘಳಿಗೆ''. (ಬೆನ್ನುಡಿಯಲ್ಲಿ ಟಿ.ಎಂ.ಜಗದೀಶ್).



- ಮತ್ತೆ ಬರಲಿ ಅಮೃತ ಘಳಿಗೆ
- ಲೇ: ಟಿ.ಎಂ.ರಮೇಶ್
- ಪ್ರ: ಅಕ್ಷಯ ಪ್ರಕಾಶನ ಬೆಂಗಳೂರು
- 9632587426
- ಬೆಲೆ ರು.100/-

ಕವಯಿತ್ರಿ ಬರೆದ ಕಥೆಗಳು

» ಶ್ರೀಧರ ಬಳಗಾರ

ದೀಪಾರವರ ಕತೆಗಳು ಎರಡು ಮುಖ್ಯ ಕಾರಣಗಳಿಗಾಗಿ ಗಮನ ಸೆಳೆಯುತ್ತವೆ. ವಲಸೆ, ಸ್ಥಳಾಂತರ, ನಿರಾಶ್ರಿತರ ಅತಂತ್ರ ಸ್ಥಿತಿ, ದಿವಾಳಿತನ, ಆಸರೆಯ ನೆಲೆಯನ್ನು ಕಳೆದುಕೊಂಡವರನ್ನೊಳಗೊಂಡ ಚರಿತ್ರೆಯ ಒತ್ತಡಗಳಿಂದ ರೂಪುಗೊಳ್ಳುತ್ತಿರುವ ಸಾಮಾಜಿಕ ರೂಪಾಂತರ ಪ್ರಕ್ರಿಯೆ ಒಂದಾದರೆ, ರೂಪಾಂತರ ಪ್ರಕ್ರಿಯೆಯ ಒಡಲೊಳಗೆ ದೈನಿಕ ದುಡಿಮೆಯ ದೈವಿಕ ನೂಲುಗಳಿಂದ ಬದುಕನ್ನು ನೇಯುತ್ತಿರುವವರ ಕನಸು ವಾಸ್ತವದಲ್ಲಿ ನಿಜವಾಗದಿದ್ದರೂ ಒಳ್ಳೆಯತನವನ್ನು ಬಿಡದಿರದ ಸತ್ಯ ಇನ್ನೊಂದು. ಮನುಷ್ಯ ಸಹಜ ಆಸೆ, ಅಸೂಯೆ, ಸಣ್ಣತನ, ಅಸಹನೆ ಮತ್ತು ಸ್ವಾಭಿಮಾನದ ಹಟದ ದುರ್ಬಲ ಕ್ಷಣದ ತಲ್ಲಣಗಳ ತುದಿಯಲ್ಲಿ ಪಾತ್ರಗಳು ಅಸ್ತಿತ್ವಕ್ಕೆ ಹೋರಾಡುವವರ ಮನುಷ್ಯತ್ವದ ಮಾಂತ್ರಿಕ ಸ್ಪರ್ಶಕ್ಕೆ ತೆರೆದುಕೊಂಡು, ಬಿಡುಗಡೆಗೊಳ್ಳುವ ಅಪೂರ್ವ ಮುಖಾಮುಖಿ ಜರುಗುವುದು ಕಥನದ ವಿಶೇಷವಾಗಿದೆ.

ಕೂಳಿಗಾಗಿ ಸಮುದ್ರದ ಬಿಸಿಲು ಗಾಳಿಗೆ ಬೆವರಿ ಬೇಯುತ್ತಲೇ ಇರುವ ಎಲ್ಲಿಲ್ಲೂ ಕನ್ನಡ ಶಾಲೆಯ ಅಕ್ಕೋರ ನೆರಳುಗಳೇ ಅಲೆದಾಡುವ, ಒಲೆಯ ಮಡಕೆ ಗಂಜಿ ಕಂಪಿನ, ಮಣ್ಣು ಒಳ ಸಾರಿಸಿದ ಸಗಣಿ ವಾಸನೆಯ, ಮೀನು ಪಳದಿ ಪರಿಮಳದ, ಕೋಳಿ ಪಿಟ್ಟಿಯ, ನೆನಪುಕ್ಕಿಸುವ ಸೊಕ್ಕಿನ ಮಳೆಯ, ಅಂಗಡಿಯ ಕಂದೀಲು ಚೆಲ್ಲಿದ ಮೌನ ಮುಸ್ಸಂಜೆಯ ಕರಾವಳಿಯ ಪ್ರಾದೇಶಿಕ ವಿವರಗಳಿಂದ ಕಥೆಗಾರ್ತಿ ಕಟ್ಟಿದ ಪರಿಸರ ಜೀವಂತವಾಗಿದೆ.

ಉತ್ತರ ಕನ್ನಡದ ವಿಶಿಷ್ಟ ಉಪಸಮುದಾಯದವರ ಮಾತಿನ ಛಂದಸ್ಸು, ನುಡಿಗಟ್ಟು, ಸ್ವರ ಒತ್ತಿನಲ್ಲಿ ಜಿನುಗುವ ಕಥಾಂಶಗಳನ್ನು ಮನುಷ್ಯರಾಗಿ ಉಳಿಯಲು ಅಗತ್ಯವಿರುವ ಸಂಜೀವಿನಿಯಂತೆ ಬಳಸಿಕೊಳ್ಳುವುದರಲ್ಲಿ ದೀಪಾ ಯಶಸ್ವಿಯಾಗಿದ್ದಾರೆ. ವರ್ತಮಾನದಲ್ಲಿ ನೆಮ್ಮದಿಯ ತಾಣವನ್ನು ಕಳೆದುಕೊಂಡ ದುಃಖಿತ ಮನುಷ್ಯರ ಪುನರ್ವಸತಿಗಳನ್ನಾಗಿ ಇಲ್ಲಿನ ಕತೆಗಳನ್ನು ಓದುವಂತೆ ಒತ್ತಾಯಿಸುವ ಪರೋಕ್ಷ ಸೂಚನೆ ದೀಪಾರವರ ಪ್ರಯೋಗಶೀಲತೆಯ ಬಗ್ಗೆ ಕುತೂಹಲವನ್ನುಂಟುಮಾಡಿದೆ. (ಪುಸ್ತಕದ ಬೆನ್ನುಡಿಯಿಂದ)



- ಸರಹದ್ದು
- ಲೇ: ದೀಪಾ ಹಿರೇಗುತ್ತಿ
- ಪ್ರ: ಅಂಕಿತ ಪುಸ್ತಕ
- ಬೆಲೆ ರು.150/-

ವರ್ಣಚಿತ್ರಗಳೊಂದಿಗೆ ಮಕ್ಕಳ ಕಥೆ

ಮಕ್ಕಳಿಗೆ ಕಥೆ ಹೇಳಿದರೆ, ಅವರ ಮನ ವಿಕಸನವಾಗುತ್ತದೆ ಎಂಬುದು ಸ್ಪಷ್ಟ ಮತ್ತು ಇದಕ್ಕೆ ವೈಜ್ಞಾನಿಕ ಆಧಾರಗಳೂ ಇವೆ. ಇದೀಗ ಕನ್ನಡಕ್ಕೆ ಅನುವಾದವಾಗಿರುವ 'ಅಮ್ಮ ಮತ್ತು ನಾನು' ಮಕ್ಕಳಿಗೆ ಓದಲು ಸೂಕ್ತವಾಗಿರುವ ಪುಸ್ತಕ; ಜತೆಗೆ, ಹಿರಿಯರು ಇದನ್ನು ಮಕ್ಕಳಿಗೆ ಓದಿ ಹೇಳಲೂ ಬಹುದು. ಅದಕ್ಕೆ ಪೂರಕವಾದ, ದೊಡ್ಡ ಗಾತ್ರದ ಚಿತ್ರಗಳು ಈ ಪುಸ್ತಕದ ತುಂಬಾ ಹರಡಿವೆ. ಪುಟ ಪುಟಗಳಲ್ಲೂ ಇರುವ ಅರ್ಥಪೂರ್ಣ ಚಿತ್ರಗಳು, ಇಲ್ಲಿನ ಕಥೆಗೆ ಬಹು ಆಯಾಮವನ್ನು ಒದಗಿಸಿಕೊಡುತ್ತವೆ. ಸಂಕೇತ್ ಪೇಟ್ಕರ್ ಅವರ ಚಿತ್ರಗಳೇ ಕಥೆಯ ಸಾರವನ್ನು ಬಿಂಬಿಸುವ ರೀತಿಯಲ್ಲಿವೆ. ದೊಡ್ಡ ಗಾತ್ರದ ವರ್ಣಚಿತ್ರಗಳು, ಆರ್ಟ್ ಪೇಪರ್‌ನಲ್ಲಿ ಮುದ್ರಣ ಮತ್ತು ಪುಸ್ತಕದ ದೊಡ್ಡ ಗಾತ್ರವು, ಮಕ್ಕಳ ಓದಿಗೆ ಪೂರಕ ಮತ್ತು ಪ್ರೋತ್ಸಾಹಕ.

- ಅಮ್ಮ ಮತ್ತು ನಾನು • ಕಥೆ: ಮಮತ ನೈನಿ
- ಕನ್ನಡಕ್ಕೆ : ಕುಸುಮ ಪಟೇಲ್ • ಚಿತ್ರ : ಸಂಕೇತ್ ಪೇಟ್ಕರ್ • ಪ್ರ: ಬಹುರೂಪಿ ಬೆಂಗಳೂರು
- ಪುಟಗಳು 36. ಬೆಲೆ ರು.130/-

ದುರ್ಗಮ ತಾಣಗಳಲ್ಲಿ ಚಾರಣ

ಹಿಮಾಲಯವೂ ಸೇರಿದಂತೆ, ನಮ್ಮ ದೇಶದ ವಿವಿಧ ಭಾಗಗಳಲ್ಲಿರುವ ದುರ್ಗಮ ತಾಣಗಳಲ್ಲಿ ಚಾರಣ ಮಾಡಿದ ಅನುಭವಗಳು ಈ ಪುಸ್ತಕದಲ್ಲಿ ಅಡಕಗೊಂಡಿವೆ.

» ಶ. ಹಾ.

ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲಿ, ಹಿಮಾಲಯದ ದುರ್ಗಮ ಪ್ರದೇಶಗಳಲ್ಲಿ ಚಾರಣ ಮಾಡಿರುವ ಅನುಭವಗಳನ್ನು ಸೊಗಸಾದ ಗದ್ಯದಲ್ಲಿ ಹೇಳಿರುವ ಈ ಪ್ರವಾಸಕಥನವು, ವಿಶಿಷ್ಟ ಓದಿನ ಅನುಭವವನ್ನು ನೀಡುತ್ತದೆ. ಲೇಖಕ ಶ್ರೀಧರ ಎಸ್. ಅವರು ಕಳೆದ ಎರಡು ದಶಕಗಳ ಅವಧಿಯಲ್ಲಿ, ಸಾಕಷ್ಟು ಚಾರಣ ಮಾಡಿದ್ದು, ಅವರ ಅನುಭವವನ್ನು ಅಕ್ಷರಗಳಲ್ಲಿ ಹಿಡಿದಿಟ್ಟಿರುವ ಪರಿ ಗಮನ ಸೆಳೆಯುತ್ತದೆ. ಹಿಮಾಲಯ ಪರ್ವತ ಶ್ರೇಣಿಯ ಅದಾವುದೋ ಮೂಲೆಯಲ್ಲಿರುವ ಹರ್ ಕಿ ದೂನ್ ಅಥವಾ ಮಲಾನಾ ದಂತಹ ಜಾಗಗಳಿಗೆ ಹಲವಾರು ಕಿ.ಮೀ. ನಡೆದು, ಅಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಗಮನಿಸುವುದರ ಜತೆಯಲ್ಲೇ, ಅಂತಹ ಸ್ಥಳಗಳ ವೈಶಿಷ್ಟ್ಯವನ್ನು ಗುರುತಿಸಿ, ಅವುಗಳ ಕುರಿತು ಉತ್ತಮವಾಗಿ ಬರೆಯುವುದು ಅವರ ಹವ್ಯಾಸ. ಅವರ ಲೇಖನಗಳ ಅನನ್ಯತೆಯನ್ನು ಗುರುತಿಸಿರುವ ನಮ್ಮ ನಾಡಿನ ವಿವಿಧ ಪತ್ರಿಕೆಗಳು, ಅವುಗಳನ್ನು ಆದ್ಯತೆಯ ಮೇರೆಗೆ ಪ್ರಕಟಿಸುತ್ತಲೇ ಬಂದಿವೆ. ಅಪರೂಪದಲ್ಲಿ ಅಪರೂಪ ಎನಿಸುವ ಜಾಗಗಳನ್ನು ಹುಡುಕುವುದೂ ಒಂದು ಕಲೆ; ಅದು ಶ್ರೀಧರ ಎಸ್.ಸಿದ್ದಾಪುರ ಅವರಿಗೆ ಕರಗತವಾಗಿದೆ. ಅಂತಹ ಅಪರೂಪದ ಸುಂದರ ತಾಣಗಳ ಭೇಟಿಯ ಅನುಭವವನ್ನು ಅಷ್ಟೇ ಸೊಗಸಾಗಿ ಬರಹರೂಪಕ್ಕೆ ತರುವ ಇವರ ಬರವಣಿಗೆಯ ಕೌಶಲ ಅನನ್ಯ. ಜತೆಯಲ್ಲಿ, ಅವರು ಉತ್ತಮ ಛಾಯಾಗ್ರಾಹಕರೂ ಹೌದು. ಅವರೇ ಕ್ಲಿಕ್ಕಿಸಿರುವ ಹಲವು ಛಾಯಾಚಿತ್ರಗಳು ಈ ಪುಸ್ತಕಕ್ಕೆ ಇನ್ನಷ್ಟು ಕಸುವನ್ನು ತುಂಬಿವೆ.

ಹಿಮಾಲಯದಲ್ಲಿ ಮಡಿಲಲ್ಲಿರುವ ವಿಶಿಷ್ಟ ಜಾಗಗಳನ್ನು ಹುಡುಕಿಕೊಂಡು ಇವರು, ಅತಿ ದುರ್ಗಮ ಎನಿಸುವ ದಾರಿಗಳಲ್ಲಿ ಹೆಜ್ಜೆ ಹಾಕಿದ್ದಾರೆ; ಜತೆಜತೆಗೇ ನಮ್ಮ ದೇಶದ ಇತರ ರಾಜ್ಯಗಳಲ್ಲೂ ಸುತ್ತಾಡಿದ್ದಾರೆ. ಕರ್ನಾಟಕದ ವಿವಿಧ ಸ್ಥಳಗಳ ಕುರಿತೂ ಈ ಪುಸ್ತಕದಲ್ಲಿ ಬರಹಗಳಿವೆ. ಸಾವನದುರ್ಗ, ಶಿವಗಂಗೆ, ಕುದುರೆ ಮುಖ, ಕೇರಳ, ಮೇಘಾಲಯ, ಸಿಕ್ಕಿಂ, ಭೂತಾನ್, ಹಿಮಾಚಲ ಪ್ರದೇಶ - ಈ ರೀತಿ ಸುತ್ತಾಡಿದ ಶ್ರೀಧರ ಅವರ ಗುರಿ ಒಂದೇ - ಅತಿ ಅಪರೂಪ ಎನಿಸುವ ತಾಣಗಳ ಶೋಧನೆ. ಚಾರಣಿಗರಾಗಿರುವ ಸಮಯದಲ್ಲೇ ಅವರು ಸ್ಥಳೀಯ ಸಂಸ್ಕೃತಿ ಮತ್ತು ಪದ್ಧತಿಗಳನ್ನು ಪರಿಶೋಧಿಸುವ ಕೆಲಸವನ್ನೂ ಮಾಡಿದ್ದಾರೆ. ಒಂದು ಉದಾಹರಣೆ ನೋಡುವುದಾದರೆ, ಹಿಮಾಲಯದ ಹರ್ ಕಿ ದೂನ್ ಚಾರಣ ನಡೆಸುವಾಗ, ದುರ್ಯೋಧನನ ದೇವಾಲಯವನ್ನು ಪತ್ತೆ ಹಚ್ಚಿದ್ದು! ಆದರೆ ಸ್ಥಳೀಯರು ಇತ್ತೀಚಿನ ವರ್ಷಗಳಲ್ಲಿ, ಅದೇಕೋ, ಆ ದೇವಾಲಯವನ್ನು ಶಿವನ ದೇವಾಲಯ ಎಂದು ಕರೆಯಲು ಆರಂಭಿಸಿದ್ದಾರಂತೆ. ಆದರೆ, 1988ರಲ್ಲೇ ಇವರ ಗೆಳೆಯರೊಬ್ಬರು ಅದು ದುರ್ಯೋದನನ ದೇಗುಲ ಎಂಬುದನ್ನು ಗುರುತಿಸಿದ್ದರು! ಇನ್ನೊಂದು ವಿಶೇಷವೆಂದರೆ, ಆ ದೇವಾಲಯ ಇರುವುದು, ಪಾಂಡವರು ತಮ್ಮ ಕೊನೆಯ ದಿನಗಳಲ್ಲಿ ಹೋಗಿದ್ದರು ಎನ್ನಲಾದ ಸ್ವರ್ಗಾರೋಹಣಿ ಪರ್ವತದ ದಾರಿಯಲ್ಲಿ!

ಶ್ರೀಧರ ಎಸ್.ಸಿದ್ದಾಪುರ ಅವರ ಗದ್ಯ ಸೊಗಸಾಗಿದೆ. ಬರವಣಿಗೆಯ ನಡುನಡುವೆ, ಅಲ್ಲಲ್ಲಿ ಕಾವ್ಯದ ಅಂಶಗಳನ್ನು ಅಳವಡಿಸಿ ಬರೆಯುವುದು ಅವರ ಶೈಲಿ ಮತ್ತು ಅದು ಆಪ್ತವಾಗಿ ಮೂಡಿಬಂದಿದೆ. 'ನಿರ್ಮಲವಾದ ಪಾರ್ವತಿ ತಾಯಿಯ ನಿಶ್ಚಿಂತ ಮಡಿಲಲ್ಲಿ ಮಣಿಕರಣವೆಂಬ ಕಂದ ಮಲಗಿದ್ದ' - ಹಿಮಾಲಯದಲ್ಲಿ ಹರಿಯುವ ಹಿಮಶೀತಲ ನೀರಿನ ಪಾರ್ವತಿ ನದಿಗೆ ಅಂಟಿಕೊಂಡಂತೆ, ಕುದಿಯುವ ಬಿಸಿನೀರನ್ನು ಚಿಮ್ಮುವ ಬಿಸಿನೀರಿನ ಬುಗ್ಗೆಗಳಿರುವ ಮಣಿಕರಣವೆಂಬ ಸುಂದರ, ಪುಟ್ಟ ಹಳ್ಳಿಯನ್ನು ಒಂದೇ ವಾಕ್ಯದಲ್ಲಿ ಶ್ರೀಧರ ಅವರು ಹಿಡಿದಿಟ್ಟ ಪರಿ ಇದು.

ಪರಿಸರದ ಕುರಿತು, ಚಾರಣದ ಕುರಿತು, ನೈಸರ್ಗಿಕ ಸೌಂದರ್ಯದ ತಾಣಗಳ ಕುರಿತು, ಹಳ್ಳಿ ಜನರ ಒಡನಾಟದ ಕುರಿತು ಆಸಕ್ತಿ ಇರುವವರೆಲ್ಲರೂ ಈ ಪುಸ್ತಕವನ್ನು ಒಮ್ಮೆಯಾದರೂ ಓದಬಹುದು.



- ಅಲೆಮಾರಿಯ ಅಂತರಂಗ
- ಲೇ: ಶ್ರೀಧರ ಎಸ್.
- ಪ್ರ: ಸಾಹಿತ್ಯ ಲೋಕ ಪಬ್ಲಿಕೇಷನ್ಸ್
- 9945939436
- ಬೆಲೆ ರು.165/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಶಾಕ್ಯಶಕ್ತ ಶಿಲ್ಪ
(ಕಾಂಬೋಡಿಯಾ ದೇಶವನ್ನು ಆಳಿದವರು ಹಿಂದೂ ರಾಜರೇ? ಕಾಂಬೋಡಿಯಾದ ರೋಚಕ ಚರಿತ್ರೆ ಇಲ್ಲಿ ಕಾದಂಬರಿ ರೂಪ ತಾಳಿದೆ)
ಲೇ: ಡಾ| ಕೆ.ಎನ್. ಗಣೇಶಯ್ಯ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 450/-

2



ಪರ್ವ
(ಮಹಾಭಾರತದ ಕಥೆಯು ಎಸ್. ಎಲ್.ಭೈರಪ್ಪನವರ ಲೇಖನಿಯಲ್ಲಿ ಹೊಸ ರೂಪ ತಾಳಿದೆ. ಕನ್ನಡದ ಪ್ರಮುಖ ಕಾದಂಬರಿಗಳಲ್ಲಿ ಒಂದು.)
ಲೇ: ಎಸ್.ಎಲ್. ಭೈರಪ್ಪ
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 850/-

3



ಹೊಸ ಓದುಗರಿಗೆ ಕುವೆಂಪು
(ಕೆ. ವಿ. ನಾರಾಯಣ ಅವರು ಹಲವಾರು ವರ್ಷಗಳಿಂದ ಕುವೆಂಪು ಸಾಹಿತ್ಯ ಕುರಿತು ರಚಿಸಿದ ಬರಹಗಳನ್ನು ಇಲ್ಲಿ ಸಂಕಲಿಸಿದ್ದಾರೆ)
ಲೇ: ಕೆ. ವಿ. ನಾರಾಯಣ
ಪ್ರ: ಆಕೃತಿ ಪುಸ್ತಕ, ಬೆಂಗಳೂರು
ಬೆಲೆ : ರೂ 195/-

4



ನನ್ನ ಪ್ರವಾಸ
(1857 ರಲ್ಲಿ ನಡೆದದ್ದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಆ ಕಾಲದಲ್ಲಿ ಪ್ರವಾಸ ಮಾಡಿದ ವಿಷ್ಣುಭಟ್ಟ ಗೋಡ್ಸೆ ಅವರ ಮರಾಠಿ ಕೃತಿಯ ಕನ್ನಡಾನುವಾದ)
ಅನು : ಡಾ| ಜಿ. ಭಾಸ್ಕರಮಯ್ಯ
ಪ್ರ: ಜನವಾದಿ ಪ್ರಕಾಶನ, ಗುಂಡ್ಮಿ
ಬೆಲೆ : ರೂ 250/-

5



ವೀರರಾಣಿ ಕಿತ್ತೂರು ಚನ್ನಮ್ಮ
(ಬ್ರಿಟಿಷರ ವಿರುದ್ಧ ಹೋರಾಡಿದ ಚನ್ನಮ್ಮನ ಕಥೆ ಜನಸಾಮಾನ್ಯರಲ್ಲಿ ಬೆರೆತು ಹೋಗಿದೆ. ಸರಜೂ ಕಜ್ಜಟಕ್ರ್ ಅವರು ಈ ಕಥೆಯನ್ನು ಪುನರ್‌ಕಥಿಸಿದ್ದಾರೆ)
ಲೇ: ಡಾ| ಸರಜೂ ಕಾಟ್ಕರ್
ಪ್ರ: ಯಾಜಿ ಪ್ರಕಾಶನ, ಹೊಸಪೇಟೆ
ಬೆಲೆ : ರೂ 260/-

6



ಮಹಾತ್ಮೆ
(ಈಗಾಗಲೇ ತಮ್ಮ ಕಥೆಗಳ ಮೂಲಕ ಪರಿಚಿತವಾಗಿರುವ ಚೀಮನಹಳ್ಳಿ ಅವರ ಮೂರನೆಯ ಕಥಾಸಂಕಲನವಿದು)
ಲೇ: ಚೀಮನಹಳ್ಳಿ ರಮೇಶಬಾಬು
ಪ್ರ: ಅನಿಮ ಪುಸ್ತಕ, ಚೀಮನಹಳ್ಳಿ
ಬೆಲೆ : ರೂ 150/-

7



ಟಚ್ ಮೀ ನಾಟ್
(ಹಲವಾರು ಕಥಾ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿರುವ ಮುನವ್ವರ್ ಅವರ ಪ್ರಕಟಿತ ಕಥಾ ಸಂಕಲನವಿದು)
ಲೇ: ಮುನವ್ವರ್ ಜೋಗಿಬೆಟ್ಟು
ಪ್ರ: ಸಸಿ ಪ್ರಕಾಶನ, ಮೈಸೂರು
ಬೆಲೆ : ರೂ 126/-

8



ಸಾಲುಗಳ ನಡುವೆ
(ಪ್ರಸಿದ್ಧ ನಟನೊಬ್ಬ ವಿವಿಧ ವಿಷಯ ಕುರಿತು ಬರೆದ ಬರಹಗಳು ಇಲ್ಲಿವೆ.)
ಲೇ: ಅನಿರುದ್ಧ ಜತಕರ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 225/-

9



ಮರೆಯಾದ ಮರೆಯಲಾಗದ ಮಾಣಿಕ್ಯಗಳು
(ಸಂಗೀತ ಕ್ಷೇತ್ರದ 31 ದಿಗ್ಗಜರ ಕುರಿತ ಲೇಖನಗಳನ್ನು ಬೇರೆ ಬೇರೆ ಲೇಖಕರು ಬರೆದಿದ್ದಾರೆ)
ವಿವಿಧ ಲೇಖಕರು
ರವೀಂದ್ರ ಪುಸ್ತಕಾಲಯ, ಸಾಗರ
ಬೆಲೆ : ರೂ 600/-

10



ಭಗವಾನ್ ಬುದ್ಧ
(ಬುದ್ಧನ ಬದುಕಿಗೆ ಹತ್ತಿರವಾದ ಜೀವನ ಚರಿತ್ರೆ ಎಂಬ ಖ್ಯಾತಿ ಇದಕ್ಕಿದೆ. ಈಗ ಪುನರ್ ಮುದ್ರಣಗೊಂಡಿದೆ)
ಲೇ: ಧರ್ಮಾನಂದ ಕೋಸಂಬೀ
ಅನು : ಆದ್ಯ ರಂಗಾಚಾರ್ಯ
ಪ್ರ: ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ಬೆಲೆ : ರೂ 430/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕನಸುಗಳ ಬಿತ್ತುವ ಕನಸುಗಾರ!



» ಭಾರತಿ ಎ, ಕೊಪ್ಪ

ಗುರು ಎಂಬ ಗುರುತರವಾದ ಜವಾಬ್ದಾರಿ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ತನ್ನದೇ ಆದ ಮಹತ್ತರ ಪಾತ್ರ ವಹಿಸಿದೆ. ಗುರುಕುಲ ಶಿಕ್ಷಣದಿಂದ ಮೊದಲುಗೊಂಡು ಇಂದಿನ ತಾಂತ್ರಿಕ ಯುಗದವರೆಗೂ ಗುರು ಎಂಬ ಸ್ಥಾನ ಅಧ್ಯಾಪಕ, ಉಪಾಧ್ಯಾಯ, ಓಜ, ಶಿಕ್ಷಕ ಹೀಗೆ ತರಹೇವಾರಿ ಹೆಸರಿನಲ್ಲಿ ವಿದ್ಯೆಯ ವರ್ಗಾವಣೆಯ ಕೆಲಸದಲ್ಲಿ ಮಹತ್ತರವಾದುದು. ಆದರೆ ಗುರುವಿನ ಕೆಲಸದ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗಿದೆ. ಇಂದು ಶಿಕ್ಷಕ ಎಂಬ ಹೆಸರಿನಿಂದ ಕರೆಯಲ್ಪಡುವ ವೃತ್ತಿ ಇಂದು ಹತ್ತಾರು ಒತ್ತಡಗಳ ನಡುವೆ ಮಗುವನ್ನು ತಿದ್ದಿ ತಿಡುವ ಜವಾಬ್ದಾರಿಯ ಕೆಲಸವಾಗಿದೆ.

ವಿಶ್ವ ಶಿಕ್ಷಕರ ದಿನ

ಪ್ರತಿ ವರ್ಷ ಅಕ್ಟೋಬರ್ 5 ರಂದು ವಿಶ್ವ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. 1994 ರಲ್ಲಿ ಯುನೆಸ್ಕೋ ಇದನ್ನು ಜಗತ್ತಿನಾದ್ಯಂತದ ಶಿಕ್ಷಕರ ಅಮೂಲ್ಯ ಕೊಡುಗೆಗಳನ್ನು ಗೌರವಿಸಲು ಪ್ರಾರಂಭಿಸಿತು. ಈ ಆಚರಣೆಯು ಜ್ಞಾನವನ್ನು ನೀಡುವಲ್ಲಿ ಅವರ ಪಾತ್ರವನ್ನು ಗೌರವಿಸುವುದಲ್ಲದೆ, ಮೌಲ್ಯಗಳು, ವಿಮರ್ಶಾತ್ಮಕ ಚಿಂತನೆ ಮತ್ತು ನಾವೀನ್ಯತೆಯನ್ನು ಬೆಳೆಸುವಲ್ಲಿ ಅವರ ಪ್ರಭಾವವನ್ನು ಗುರುತಿಸುತ್ತದೆ.

ಬದಲಾಗಿರುವ ಕಾಲಘಟ್ಟದಲ್ಲಿ ಜಾಗತೀಕರಣದ ಸವಾಲಿನ ಹಿಂದೆ ಓಡಲು ಪೋಷಕರ ಮೊದಲ ಆಯ್ಕೆ ಆಂಗ್ಲ ಮಾಧ್ಯಮದ ಶಿಕ್ಷಣ ಆಗಿರುತ್ತದೆ. ಸರ್ಕಾರಿ ಶಾಲೆ ಆಗಿರಲಿ, ಖಾಸಗಿ ಶಾಲೆ ಆಗಿರ, ಗ್ರಾಮೀಣ ಪ್ರದೇಶವೇ ಆಗಿರಲಿ, ಇಂದು ಹೆಚ್ಚು ಜನಪ್ರಿಯವಾಗಿರುವ ಆಂಗ್ಲ ಮಾಧ್ಯಮದ ಶಿಕ್ಷಣದ ನಡುವೆಯೂ, ಒಂದು ಭಾಷೆಯಾಗಿ ಕಲಿಯುತ್ತಿರುವ ಕನ್ನಡವನ್ನು ಮಗು ತಪ್ಪಿಲ್ಲದೆ ಓದಲು ಬರೆಯಲು ಕಲಿಸುವ ಕಂಕಣವನ್ನು ಇಂದಿನ ಕನ್ನಡ ಭಾಷಾ ಶಿಕ್ಷಕರು ತೊಡಲೇಬೇಕಿದೆ. ಪದವಿ ಹಂತ ತಲುಪಿದರೂ, ಸ್ಪಷ್ಟವಾದ ಕನ್ನಡದ ಓದು ಬರಹ ಇಂದಿನ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಾಗಿದೆ. ಜಾಗತೀಕರಣದಲ್ಲಿ ಮುನ್ನುಗ್ಗಲು ಆಂಗ್ಲ ಕಲಿಕೆ ಎಷ್ಟು ಮುಖ್ಯವೋ, ಕನ್ನಡದ ಪರಿಪಕ್ವ ಕಲಿಕೆಯು ಕನ್ನಡ ನಾಡಿನಲ್ಲಿ ಅಷ್ಟೇ ಮುಖ್ಯ ಎಂಬುದನ್ನು ತನ್ನ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಮನವರಿಕೆ ಮಾಡುತ್ತಾ ಕನ್ನಡ ಕಲಿಸುವ, ಕನ್ನಡ ಕಟ್ಟುವ ಶಿಕ್ಷಕ ತಾನಾಗಬೇಕಿದೆ.

ತಂತ್ರಜ್ಞಾನದ ಅರಿವು

ಬಳಪ ಮತ್ತು ಕರಿ ಹಲಗೆಗೆ ಮಾತ್ರ ಇಂದಿನ ಶಿಕ್ಷಕರು ಸೀಮಿತವಾಗಿರದೆ ತಂತ್ರಜ್ಞಾನ ಆಧಾರಿತವಾಗಿ ದೈನಂದಿನ ಕೆಲಸಗಳನ್ನು ನಿರ್ವಹಿಸುವ ದಿನಮಾನ ಇದಾಗಿದೆ. ಸರ್ಕಾರಿ ಶಾಲೆಗಳಲ್ಲಂತೂ ಅಕ್ಷರ ದಾಸೋಹ, ಪಾಠ ಟಿಪ್ಪಣಿ, ಅಂಕಗಳ ನಿರ್ವಹಣೆ ಎಲ್ಲವೂ ಕೂಡ ತಂತ್ರಜ್ಞಾನ ಆಧಾರಿತ ಆ್ಯಪ್‌ಗಳಲ್ಲಿ, ವೆಬ್ಸೈಟ್‌ಗಳಲ್ಲಿ ಅಪ್ಲೋಡ್ ಮಾಡಬೇಕಾದಂತಹ ವ್ಯವಸ್ಥೆ ಇರುವುದರಿಂದ ಶಿಕ್ಷಕರು ತಾಂತ್ರಿಕವಾಗಿ ಅಪ್ಡೇಟ್ ಆಗಲೇಬೇಕಿದೆ. ಎಸ್‌ಎಟಿಎಸ್ ನಲ್ಲಿ ಮಕ್ಕಳ ಎಲ್ಲಾ ಮಾಹಿತಿಗಳು, ಯು ಡೈಸ್‌ನಲ್ಲಿ ಶಾಲೆಯ ಎಲ್ಲ ಮಾಹಿತಿಗಳು ಕರಾರುವಕ್ಕಾಗಿ ಇರಬೇಕಾದಂತಹ ಅಗತ್ಯತೆ ಇರುವುದರಿಂದ ಶಿಕ್ಷಕರು ತಾಂತ್ರಿಕವಾಗಿ ಮೊಬೈಲ್, ಲ್ಯಾಪ್ಟಾಪ್ ಇಂತಹ ಗ್ಯಾಜೆಟ್‌ಗಳ ಬಳಕೆಯಲ್ಲಿ ಹೆಚ್ಚು ಪಳಗಿರಬೇಕು. ಅದಲ್ಲದೆ ಸರ್ಕಾರದ ವಿವಿಧ ಕಾರ್ಯಕ್ರಮಗಳನ್ನು ಆಯಾಯ ವೆಬ್ಸೈಟ್‌ಗಳಲ್ಲಿ ಫೋಟೋ ಸಹಿತ ವರದಿ ಮಾಡಬೇಕಾದ ತುರ್ತು ಕೂಡ ಇರುತ್ತದೆ. ಜನಗಣತಿ, ಚುನಾವಣಾ ಸಂಬಂಧಿತ ಕೆಲಸ ಮುಂತಾದವುಗಳನ್ನು ಕೂಡ ಆ್ಯಪ್‌ಗಳನ್ನು ಬಳಸಿಯೇ ಮಾಡಬೇಕಿದೆ. ಹಾಗಾಗಿ ಇಂದಿನ ಶಿಕ್ಷಕರು ತಂತ್ರಜ್ಞಾನದಿಂದ ದೂರವಿದ್ದರೆ ಅವರು ಕೂಡ ಇ ಸಾಕ್ಷರತೆಯಲ್ಲಿ ಹಿಂದುಳಿದಿದ್ದಾರೆ ಎಂದೇ ಅರ್ಥ. ಸರ್ಕಾರಿ ಶಾಲೆಗಳ ಉಳಿವು

ಸ್ವತಃ ಶಿಕ್ಷಕಿಯೂ ಆಗಿರುವ ಲೇಖಕಿಯು, ವಿಶ್ವ ಶಿಕ್ಷಕರ ದಿನದಂದು ಮನ ಮಂಥನ ನಡೆಸಿದ್ದಾರೆ.

ನಮ್ಮ ರಾಜ್ಯದಲ್ಲಿ ಗ್ರಾಮೀಣ ಭಾಗದ ಜನರ ನಗರದತ್ತ ವಲಸೆ ಹಾಗೂ ಖಾಸಗಿ ಶಾಲೆಗಳ ಹೆಚ್ಚಳದಿಂದ, ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ ಕುಸಿಯುತ್ತಿದೆ. ಸರ್ಕಾರದ ಅನೇಕ ಉತ್ತಮ ಯೋಜನೆಗಳು ಇದ್ದರೂ, ಪೋಷಕರು ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳತ್ತ ಹೆಚ್ಚು ಒಲವು ತೋರಿಸುತ್ತಾರೆ. ಶಾಲಾ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಹತ್ತಾರು ಪೈಪೋಟಿಗಳ ನಡುವೆ ತಮ್ಮ ಶಾಲೆಯ ದಾಖಲಾತಿಯನ್ನು ಉತ್ತಮಪಡಿಸಿಕೊಳ್ಳಲು ಬೇಕಾದ ಅಗತ್ಯ ಆಕರ್ಷಕ ಕಲಿಕಾ ವಾತಾವರಣವನ್ನು ತಮ್ಮದೇ ವಿವೇಚನೆಯಲ್ಲಿ ಶಾಲೆಯಲ್ಲಿ ನಿರ್ಮಿಸಿಕೊಳ್ಳಬೇಕಾದ ಜಾಣ್ಮೆಯು ಸರ್ಕಾರಿ ಶಾಲಾ ಶಿಕ್ಷಕರಿಗೆ ಇರಬೇಕಿದೆ. ಶಿಕ್ಷಕ ನಿರಂತರ ವಿದ್ಯಾರ್ಥಿ ಎಂಬಂತೆ ತನ್ನ ಬೋಧನಾ ಪ್ರಕ್ರಿಯೆ, ಶಾಲಾ ಶೈಕ್ಷಣಿಕ ವಾತಾವರಣ, ಮಕ್ಕಳಿಗೆ ಕಲಿಸುವ ತಂತ್ರದಲ್ಲಿ ಸದಾ ಹೊಸತನಗಳ ಹುಡುಕಾಟದಲ್ಲಿ ಶಿಕ್ಷಕರು ಇದ್ದಾಗ ಮಾತ್ರ ಮಕ್ಕಳನ್ನು ಶಾಲೆಯತ್ತ ಸೆಳೆಯಲು ಸಾಧ್ಯವಾಗುತ್ತದೆ.

ಶಿಕ್ಷಕರು ಕೇವಲ ಪಠ್ಯ ವಿಷಯ ಬೋಧನೆಗಷ್ಟೇ ತಮ್ಮ ಜ್ಞಾನವನ್ನು ಸೀಮಿತಗೊಳಿಸಿಕೊಳ್ಳದೆ, ಪಠ್ಯದ ಆಚೆಯ ಸಾಮಾನ್ಯ ಜ್ಞಾನ ಪ್ರಪಂಚದ ಆಗುಹೋಗುಗಳಿಗೆ ತೆರೆದುಕೊಳ್ಳುವ ಹೊಸತನಕ್ಕೆ ಅಣಿಯಾಗುವ ಜ್ಞಾನದ ಹುಡುಕಾಟದಲ್ಲಿ ಗ್ರಂಥಾಲಯದ ಪುಸ್ತಕಗಳತ್ತ ಮುಖ ಮಾಡಬೇಕಿದೆ. ಈ ಗ್ರಂಥಾಲಯದ ಬಳಕೆಯನ್ನು ತಾವು ಮಾಡುತ್ತಾ ತಮ್ಮ ವಿದ್ಯಾರ್ಥಿಗಳಿಗೂ ಮಾಡಿಸಬೇಕಿದೆ.

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಪ್ರಾಯೋಗಿಕ ಕಲಿಕೆಗೆ ಮಹತ್ವ ನೀಡುವಂತಾಗಬೇಕು. ಖಗೋಳ ವಿಸ್ಮಯ, ವಿಜ್ಞಾನದ ವಿಸ್ಮಯ, ತಾವೇ ಮಾಡಿ ಕಲಿಯುವಂತಹ ಚಟುವಟಿಕೆಗಳಿಗೆ ಮಕ್ಕಳನ್ನು ಪ್ರೇರೇಪಿಸಬೇಕು. ಪಠ್ಯದ ಜ್ಞಾನವನ್ನು ನೇರವಾಗಿ ವರ್ಗಾಯಿಸುವ ಶಿಕ್ಷಕರಾಗದೆ ಪ್ರಯೋಗ ಶಾಲೆಗಳಿಗೆ ಮಕ್ಕಳನ್ನು ಕರೆದೊಯ್ಯುವ, ವಿಜ್ಞಾನ ಮೇಳಗಳಿಗೆ ಭಾಗಿಯಾಗುವ ಅವಕಾಶವನ್ನು ನಮ್ಮ ವಿದ್ಯಾರ್ಥಿಗಳಿಗೆ ಒದಗಿಸಬೇಕಿದೆ. ಸರ್ಕಾರಿ ಶಾಲೆಗಳಲ್ಲಿ ಸುಸಜ್ಜಿತ ಗ್ರಂಥಾಲಯಗಳ ಕೊರತೆ ಇದೆ. ಆದರೂ ಲಭ್ಯ ಸಂಪನ್ಮೂಲಗಳನ್ನು ಬಳಸಿ ಮಕ್ಕಳಲ್ಲಿ ವಿಜ್ಞಾನದ ಕೌತುಕಗಳನ್ನು ಬೆಳೆಸುವ ಭವಿಷ್ಯದ ವಿಜ್ಞಾನಿಗಳನ್ನಾಗಿ ಅವರನ್ನು ರೂಪಿಸುವ ದೂರದೃಷ್ಟಿ ಶಿಕ್ಷಕರದಾಗಬೇಕಿದೆ. ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್ ಶಿಕ್ಷಣವನ್ನು ಮಕ್ಕಳು ಕಲಿಯಲು ಅವಕಾಶ ಮಾಡಿಕೊಟ್ಟ ಕರ್ನಾಟಕದ ಶಿಕ್ಷಕರಾದ ಮಧುಸೂದನ್ ರವರಿಗೆ ಈ ಬಾರಿಯ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ಪುಸ್ತಕ ಓದುವ ಹವ್ಯಾಸ

ಯಥಾ ಗುರು ತಥಾ ಶಿಷ್ಯ ಎಂಬ ಮಾತಿದೆ. ಗುರುಗಳು ಅಧ್ಯಯನಶೀಲರಾದಾಗ ಮಕ್ಕಳು ಕೂಡ ಪುಸ್ತಕಗಳತ್ತ ಮುಖ ಮಾಡುತ್ತಾರೆ. ಪುಸ್ತಕಗಳೆಂದರೆ ಕೇವಲ ಪಠ್ಯಪುಸ್ತಕದ ಓದು ಕಲಿಕೆಯಾಗದು. ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಸಂಗ್ರಹಿಸುವ, ವರ್ಷವೂ ಅದರ ಸಂಖ್ಯೆಯನ್ನು ಹೆಚ್ಚಿಸುವ, ಆಕರ್ಷಕ ಪುಸ್ತಕಗಳ ಸಂಗ್ರಹವನ್ನು ಮಕ್ಕಳಿಂದಲೇ ಮಾಡಿಸುವ ಓದಿನ ಪ್ರಯೋಗಶೀಲತೆಯನ್ನು ಶಿಕ್ಷಕರು ಕಂಡುಕೊಳ್ಳಬೇಕಿದೆ. ಶಿಕ್ಷಕರು ಕೂಡ ತಮ್ಮ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದ ಪುಸ್ತಕಗಳನ್ನು ಓದುವಂತಾದರೆ, ಮಕ್ಕಳು ಗ್ರಂಥಾಲಯದ ಪುಸ್ತಕಗಳನ್ನು ಓದುತ್ತಾ ತಮ್ಮ ಅರಿವಿನ ಹರಿವನ್ನು ವಿಸ್ತಾರಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕನಸುಗಳನ್ನು ಬಿತ್ತುವ ಕನಸುಗಾರ

ಮಕ್ಕಳನ್ನು ಕೇವಲ ಅಂಕ ಗಳಿಕೆಯ ಯಂತ್ರಗಳನ್ನಾಗಿ ಮಾಡದೆ ಅವರೊಳಗೆ ಇರುವಂತಹ ಕನಸುಗಳನ್ನು ಸಾಕಾರಗೊಳಿಸುವ ಅಂತಃಶಕ್ತಿಯನ್ನು ಬೆಳೆಸುವ ಕನಸುಗಾರರಾಗಿ ಶಿಕ್ಷಕರು ಕಾರ್ಯನಿರ್ವಹಿಸಬೇಕು. ನೈತಿಕತೆಯಿಂದ ದುಡಿದು ಸಂಪಾದನೆ ಮಾಡುವ ಎಲ್ಲಾ ವೃತ್ತಿಯು ಶ್ರೇಷ್ಠ ಎಂಬಂತಹ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುತ್ತಾ ಆ ನಿಟ್ಟಿನಲ್ಲಿ ಅವರು ಮುಂದಡಿ ಇಡುವಂತಹ ಪ್ರೇರಣಾದಾಯಕ ವ್ಯಕ್ತಿತ್ವ ಶಿಕ್ಷಕರದಾಗಿರಬೇಕು.

ಡಾ. ಎಸ್. ರಾಧಾಕೃಷ್ಣನ್‌ರವರ ಜನ್ಮದಿನವನ್ನು ನಮ್ಮ ದೇಶದಲ್ಲಿ ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸುವ ಮೂಲಕ ಅವರಿಗೆ ನಾವೆಲ್ಲರೂ ಗೌರವವನ್ನು ಸಲ್ಲಿಸುತ್ತಿದ್ದೇವೆ. ಭಾರತ ದೇಶದಲ್ಲಿ ಜನ್ಮ ಕಳೆದ ಅನೇಕ ಗುರುಗಳು ಜಗ ಮೆಚ್ಚಿದ ಗುರುಗಳು ಎಂದೆನಿಸಿಕೊಂಡಿದ್ದಾರೆ. ಹಿಂದಿನ ತಲೆಮಾರಿನ ಗುರುಕೋಠಿಯನ್ನು ಸ್ಮರಿಸುತ್ತಾ, ಭವಿಷ್ಯದ ವಿದ್ಯಾರ್ಥಿಗಳನ್ನು ರೂಪಿಸುವ ಯಶಸ್ವಿ ಶಿಕ್ಷಕರು ನಾವಾಗುವತ್ತ ಇಂದಿನ ಶಿಕ್ಷಕರು ಚಿತ್ತ ಬೆಳೆಸಬೇಕಿದೆ.

ನಿಂಗಿಯ ಸೆನ್ಸಸ್

ಗಣತಿ ಮಾಡುವ ಸಿಬ್ಬಂದಿ ಬಂದು ಆಧಾರ್ ಕಾರ್ಡು, ಮೊಬೈಲ್ ಒಟಿಪಿ, ಫೋಟೋ ಎಲ್ಲಾ ಕೇಳಿದಾಗ, ನಿಂಗಿ ನೀಡಿದ ಉತ್ತರವೇನು?

» ಸುಮಾ ರಮೇಶ್, ಹಾಸನ

ನಿಂಗಿ ಕೆಲಸದ ಮನೆಗಳಿಗೆಲ್ಲಾ ರಜ ಹೇಳಿ ಪಿತೃ ಪಕ್ಷದ ಆಚರಣೆಯ ತಯಾರಿಯಲ್ಲಿ ತೊಡಗಿಕೊಂಡಿದ್ದಳು. ಬಗೆಬಗೆಯ ತಿಂಡಿ ತಯಾರಿಸಲು ಹಸಿ ಹಿಟ್ಟನ್ನು ನಾದಿ ಅದಕ್ಕೊಂದು ರೂಪಕೊಟ್ಟು ಎಣ್ಣೆಯೊಳಗೆ ಡೈವ್ ಹೊಡೆಸಿ ಗರಿಗರಿಯಾಗಿ ಬೆಂದ ನಂತರ ಲಗುಬಗೆಯಿಂದ ಮೇಲೆತ್ತುತ್ತಿದ್ದಳು. ಯಾರೋ ಮುಂಬಾಗಿಲು ಬಡಿದಂತಾಗಿ ಗ್ಯಾಸ್ ಒಲೆಯನ್ನು ಸಿಮ್ ಗಿರಿಸಿ ಮನೆಯನ್ನೆಲ್ಲಾ ಆವರಿಸಿದ್ದ ಘಮ್ ಎನ್ನುವ ಪರಿಮಳವನ್ನು ಆಸ್ವಾದಿಸುತ್ತಲೇ ಹೊರಬಂದಳು. ಬಾಗಿಲಾಚೆ ಓರ್ವ ಮಹಿಳೆ ಹಾಗು ಪುರುಷ ರೈಟಿಂಗ್ ಪ್ಯಾಡ್, ಒಂದಷ್ಟು ಪೇಪರ್ಸ್ ಹಿಡಿದು ನಿಂತಿದ್ದರು.

'ಯಾರು ಗೊತ್ತಾಯ್ತಾ ಇಲ್ವಲ್ಲಾ ?' ನಿಂಗಿ ಕಣ್ಣು ಕಿರಿದುಗೊಳಿಸಿ ಕೇಳಿದಳು.

'ನಾವು ಜಾತಿ ಗಣತಿ ಸಮೀಕ್ಷೆಗೆಂದು ಬಂದಿದೀವಿ...'

'ಓ... ಸೆನ್ಸಸ್ಸು ಅನ್ನಿ, ಇರಿ ಒಂದ್ನಿಮ್ಸ ಬತ್ತೀನಿ' ಎನ್ನುತ್ತಾ ಒಳಹೋಗಿ ಒಲೆ ಆರಿಸಿ ಬಂದಳು.

ಮೇಲಿನಿಂದ ಕೆಳಗಿನವರೆಗೂ ನೋಡುತ್ತಾ ಮುಂಬಾಗಿಲನ್ನು ಸ್ಕ್ಯಾನ್ ಮಾಡುತ್ತಿದ್ದ ಅವರು ನಿಂಗಿಯೆಡೆಗೆ ತಿರುಗಿ 'ಹೌದು..., ಕಳೆದ ತಿಂಗ್ಳು ನಮ್ ಕಡೆಯವ್ರು ಬಾಗಿಲಿಗೆ ಒಂದು ಚೀಟಿ ಅಂಟಿಸಿ ಹೋಗಿದ್ರಲ್ಲಾ ಅದೆಲ್ಲಿ ಕಾಣ್ತಾ ಇಲ್ವಲ್ಲಾ ?' ಎಂದರು.

'ಏ ಅಲ್ಲೇನ್ ಉಡುಕ್ತೀರಾ... ? ಅದುನ್ನ ನಾನೇ ಕಿತ್ತಾಗ್ದೆ' ಎಂದಳು ನಿಂಗಿ ತಣ್ಣಗೆ.

'ಅಯ್ಯೋ ಯಾಕೆ ಕಿತ್ತಾಕಿದ್ರಿ ? ಸ್ಟಿಕ್ಕರ್ ತೆಗೆಯಬಾರದು. ಡು ನಾಟ್ ರಿಮೂವ್ ದ ಸ್ಟಿಕ್ಕರ್ ಅಂತ ಅದ್ರು ಮೇಲೇ ಎರಡೆರಡು ಬಾಷೆಯಲ್ಲಿ ಇತ್ತಲ್ಲಾ ?'

'ಎಸ್ಟ್ ಭಾಸೇಲಿದ್ರೇನು ? ನಂಗೆ ಓದಕೆ ಬರಿಯಕೆ ಬರಕಿಲ್ಲ' ಎಂದಳು.

'ಒಳ್ಳೇ ಕಥೆಯಾಯ್ತು. ಅದಿಲ್ದೆ ನಾವು ಗಣತಿ ಹೇಗೆ ಮಾಡೋದು?' ಪೆನ್ನು ಪೇಪರ್ ಹಿಡಿದ ಮಹಿಳೆ ದನಿಯೇರಿಸಿ ತೀಕ್ಷ್ಣವಾಗಿ ನೋಡಿದಳು. ಕೆರಳಿದ ನಿಂಗಿ

'ಅದು ನಿಮ್ ಅಣೇಬರ. ನೀವು ಸಮೀಕ್ಸೆ ಮಾಡ್ತೀರಾ ಅಂತ ನಾವು ಬಾಗ್ಲು ಮೇಲೆ ಅಂಟಾಕಿದ್ನೆಲ್ಲಾ ಅಂಗೇ ಬುಟ್ಕಳಕಾಯ್ತದಾ? ಮಾರ್ಲಮಿ ಅಬ್ಬಕ್ಕೆ ಕಿಟ್ಕಿ ಬಾಗ್ಲು ಎಲ್ಲನು ಕಿಲೀನ್ ಮಾಡ್ವಾಗ ನಾನೇ ಕಿತಾಕಿ ನೀಟಾಗಿ ಒರುಸ್ದೆ. ನಮ್ಮನೆ ಬಾಗ್ಲು ನಮ್ ಖುಸಿ. ನೀವ್ಯಾರು ಕೇಳಕೆ ಅಂತೀನಿ?' ನಿಂಗಿ ಸೆರಗನ್ನು ಬಿಗಿದು ಸೊಂಟದ ಮೇಲೆ ಕೈಯಿರಿಸಿದಾಗ ಇಬ್ಬರೂ ಗಲಿಬಿಲಿಗೊಂಡರು. ಉಪಾಯದಿಂದ ವ್ಯವಹರಿಸದಿದ್ದರೆ ಕೆಲಸ ಕೆಡುವುದೆಂದರಿತು ಅದಕ್ಕೆ ಆಲ್ಟರ್ನೇಟಿವ್ ಏನೆಂದು ಯೋಚಿಸುತ್ತಾ ಜೋಲು ಮೋರೆ ಹಾಕಿ ಇಬ್ಬರೂ ಪರಸ್ಪರ ಚರ್ಚಿಸತೊಡಗಿದರು.

ಒಳಹೋದ ನಿಂಗಿ ಕಸದ ಬುಟ್ಟಿಯಿಂದ ಅರೆಬರೆ ಹರಿದ ಒಂದು ಚೀಟಿಯನ್ನು ತಂದು 'ಇದೆಯಾ ನೋಡಿ, ನಿಮ್ ಚೀಟಿ ನಂಗ್ಯಾಕೆ' ಎಂದು ಅವರ ಮುಂದೆ ಹಿಡಿದಾಗ ಯುರೇಕಾ...! ಎನ್ನುತ್ತಾ ಇಬ್ಬರ ಮುಖದ ರೇಖೆಗಳೂ ಸಡಿಲಗೊಂಡವು. ಅದನ್ನೇ ತಿರುಗಿಸಿ ಮುರುಗಿಸಿ ಕನ್ನಡಕ ಧರಿಸಿ ಕೈಬದಲಾಯಿಸಿ ಏನೋ ನೋಟ್ ಮಾಡಿಕೊಂಡರು.

ಹಹ್ಹಾಸ್ಯ!

'ಆಯ್ತು ಮೇಡಂ, ಈಗ ಕೆಲವು ಡೀಟೈಲ್ಸ್ ಬೇಕು ನಿಮ್ಮ ಹೆಸರು ಹೇಳಿ, ಅದಕ್ಕೆ ಮೊದ್ಲು ಒಂದು ಫೋಟೋ ತೆಗೀತೀವಿ ಹಾಗೇ ನಿಂತ್ಕೊಳ್ಳಿ' ಮೊಬೈಲ್ ಚಾಲೂ ಮಾಡಿ ನಿಂಗಿಯ ಮುಂದಕ್ಕೆ ಹಿಡಿಯುವಷ್ಟರಲ್ಲಿ ಅವಳು ಮಾರಿ ತಿರುಗಿಸಿ ಮಾರು ದೂರ ಸರಿದಳು.

'ನಾನು ಪೋಟ ಗೀಟ ತೆಗುಸ್ಕಣಕಿಲ್ಲ. ನೀವ್ಯಾರೋ ಏನೋ ಯಾರಿಗ್ಗೊತ್ತು' ಎಂದಳು.

'ಮೇಡಂ, ನಾವು ಸ್ಕೂಲ್ ಟೀಚರ್ಸು. ಬೇಕಾದ್ರೆ ಇಲ್ಲಿ ನಮ್ ಐಡಿ ಕಾರ್ಡ್ ಇದೆ ನೋಡಿ'

ಅತ್ತ ತಿರುಗಿಯೂ ನೋಡದ ನಿಂಗಿ 'ಆಗ್ಲೇ ಏಳುದ್ನಲ್ಲಾ ನಂಗೆ ಓದಕೆ ಬರಿಯಕೆ ಬರಕಿಲ್ಲಾ ಅಂತ' ಎಂದಳು.

'ಹೋಗ್ಲಿ ನಿಮ್ಮ ಆಧಾರ್ ಕಾರ್ಡ್, ವೋಟರ್ಸ್ ಕಾರ್ಡ್, ಜಾತಿ ಪ್ರಮಾಣ ಪತ್ರ ಎಲ್ಲಾದನ್ನೂ ತಂದ್ಕೊಟ್ರೆ ಬೇಗ ನಮ್ಮ ಕೆಲ್ಸ ಮುಗಿಸಿ ಹೋಗ್ತೀವಿ'

'ಅದೆಲ್ಲನು ಕೊಡಕಾಗಕಿಲ್ಲ. ಸೆನ್ಸಸ್ಸು ಅಂದ್ರೆ ಮನೇಲಿ ಎಸ್ಟ್ ಜನ ಇದೀರಾ ಅವ್ರಿಗೆಲ್ಲಾ ಎಸ್ಟೆಸ್ಟು ವರ್ಸ, ಗಂಡುಸ್ರೆಸ್ಟು, ಎಂಗುಸ್ರೆಸ್ಟು ಅಂತ ಕೇಳಿ ಬರ್ಕಂಡೋಗದು. ನಾನು ಇಂತವೆಸ್ಟ್ ಸೆನ್ಸಸ್ ಕಂಡಿಲ್ಲ ಏಳಿ... ' ನಿಂಗಿ ಕೈ ತಿರುವಿದಾಗ ಇದು ಬಡಪೆಟ್ಟಿಗೆ ಬಗ್ಗುವುದಿಲ್ಲವೆಂದರಿತ ಇಬ್ಬರೂ ನಿಧಾನವಾಗಿ ಅವಳ ಮನವೊಲಿಸಲು ಮುಂದಾದರು.

'ನೋಡಿ ಮೇಡಂ, ಈ ಬಾರಿ ಇದು ಬೇರೆ ತರಹದ ಗಣತಿ. ಇದ್ರಲ್ಲಿ ನಿಮ್ಮ ಆಧಾರ್ ಕಾರ್ಡ್ ನೋಡಿ ನಿಮ್ಮ ಫೋನ್ ನಂಬರ್‌ಗೆ ಒಂದು ಓಟಿಪಿ ಕಳುಸ್ತೀವಿ. ನೀವು ಅದನ್ನ ನಮ್ಗೆ ಹೇಳಿದ್ ಮೇಲೆ ನಾವು ಒಟ್ಟು ಅರವತ್ತು ಪ್ರಶ್ನೆಗಳ್ನ ಕೇಳ್ತೀವಿ ನೀವು ಉತ್ತರ ಹೇಳ್ಬೇಕು'

'ಯವ್ವೀ... ಅರ್ ವತ್ ಪ್ರಸ್ನೆಯಾ ? ನಿಮ್ಗು ನಿಮ್ ಸರ್ಕಾರುಕ್ಕೂ ಮಾಡಕೆ ಬ್ಯಾರೆ ಕ್ಯಾಮಿಲ್ವಾ ? ಇದೇನು ಡಿಸಿ ಕೆಲ್ಸಕ್ಕೆ ಮಾಡ ಇಂಟ್ರೂ, ಅನ್ಕಂಡ್ರಾ, ಅಸ್ಟ್ ಪ್ರಸ್ನೆ ಕೇಳಕೆ ?ಅದ್ಯಾರೋ ಕೇಳ್ತಿದ್ರಂತೆ ನಿಮ್ಮನೇಲಿ ಎಸ್ಟ್ ಗಾಡಿ ಇದಾವೆ, ನಿಮಿಗೆ ಎಸ್ಟ್ ಭಾಸೆ ಮಾತಾಡಕೆ ಬತ್ತದೆ ಅಂತ. ನಮ್ಮಲ್ಲಿರೋದೇ ಒಂದು ಮುರುಕ್ಲು ಸೈಕಲ್ಲು. ಅದುನ್ನೂ ಸರ್ಕಾರ್ದರೇ ಕೊಟ್ಟಿದ್ದು. ಇನ್ನ ನನಿಗೆ ಬರದು ಕನ್ನಡ ಭಾಸೆ ಒಂದೇ. ನನ್ ಗಂಡ ಅನ್ನುಸ್ಕಂಡಿರದು ಸಂಜೆ ಆರ್ಗಂಟೆ ಮೇಲೆ ಅದುನ್ನೂ ನೆಟ್ಟುಗ್ ಮಾತಾಡಕಿಲ್ಲ ಬುಡಿ' ಎಂದಾಗ ಇಬ್ಬರೂ ಗೊಳ್ಳನೆ ನಕ್ಕರು.

'ಮೇಡಂ, ನೀವು ಬೇಗ ಫೋನ್ ನಂಬರ್ ಕೊಟ್ರೆ ಓಟಿಪಿನೂ ಬೇಗ ಬರುತ್ತೆ'

'ಓ...ನೀವು ಓಟಿಪಿ ಗಿರಾಕಿನಾ ? ನಂಗೆ ಮದ್ಲೇ ಡೌಟಿತ್ತು. ನಮ್ಮುಡ್ಗ ಏಳೋಗವ್ನೆ. ಇತ್ತೀಚ್ಗೆ ಓಟಿಪಿ ಕಳ್ರು ಜಾಸ್ತಿಯಾಗವ್ರೆ. ಅದುಕ್ಕೆ ಯಾರಿಗೂ ಓ ಟಿ ಪಿ ಏಳ್ಬೇಡ ಅಂತ'

'ಮೇಡಂ, ದಯವಿಟ್ಟು ಸಹಕರಿಸಿ. ನಿಮ್ ಫೋನ್ ನಂಬರ್ ಬೇಗ ಕೊಟ್ರೆ ಕೆಲಸವೂ ಬೇಗ ಆಗುತ್ತೆ. ನಮ್ಗೂ ಟೈಮಿಲ್ಲ'

'ನಿಮ್ ಪ್ರಸ್ನೆಗೆಲ್ಲಾ ಉತ್ರ ಏಳ್ಕಂಡ್ ಕೂರಕೆ ನಂಗೂ ಟೇಮಿಲ್ಲ ಬುಡಿ. ಮಾರ್ಲಮಿ ಅಬ್ಬಕ್ಕೆ ಕಜ್ಜಾಯ ಮಾಡ್ಬೇಕು, ಸರ್ಕಳಿ ಅತ್ತಗೆ, ಬಾಗ್ಲು ಆಕನಂತೆ. ದಿನ್ಬೆಳ್ಗಾದ್ರೆ ಟಿವಿನಾಗೇ, ಯೂಟ್ಯೂಬ್ ನಾಗೆ ಎಲ್ಲಾದ್ರಾಗೂ ಏಳಲ್ವಾ ಒಟಿಪಿ ಸೇರ್ ಮಾಡ್ಬೇಡಿ, ಅಪರಿಚಿತ್ರು ಜೊತೆ ಮಾಇತಿ ಅಂಚ್ಕಬೇಡಿ ಅಂತ'

'ನಾವು ಅಪರಿಚಿತರಲ್ಲಾ ಮೇಡಂ'

'ಮತ್ತೆ ನೀವೇನ್ ನಮ್ ನೆಂಟ್ರಾ... ಓಗ್ರಯ್ಯ ಸಾಕು. ಆಧಾರ್ ಕಾರ್ಡು, ಎಲೆಕ್ಸನ್ ಕಾರ್ಡು, ಜಾತಿ ಕಾರ್ಡು, ಯಸಸ್ವಿನಿ ಕಾರ್ಡು, ಓಟಿಪಿ, ಜುಟ್ಟು ಜನ್ವಾರ ಎಲ್ಲಾ ನಿಮ್ ಕೈನಾಗ್ ಕೊಟ್ಟು ಮುಂಡಾಮೋಚುಸ್ಕಬೇಕಾ? ನಿಮ್ಮಂಥೋರ್ನ ಎಸ್ಟ್ ಜನ ನೋಡಿಲ್ಲ ನನ್ನ ಸರ್ವಿಸ್ ನಾಗೆ, ಓಯ್ತಾ ಇರಿ... ' ನಿಂಗಿ ಧಡ್ಡನೆ ಬಾಗಿಲು ಮುಚ್ಚಿದಾಗ ಸೆನ್ಸಸ್ ನೌಕರರಿಬ್ಬರು ದಂಗಾಗಿ ನಿಂತರು.

ಪೊಲೀಸರಿಂದ ಹತನಾದ ಗೊರೂರರ ಮಗ!

» ಗೊರೂರು ಶಿವೇಶ್



ತೀವ್ರ ಬಡತನದಲ್ಲಿ ವಿದ್ಯಾಭ್ಯಾಸ ನಡೆಸಿದ ಎಸ್ ಎಲ್ ಭೈರಪ್ಪನವರು ಗೊರೂರು ಶಾಲೆಗೆ ದಾಖಲಾಗಿದ್ದು ಆಕಸ್ಮಿಕವಾಗಿ. ಇದಕ್ಕೆ ಕಾರಣ ನುಗ್ಗೆಹಳ್ಳಿಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಗೊರೂರಿನ ಸಮೀಪದ ಬನವಾಸೆಯ ಸ್ವಾಮಿ ಮಾಸ್ತರರು. ಅವರು ನುಗ್ಗೆಹಳ್ಳಿ ಇಂದ ಗೊರೂರಿಗೆ ವರ್ಗಾವಣೆ ಮಾಡಿಸಿಕೊಂಡು ಬಂದಾಗ ಅವರ ಮನೆಯಲ್ಲಿ ಇದ್ದುಕೊಂಡು ವ್ಯಾಸಂಗ ಮಾಡುತ್ತಿದ್ದ ಭೈರಪ್ಪನವರಿಗೆ ಅವರ ಪ್ರಗತಿಯ, ಆತ್ಮವಿಶ್ವಾಸದ, ಧೈರ್ಯದ ಒತ್ತಾಸೆಯಾಗಿ ಇದ್ದ ಮಾಸ್ತರರನ್ನು ಬಿಟ್ಟಿರಲಾಗದೆ ಅವರ ಜೊತೆಗೆ ಬಂದರು. ಸ್ವಾಮಿ ಮಾಸ್ತರರನ್ನು ಅವರೆಲ್ಲ ಗುಣ ಅವಗುಣಗಳನ್ನು ಪ್ರಸ್ತಾಪಿಸುತ್ತಲೆ ಆತ್ಮೀಯತೆಯಿಂದ ನೆನೆದಿದ್ದಾರೆ. ಸ್ವಾತಂತ್ರ್ಯ ಪಡೆದ 1947ರ ವರ್ಷವೇ ಅವರು ನಮ್ಮೂರಲ್ಲಿ ಇದ್ದದ್ದು. ಇದ್ದದ್ದು ಒಂದೇ ವರ್ಷವಾದರೂ ಆ ಸಂದರ್ಭದಲ್ಲಿ ನಡೆದ ಬಹು ಮುಖ್ಯ ಘಟನೆಗಳಿಗೆ ಸಾಕ್ಷಿಯಾಗಿದ್ದಾರೆ. ಗೊರೂರಿನ ಮಹನೀಯರನ್ನು, ವಾರಾನ್ನಕ್ಕೆ ನೆರವಾದವರನ್ನು, ಮೈಸೂರು ಸಂಸ್ಥಾನವು ಭಾರತ ದೇಶದಲ್ಲಿ ಸೇರಿಕೊಳ್ಳಬೇಕೆಂದು ನಡೆದ ಹೋರಾಟದಲ್ಲಿ ಭಾಗಿಯಾದ ಬಗೆಯನ್ನು ಬರೆದಿದ್ದಾರೆ; ಇದೇ ಹೋರಾಟದಲ್ಲಿ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ಪುತ್ರನನ್ನು ಕಳೆದುಕೊಂಡ ಘಟನೆ ಸಂದರ್ಭಗಳನ್ನು 'ಭಿತ್ತಿ' ಆತ್ಮಕಥಾನಕದಲ್ಲಿ ಭೈರಪ್ಪನವರು ನೆನೆದಿದ್ದಾರೆ.

ಭೈರಪ್ಪನವರು ಗೊರೂರಿನಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದಾಗ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿತು. ಆದರೆ ಮೈಸೂರು ಸರಕಾರವು ಭಾರತ ದೇಶದೊಂದಿಗೆ ವಿಲೀನಗೊಳ್ಳಲು ಒಪ್ಪಲಿಲ್ಲ. ಬೆಂಗಳೂರು ಸೇರಿದಂತೆ, ಆಗ ಮೈಸೂರು ಚಲೋ ಚಳವಳಿ ನಡೆಯಿತು; ಮೈಸೂರು ಸರಕಾರದ ಪೊಲೀಸರು ಆ ಚಳವಳಿಯನ್ನು ಹತ್ತಿಕ್ಕಲು, ರಾಜ್ಯದ ವಿವಿಧ ಕಡೆ ಗೋಲೀಬಾರ್ ಮಾಡಿ, ಹಲವು ಜನಸಾಮಾನ್ಯರನ್ನು, ವಿದ್ಯಾರ್ಥಿಗಳನ್ನು ಸಾಯಿಸಿದರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಚಳುವಳಿ ಮುಂದುವರೆದ ಸಂದರ್ಭದಲ್ಲಿ ಗೊರೂರಿನ ಸಂಪತ್ತಯಂಗಾರ್‌ರವರನ್ನು ಅರೆಸ್ಟ್ ಮಾಡಿದ ಸಂದರ್ಭದಲ್ಲಿ, ಅವರ ಮನೆಯಲ್ಲಿ ವಾರಾನ್ನಕ್ಕೆ ಇದ್ದ ಭೈರಪ್ಪನವರಿಗೆ ಊಟಕ್ಕೆ ಕೊರತೆಯಾಗಲಿಲ್ಲ. ಏಕೆಂದರೆ, ಅವರ ಪತ್ನಿ ವಾರಾನ್ನ ವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದ ಪ್ರಸಂಗವನ್ನು ಹೇಳುತ್ತಾ ಮುಂದೆ ಅವರು ತಾವು ಚಳುವಳಿಯಲ್ಲಿ ಅದರ ಭಾಗವಾಗಿದ್ದನ್ನು ವಿವರಿಸುತ್ತಾರೆ.

ಸಾಹಿತಿಯ ದೇಶಾಭಿಮಾನ

ಇದೇ ಸಂದರ್ಭದಲ್ಲಿ, ಗೊರೂರಿನ ಸಾಹಿತಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕುರಿತಾದ ವಿಚಾರಗಳನ್ನೂ ಭೈರಪ್ಪನವರು



ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ. ಹೇಮಾವತಿ ನದಿಯ ಮೊಟ್ಟೆ ಕಲ್ಲು ಮಡುವಿನಲ್ಲಿ ಜೊತೆಯಲ್ಲಿ ಈಜಿದ ಪ್ರಸಂಗವನ್ನು, ಸುಳಿಯಲ್ಲಿ ಸಿಕ್ಕು, ಅದರ ಸೆಳೆತಕ್ಕೆ ಮುಳುಗಿ ಕೊನೆಯ ಗಳಿಗೆಯಲ್ಲಿ ಎಲ್ಲಾ ಕೌಶಲ್ಯವನ್ನು ಬಳಸಿ ಪಾರದುದ್ದನ್ನು ವಿವರಿಸಿದರು; ಜತೆಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಹೇಗೆ ದೇಶಾಭಿಮಾನ ಮೆರೆದರು ಎಂಬುದನ್ನೂ ಬರೆದಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮಗ ತುಮಕೂರಿನಲ್ಲಿ ಓದುತ್ತಿದ್ದ; ಮೈಸೂರು ಸರಕಾರದ ವಿರುದ್ಧ ನಡೆದ ಚಳವಳಿಯಲ್ಲಿ, ಅವನು ಪೊಲೀಸ್ ಗೋಲಿಬಾರ್ ನಲ್ಲಿ ತೀರಿಕೊಂಡ ಸಂದರ್ಭದಲ್ಲಿ ಜೀವನದ ದುರಂತದ ಘಟನೆಯನ್ನು ಗೊರೂರರು ಎದುರಿಸಿದ ಬಗೆಯನ್ನು ನೆನಪಿಸಿಕೊಳ್ಳುತ್ತಾರೆ.

''ಶವದ ಚಿತಾಭಸ್ಮವನ್ನು ಗೊರೂರಿಗೆ ಎರಡು ಮೈಲಿ ದೂರದಲ್ಲಿ ಹೇಮಾವತಿ ಮತ್ತು ಎಗಚಿ ನದಿಗಳ ಸಂಗಮದಲ್ಲಿ ವಿಸರ್ಜಿಸಲು, ನಾವೆಲ್ಲ ಮೆರವಣಿಗೆಯಲ್ಲಿ ಹೋಗಿದ್ದೆವು. ಸುಮಾರು ಐನೂರು ಜನ. ಮಗನ ಚಿತಾಭಸ್ಮವನ್ನು ಎರಡು ಕೈಗಳಲ್ಲೂ ಹಿಡಿದು ನಡುವೆ ನಡೆಯುತ್ತಿದ್ದ ತಂದೆ, (ಗೊರೂರು ರಾಮಸ್ವಾಮಿ ಅಯ್ಯಂಗಾರ್) ಸೊಂಟ ಮಟ್ಟದ ನೀರಿಗೆ ಇಳಿದು, ಅದನ್ನು ವಿಸರ್ಜಿಸಿ ಮೂರು ಸಲ ಮುಳುಕು ಹಾಕಿ ದಡಕ್ಕೆ ಬಂದ ಮೇಲೆ ಅವರು ನಮ್ಮನ್ನು ಉದ್ದೇಶಿಸಿ ಹೇಳಿದರು - ಇಂತಹ ಸಾವಿಗೆ ಶೋಕಿಸಬಾರದು. ಅವನು ದೇಶದ ವಿಮೋಚನೆಗಾಗಿ ಜೀವಾರ್ಪಣೆ ಮಾಡಿದ.'' ಭೈರಪ್ಪನವರ ಆತ್ಮಕತೆಯಲ್ಲಿ, ಈ ಘಟನೆಗಳನ್ನೆಲ್ಲ ಓದಿದಾಗ ಗೊರೂರನ್ನು ಬೆಳಗಿದ ಮಹನೀಯರು, ಅವರನ್ನು ಕೃತಜ್ಞತಾ ಭಾವದಿಂದ ದಾಖಲಿಸಿರುವ ಭೈರಪ್ಪನವರು, ಅದೇ ಊರಿನವರಾದ ನಮ್ಮಲ್ಲಿ ಹೆಮ್ಮೆಯ ಭಾವವನ್ನು ಮೂಡಿಸುತ್ತಾರೆ.



ಸಂತೇಶಿವರದ ಸಾಧಕ

ಕವಿ ಕಣ

ಜಗದಂಗಳದಲ್ಲಿ ವ್ಯಾಪಾರ ಮುಗಿಸಿ ಹೊರಟೇ ಬಿಟ್ಟ
ಸಂತೇಶಿವರದ ಸಾಹಿತ್ಯ ಸಾಧಕ
ಕಂಡದ ಕಾದಂಬರಿ ಶಕ್ತಿಭೂಪ
ದಿಕ್ಕುಗಳ ಮುರಿದು ದಿಗಂತಕೇರಿ
ಹಬ್ಬಿಸಿದ ಮಲ್ಲಿಗೆ ಶ್ರೀಗಂಧ ದೂಪ
ಸಾಹಿತ್ಯ ಸರಸ್ವತಿಯ ವಿರಾಟರೂಪ

ವಟಗುಟ್ಟುವ 'ಗೂಬಲ್' ಸಂತತಿಗೆ
ತೋರಿ ಅನುತಾಪ
'ವಂಡರ್' ಗಣ್ಣಿನಲಿ ಸತತ ಸತ್ಯವ
ಹುಡುಕಿದ
ಧೀರ ಧೀಮಂತ
ನಮನವಿದೋ ನಿನಗೆ
ನನ್ನೆದೆಯ ಸಂತಾಪ

ತೇಲಿಹೋಗುವ ಪರಿಯಲ್ಲ
ಆಳಕ್ಕೆ ಇಳಿದು ತಳವ ಸೋಸಿ ಅಣುಕಣವ
ಬಿಡಿಸಿ
ಸತ್ಯಶೋಧನೆಯ ನಿಕಷಕ್ಕೆ ಒಡ್ಡಿ
ನಂಬಿದ್ದನ್ನು ಮುರಿದಂತೆ ಕಡ್ಡಿ
ಅತ್ತಿತ್ತ ಸರಿಯದಂತೆ ಅಡ್ಡಾದಿಡ್ಡಿ
ನಿಖರದಿ ಆಡಿದ ಸಾವಿರದ ನುಡಿ,
ನೀನು ಅಭಿವ್ಯಕ್ತಿಸಿದ ರೀತಿಗೆ ನಮ್ಮನ್ನು
ಪ್ರಭಾವಿಸಿದ ಪರಿಗೆ
ಇದೋ ಉಧೋ ಉಧೋ ನಮಸ್ಕಾರ

ಇಂದಲ್ಲ
ವರುಷವಿನ್ನೂರರ ನಂತರ ಓದಿದರೆ,
ಮೆಚ್ಚಿದರೆ, ಉಳಿದಿದ್ದರೆ ಸಾಹಿತ್ಯ
ಅದು ಗಟ್ಟಿ ನೀನೂ ಗಟ್ಟಿ ಎಂದು ನಿನಗೆ
ನೀನೇ ಸವಾಲೆಸದ ಧೀಮಂತ,
ಸತ್ವ ಸಾಹಿತ್ಯ ಸಂಪದವ
ಶತಮಾನಗಳಿಗಿತ್ತು,
ಭೌತಿಕ ಸಂಪತ್ತು ನೊಂದವರಿಗಿತ್ತು,
ಸಂತೇಶಿವರಕೆ
ಜೀವ ಜಲನಿಧಿ ತರಿಸಿದ ಹರಿಸಿದ
ಭಗೀರಥ
ನಿನ್ನನ್ನು ಒಪ್ಪದಿರಬಹುದು ಕೆಲರು
ಆದರೆ ನಿರಾಕರಿಸಲಾರರು ಯಾರೂ

ಅದೇನು ಕೊಟ್ಟಕೊನೆಯ ಪ್ರಶಸ್ತಿ
ಮೇರುವಲ್ಲ,
ದಿವಿಜರಿಗೆ ಕೊಡಲಿಲ್ಲ, ಅಡಿಗರಿಗೆ
ಕೊಡಲಿಲ್ಲ
ಇಷ್ಟಕ್ಕೂ ಜ್ಞಾನಪೀಠಕ್ಕೇ ಬರುತ್ತಿತ್ತು ಗೌರವ
ಎಷ್ಟು ಹಳಿದುಕೊಂಡರೂ ತನ್ನತಾ ಪೀಠ,
ಮರಳಿ ಬಾರರು ಭೈರಪ್ಪ

ಸ್ವಾಮಿ ಭೈರಪ್ಪನವರೇ
ನೀವಿಲ್ಲಿ ಇರುವಿರಿ ಶಾಶ್ವತವಾಗಿ
ಸೂರ್ಯ ಚಂದ್ರರು ಇರುವತನಕ
ಕನ್ನಡದ ಮನಸ್ಸುಗಳ ಪೀಠಾಧಿಪತಿಯಾಗಿ
ನಮ್ಮ ಆತ್ಮದ ಅರಿವಾಗಿ ಪೊಳ್ಳುನಡೆಗಳಿಗೆ
ಎದುರಾಗಿ



» ಬೆಂಶ್ರೀ ರವೀಂದ್ರ

ವಿರಾಮದಲ್ಲಿ ಪ್ರಕಟಗೊಂಡ 'ನಿಸರ್ಗ ನಿರ್ಮಿಸಿದ ಕಂಬಗಳು' (ಸೆ.21) ಲೇಖನ ಓದಿದಾಗ ಅಲ್ಲಿ ಸುತ್ತಾಡಿದ ನೆನಪು ಮರುಕಳಿಸಿತು. ಆ ದ್ವೀಪದ ಮರಳಿಗಿಂತ, ಅಲ್ಲಿರುವ ನೀಳವಾದ ಶಿಲಾರಚನೆಗಳು ಹೆಚ್ಚು ಕುತೂಹಲ ಆಸಕ್ತಿ ಹುಟ್ಟಿಸುತ್ತವೆ. ಅದು ಟೂರಿಸ್ಟ್ ಸ್ಪಾಟ್ ಆಗಿ 'ಅಭಿವೃದ್ಧಿ'ಗೊಳ್ಳುವ ಬದಲು, ಆ ವಿಶಿಷ್ಟ ವಿನ್ಯಾಸದ ಶಿಲೆಗಳು ಸುರಕ್ಷಿತವಾಗಿ ಉಳಿಯುವುದು ಮುಖ್ಯ. 'ನಿಜಾರ್ಥದ ವಿಶ್ವಸಾಹಿತಿ' (ಸೆ.28) ಅನುವಾದಕರ ಅನುಭವಗಳನ್ನು ಸಂಗ್ರಹಿಸಿ ಕೊಟ್ಟಿದೆ. ಭೈರಪ್ಪನವರು ಕಾದಂಬರಿ ರಚಿಸಲು ಹಲವು ಭಾಷೆಗಳ ಆಕರಗ್ರಂಥಗಳನ್ನು ಓದುತ್ತಿದ್ದರು, ಆದರೆ ಸ್ವಂತ ವಿವೇಚನೆಯಿಂದ ಬರೆಯುತ್ತಿದ್ದರು. ಹಾಗಿದ್ದರೂ 'ಪರ್ವ' ಕಾದಂಬರಿಯು ಇರಾವತಿ ಕರ್ವೆಯವರ 'ಯುಗಾಂತ'ದ ನಕಲು ಎಂಬ ಆರೋಪ ಮಾಡಿದ್ದವರು ಕನ್ನಡಿಗ ಸಾಹಿತಿಗಳೇ! ಅದು ಆಧಾರರಹಿತ ಎಂದು ನಂತರ ತಿಳಿಯಿತು. ಪರ್ವ ಕಾದಂಬರಿಯು ಉರ್ದುವಿಗೂ ತರ್ಜುಮೆ ಆಗಿರುವುದು ವಿಶೇಷ. ಇಷ್ಟು ಭಾಷೆಗಳಿಗೆ ಹೋಗಿರುವ ಕನ್ನಡ ಲೇಖಕರು ಇನ್ನುಯಾರಿದ್ದಾರೆ ?

ಎಚ್.ಎಸ್.ಮಂಜುನಾಥ ಗೌರಿಬಿದನೂರು

ಪೋಸ್ಟ್ ಆಫೀಸು

ವಿಶ್ವದರ್ಜೆಯ ಸಾಹಿತಿ ಎಸ್.ಎಲ್.ಭೈರಪ್ಪನವರ ಕುರಿತಾದ ವಿಶೇಷ ಲೇಖನಗಳು, ಹಲವು ಹೊಸ ವಿಚಾರಗಳನ್ನು ತಿಳಿಸಿದವು ಮತ್ತು ಅವರ ಕಾದಂಬರಿಗಳನ್ನು ಮತ್ತೊಮ್ಮೆ ಓದುವಂತೆ ಮಾಡಿದವು. ಮುಖ್ಯವಾಗಿ ಅವರ 'ಗೃಹಭಂಗ' ಮತ್ತು 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಗಳು ನನ್ನ ಮೆಚ್ಚುಗೆ ಗಳಿಸಿವೆ.

ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

ಆಂಗ್ಲಭಾಷೆಯಲ್ಲಿ ಹಸುರು ಹೊನ್ನು

» ಕಿರಣ್ ರಾಜನಹಳ್ಳಿ

ಪ್ರವಾಸ ಕಥನಗಳು ಅದೆಷ್ಟೋ ಪ್ರಕಟವಾಗಿವೆ. ಅವುಗಳಲ್ಲಿ ಬಹಳಷ್ಟು ಕೃತಿಗಳು ಓದುಗರ ಮನಸ್ಸನ್ನೂ ಗೆದ್ದಿವೆ. ಆ ಪ್ರದೇಶ ನೋಡುತ್ತೇವೋ ಇಲ್ಲವೋ... ಆದರೆ ಈ ಕೃತಿಯ ಮೂಲಕ ಆ ಪ್ರದೇಶ ಹೃದಯವನ್ನಾವರಿಸಿಬಿಟ್ಟಿದೆ. ಅಕ್ಷರಗಳಲ್ಲೇ ಆ ತಾಣವನ್ನು ಕಣ್ಣೆದುರು ನಿಲ್ಲಿಸಿಬಿಟ್ಟಿದೆ, ಎಂದೆನ್ನಿಸುವಷ್ಟು ಸೊಗಸಾದ ಪ್ರವಾಸ ಕಥನಗಳು ನಮ್ಮ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಬೆಳಗಿವೆ. ನನ್ನ ಓದಿನಲ್ಲಿ ಅಂಥ ಅದ್ಭುತ ಪ್ರವಾಸ ಕಥನಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಬಿ.ಜಿ.ಎಲ್ ಸ್ವಾಮಿಯವರು ರಚಿಸಿದಂತಹ 'ಹಸುರು ಹೊನ್ನು'! ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸದಾಕಾಲ ಹಸಿರಾಗಿರುವ ಹೊನ್ನ ಸಿರಿಯೇ ಅದು. ಸಸ್ಯಲೋಕವನ್ನು ಮುಖ್ಯ ಪಾತ್ರವನ್ನಾಗಿಟ್ಟುಕೊಂಡು ಅತ್ಯಪೂರ್ವ ಫ್ಯಾಂಟಸಿ ಲೋಕವೊಂದರ ಫೀಲ್ ಕೊಡುವಂತೆ ರಚಿಸುವುದೆಂದರೆ ಸಾಧಾರಣ ಕೆಲಸವಲ್ಲ. ಹಸುರು ಹೊನ್ನು ಪುಸ್ತಕದಲ್ಲಿ ನವಿರಾದ ಹಾಸ್ಯರಸ ಅಲ್ಲಲ್ಲಿ ಹರಿಯುತ್ತಾ ಮಂದಹಾಸ ಮೂಡಿಸಿತ್ತದಲ್ಲಾ...ಅದೊಂದು ಶುದ್ಧ ಹಾಸ್ಯದ ಮಾನದಂಡವನ್ನಾಗಿಸುತ್ತದೆ.

ಹಾಗೆ ನೋಡಿದರೆ 'ಹಸುರು ಹೊನ್ನು' ಒಂದು ಸಂಕೀರ್ಣ ವಸ್ತುವಿನ ಪ್ರವಾಸ ಕಥನ. ಅದರಲ್ಲಿ ರೋಚಕತೆಯನ್ನು ಅಕ್ಷರಗಳಲ್ಲಿ ಕಟ್ಟಿಕೊಡುವುದೆಂದರೆ ಸುಲಭವಲ್ಲವೇ ಅಲ್ಲ. ಅಂಥ ಕೃತಿಯನ್ನು ಮತ್ತೊಂದು ಭಾಷೆಗೆ ಅನುವಾದ ಮಾಡುವುದೆಂದರೆ ದೊಡ್ಡ ಸವಾಲೊಂದನ್ನು ಮೈಮೇಲೆ ಎಳೆದುಕೊಂಡಂತೆ!

ಜ್ಯೋತಿ ನಟರಾಜನ್ ಅವರು ಹಸುರು ಹೊನ್ನು ಕೃತಿಯನ್ನು ಇಂಗ್ಲೀಷ್ ಭಾಷೆಗೆ ಅನುವಾದ ಮಾಡುತ್ತಿದ್ದಾರೆ ಎಂದು ಕೇಳಿದ ತಕ್ಷಣ ನನ್ನಲ್ಲಿ ಮೊದಲು ಮೂಡಿದ ಪ್ರಶ್ನೆಯೇ, 'ಇದು ಸಾಧ್ಯವೇ?!' ಎಂಬುದು. ಏಕೆಂದರೆ 'ಹಸುರು ಹೊನ್ನು' ಕೃತಿಯಲ್ಲಿ ಬಿಜಿಎಲ್ ಸ್ವಾಮಿಯವರು ಅನೇಕ ಕಡೆ ಹಳೆಗನ್ನಡ, ಸಂಸ್ಕೃತ ಮುಂತಾದ ಭಾಷೆಗಳಿಂದ ವಿವರಣೆಗಳನ್ನು, ಸಾಲುಗಳನ್ನು ಉದಾಹರಣೆಗಳಿಗಾಗಿ ಬಳಸಿಕೊಂಡಿದ್ದಾರೆ. ವಚನಗಳನ್ನು, ದಾಸ ಸಾಹಿತ್ಯವನ್ನು, ಉಕ್ತಿಗಳನ್ನು ಹೆಣೆದುಕೊಂಡು ಕನ್ನಡ ಭಾಷೆಯ ವಿವಿಧ ರೂಪಗಳ ಮಿಶ್ರಣವಾಗಿರುವ ರಚನೆಯಿದು. ಕನ್ನಡದಲ್ಲಿ ಅಡಗಿರುವ ವಿವಿಧ ರೂಪಗಳನ್ನು ಕನ್ನಡದಲ್ಲಿ ಮಾತ್ರ ತೋರಿಸಬಹುದು. ಆದರೆ ಇಂಗ್ಲೀಷ್‌ನಲ್ಲಿ ಆ ಬಗೆಬಗೆಯ ಸೊಗಡನ್ನು ಮೂಡಿಸುವುದು ಕಷ್ಟವೇ.

ಉದಾಹರಣೆಗೆ ನೋಡಿ, ಹಸುರು ಹೊನ್ನು ಪುಸ್ತಕದಲ್ಲಿ ಒಂದು ಕಡೆ ಅಡಿಕೆಯ ಬಗ್ಗೆ ವಿವರ ಬರುತ್ತದೆ. ಅದೊಂದು ವಿವವರಣೆಯಲ್ಲೇ ಹಳೆಗನ್ನಡ, ನಡುಗನ್ನಡ, ಸಂಸ್ಕೃತ ಎಲ್ಲವೂ ಸೇರಿಕೊಂಡಿವೆ. ಚರಕ ಸಂಹಿತ, ರಾಮಾಯಣ ಮುಂತಾದವುಗಳಿಂದ ಪೂರಕವಾದ ಅಂಶಗಳನ್ನು ಸಮೃದ್ಧವಾಗಿ ತುಂಬಿಸಿದ್ದಾರೆ. ಕನ್ನಡದಲ್ಲಿ ಬರೆಯುವ ಹಾಗೆ ಇಂತಹ ಸೊಗಡುಗಳನ್ನು ಎಂಗಡಿಸಿ, ಇಂಗ್ಲಿಷ್‌ನಲ್ಲಿ ಬರೆಯುವುದು ಕಷ್ಟ. ಆ ಕುತೂಹಲದಿಂದಲೇ ಜ್ಯೋತಿ ನಟರಾಜ್ ಅನುವಾದಿಸಿದ ಪುಸ್ತಕವನ್ನು ಗಮನವಿಟ್ಟು ಓದಿದೆ. ಅವರೆಷ್ಟು ಸೊಗಸಾಗಿ ಅನುವಾದಿಸಿದ್ದಾರೆಂದರೆ ಇಂಗ್ಲೀಷ್ ಸಾಲುಗಳಲ್ಲೂ ವಿಶಿಷ್ಠವಾದ ಕನ್ನಡದಲ್ಲಿರುವ ಹಲವಾರು ಪರಿಮಳಗಳು ದಕ್ಕುತ್ತವೆ.

ಇಂಗ್ಲಿಷ್‌ನಲ್ಲಿ ಮುದ್ದಣ!

ಹಸುರು ಹೊನ್ನು ಪುಸ್ತಕದಲ್ಲಿ ಬರುವ ಮುದ್ದಣನ ಮಾತುಗಳು ಹೀಗಿವೆ:

ಪಚ್ಚೆಯ ಚೆಂಬದಳದ
ಲಂಬಳದಿಂ ಸಿಂಗರಿಸಿ
ಸೋಗೆವೀಲಿ
ಕಣ್ಗಡ್ಡಮಾಗಿಕುರ್ಂ ಕೌಂಗುದೋಟಂ

ಇದು ಅಡಿಕೆಯ ಬಗ್ಗೆ ಸ್ವಾಮಿಯವರು ಬರೆಯುವಾಗ, ಬಳಸಿಕೊಂಡ ಸಾಲುಗಳು. ಇದನ್ನು ಜ್ಯೋತಿ ನಟರಾಜ್‌ರವರು ಅದೆಷ್ಟು ಸುಲಲಿತವಾಗಿ, ಸರಳವಾಗಿ ಇಂಗ್ಲೀಷ್‌ನಲ್ಲಿ ಅನುವಾದಿಸಿದ್ದಾರೆಂದರೆ, ಆ ಸಾಲುಗಳನ್ನು ಓದುತ್ತಲೇ ಖುಷಿಯಾಗುತ್ತದೆ.

The tall green areca,
adorned by leaves
that look like a
bedecked bride

ಎಂದು ಅನುವಾದಿಸಿ, ಮುದ್ದಣನ ವರ್ಣನೆಯನ್ನು ಇಂಗ್ಲೀಷ್‌ನಲ್ಲಿ ಹಿಡಿದಿಡುತ್ತಾರೆ!

ಹಸಿರು ಹೊನ್ನು ಪುಸ್ತಕದಲ್ಲಿ ಬರುವ ಅನಫಿಲಮ್ ಎಂಬ ಹೂವಿನ ಗಿಡದ ಕುರಿತಾಗಿ ಬರೆದಿರುವ ವಿವರಣೆಯನ್ನು ಓದಿದವರ್ಯಾರೂ ಒಂದಷ್ಟು ಕಾಲ ಮರೆಯುವುದಕ್ಕೇ ಸಾಧ್ಯವಿಲ್ಲ! ಆ ವಿವರಣೆಯಲ್ಲಿ ರೋಚಕತೆ, ಕುತೂಹಲ, ತಮಾಷೆ, ಅಧ್ಯಾತ್ಮ, ವಾಸ್ತವ...ಎಲ್ಲವೂ ಬೆರೆತುಹೋಗಿವೆ. ಅದರಲ್ಲಿ ಕನಕದಾಸರ ರಚನೆಯೊಂದನ್ನು ಉದಾಹರಣೆಯಾಗಿ ನೀಡಿದ್ದಾರೆ.

ಕುಸುಮದೊಳು ಗಂಧವೋ
ಗಂಧದೊಳು ಕುಸುಮವೋ
ಕುಸುಮಗಂಧಗಳೆರಡು
ಘ್ರಾಣದೊಳಗೋ?

ಎಂಬ ಅವರ ಪ್ರಶ್ನೆಯನ್ನು ಜ್ಯೋತಿ ನಟರಾಜನ್‌ರವರು –

Is petal within the fragrance
Or is fragrance within the petal?
Or are petal and fragrance
Both, within the sense of smell?

ಎಂದು ಅನುವಾದಿಸಿದ್ದಾರೆ.

ಈ ಅನುವಾದದ ಉದಾಹರಣೆಗಳನ್ನು ಏಕೆ ಉಲ್ಲೇಖಿಸಿದೆ ಎಂದರೆ ಈ ಬೃಹತ್ ಕೃತಿಯನ್ನು ಇದೇ ರೀತಿ ಲೀಲಾಜಾಲವಾಗಿ ಬೆಣ್ಣೆಯಲ್ಲಿ ಬರೆದಂತೆ ಕನ್ನಡದ ದನಿಯೇ ಎಂಬಂತೆ ಭಾಸವಾಗುವ ರೀತಿಯಲ್ಲಿ ಇಂಗ್ಲೀಷ್‌ನಲ್ಲಿ ಅನುವಾದ ಮಾಡಿದ್ದಾರೆ. 'ಹಸುರು ಹೊನ್ನು' ಕೃತಿಯು ಕನ್ನಡದಲ್ಲಿ ನೀಡುವಷ್ಟೇ ಓದಿನ ಖುಷಿಯನ್ನೂ, ಮುದವನ್ನೂ ಇಂಗ್ಲೀಷ್ ಅನುವಾದಿತ Hasuru honnu, when green is gold ನೀಡುತ್ತದೆ. ಅನುವಾದಕಿ ಜ್ಯೋತಿ ನಟರಾಜನ್‌ರವರಿಂದ ಇನ್ನಷ್ಟು ಕೃತಿಗಳು ಇಂಗ್ಲಿಷ್‌ಗೆ ಅನುವಾದಗೊಳ್ಳಲಿ, ಕನ್ನಡದ ಅಮೂಲ್ಯ ಕೃತಿಗಳು ಇಂಗ್ಲೀಷ್ ಓದುಗರನ್ನೂ ತಲುಪಲಿ ಎಂದ ಕನ್ನಡಿಗರೆಲ್ಲರೂ ಹಾರೈಸಬಹುದು!

(ಬಿಜಿಎಲ್ ಸ್ವಾಮಿಯವರ 'ಹಸುರು ಹೊನ್ನು' ಪುಸ್ತಕದ ಇಂಗ್ಲಿಷ್ ಅನುವಾದ Hasuru honnu, when green is gold ಇದನ್ನು ಡಿವಿಜಿ ಬಳಗ ಪ್ರತಿಷ್ಠಾನವು (9448973582) ಪ್ರಕಟಿಸಿದೆ.)



ಕನ್ನಡದ ಅತ್ಯುತ್ತಮ ಪುಸ್ತಕಗಳನ್ನು ಪಟ್ಟಿ ಮಾಡಿದರೆ, ಬಿ.ಜಿ.ಎಲ್.ಸ್ವಾಮಿ ಅವರ 'ಹಸುರು ಹೊನ್ನು' ಪುಸ್ತಕಕ್ಕೆ ತಪ್ಪದೇ ಉನ್ನತ ಸ್ಥಾನ ದೊರಕಲೇಬೇಕು; ಅದೊಂದು ಅನನ್ಯ ಪುಸ್ತಕ. ಅದರಲ್ಲಿ ಪ್ರವಾಸಾನುಭವವಿದೆ, ಸಸ್ಯಶಾಸ್ತ್ರವಿದೆ, ಹಾಸ್ಯವಿದೆ, ರೇಖಾಚಿತ್ರಗಳಿವೆ, ಗ್ರಾಮೀಣ ಅನುಭವವಿದೆ! ಹಸುರು ಹೊನ್ನು ಗ್ರಂಥವನ್ನು ಜ್ಯೋತಿ ನಟರಾಜನ್ ಅವರು ಈಗ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ವಸ್ತ್ರಾಲಂಕಾರದಲ್ಲಿ ದಾಖಲೆ!

» ಕೆ. ರಾಮ ಮೂರ್ತಿರಾವ್ ಮೈಸೂರು

ಮೈಸೂರಿನಲ್ಲಿ 'ರಾಜರಾಜೇಶ್ವರಿ ವಸ್ತ್ರಾಲಂಕಾರ' ಎಂದರೆ ಯಾರಿಗೆ ತಾನೆ ಗೊತ್ತಿಲ್ಲ? ಮೈಸೂರಿನ ಯಾವುದೇ ಶಾಲಾಕಾಲೇಜಿನಲ್ಲಿ ನಡೆಯುವ ವಾರ್ಷಿಕೋತ್ಸವ ಅಥವಾ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವಿರಲಿ ಅಲ್ಲಿ ವೇಷಭೂಷಣ, ವರ್ಣಾಲಂಕಾರಕ್ಕೆ ರಾಜರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥೆಯ ಮುಖ್ಯಸ್ಥರಾದ ರಾಮಚಂದ್ರರೇ ಎಲ್ಲರಿಗೂ ಬೇಕು.

ಮೈಸೂರಿನ ನಂಜುಮಳಿಗೆ ವೃತ್ತದ ಬಳಿಯ ಗಾಡಿ ಚೌಕದ ಹತ್ತಿರವೇ ಇವರ ಮನೆ. ಒಳಗೆ ಕಾಲಿಟ್ಟೊಡನೆ ಕಾಣುವುದೇ ರಾಜರಾಜೇಶ್ವರಿ ದೇವಿಯ ಭವ್ಯ ಅಲಂಕೃತ ಸುಂದರ ವಿಗ್ರಹ. ಅದರ ಒಂದು ಮಗ್ಗುಲಲ್ಲಿ ರಾಮಚಂದ್ರ ಮೇಜು, ಖುರ್ಚಿ, ಇನ್ನು ಉಳಿದ ಕಡೆಗಳಲ್ಲಿ ಇಸ್ತ್ರಿ ಮಾಡಿ ಒಪ್ಪ ಓರಣವಾಗಿ ಜೋಡಿಸಿದ ವಿವಿಧ ವೇಷಗಳಿಗೆ ಬೇಕಾದ ವಸ್ತ್ರಗಳು. ಮನೆಗೆ ಬಂದ ಎಲ್ಲರನ್ನೂ ನಗುನಗುತ್ತಲೇ ಸ್ವಾಗತಿಸುವ ರಾಮಚಂದ್ರ ಇವರು ರಾಮಾಯಣ, ಮಹಾಭಾರತ ಅಥವಾ ಯಾವುದೇ ಪುರಾಣ ಕಥೆಗಳಲ್ಲಿ ಬರುವ ಪಾತ್ರಗಳಿರಲಿ ಆ ಎಲ್ಲದಕ್ಕೂ ಬೇಕಾಗುವ ಉಡುಗೆ, ತೊಡುಗೆ, ಕಿರೀಟ, ಹಾರ, ಕೇಯೂರ, ಆಯುಧ, ಸರ, ಮಣಿಹಾರ, ಬಾಜು ಬಂಧಿ, ಸೊಂಟದ ಪಟ್ಟಿ ,ಡಾಬು ಮುಂಡಾಸು, ರುಮಾಲು, ಬಿಲ್ಲು, ಬಾಣ, ಗಧೆ ಮುಂತಾದ ಎಲ್ಲವನ್ನು ಇಟ್ಟಿದ್ದಾರೆ

ಭಾರತದ ಶಾಸ್ತ್ರೀಯ ನೃತ್ಯ ಪ್ರಕಾರಗಳಾದ ಭರತನಾಟ್ಯ, ಕೂಚುಪುಡಿ, ಕದಕ್, ಕಥಕ್ಕಳಿ ಮಣಿಪುರಿ ಹೀಗೆ ಈ ಎಲ್ಲಾ ನೃತ್ಯ ಪ್ರದರ್ಶನಗಳಿಗೆ ಬೇಕಾದ ಉಡುಗೆ ತೊಡುಗೆ, ಆಭರಣ, ತಲೆ ಸೆಟ್ಟು, ಗೆಜ್ಜೆ ಮುಂತಾದ ಎಲ್ಲವನ್ನೂ ಇಲ್ಲಿ ಇಟ್ಟಿದ್ದಾರೆ. ದಾಖಲೆಗಾಗಿ ಒಂದೇ ಬಾರಿ ಒಂದು ಸಾವಿರ ಮಂದಿ ನೃತ್ಯ ಮಾಡಿದರೂ ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸುವ ಶಕ್ತಿ ರಾಮಚಂದ್ರ ಅವರಿಗಿದೆ. ಹೀಗಾಗಿ ಮೈಸೂರಿನ ಎಲ್ಲಾ ಕಲಾಕಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಇವರು ಬೇಕೇಬೇಕು. ರಂಗಭೂಮಿಯ' ನಿರ್ದೇಶಕರುಗಳಾದ ಬಿ.ವಿ.ಕಾರಂತ್, ನಾಗಾಭರಣ, ಪ್ರಸನ್ನ, ಸಿ. ಜಿ. ಕೆ., ಬಸವ ಲಿಂಗಯ್ಯ, ಎಚ್. ಎಸ್. ಉಮೇಶ್, ಯೋಗಾನರಸಿಂಹ, ಎಚ್. ಕೆ. ರಾಮನಾಥ್, ನ.ರತ್ನ. ಜನ್ನಿ ಮುಂತಾದವರ ಜತೆಗೂ ಅಲ್ಲದೆ ಅಂತರ್ರಾಷ್ಟ್ರೀಯ ನಿರ್ದೇಶಕರುಗಳಾದ ಬೆನಿವಿಟ್ಸ್ (ಅಮೇರಿಕಾ) ವಶೀಲಿ (ಗ್ರೀಕ್) ಅದ್ರಿಯಾನ (ಗ್ರೀಕ್) ಲೆವೆಂಡೋ (ಲಂಡನ್) ಮುಂತಾದವರ ಜತೆಗೂ ಕೆಲಸ ಮಾಡಿದ ಅನುಭವ ಇವರಿಗಿದೆ.

ಅರ್ಹರಿಗೆ ಉಚಿತ ಸೇವೆ!

ಸಂಪಾದನೆಯೊಂದನ್ನೇ ಜೀವನದ ಗುರಿಯಾಗಿಟ್ಟುಕೊಳ್ಳದೆ ಸಾಮಾಜಿಕ ಬದ್ಧತೆಯೊಂದಿಗೆ ಕೆಲಸ ಮಾಡುವ ಇವರು, ವಿಶೇಷ ಚೇತನ ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉಚಿತ ವಸ್ತ್ರಾಲಂಕಾರ ಹಾಗೂ ಪ್ರಸಾಧನ ಒದಗಿಸುತ್ತಾರೆ.

ಹಂಪಿ ಉತ್ಸವದಲ್ಲಿ 850 ಜನರಿಗೆ ವಸ್ತ್ರಾಲಂಕಾರ ಹಾಗೂ ಪ್ರಸಾದನ ಮಾಡಿಕೊಟ್ಟ ಹೆಗ್ಗಳಿಕೆ ಇವರದ್ದು . ಹಾಗೆಯೇ ಡಾ. ರಾಜ್ ಕುಮಾರ್ ನಟಿಸಿದ 75 ವಿಭಿನ್ನ ಪಾತ್ರಗಳ ವಸ್ತ್ರಾಲಂಕಾರ ಮಾಡಿ ಜನಮೆಚ್ಚುಗೆ ಗಳಿಸಿದ್ದಾರೆ. ಮೈಸೂರಿನ ಯುವದಸರಾ, ಟಾರ್ಚ ಲೈಟ್ ಪೆರೇಡಿನ ಕಾರ್ಯಕ್ರಮ ಇವುಗಳಲ್ಲಿ ಇವರದ್ದೇ ವೈಭವದ ವಸ್ತ್ರಾಲಕಾರ.

ರಾಮಚಂದ್ರ ಅವರು ಐವತ್ತು ವರ್ಷಗಳಿಂದಲೂ, ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 1995ರಲ್ಲೇ ನಾಟಕ ಅಕಾಡೆಮಿ ಪ್ರಶಸ್ತಿ ಇವರಿಗೆ ಲಭಿಸಿದೆ. ಇದೇ ಅಕ್ಟೋಬರ್ 5ರಂದು ರಾಮಚಂದ್ರ ಅವರಿಗೆ 70 ವರ್ಷ ತುಂಬುತ್ತದೆ. ಅವರ ಹುಟ್ಟುಹಬ್ಬವನ್ನು ಅಂದು ಅವರ ಮಕ್ಕಳು, ಕುಟುಂಬದವರು ಹಾಗೂ ಅಭಿಮಾನಿಗಳು ಮೈಸೂರಿನಲ್ಲಿ ಅದ್ದೂರಿಯಾಗಿ ಆಚರಿಸಲು ತಯಾರಿ ನಡೆಸಿದ್ದಾರೆ. ವಸ್ತ್ರಾಲಂಕಾರದಲ್ಲಿ ದಾಖಲೆಯನ್ನೇ ಬರೆದ ಬಿ.ಎಂ. ರಾಮಚಂದ್ರ ಅವರು ಮೈಸೂರಿನ ಹೆಮ್ಮೆ!

ವಸ್ತ್ರಾಲಂಕಾರದಲ್ಲಿ ದಾಖಲೆಯನ್ನೇ ಬರೆದ ಮೈಸೂರಿನ ಬಿ.ಎಂ.ರಾಮಚಂದ್ರ ಅವರಿಗೆ ಇಂದು 70 ವರ್ಷ ತುಂಬುತ್ತದೆ!

ಸ್ನೇಹಿತರ ಯಶಸ್ಸು ಕಂಡು ಅಸೂಯೆ ಆಗುತ್ತಿದೆ! ಏನು ಮಾಡಲಿ?



ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಸುಮಂತ್, (ಇಮೇಲ್ ಮೂಲಕ)

- **ಸಂಪಾದಕರೇ, ನಾನು ಒಂದು ಖಾಸಗಿ ಕಂಪನಿಯಲ್ಲಿ ಟೆಕ್ಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಕಂಪನಿಯಲ್ಲಿರುವ ಒಬ್ಬಾಕೆ ಮೇಲೆ ಮನಸ್ಸಾಗಿದೆ. ಆದರೆ ಅವಳ ಮುಂದೆ ನನ್ನ ಮನಸ್ಸಿನ ಭಾವನೆಯನ್ನು ಹೇಳಲು ಸಾಧ್ಯವಾಗುತ್ತಿಲ್ಲ. ಕಳೆದ ಮೂರು ವರ್ಷಗಳಿಂದ ಪೇಚಾಡುತ್ತಿದ್ದೇನೆ. 'ಐ ಲವ್ ಯು' ಎಂದು ಆಕೆಗೆ ಹೇಗೆ ಹೇಳುವುದು?**

– ಸುಮಂತ್ ಅವರೇ, ಮೂರು ವರ್ಷಗಳಿಂದ ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಪೇಚ್ಚಾಡುತ್ತಿದ್ದೀರಿ ಎಂದರೆ ನಿಜಕ್ಕೂ ನಿಮ್ಮ ಧೈರ್ಯವನ್ನು ಮೆಚ್ಚಬೇಕು! 'ಐ ಲವ್ ಯೂ' ಎಂದು ಹೇಳುವಾಗ ಕೇವಲ ಗಂಭೀರವಾಗಿ ಹೇಳಿದರೆ ಸಾಕಾಗದು, ಅದಕ್ಕೆ ಒಂದು ವಿಭಿನ್ನ ಮತ್ತು ತಮಾಷೆಯ ಸ್ಪರ್ಶವಿದ್ದರೆ ಅದು ಹೆಚ್ಚು ಪರಿಣಾಮಕಾರಿ. ನಿಮ್ಮ ಮನಸ್ಸಿನ ಮಾತನ್ನು ಹೇಳಲು ಕೆಲವು ಮಾರ್ಗಗಳನ್ನು ಹೇಳಬಹುದು.

ಕಾಫಿ ಟಾಕ್ ಮೂಲಕ: ಅವಳು ಕಾಫಿ ಬ್ರೇಕ್‌ಗೆ ಹೋದಾಗ, ನೀವು ಆಕೆಯ ಹಿಂದೆಯೇ ಹೋಗಿ. 'ನನ್ನ ಮನಸ್ಸಲ್ಲಿ ಕಳೆದ ಮೂರು ವರ್ಷಗಳಿಂದ ಒಂದು ಪ್ರಾಜೆಕ್ಟ್ ನಡೆಯುತ್ತಿದೆ. ಅದರ ಕೋಡಿಂಗ್ ತುಂಬಾ ಕಷ್ಟವಾಗಿದೆ. ಅದನ್ನು ಪೂರ್ಣಗೊಳಿಸಲು ನಿಮ್ಮ ಸಹಕಾರ ಬೇಕು. ಪ್ರಾಜೆಕ್ಟ್ ಹೆಸರು 'ಐ ಲವ್ ಯೂ'!' ಎಂದು ಹೇಳಿ. ಅವಳು ನಗುತ್ತಾಳೆ. ಆಗ ನೀವು ನಿಮ್ಮ ಮನಸ್ಸಿನ ಮಾತನ್ನು ಹೇಳಬಹುದು.

ಆಟೋ ಕರೆಕ್ಷನ್ ತಂತ್ರ: ಆಕೆಯ ಜತೆ ಚಾಟ್ ಮಾಡುವಾಗ, ಬೇಕಂತಲೇ ಕೆಲವು ತಪ್ಪಾದ ಸಂದೇಶಗಳನ್ನು ಟೈಪ್ ಮಾಡಿ. ಉದಾಹರಣೆಗೆ, 'ನಿಮಗೆ ಐಸ್ ಕ್ರೀಮ್ ಬೇಕಾ?' ಎಂದು ಟೈಪ್ ಮಾಡುವಾಗ, ಅದನ್ನು 'ನಿಮಗೆ ಐ ಲವ್ ಯೂ ಬೇಕಾ?' ಎಂದು ಟೈಪ್ ಮಾಡಿ. ತಕ್ಷಣ 'ಕ್ಷಮಿಸಿ, ಆಟೋ ಕರೆಕ್ಷನ್ ನನ್ನನ್ನು ಮೋಸ ಮಾಡಿದೆ! ಎಂದು ಹೇಳಿ. ನಂತರ 'ಆದರೂ ಆಟೋಕರೆಕ್ಷನ್ ನಿಜ ಹೇಳಿದೆ ಅನ್ನಿಸುತ್ತೆ' ಎಂದು ನಗುತ್ತಾ ತಿಳಿಸಿ. ಆಕೆಯ ಮುಖದಲ್ಲಾದ ಬದಲಾವಣೆ ಗಮನಿಸಿ.

ಪ್ರೆಸೆಂಟೇಶನ್ ತಂತ್ರ : ಒಂದು ದಿನ ಅವಳನ್ನು ಪ್ರೆಸೆಂಟೇಶನ್ ಬಗ್ಗೆ ಮಾತನಾಡಲು ಕರೆಯಿರಿ. ನಿಮ್ಮ ಲ್ಯಾಪ್ಟಾಪ್‌ನಲ್ಲಿ ಒಂದು ಪವರ್‌ಪಾಯಿಂಟ್ ಸ್ಲೈಡ್ ರೆಡಿ ಮಾಡಿ. ಅದರಲ್ಲಿ ಬರೆದಿರುವ ವಿಷಯ : ಹಂತ 1: ನನ್ನ ಮನಸ್ಸಲ್ಲಿ ಮೂರು ವರ್ಷಗಳಿಂದ ಒಂದು ಸಮಸ್ಯೆಯಿದೆ. ಹಂತ 2 : ಆ ಸಮಸ್ಯೆ ನೀವೇ!. ಹಂತ 3: ಪರಿಹಾರವೆಂದರೆ ನಾನು ನಿಮ್ಮನ್ನು ಇಷ್ಟಪಟ್ಟಿದ್ದೇನೆ. ಹಂತ 4: ಇದು ಕೇವಲ ಪ್ರೆಸೆಂಟೇಶನ್ ಅಲ್ಲ, ಇದು ನನ್ನ ಹೃದಯದ ಮಾತು. ನಂತರ 'ಈ ಪ್ರಾಜೆಕ್ಟ್ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿ.

ಇಷ್ಟೆಲ್ಲ ಹೇಳುವಾಗ ನಿಮ್ಮ ಮಾತುಗಳಲ್ಲಿ ಆತ್ಮವಿಶ್ವಾಸ ಮತ್ತು ನಗು ಇರಲಿ. ಇದು ನೀವು ಹೇಳುವ ಗಂಭೀರ ವಿಷಯವನ್ನು ಹಗುರವಾಗಿ ಮತ್ತು ಆಕರ್ಷಕವಾಗಿ ಕಾಣುವಂತೆ ಮಾಡುತ್ತದೆ. ನೀವು ತಮಾಷೆಯಾಗಿ ಹೇಳಿದರೂ, ನಿಮ್ಮ ಮಾತುಗಳಲ್ಲಿ ಪ್ರಾಮಾಣಿಕತೆ ಇರಬೇಕು. ಅವಳಿಗೆ ನೀವು ಎಷ್ಟು ಗಂಭೀರವಾಗಿ ಹೇಳುತ್ತಿದ್ದೀರಿ ಎಂದು ತಿಳಿಸಿ. ಉತ್ತರ 'ಹೌದು' ಅಥವಾ 'ಇಲ್ಲ' ಆಗಿರಬಹುದು. ಯಾವುದೇ ಉತ್ತರ ಬಂದರೂ, ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಲು ಸಿದ್ಧರಾಗಿ. ನಿಮ್ಮ ಸ್ನೇಹಿತೆಯಾಗಿ ಮುಂದುವರಿಯುವುದು ಅಥವಾ ಅವಳಿಗಾಗಿ ಕಾಯುವುದು ನಿಮ್ಮ ಆಯ್ಕೆ.

ನೆನಪಿಡಿ, ಈ ವಿಷಯ ನಿಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ಆದರೆ ಪ್ರಯತ್ನಿಸದೇ ಇರುವುದು ಒಂದು ದೊಡ್ಡ ತಪ್ಪು. ಮೂರು ವರ್ಷಗಳ ಕಾಯುವಿಕೆ ಸಾಕು. ಇನ್ನು ನಿಮ್ಮ ಪ್ರೀತಿಯನ್ನು ಹೇಳಲು ಹಿಂದೆ ಬೀಳಬೇಡಿ. ಶುಭವಾಗಲಿ!

ಸುದರ್ಶನ ರೈ, ಮೈಸೂರು

- **ಭಟ್ರೇ, ನನ್ನ ಸ್ನೇಹಿತರು ಬಂದಾಗ ನನಗೆ ಕೈ ಕುಲಕಬೇಕು ಎಂದು ಅನಿಸುವುದಿಲ್ಲ. ಕಾರಣ ಅವರು ತಮ್ಮ ಕೈಯನ್ನು ಎಲ್ಲೆಲ್ಲೋ ಇಟ್ಟುಕೊಂಡಿರುತ್ತಾರೆ. ಅದು ಸ್ವಚ್ಛವಾಗಿರುವುದಿಲ್ಲ. ಗಲೀಜು ಕೈಯನ್ನು ಚಾಚಿದರೆ ಅಲ್ಲಿನ ಹೊಲಸುಗಳು ನನ್ನ ಕೈಗೆ ಹಸ್ತಾಂತರ ಆಗಬಹುದು. ಈ ಕಾರಣದಿಂದ ಕೈಕೊಡಲು ಹಿಂಜರಿಯುತ್ತೇನೆ. ಇದಕ್ಕಾಗಿ ನನ್ನ ಸ್ನೇಹಿತರು ಹೀಯಾಳಿಸುತ್ತಾರೆ. ನಾನು ಮಾಡುವುದು ಸರಿಯಾ? ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಬೇಕು.**

– ಸುದರ್ಶನ ಅವರೇ, ನಿಮ್ಮ ಈ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಅನೇಕರಿಗೆ ಕೈ ಕುಲುಕಲು ಹಿಂಜರಿಕೆ ಇರುತ್ತದೆ, ವಿಶೇಷವಾಗಿ ಕೈಗಳು ಶುಚಿಯಾಗಿಲ್ಲ ಎಂದು ಅನಿಸಿದಾಗ. ನಿಮ್ಮ ಸ್ನೇಹಿತರು ನಿಮ್ಮನ್ನು ಹೀಯಾಳಿಸುವುದು ನಿಮಗೆ ನೋವುಂಟು ಮಾಡಬಹುದು. ನಿಮ್ಮ ಸ್ನೇಹಿತರು ನಿಮ್ಮನ್ನು ಹೀಯಾಳಿಸುವ ಮೊದಲು, ನಿಮ್ಮ ನೈಜ ಕಾರಣವನ್ನು ಅವರಿಗೆ ಪ್ರಾಮಾಣಿಕವಾಗಿ ಹೇಳುವುದು ಉತ್ತಮ. 'ನಾನು ಕೇವಲ ನಿಮ್ಮ ಕೈಯನ್ನು ಸ್ವಚ್ಛವಾಗಿ ನೋಡಿದಾಗ ಮಾತ್ರ ಕುಲುಕುತ್ತೇನೆ, ಇಲ್ಲದಿದ್ದರೆ ನನಗೆ ಇಷ್ಟವಾಗುವುದಿಲ್ಲ. ಇದು ನಿಮ್ಮ ಬಗ್ಗೆ ನನಗಿರುವ ಗೌರವದ ಕೊರತೆಯಲ್ಲ, ಬದಲಿಗೆ ಆರೋಗ್ಯದ ಕಾಳಜಿಯಿಂದ' ಎಂದು ಸ್ಪಷ್ಟವಾಗಿ ತಿಳಿಸಿ.

'ನನ್ನ ಕೈಗಳು ವೈರಸ್‌ಗಳನ್ನು ಸಂಗ್ರಹಿಸುವ ಬ್ಯಾಂಕ್ ಅಲ್ಲ, ಹೀಗಾಗಿ ಅದನ್ನು ಮುಟ್ಟಲು ನನಗೆ ಭಯ' ಎಂದು ತಮಾಷೆಯಾಗಿ ಹೇಳಿ. ಹೀಗೆ ಹೇಳಿದಾಗ ನಿಮ್ಮ ಸ್ನೇಹಿತರು ನಿಮ್ಮನ್ನು ಹೀಯಾಳಿಸದೇ ವಿಷಯವನ್ನು ಅರ್ಥ ಮಾಡಿಕೊಳ್ಳಬಹುದು.

ಈ ವಿಷಯದಲ್ಲಿ ಪರ್ಯಾಯ ಮಾರ್ಗಗಳನ್ನೂ ಬಳಸಬಹುದು. ಕೈ ಕುಲುಕುವ ಬದಲು, ನೀವು ಇತರ ರೀತಿಯಲ್ಲಿ ಗೌರವ ಮತ್ತು ಪ್ರೀತಿಯನ್ನು ತೋರಿಸಬಹುದು. ಭಾರತೀಯ ಸಂಸ್ಕೃತಿಯಲ್ಲಿರುವ 'ನಮಸ್ಕಾರ'ವು ಒಂದು ಉತ್ತಮ ಪರ್ಯಾಯ. ಇದು ಸ್ವಚ್ಛತೆಯ ಮಾನದಂಡಗಳನ್ನು ಕಾಪಾಡಿಕೊಳ್ಳುವುದಲ್ಲದೇ, ಗೌರವವನ್ನು ತೋರಿಸುತ್ತದೆ. ನಿಮ್ಮ ಸ್ನೇಹಿತರನ್ನು ಭೇಟಿ ಮಾಡಿದಾಗ, ಕೈ ಕುಲುಕುವ ಬದಲು ಅವರನ್ನು ನೋಡಿ ನಗುಮೊಗದಿಂದ ತಲೆಯನ್ನು ಬಗ್ಗಿಸಿದರೂ ಸಾಕು.

ನಿಮ್ಮ ಸ್ನೇಹಿತರು ನಿಮ್ಮನ್ನು ಹೀಯಾಳಿಸುವುದು ನಿಮ್ಮನ್ನು ದುರ್ಬಲ ಎಂದು ಪರಿಗಣಿಸಬಾರದು. ಕೈ ಕುಲುಕುವುದು ಒಂದು ಸಾಮಾಜಿಕ ಆಚರಣೆಯಾದರೂ, ನಿಮ್ಮ ಆರೋಗ್ಯವೇ ಮೊದಲ ಆದ್ಯತೆಯಾಗಬೇಕು. ಈ ವಿಷಯದಲ್ಲಿ ನಿಮ್ಮ ನಿಲುವನ್ನು ಬಲವಾಗಿ ಸಮರ್ಥಿಸಿ. ನಿಮ್ಮ ನಿರ್ಧಾರದ ಬಗ್ಗೆ ನಾಚಿಕೆಪಡಬೇಡಿ. ನಿಮ್ಮ ಆರೋಗ್ಯವನ್ನು ರಕ್ಷಿಸಿಕೊಳ್ಳಲು ನೀವು ಈ ನಿರ್ಧಾರ ತೆಗೆದುಕೊಂಡಿದ್ದೀರಿ ಎಂದು ಅವರಿಗೆ ತಿಳಿಸಿ. ಕೊನೆಯದಾಗಿ, ಕೈ ಕುಲುಕುವ ಬದಲು ನೀವು ಬೇರೆ ರೀತಿಯಲ್ಲಿ ಶುಭಾಶಯಗಳನ್ನು ತಿಳಿಸಿದಾಗ ನಿಮ್ಮ ಸ್ನೇಹಿತರು ಅದನ್ನು ಅರ್ಥಮಾಡಿಕೊಳ್ಳುತ್ತಾರೆ. ಒಂದು ವೇಳೆ ಅವರು ಅರ್ಥಮಾಡಿಕೊಳ್ಳದಿದ್ದರೆ, ಅದು ಅವರ ಸಮಸ್ಯೆಯೇ ಹೊರತು ನಿಮ್ಮದಲ್ಲ.

ವಿ. ಕೇಶವಮೂರ್ತಿ, ಹೊಸಪೇಟೆ

- **ಭಟ್ರೇ, ನನ್ನ ಸ್ನೇಹಿತರು ಜೀವನದಲ್ಲಿ ಮುಂದೆ ಬಂದರೆ ನನಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರ ಏಳಿಗೆ ಕಂಡು ನನಗೆ ಸರಿಯಾಗಿ ನಿದ್ದೆಯೇ ಬರುವುದಿಲ್ಲ. ನಾನು ಈ ರೀತಿ ಅಸೂಯೆ ಪಡುವುದು ಸರಿ ಅಲ್ಲ ಎಂದು ನನಗೆ ಅನೇಕ ಸಲ ಅನಿಸಿದೆ. ಆದರೂ ಅದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಬೇಕು.**

– ಕೇಶವಮೂರ್ತಿ ಅವರೇ, ನಿಮ್ಮ ಸಮಸ್ಯೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಜಗತ್ತಿನ ಬಹುತೇಕ ಜನರಿಗೆ ಈ ಸಮಸ್ಯೆ ಇರುತ್ತದೆ. ಆದರೆ ಯಾರೂ ನಿಮ್ಮ ಹಾಗೆ ಮುಕ್ತವಾಗಿ ಹೇಳಿಕೊಳ್ಳುವುದಿಲ್ಲ. ಒಬ್ಬ ವ್ಯಕ್ತಿ, ಅದರಲ್ಲೂ ತನ್ನ ಸ್ನೇಹಿತರು, ಜೀವನದಲ್ಲಿ ಮುಂದೆ ಬಂದರೆ ಸಂತೋಷ ಪಡುವ ಬದಲು ಅಸೂಯೆ ಪಡುವುದು ಮಾನವ ಸಹಜ ಸ್ವಭಾವ.

ನಿಮ್ಮ ನಿದ್ದೆಗೆ ಅಡ್ಡಿಯಾಗಿರುವುದು ನಿಮ್ಮ ಸ್ನೇಹಿತರ ಯಶಸ್ಸಲ್ಲ, ಬದಲಾಗಿ ನಿಮ್ಮದೇ ಆಲೋಚನೆಗಳು. ಮೊದಲು, ರಾತ್ರಿ ಮಲಗುವಾಗ ಮೊಬೈಲ್ ನೋಡುವ ಬದಲು, ಸ್ವಲ್ಪ ಹೊತ್ತು ಒಂದು ಪುಸ್ತಕ ಓದಿ. ನಿಮಗೆ ನಿದ್ದೆ ಬರದಿದ್ದರೆ, ನಿಮ್ಮ ಸ್ನೇಹಿತರ ಯಶಸ್ಸಿನ ಕಥೆ ಬರೆಯಲು ಶುರುಮಾಡಿ. ಕೆಲವೇ ನಿಮಿಷಗಳಲ್ಲಿ ನಿದ್ರೆ ನಿಮ್ಮ ಪಕ್ಕದಲ್ಲಿ ಬಂದು ಕುಳಿತುಕೊಳ್ಳುತ್ತದೆ. ನಿಮ್ಮ ಅಸೂಯೆಗೆ ಸವಾಲು ಹಾಕಿ. ನಿಮ್ಮ ಸ್ನೇಹಿತರು ಹೇಗೆ ಯಶಸ್ವಾದರು ಎಂದು ಕೇಳಿ. ಅವರ ಯಶಸ್ಸಿನ ರಹಸ್ಯವನ್ನು ತಿಳಿದುಕೊಳ್ಳಿ. ಬಹುಶಃ ನೀವು ಇದನ್ನು ತಿಳಿದುಕೊಂಡರೆ, ನಿಮ್ಮ ಅಸೂಯೆ ಅವರ ಯಶಸ್ಸಿನ ಹಾದಿಯಲ್ಲಿದ್ದ ಕಷ್ಟಗಳ ಬಗ್ಗೆ ಕನಿಕರವಾಗಿ ಬದಲಾಗಬಹುದು. ಅಥವಾ 'ನೀನು ಯಶಸ್ಸಿನ ಮೊದಲ ಹೆಜ್ಜೆ ಇಟ್ಟರೆ, ನಾನು ಎರಡನೆಯ ಹೆಜ್ಜೆ ಇಡುತ್ತೇನೆ' ಎಂದು ಹೇಳಿ ನಿಮ್ಮನ್ನು ಸಂತೈಸಿಕೊಳ್ಳಿ.

ನೀವು ಯಾರಾದರೂ ಪ್ರಸಿದ್ಧ ವ್ಯಕ್ತಿಗಳನ್ನು ನೋಡಿದಾಗ, ನೀವು ತಕ್ಷಣ 'ಅವನು ದೊಡ್ಡವನಾದ, ನಾನು ಏನೂ ಅಲ್ಲ' ಎಂದುಕೊಳ್ಳಬಹುದು. ಆದರೆ ನಿಮ್ಮದೇ ಸಾಧನೆಗಳನ್ನು ನೀವು ಗುರುತಿಸುವುದಿಲ್ಲ. ಈ ಆಲೋಚನೆಯನ್ನು ಬದಲಿಸಿ. ಒಂದು ದಿನಚರಿ ಬರೆಯಲು ಪ್ರಾರಂಭಿಸಿ. ಪ್ರತಿ ದಿನ ನೀವು ಮಾಡಿದ ಸಣ್ಣಪುಟ್ಟ ಕೆಲಸಗಳನ್ನು ಬರೆದಿಡಿ. ಈ ರೀತಿ ನಿಮ್ಮ ಸಣ್ಣ ಸಾಧನೆಗಳು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ನಿಮ್ಮ ಸ್ನೇಹಿತರು ಯಶಸ್ವಾದಾಗ, ಅವರನ್ನು ನೋಡಿ ನಾನೂ ಏನಾದರೂ ಸಾಧಿಸಬೇಕು ಎಂದು ಪ್ರೇರಣೆ ಪಡೆಯಿರಿ. ಅವರ ಯಶಸ್ಸು ನಿಮ್ಮಲ್ಲಿ ಸ್ಫೂರ್ತಿಯ ಕಿಡಿಯಾಗಲಿ. ಅಸೂಯೆ ಪಡುವುದು ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡುತ್ತದೆ, ಆದರೆ ಪ್ರೇರಣೆ ಪಡೆಯುವುದು ನಿಮ್ಮನ್ನು ಸಕ್ರಿಯವಾಗಿರಿಸುತ್ತದೆ.

ನೀವು ಈ ರೀತಿ ಅಸೂಯೆ ಪಡಲು ನಿಮ್ಮ ಜೀವನದಲ್ಲಿ ಈ ಹಿಂದೆ ಆಗಿರುವ ಕೆಲವು ನೋವುಗಳು ಕಾರಣವಿರಬಹುದು. ಆದರೆ ನಿಮ್ಮ ಸ್ನೇಹಿತರು ನಿಮ್ಮ ಯಶಸ್ಸನ್ನು ನೋಡಿ ಸಂತೋಷ ಪಡುತ್ತಾರೆ ಎಂದು ನೆನಪಿಡಿ. ನಿಮ್ಮ ಈ ಭಾವನೆಯನ್ನು ನಿಯಂತ್ರಿಸಲು ಪ್ರಯತ್ನಿಸಿ. ನಕಾರಾತ್ಮಕ ಆಲೋಚನೆಗಳು ನಿಮ್ಮ ಮನಸ್ಸಿಗೆ ಹಾನಿಕಾರಕ. ನಿಮ್ಮ ಈ ಸಮಸ್ಯೆಗೆ ಪರಿಹಾರವೆಂದರೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಸ್ನೇಹಿತರ ಬಗ್ಗೆ ಪ್ರೀತಿ, ಗೌರವವನ್ನು ಬೆಳೆಸಿಕೊಳ್ಳುವುದು. ನಿಮ್ಮ ಸ್ನೇಹಿತರು ಯಶಸ್ಸು ಪಡೆದಾಗ, ಅವರನ್ನು ಅಭಿನಂದಿಸಿ. ಆ ಸಂತೋಷವನ್ನು ನೀವು ಹಂಚಿಕೊಂಡಾಗ, ನಿಮಗೆ ಒಳ್ಳೆಯ ನಿದ್ರೆ ಬರುತ್ತದೆ.

ಸಿ ಸುರೇಶ, (ಇಮೇಲ್ ಮೂಲಕ)

- **ಭಟ್ರೇ, ಕಳೆದ ಒಂದು ವರ್ಷದಿಂದ ನಾವಿಬ್ಬರೂ ಪ್ರೀತಿಸುತ್ತಿದ್ದೇವೆ. ಆದರೆ ಆಕೆಗೆ ನನ್ನ ಮೇಲೆ ಉತ್ಕಟ ಪ್ರೀತಿ ಇದೆಯಾ ಎಂಬ ಬಗ್ಗೆ ಆಗಾಗ ಸಂದೇಹ ಮೂಡುತ್ತದೆ. ಕಾರಣ, ಆಕೆ ದಿನದಲ್ಲಿ ಒಂದೂ ಮೆಸೇಜ್ ಕಳಿಸುವುದಿಲ್ಲ. ಎರಡು-ಮೂರು ದಿನಕ್ಕೊಮ್ಮೆ ಮಾತಾಡುತ್ತಾಳೆ. ಮದುವೆಗೆ ಮುನ್ನವೇ ಅವಳು ಹೀಗೆ. ಇನ್ನು ಮದುವೆಯಾದ ನಂತರ ಹೇಗಿರಬಹುದು? ಈ ವಿಷಯವಾಗಿ ಮಾತಾಡಿದರೆ ಅನಗತ್ಯ ಚರ್ಚೆ ಆಗುತ್ತದೆ. ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು, ಅರ್ಥವಾಗುತ್ತಿಲ್ಲ.**

– ಸುರೇಶ ಅವರೇ, ನಿಮ್ಮ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಪ್ರೀತಿಯ ಸಂಬಂಧದಲ್ಲಿ ಹೀಗಾದಾಗ ಸಂಶಯ ಮೂಡುವುದು ಸಹಜ. ಅದರಲ್ಲೂ ಮದುವೆಗೆ ಮುನ್ನವೇ ಹೀಗಿದ್ದರೆ ಭವಿಷ್ಯದ ಬಗ್ಗೆ ಚಿಂತೆ ಮಾಡುವುದು ಸ್ವಾಭಾವಿಕವೇ. ಆದರೆ ಈ ಸಮಸ್ಯೆಗೆ ನೇರವಾಗಿ ಪರಿಹಾರ ಕಂಡುಕೊಳ್ಳುವುದು ಬಹಳ ಮುಖ್ಯ. ನೀವು ನೇರವಾಗಿ ನಿಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ಹೇಳಿದರೆ ಅವಳಿಗೆ ನೋವಾಗಬಹುದು. ಆದ್ದರಿಂದ, ಈ ವಿಷಯವನ್ನು ತರ್ಕಬದ್ಧವಾಗಿ ಮತ್ತು ಶಾಂತ ರೀತಿಯಲ್ಲಿ ಅವಳೊಂದಿಗೆ ಮಾತನಾಡಲು ಪ್ರಯತ್ನಿಸಿ. ಈ ವಿಷಯವನ್ನು ನೀವು ಇಬ್ಬರೂ ಹಗುರ ಮನಸ್ಸಿನಿಂದ ಇರುವಾಗ ಮಾತನಾಡಿ. ಇಬ್ಬರೂ ಸಂತೋಷವಾಗಿರುವಾಗ ಅಥವಾ ಯಾವುದೇ ಒತ್ತಡವಿಲ್ಲದ ಸಮಯದಲ್ಲಿ ಮಾತನಾಡುವುದು ಉತ್ತಮ. ನಿಮ್ಮ ಸಂಶಯವನ್ನು 'ನೀನು ನನ್ನನ್ನು ಯಾಕೆ ನಿರ್ಲಕ್ಷಿಸುತ್ತಿದ್ದೀಯಾ?' ಎಂದು ಪ್ರಶ್ನಿಸುವ ಬದಲು, 'ನಾನು ನಿನ್ನಿಂದ ದೂರವಾಗಿದ್ದಾಗ ಸ್ವಲ್ಪ ದುಃಖಿತನಾಗುತ್ತೇನೆ' ಅಥವಾ 'ನಿನ್ನ ಸಂದೇಶಕ್ಕಾಗಿ ಕಾಯುವಾಗ ನನಗೆ ಒಮ್ಮೊಮ್ಮೆ ಸಂಶಯ ಬರುತ್ತದೆ' ಎಂದು ಹೇಳಿ. ಹೀಗೆ ಹೇಳಿದಾಗ, ನೀವು ನಿಮ್ಮ ಭಾವನೆಯನ್ನು ಮಾತ್ರ ವ್ಯಕ್ತಪಡಿಸುತ್ತಿದ್ದೀರಿ ಎಂದು ಅವಳು ಅರ್ಥಮಾಡಿಕೊಳ್ಳುತ್ತಾಳೆ.

ನಿಮ್ಮ ಸಂಶಯಗಳನ್ನು ಪರಿಹರಿಸಿಕೊಳ್ಳುವ ಮುನ್ನ, ಅವಳ ಜೀವನ ಶೈಲಿಯ ಬಗ್ಗೆ ತಿಳಿದುಕೊಳ್ಳಿ. ಅವಳು ಕೆಲಸ ಮಾಡುವ ಕಂಪನಿಯಲ್ಲಿ ಒತ್ತಡ ಹೆಚ್ಚಿದೆಯೇ? ಅಥವಾ ಅವಳ ವೃತ್ತಿ ತುಂಬಾ ಸಮಯವನ್ನು ತೆಗೆದುಕೊಳ್ಳುತ್ತಿದೆಯೇ? ಬಹುಶಃ ಇದು ಅವಳಿಗೆ ಹೆಚ್ಚು ಮೆಸೇಜ್ ಮಾಡಲು ಸಮಯ ಸಿಗದಿರುವುದಕ್ಕೆ ಕಾರಣವಾಗಿರಬಹುದು. ಕೆಲವು ಜನರಿಗೆ ಸಂದೇಶಗಳ ಮೂಲಕ ಸಂವಹನ ನಡೆಸಲು ಹೆಚ್ಚು ಇಷ್ಟವಿರುವುದಿಲ್ಲ, ಅವರು ಕೇವಲ ಅವಶ್ಯಕತೆ ಇದ್ದಾಗ ಮಾತ್ರ ಮೆಸೇಜ್ ಮಾಡುತ್ತಾರೆ. ಅವಳ ವೈಯಕ್ತಿಕ ಸ್ವಭಾವ ಹೀಗಿದೆಯೇ ಎಂದು ಯೋಚಿಸಿ.

ದಿನಕ್ಕೆ ಒಂದು ಸಂದೇಶ ಕಳಿಸುವ ಬದಲು, ಸಂಜೆ ಒಂದು ಸಣ್ಣ ದೂರವಾಣಿ ಕರೆ ಮಾಡಿ ಮಾತನಾಡುವುದು ಉತ್ತಮ. ಆಗ ದಿನವಿಡೀ ನಡೆದ ವಿಷಯಗಳನ್ನು ಹಂಚಿಕೊಳ್ಳಬಹುದು. ಈ ಮೂಲಕ ನಿಮ್ಮಿಬ್ಬರ ನಡುವಿನ ಅಂತರ ಕಡಿಮೆಯಾಗುತ್ತದೆ. ಕೇವಲ ಸಂದೇಶಗಳ ಮೇಲೆ ಅವಲಂಬಿತರಾಗಬೇಡಿ. ನೀವು ಇಬ್ಬರೂ ಭೇಟಿ ಮಾಡಲು ಸಮಯ ನಿಗದಿಪಡಿಸಿ. ನೀವು ಭೇಟಿ ಮಾಡಿದಾಗ ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ. ಪ್ರತೀ ಬಾರಿ ಸಂದೇಶ ಕಳುಹಿಸು ಎಂದು ಒತ್ತಾಯ ಮಾಡುವ ಬದಲು, ನಿಮ್ಮ ಹವ್ಯಾಸಗಳು, ಆಸೆಗಳು ಮತ್ತು ಭವಿಷ್ಯದ ಕನಸುಗಳ ಬಗ್ಗೆ ಮಾತನಾಡಿ. ಹೀಗೆ ಮಾಡಿದಾಗ, ಆಕೆ ಕೂಡ ನಿಮ್ಮೊಂದಿಗೆ ಮಾತನಾಡಲು ಇಷ್ಟಪಡುತ್ತಾಳೆ.

ನೆನಪಿಡಿ, ಪ್ರೀತಿ ಎಂದರೆ ಕೇವಲ ಮೆಸೇಜ್ ಮತ್ತು ಕರೆಗಳಲ್ಲ. ಅದು ನಿಮ್ಮಿಬ್ಬರ ನಡುವಿನ ನಂಬಿಕೆ ಮತ್ತು ಗೌರವದ ಮೇಲೆ ನಿಂತಿದೆ. ಆದ್ದರಿಂದ, ಮೊದಲು ಅವಳೊಂದಿಗೆ ಪ್ರಾಮಾಣಿಕವಾಗಿ ಮಾತನಾಡಿ. ಅವಳ ಅಭಿಪ್ರಾಯವನ್ನು ತಿಳಿದುಕೊಳ್ಳಿ. ನಂತರ ನಿಮ್ಮಿಬ್ಬರ ಸಂಬಂಧವನ್ನು ಹೇಗೆ ಮುಂದುವರಿಸುವುದು ಎಂದು ನಿರ್ಧರಿಸಿ. ನಿಮ್ಮ ಪ್ರೀತಿಯನ್ನು ಪರೀಕ್ಷಿಸುವುದು ಮುಖ್ಯವಲ್ಲ, ಬದಲಾಗಿ ಅದನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಗೌರವಿಸುವುದು ಮುಖ್ಯ.

ಸುಧೀರ, ಬೆಂಗಳೂರು

- **ಭಟ್ರೇ, ನನ್ನ ಹುಡುಗಿಗೆ ನಾಯಿ ಅಂದ್ರೆ ಪ್ರಾಣ. ಅದನ್ನು ತನ್ನ ಬೆಡ್‌ನಲ್ಲಿಯೇ ಮಲಗಿಸಿಕೊಳ್ಳುತ್ತಾಳೆ. ನನಗೆ ನಾಯಿ ಮುಖ ಕಂಡ್ರೆ ಆಗುವುದಿಲ್ಲ. ಮದುವೆಯ ನಂತರವೂ ಹೀಗೆ ಇರೋದು ಅಂತಾಳೆ. ಬೇಕಾದ್ರೆ, ನೀನು ಬೇರೆ ರೂಮಿನಲ್ಲಿ ಮಲಗು ಅಂತಾಳೆ. ಇಂಥ ಹುಡುಗಿ ಜತೆ ಹೇಗೆ ಸಂಸಾರ ಮಾಡುವುದು?**

– ಸುಧೀರ ಅವರೇ, ನಿಮಗೆ ನಾಯಿಯೇ ನಿಮ್ಮ ಪ್ರತಿಸ್ಪರ್ಧಿ ಆದಂತಿದೆಯಲ್ಲ? ನಿಮ್ಮ ಹುಡುಗಿ ನಾಯಿಯನ್ನು ತನ್ನ ಮಗುವಿನಂತೆ ಪ್ರೀತಿಸುತ್ತಾಳೆ ಮತ್ತು ನಿಮ್ಮನ್ನೇ ಅನ್ಯ ಎಂದು ನೋಡುತ್ತಿದ್ದಾಳೆ. ಇದಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ, ಮುಂದೊಂದು ದಿನ ನಿಮ್ಮಿಬ್ಬರ ನಡುವೆ ನಾಯಿಯೇ ಕೇಂದ್ರ ಬಿಂದು ಆಗಿಬಿಡಬಹುದು. ನಿಮ್ಮ ಹುಡುಗಿ 'ನೀನು ಬೇರೆ ರೂಮಿನಲ್ಲಿ ಮಲಗು' ಎಂದು ಹೇಳಿದ ಮೇಲೆ, ವಿಷಯ ಗಂಭೀರವಾಗಿದೆ ಎಂದರ್ಥ. ಇದನ್ನು ಪರಿಹರಿಸಿಕೊಳ್ಳಲು ಕೆಲವು ತಂತ್ರಗಳಿವೆ.

ನಾಯಿಯ ಜತೆ ಸ್ನೇಹ ಬೆಳೆಸಿ: ನಿಮ್ಮ ಶತ್ರುವನ್ನು ಹತ್ತಿರ ಇರಿಸಿಕೊಳ್ಳುವುದೇ ಉತ್ತಮ ತಂತ್ರ. ಅದಕ್ಕೆ ಬಿಸ್ಕತ್ತುಗಳು ಮತ್ತು ತಿಂಡಿಗಳನ್ನು ಕೊಡಿ. ನಿಧಾನವಾಗಿ ಅದು ನಿಮ್ಮನ್ನು ಇಷ್ಟಪಡುತ್ತದೆ. ನಂತರ ನಿಮ್ಮ ಹುಡುಗಿಗೆ ಹೇಳಿ, 'ನಿನ್ನ ನಾಯಿಗೆ ನಾನು ಬೇಕಾಗಿದ್ದೇನೆ, ನೀನು ಬೇರೆ ರೂಮಿನಲ್ಲಿ ಮಲಗು' ಎಂದು.

ಬೇರೆ ನಾಯಿಗಳನ್ನು ದತ್ತು ತೆಗೆದುಕೊಳ್ಳಿ: ನಿಮ್ಮ ಹುಡುಗಿಗೆ ನಾಯಿಯ ಮೇಲೆ ಪ್ರೀತಿ ಹೆಚ್ಚಾದರೆ, ನೀವು ಕೂಡ ಪ್ರಾಣಿಪ್ರೇಮಿ ಎಂದು ತೋರಿಸಿಕೊಳ್ಳಿ. ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡು ಅವಳನ್ನು ಆಶ್ಚರ್ಯಗೊಳಿಸಿ. ನಂತರ, 'ನಿನ್ನ ನಾಯಿ ಒಂದೇ ರೂಮಿನಲ್ಲಿ ಮಲಗುತ್ತಿದೆ, ನನ್ನ ಈ ನಾಯಿಗೂ ಅದೇ ರೂಮಿನಲ್ಲಿ ಮಲಗಲು ಜಾಗ ಬೇಕು' ಎಂದು ಹೇಳಿ. ಅವಳ ಪ್ರತಿಕ್ರಿಯೆ ಹೇಗಿರುತ್ತದೆ ನೋಡಿ.

ಒಂದು 'ಡಾಗ್ ರೂಲ್ಸ್' ಮಾಡಿ: ನಿಮ್ಮಿಬ್ಬರ ಮಧ್ಯೆ ಒಂದು ಒಪ್ಪಂದಕ್ಕೆ ಬನ್ನಿ. ನಾಯಿಗೆ ಮಲಗಲು ನಿರ್ದಿಷ್ಟ ಸಮಯ ಅಥವಾ ಸ್ಥಳ ಇರಲಿ ಎಂದು ಚರ್ಚಿಸಿ. ಉದಾಹರಣೆಗೆ, 'ಸರಿ, ನಾಯಿ ರಾತ್ರಿ 10 ಗಂಟೆಯವರೆಗೂ ಬೆಡ್‌ರೂಮಿನಲ್ಲಿರಲಿ. ನಂತರ ಅದು ತನ್ನ ಡಾಗ್ ಹೌಸ್‌ಗೆ ಹೋಗಬೇಕು' ಎಂದು ಒಪ್ಪಂದ ಮಾಡಿಕೊಳ್ಳಿ.

ಸಂತೋಷವಾಗಿ ನಗುತ್ತಾ ಇರಿ: ಕೊನೆಯದಾಗಿ, ಈ ವಿಷಯ ನಿಮ್ಮ ಮದುವೆಯ ನಂತರ ಹಾಸ್ಯವಾಗಿ ಇರಬೇಕು. ಈ ಕಾರಣಕ್ಕೆ ನಿಮ್ಮಿಬ್ಬರ ಸಂಬಂಧವನ್ನು ಹಾಳು ಮಾಡಿಕೊಳ್ಳಬೇಡಿ. ಈ ವಿಷಯವನ್ನು ನೀವು ಹಾಸ್ಯದಿಂದಲೇ ತೆಗೆದುಕೊಳ್ಳಿ.

ನೆನಪಿಡಿ, ನೀವು ನಿಮ್ಮ ಹುಡುಗಿಯನ್ನು ಪ್ರೀತಿಸುತ್ತಿದ್ದರೆ, ಅವಳ 'ಪ್ರಾಣ ಪ್ರೀತಿ'ಯನ್ನೂ ನೀವು ಗೌರವಿಸಬೇಕು. ನಾಯಿಯನ್ನು ನಿಮ್ಮ ಪ್ರತಿಸ್ಪರ್ಧಿ ಎಂದು ನೋಡುವ ಬದಲು, ನಿಮ್ಮ ಹುಡುಗಿಯ ಹತ್ತಿರ ಹೋಗಲು ಅದು ಒಂದು ಒಳ್ಳೆಯ ಸಾಧನ ಎಂದು ಯೋಚಿಸಿ. ನಿಮ್ಮ ಪ್ರೀತಿಗೆ ಮತ್ತು ನಿಮ್ಮ ಸಂಸಾರಕ್ಕೆ ಶುಭವಾಗಲಿ!